ಸೋಮವಾರ, ಅಕ್ಟೋಬರ್ 25, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 296 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಐಐಟಿಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಇಂಟಿಗ್ರೇಟೆಡ್ ಎಂಎಸ್‌ಸಿ, ಪಿಎಚ್‌ಡಿ ಕೋರ್ಸ್‌ಗಳು ಇವೆ. ಇವುಗಳಿಗೆ ಪ್ರವೇಶ ಪಡೆಯುವುದು ಹೇಗೆ?

ಆಳ-ಅಗಲ
‘ಫೇಸ್‌ಬುಕ್‌ಗೆ ಲಾಭವೇ ಮುಖ್ಯ’
ಐಎಸ್ ನಂಟು: ಬೆಂಗಳೂರಿನ ಯುವಕನ ಬಂಧನ 6
ತಾರಕೇಶ್ವರನ ನಾಡಿನಲ್ಲಿ ತಾರಕಕ್ಕೇರಿದ ಪ್ರಚಾರ 5
ಜಮ್ಮು-ಕಾಶ್ಮೀರದಲ್ಲಿ ಅಮಿತ್ ಶಾ
‘ನಾಗರಿಕರ ಹತ್ಯೆ ಕೊನೆಗಾಣಿಸುವ ಗುರಿ’ 6

ಡ್ರೋನ್ ಗುಂಪು ದಾಳಿಗೆ ‘ವೈರಿ ನೆಲೆ’ ಭಸ್ಮ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೀಟಗಳ ಹಿಂಡಿನಂತೆ ಡ್ರೋನ್‌ಗಳ ಗುಂಪೊಂದು ಆಗಸಕ್ಕೇರಿ ವೈರಿಯ ಇರುವಿಕೆಯನ್ನು ಗುರುತಿಸಿ ನಾಶ ಪಡಿಸಬಲ್ಲ ಅತ್ಯಾಧುನಿಕ ದೇಶೀಯ ಯುದ್ಧ ತಂತ್ರಜ್ಞಾನ ಬಳಕೆಗೆ ಸಿದ್ಧವಾಗಿದೆ. ಭಾರತೀಯ ವಾಯುಪಡೆಯ ಯಲಹಂಕ ವಾಯುನೆಲೆ ದೇಶೀಯ ಡ್ರೋನ್ ಗುಂಪು ದಾಳಿಯ ಯಶಸ್ವಿ ಪ್ರಯೋಗಕ್ಕೆ ಭಾನುವಾರ ಸಾಕ್ಷಿಯಾಯಿತು.

ವಾಯುಪಡೆ ನಡೆಸಿದ ‘ಮೆಹರ್ ಬಾಬಾ ಸ್ವಾರ್ಮ್ ಡ್ರೋನ್ ಸ್ಪರ್ಧೆ’ಯಲ್ಲಿ ಭಾಗವಹಿಸಿದ್ದ ತಂಡಗಳು ಇಂತಹ ಅತ್ಯಾಧುನಿಕ ಯುದ್ಧ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿವೆ. ಅಂತಿಮ ಸುತ್ತಿನಲ್ಲಿ ವಿಜೇತರಾಗಿರುವ ನಾಲ್ಕು ತಂಡಗಳ ಪೈಕಿ ಚೆನ್ನೈನ ಅಣ್ಣಾ ವಿಶ್ವವಿದ್ಯಾಲಯ ಮತ್ತು ದಕ್ಷ ಅನ್‌ಮ್ಯಾನ್ಡ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಜಂಟಿಯಾಗಿ ರೂಪಿಸಿರುವ ಗುಂಪು ದಾಳಿಯ ಡ್ರೋನ್‌ಗಳ ಪ್ರಾಯೋಗಿಕ ಪ್ರದರ್ಶನ ‘ಸ್ವರ್ಣಿಮ ವಿಜಯ ವರ್ಷ’ ಸಮಾರೋಪದ ಬಳಿಕ ನಡೆಯಿತು.

6ನೇ ಪುಟ ನೋಡಿ

30ರಿಂದ ಜಿ–20 ಶೃಂಗಸಭೆ: ಪ್ರಧಾನಿ ಮೋದಿ ಭಾಗಿ

ನವದೆಹಲಿ (ಪಿಟಿಐ): ಇಟಲಿಯ ರಾಜಧಾನಿ ರೋಮ್‌ನಲ್ಲಿ ಇದೇ 30 ಮತ್ತು 31ರಂದು ನಡೆಯಲಿರುವ ಜಿ–20 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸಲಿದ್ದಾರೆ. ಅಫ್ಗನ್ ಬಿಕ್ಕಟ್ಟಿನ ಪರಿಸ್ಥಿತಿ ಎದುರಿಸಲು ಜಾಗತಿಕವಾಗಿ ಸಂಘಟಿತ ಕಾರ್ಯತಂತ್ರದ ಅವಶ್ಯಕತೆ ಬಗ್ಗೆ ಅವರು ಶೃಂಗಸಭೆಯಲ್ಲಿ ಮಾತನಾಡಲಿದ್ದಾರೆ ಎಂದು ಮೂಲಗಳು ಭಾನುವಾರ ಹೇಳಿವೆ. 6

ಚಿನಕುರಳಿ

ಪ್ರಕಾಶ್ ಶೆಟ್ಟಿ

1ರಿಂದ 5ರವರೆಗಿನ ತರಗತಿ ಇಂದಿನಿಂದ ಆರಂಭ

ಮರಳಿ ಶಾಲೆಗಳತ್ತ ಚಿಣ್ಣರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಕಾರಣದಿಂದ ಬಾಗಿಲು ಮುಚ್ಚಿದ್ದ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ 1ರಿಂದ 5ರವರೆಗಿನ ತರಗತಿಗಳು ಸೋಮವಾರದಿಂದ (ಅ. 25) ಮತ್ತೆ ತೆರೆಯುತ್ತಿವೆ.

ಒಂದೂವರೆ ವರ್ಷದ ಬಳಿಕ ಶಾಲೆಗಳತ್ತ ಹೆಜ್ಜೆ ಹಾಕಲಿರುವ ಚಿಣ್ಣರನ್ನು ಸ್ವಾಗತಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದೆ. ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲು ತಳಿರು ತೋರಣ ಕಟ್ಟಿ, ಸ್ವಾಗತ ಕಮಾನುಗಳನ್ನು ಅಳವಡಿಸಿ ಶಾಲೆಗಳನ್ನು ಸಿಂಗರಿಸಿ, ಸಜ್ಜುಗೊಳಿಸಿದೆ.

ಮೊದಲ ವಾರ ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30 ರವರೆಗೆ ಅರ್ಧ ದಿನ ಮಾತ್ರ ತರಗತಿಗಳು ನಡೆಯಲಿವೆ. ಹೀಗಾಗಿ, ಈ ದಿನಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಇರುವುದಿಲ್ಲ. ನ.2 ರಿಂದ ಪೂರ್ಣ ಅವಧಿ (ಬೆಳಿಗ್ಗೆ 10ರಿಂದ ಸಂಜೆ 4.30) ಶಾಲೆ ನಡೆಯಲಿದ್ದು, ಮಧ್ಯಾಹ್ನ ಬಿಸಿಯೂಟ ವ್ಯವಸ್ಥೆಯೂ ಇರಲಿದೆ.

ಪ್ರಾಥಮಿಕ ಶಾಲಾ ತರಗತಿಗಳು ಸೋಮವಾರದಿಂದ ಆರಂಭವಾಗಲಿದ್ದು, ಕಲಬುರಗಿಯ ಶರಣಬಸವೇಶ್ವರ ಪಬ್ಲಿಕ್ ಶಾಲೆಯ ಆವರಣದಲ್ಲಿ ಭಾನುವಾರ ಶಾಲಾ ಸಿಬ್ಬಂದಿ ಸ್ವಚ್ಛತಾ ಕಾರ್ಯ ಕೈಗೊಂಡರು –ಪ್ರಜಾವಾಣಿ ಚಿತ್ರ

ಶನಿವಾರ ಬೆಳಿಗ್ಗೆ 8 ರಿಂದ 11.40 ರವರೆಗೆ ತರಗತಿಗಳು ನಡೆಯಲಿವೆ.

ತರಗತಿಯ ಕೊಠಡಿಯೊಂದರಲ್ಲಿ ಗರಿಷ್ಠ 20 ವಿದ್ಯಾರ್ಥಿಗಳು ಕುಳಿತುಕೊಳ್ಳಲು ಅಥವಾ ಒಟ್ಟು ಹಾಜರಾಗುವ ಮಕ್ಕಳಲ್ಲಿ ಶೇ 50 ರಷ್ಟು ಮಕ್ಕಳಿಗೆ ಆಸನ ವ್ಯವಸ್ಥೆ ಕಲ್ಪಿಸಲಾಗುವುದು. ಒಂದೂವರೆ ವರ್ಷದಿಂದ ಭೌತಿಕ ತರಗತಿಗಳು ನಡೆಯದೇ ಇರುವುದರಿಂದ, ‘ಸೇತುಬಂಧ’ (ಬ್ರಿಡ್ಜ್ ಕೋರ್ಸ್) ಶಿಕ್ಷಣದ ಮೂಲಕ ಬೋಧನಾ ಪದ್ಧತಿ ಆರಂಭಿಸಿ, ಪ್ರಸಕ್ತ ಶೈಕ್ಷಣಿಕ ಸಾಲಿನ ಕಲಿಕೆಗೆ ಶಾಲೆಗಳು ಮಕ್ಕಳನ್ನು ಅಣಿಗೊಳಿಸಲಿದೆ. ಆದರೆ, ಯಾವುದೇ ಶಾಲೆಯಲ್ಲಿ ಪೂರ್ವ ಪ್ರಾಥಮಿಕ (ಎಲ್‌ಕೆಜಿ, ಯುಕೆಜಿ) ತೆರೆಯಲು ಅವಕಾಶ ಇಲ್ಲ.

ತರಗತಿಗೆ ಹಾಜರಾಗುವ ವಿದ್ಯಾರ್ಥಿಗಳು ಪೋಷಕರ ಒಪ್ಪಿಗೆ ಪತ್ರವನ್ನು ಕಡ್ಡಾಯವಾಗಿ ತರಬೇಕು. ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದ ಶಿಕ್ಷಕರು ಮಾತ್ರ ಬೋಧನೆ ಮಾಡಬೇಕು.

4ನೇ ಪುಟ ನೋಡಿ

‘ಕಪ್ಪುಪಟ್ಟಿ ಧರಿಸಿ ಪಾಠ’

ತಮ್ಮ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಮಕ್ಕಳ ಪಾಠಗಳಿಗೆ ತೊಂದರೆ ಆಗದಂತೆ ಕಪ್ಪುಪಟ್ಟಿ ಧರಿಸಿ ಅಸಹಕಾರ ಚಳವಳಿ ಮುಂದುವರಿಸಲು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನಿರ್ಧರಿಸಿದೆ.

‘ಬೇಡಿಕೆ ಈಡೇರಿಸದಿದ್ದರೆ ಅನಿವಾರ್ಯವಾಗಿ ಉಗ್ರರೂಪದ ಹೋರಾಟ ಹಮ್ಮಿಕೊಳ್ಳುತ್ತೇವೆ. ನಾವು ಬೀದಿಗಿಳಿಯುವ ಮೊದಲೇ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಎಲ್ಲ 35 ಶೈಕ್ಷಣಿಕ ಜಿಲ್ಲೆಗಳ ಉಪ ನಿರ್ದೇಶಕರಿಗೆ ಸೋಮವಾರ (ಅ. 25) ಮನವಿ ಸಲ್ಲಿಸಲಾಗುವುದು‘ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ ತಿಳಿಸಿದ್ದಾರೆ.

ನಮ್ಮ ಮೆಟ್ರೊ ಎರಡನೇ ಹಂತದ ಕಾಮಗಾರಿ

40 ಅಡಿ ಎತ್ತರದಿಂದ ಜಾರಿದ ಯಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟಿಎಂ ಬಡಾವಣೆಯಲ್ಲಿ ನಮ್ಮ ಮೆಟ್ರೊ ಎತ್ತರಿಸಿದ ಮಾರ್ಗದ ವಯಡಕ್ಟ್‌ನ ಕಾಂಕ್ರೀಟ್ ರಚನೆಗಳನ್ನು ಜೋಡಿಸಲು ಬಳಸುವ ಲಾಂಚಿಂಗ್ ಗರ್ಡರ್ ಭಾನುವಾರ ಬೆಳಿಗ್ಗೆ ನಿಯಂತ್ರಣ ಕಳೆದುಕೊಂಡು 40 ಅಡಿ ಎತ್ತರದಿಂದ ಜಾರಿದ್ದು, ಕಾಂಕ್ರೀಟ್ ಕಂಬದ (ಪಿಲ್ಲರ್) ಮೇಲೆ ಬಿದ್ದಿದೆ.

ಬಿಟಿಎಂ ಬಡಾವಣೆಯ ಉಡುಪಿ ಗಾರ್ಡನ್ ಸಿಗ್ನಲ್ ಬಳಿ ನಮ್ಮ ಮೆಟ್ರೊ ಯೋಜನೆಯ ಎರಡನೇ ಹಂತದ ಎತ್ತರಿಸಿದ ಮಾರ್ಗ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಇಲ್ಲಿ ಎತ್ತರಿಸಿದ ಮಾರ್ಗದ ವಯಡಕ್ಟ್‌ನ ಕಾಂಕ್ರೀಟ್ ರಚನೆಗಳನ್ನು ಗರ್ಡರ್ ಲಾಂಚರ್ ಮೂಲಕ ಜೋಡಿಸಲಾಗುತ್ತಿತ್ತು. ಬೇರೆ ಕಡೆ ಮೊದಲೇ ಸಿದ್ಧಪಡಿಸಿದ್ದ ಕಾಂಕ್ರೀಟ್ ರಚನೆಗಳನ್ನು ಜೋಡಿಸುವ ಲಾಂಚಿಂಗ್ ಗರ್ಡರ್ ಈ ವೇಳೆ ನಿಯಂತ್ರಣ ಕಳೆದುಕೊಂಡಿದೆ.

ಬಿಟಿಎಂ ಬಡಾವಣೆಯಯಲ್ಲಿ ‘ನಮ್ಮ ಮೆಟ್ರೊ’ ಕಾಮಗಾರಿ ವೇಳೆ ಲಾಂಚಿಂಗ್ ಗರ್ಡರ್ ಜಾರಿ ಪಿಲ್ಲರ್ ಮೇಲೆ ಕುಳಿತಿರುವುದು– ಪ್ರಜಾವಾಣಿ ಚಿತ್ರ

2ನೇ ಪುಟ ನೋಡಿ

ವೆಚ್ಚ ಹೆಚ್ಚಳ: ಡಿ.1ರಿಂದ ಬೆಂಕಿಪೊಟ್ಟಣದ ಬೆಲೆ ₹ 2

ಚೆನ್ನೈ (ಪಿಟಿಐ): ಡಿಸೆಂಬರ್ 1ರಿಂದ ಅನ್ವಯ ಆಗುವಂತೆ ಬೆಂಕಿಪೊಟ್ಟಣದ ಬೆಲೆಯು ₹ 2ಗೆ ಹೆಚ್ಚಳವಾಗಲಿದೆ. ಈಗ ಒಂದು ಬೆಂಕಿಪೊಟ್ಟಣದ ಬೆಲೆಯು ₹ 1 ಇದೆ. ಬೆಂಕಿಕಡ್ಡಿ ಉತ್ಪಾದನೆಯ ವೆಚ್ಚ ಹೆಚ್ಚಾಗಿರುವ ಕಾರಣ, ಬೆಂಕಿಪೊಟ್ಟಣ ಉತ್ಪಾದನಾ ಕಂಪನಿಗಳು ಈ ಕ್ರಮಕ್ಕೆ ಮುಂದಾಗಿವೆ. 10

ಆರ್ಯನ್ ಬಿಡುಗಡೆಗೆ ಲಂಚ: ಸಾಕ್ಷಿಯ ಆರೋಪ

‘₹25 ಕೋಟಿ ಲಂಚಕ್ಕೆ ಬೇಡಿಕೆ’

ಮುಂಬೈ (ಪಿಟಿಐ): ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಪತ್ತೆ ಪ್ರಕರಣವು ದಿಢೀರ್ ತಿರುವು ಪಡೆದುಕೊಂಡಿದೆ. ಮಾದಕ ಪದಾರ್ಥ ನಿಯಂತ್ರಣ ಬ್ಯೂರೊದ (ಎನ್‌ಸಿಬಿ) ಅಧಿಕಾರಿಗಳು ಬಾಲಿವುಡ್ ಸೂಪರ್‌ಸ್ಟಾರ್ ಶಾರುಕ್ ಖಾನ್ ಅವರಿಂದ ಆರೋಪಿಯಾದ ಅವರ ಮಗ ಆರ್ಯನ್ ಖಾನ್ ಬಿಡುಗಡೆಗೆ ₹25 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಪ್ರಕರಣದ ಸಾಕ್ಷಿಯಾಗಿರುವ ಪ್ರಭಾಕರ ಸೈಲ್ ಹೇಳಿದ್ದಾರೆ.

ಒಂಬತ್ತು ಖಾಲಿ ಹಾಳೆಗಳಿಗೆ ಎನ್‌ಸಿಬಿ ಅಧಿಕಾರಿಗಳು ತಮ್ಮಿಂದ ಸಹಿ ಹಾಕಿಸಿಕೊಂಡಿದ್ದಾರೆ ಎಂದೂ ಸೈಲ್ ಆರೋಪಿಸಿದ್ದಾರೆ. ಈ ಆರೋಪಗಳನ್ನು ಎನ್‌ಸಿಬಿ ಅಧಿಕಾರಿಗಳು ಅಲ್ಲಗಳೆದಿದ್ದಾರೆ. ಇವು ಆಧಾರರಹಿತ ಮತ್ತು ದುರುದ್ದೇಶಪೂರಿತ ಆರೋಪ ಎಂದಿದ್ದಾರೆ.

ಎನ್‌ಸಿಬಿಯ ಪ್ರಾದೇಶಿಕ ನಿರ್ದೇಶಕ ಸಮೀರ್ ವಾಂಖೆಡೆ ಅವರು ಈ ತಿಂಗಳ ಆರಂಭದಲ್ಲಿ ಐಷಾರಾಮಿ ಹಡಗಿನ ಮೇಲೆ ದಾಳಿ ನಡೆಸಿದ್ದರು. ಅಂತರರಾಷ್ಟ್ರೀಯ ಡ್ರಗ್ಸ್ ಜಾಲವನ್ನು ಬಯಲಿಗೆ ಎಳೆದಿರುವುದಾಗಿ ಎನ್‌ಸಿಬಿ ಹೇಳಿತ್ತು. ಇದೇ 3ರಂದು ಆರ್ಯನ್ ಖಾನ್ ಅವರನ್ನು ಎನ್‌ಸಿಬಿ ಬಂಧಿಸಿತ್ತು. ಆರ್ಯನ್ ಅವರು ಆರ್ಥರ್ ರೋಡ್ ಜೈಲಿನಲ್ಲಿದ್ದಾರೆ.

ವಿದೇಶದಲ್ಲಿ ಉದ್ಯೋಗ ದೊರಕಿಸಿ ಕೊಡುವ ಕೆ.ಪಿ. ಗೋಸಾವಿ ಎಂಬ ವ್ಯಕ್ತಿ ಪ್ರಕರಣದ ಇನ್ನೊಬ್ಬ ಸಾಕ್ಷಿ. 2018ರ ವಂಚನೆ ಪ್ರಕರಣವೊಂದರಲ್ಲಿ ಗೋಸಾವಿ ವಿರುದ್ಧ ಪುಣೆ ಪೊಲೀಸರು ಇತ್ತೀಚೆಗೆ ಲುಕ್‌ಔಟ್ ನೋಟಿಸ್ ಹೊರಡಿಸಿದ್ದಾರೆ.

ಎನ್‌ಸಿಬಿ ಅಧಿಕಾರಿಗಳು, ಗೋಸಾವಿ ಮತ್ತು ಸ್ಯಾಮ್ ಡಿಸೋಜಾ ಎಂಬ ಇನ್ನೊಬ್ಬ ವ್ಯಕ್ತಿ ಸೇರಿ ಶಾರುಖ್ ಖಾನ್‌ಗೆ ₹25 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಮೊತ್ತ ಕೊಟ್ಟರೆ ಆರ್ಯನ್ ಬಿಡುಗಡೆ ಮಾಡಲಾಗುವುದು ಎಂದಿದ್ದರು ಎಂದು ಸೈಲ್ ಭಾನುವಾರ ಆರೋಪಿಸಿದ್ದಾರೆ.

ಇನ್ನೊಂದು ಸುದ್ದಿ 6

ಜಿಲ್ಲೆಯಲ್ಲಿ ವ್ಯಾಪಕ ಮಳೆ: ಕೋಡಿ ಹರಿದ ರಂಗಧಾಮ ಕೆರೆ

ಚಿಕ್ಕಬಳ್ಳಾಪುರ: 3 ದಶಕಗಳಲ್ಲೇ ಅಧಿಕ ಮಳೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ಶನಿವಾರ ನಡುರಾತ್ರಿಯಿಂದ ಭಾನುವಾರ ಬೆಳಗಿನ ಜಾವದವರೆಗೆ ಸುರಿದ ಮಳೆಗೆ ಜಲಾಶಯಗಳು, ಕೆರೆ–ಕಟ್ಟೆಗಳಿಗೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬಂದಿದ್ದು ಕೋಡಿ ಹರಿಯುತ್ತಿವೆ. ಇದು ಕಳೆದ ಮೂರು ದಶಕಗಳಲ್ಲಿಯೇ ಅತ್ಯಧಿಕ ಮಳೆಯಾಗಿದೆ.

ರಂಗಧಾಮ ಕೆರೆ ಕೋಡಿ ಹರಿದ ಪರಿಣಾಮ ಚಿಕ್ಕಬಳ್ಳಾಪುರ ನಗರದ ಪ್ರತಿಷ್ಠಿತ ಡಿವೈನ್ ಸಿಟಿ ಬಡಾವಣೆಯು ಜಲಾವೃತವಾಗಿದೆ. ಮನೆಗಳ ಆವರಣ, ಬಡಾವಣೆಯ ರಸ್ತೆಗಳಲ್ಲಿ ನೀರು ನಿಂತಿದೆ. ಬಡಾವಣೆ ಪ್ರವೇಶಿಸುವ ಹಾದಿ ಸಂಪೂರ್ಣವಾಗಿ ಕಿತ್ತು ಹೋಗಿದ್ದು ದೊಡ್ಡ ಕಂದಕ ಸೃಷ್ಟಿಯಾಗಿದೆ. ಡಿವೈನ್ ಸಿಟಿಯಿಂದ ಕಣಜೇನಹಳ್ಳಿಯವರೆಗಿನ ಒಂದೂವರೆ ಕಿ.ಮೀ ಉದ್ದದ ರಸ್ತೆಯಲ್ಲಿ ನೀರು ಹಳ್ಳದಂತೆ ಹರಿಯುತ್ತಿದೆ. ಸುತ್ತಮುತ್ತಲ ಹಳ್ಳಿಗಳ ಜನರು ಡಿವೈನ್ ಸಿಟಿಗೆ ನುಗ್ಗಿದ ನೀರನ್ನು ನೋಡಲು ಬಂದಿದ್ದರು.

ಜಿಲ್ಲೆಯ ಬಹಳಷ್ಟು ಕಡೆಗಳಲ್ಲಿ ಹೊಲ, ತೋಟಗಳಿಗೆ ನೀರು ನುಗ್ಗಿದೆ. ರಾಗಿ, ಶೇಂಗಾ, ಮುಸುಕಿನ ಜೋಳದ ಬೆಳೆಗಳಿಗೆ ಹಾನಿಯಾಗಿದೆ. ಗೌರಿಬಿದನೂರು ತಾಲ್ಲೂಕಿನಲ್ಲಿ ಉತ್ತರ ಪಿನಾಕಿನಿ ನದಿ ಮತ್ತೆ ಉಕ್ಕಿ ಹರಿಯುತ್ತಿದೆ.

18 ವರ್ಷಗಳ ನಂತರ ಗುಡಿಬಂಡೆ ತಾಲ್ಲೂಕಿನ ರಾಮಪ್ಪನ ಕೆರೆ ತುಂಬಿದೆ. ಹತ್ತು ದಿನಗಳಿಂದ ಅಮಾನಿ ಬೈರಸಾಗರ ಕೆರೆ ಕೋಡಿ ಹರಿಯುತ್ತಿದೆ. ಕೋಡಿ ನೀರಿನಲ್ಲಿ ಭಾನುವಾರ ಆಂಬುಲೆನ್ಸ್ ಸಿಲುಕಿದ್ದು ಜನರು ತಳ್ಳಿ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟರು. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಬಾಗೇಪಲ್ಲಿ, ಚಿಂತಾಮಣಿ ತಾಲ್ಲೂಕುಗಳಲ್ಲಿಯೂ ಕೆರೆಗಳು ತುಂಬಿ ಹರಿಯುತ್ತಿವೆ. ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದೆ.

ಭಾರಿ ಮಳೆ ಸಹಜವಾಗಿ ಜನರ ಸಂತಸಕ್ಕೆ ಕಾರಣವಾಗಿದೆ. ಮತ್ತೊಂದು ಕಡೆ ಹಾನಿ ಸಂಭವಿಸಿದೆ. ಕಳೆದ ವಾರ ಸುರಿದ ಮಳೆಗೆ 1,800 ಹೆಕ್ಟೇರ್ ಬೆಳೆ ಹಾನಿ ಸಂಭವಿಸಿದ್ದು ಈಗ ಹಾನಿ ಪ್ರಮಾಣ ಮತ್ತಷ್ಟು ಹೆಚ್ಚಲಿದೆ. ಈಗಾಗಲೇ ಮಳೆಯಿಂದ ಶಿಡ್ಲಘಟ್ಟ ತಾಲ್ಲೂಕಿನ ಐದು ಕೆರೆಗಳು ಒಡೆದಿವೆ.

ಚಿಕ್ಕಬಳ್ಳಾಪುರದ ಡಿವೈನ್ ಸಿಟಿ ಬಳಿಯ ಗೌರಿಬಿದನೂರು ರಸ್ತೆಯಲ್ಲಿ ಮಳೆ ನೀರು ನದಿಯಂತೆ ಹರಿಯುತ್ತಿದ್ದು, ಅದರಲ್ಲೇ ವಾಹನಗಳು ಸಂಚರಿಸಿದವು

129 ಮಿ.ಮೀ ಮಳೆ

ಜಿಲ್ಲೆಯಲ್ಲಿ ಶನಿವಾರ (ಅ.23) ಬೆಳಿಗ್ಗೆ 8ರಿಂದ ಭಾನುವಾರ (ಅ.24) ಬೆಳಿಗ್ಗೆ 8ರವರೆಗೆ ಒಟ್ಟು 129 ಮಿ.ಮೀ ಮಳೆಯಾಗಿದೆ. ಚಿಕ್ಕಬಳ್ಳಾಪುರದ ಶ್ರೀನಿವಾಸಸಾಗರದಲ್ಲಿ 98.2 ಮಿ.ಮೀ, ಗುಡಿಬಂಡೆ ತಾಲ್ಲೂಕಿನ ಸೋಮೇನಹಳ್ಳಿ 65 ಮಿ.ಮೀ, ಚಿಕ್ಕಬಳ್ಳಾಪುರದ ಕಸಬಾ ವ್ಯಾಪ್ತಿಯಲ್ಲಿ 58 ಮಿ.ಮೀ, ಶಿಡ್ಲಘಟ್ಟ ತಾಲ್ಲೂಕಿನ ಬಶೆಟ್ಟಹಳ್ಳಿಯಲ್ಲಿ 53 ಮಿ.ಮೀ ಮತ್ತು ಗುಡಿಬಂಡೆಯಲ್ಲಿ 48 ಮಿ.ಮೀ ಮಳೆಯಾಗಿದೆ.

ಸಿಡಿಲಿಗೆ ತಂದೆ, ಮಗ ಸೇರಿ ಮೂವರ ಸಾವು 4

ಎಚ್‌ಎಸ್‌ಆರ್ ಬಡಾವಣೆಯ 4 ಎಕರೆ ಸರ್ಕಾರಿ ಭೂಮಿ • ಕಬಳಿಕೆ ಯತ್ನ ವಿಫಲಗೊಳಿಸಿದ ಜಿಲ್ಲಾಡಳಿತ

ಭೂ ನ್ಯಾಯಮಂಡಳಿ ಅಧ್ಯಕ್ಷರ ಸಹಿಯೇ ನಕಲಿ!

• ಮಂಜುನಾಥ್ ಹೆಬ್ಬಾರ್

ಮುಖ್ಯಾಂಶಗಳು
- ಬೆಂ.ದ ಉಪವಿಭಾಗಾಧಿಕಾರಿ ಆದೇಶವನ್ನು ಎತ್ತಿ ಹಿಡಿದ ವಿಶೇಷ ಜಿಲ್ಲಾಧಿಕಾರಿ
- ಭೂನ್ಯಾಯಮಂಡಳಿಯ ಆದೇಶದ ದಾಖಲೆ ತೋರಿಸಿ ಮಾಲೀಕತ್ವದ ಪ್ರತಿಪಾದನೆ
- ದಾಖಲೆ ಪರಿಶೀಲನೆ ವೇಳೆ ಪತ್ತೆಯಾಯಿತು ಅಕ್ರಮ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದ ಎಚ್‌ಎಸ್‌ಆರ್ ಬಡಾವಣೆಯಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ₹160 ಕೋಟಿ ಮೌಲ್ಯದ ನಾಲ್ಕು ಎಕರೆ ಖರಾಬು ಭೂಮಿಯನ್ನು ಕಬಳಿಸುವ ಯತ್ನವನ್ನು ನಗರ ಜಿಲ್ಲಾಡಳಿತ ವಿಫಲಗೊಳಿಸಿದೆ. ಎಲ್ಲಕುಂಟೆ ಗ್ರಾಮದ ಸರ್ವೆ ಸಂಖ್ಯೆ 18/8ರ ನಾಲ್ಕು ಎಕರೆ ಜಾಗ ಸರ್ಕಾರಿ ಭೂಮಿ ಎಂದು ವಿಶೇಷ ಜಿಲ್ಲಾಧಿಕಾರಿ ಬಸವರಾಜು ಆದೇಶ ಹೊರಡಿಸಿದ್ದಾರೆ.

ಅರ್ಜಿದಾರರಾದ ಕೆ.ಮನೋಹರ್ ರಾಜು, ಎಸ್.ಅಮೃತ ಕುಮಾರ, ಕೆ.ಆರ್.ವೇಣುಗೋಪಾಲ್ ಅವರ ಮನವಿಯನ್ನು ತಿರಸ್ಕರಿಸಿರುವ ವಿಶೇಷ ಜಿಲ್ಲಾಧಿಕಾರಿ ಅವರು, 2016ರಲ್ಲಿ ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿ ಹೊರಡಿಸಿದ್ದ ಆದೇಶವನ್ನು ಎತ್ತಿ ಹಿಡಿದಿದ್ದಾರೆ. ಅರ್ಜಿದಾರರು ಸಲ್ಲಿಸಿದ್ದ ದಾಖಲೆಗಳಲ್ಲಿರುವ ಸಹಿಗೆ ಹಾಗೂ ಭೂನ್ಯಾಯಮಂಡಳಿ ಅಧ್ಯಕ್ಷರು ಹಾಗೂ ಸದಸ್ಯರು ಹಾಕಿರುವ ಸಹಿಗೂ ತಾಳೆಯಾಗುತ್ತಿಲ್ಲ ಎಂಬ ಅಂಶವನ್ನು ಅವರು ಆದೇಶದಲ್ಲಿ ಬೊಟ್ಟುಮಾಡಿದ್ದಾರೆ. ಇಲ್ಲಿ ಒಂದು ಎಕರೆ ಜಾಗಕ್ಕೆ ಮಾರುಕಟ್ಟೆ ಮೌಲ್ಯ ₹40 ಕೋಟಿ ಇದೆ.

ಏನಿದು ಪ್ರಕರಣ: 'ಅಣ್ಣಾಮಲೈ ಮೊದಲಿಯಾರ್ ಹಾಗೂ ಮುನಿಗ ಎಂಬುವವರು ಈ ಜಾಗದ ಮೂಲ ಮಾಲೀಕರಾಗಿದ್ದು, 1929ರಿಂದಲೂ ಸರ್ವೆ ದಾಖಲೆಗಳು ಅವರ ಹೆಸರಿನಲ್ಲಿ ಇವೆ. ಅವರ ನಿಧನದ ನಂತರ ಮುನಿಗ ಅವರ ಪುತ್ರ ದೊಡ್ಡಣ್ಣ ಎಂಬುವವರು 1954ರಲ್ಲಿ ಎ.ನಾರಾಯಣಪ್ಪ ಎಂಬುವವರಿಗೆ ಜಾಗ ಮಾರಿದರು. ನಾರಾಯಣಪ್ಪ ಹಾಗೂ ಕುಟುಂಬದವರು ನಾಲ್ಕು ಎಕರೆಯನ್ನು ಕೃಷ್ಣಾರೆಡ್ಡಿ ಅವರಿಗೆ ಮಾರಾಟ ಮಾಡಿದರು. 'ಇದೇ ವೇಳೆ, ಕೃಷ್ಣಾ ರೆಡ್ಡಿ ಅವರಿಂದ ಮುನಿರಾಜು ರೆಡ್ಡಿ ಎಂಬುವವರು 1980ರಲ್ಲೇ ಈ ಜಾಗವನ್ನು ಖರೀದಿಸಿದರು. ಮುನಿರಾಜು ರೆಡ್ಡಿ ಅವರು ಎರಡು ಎಕರೆಯನ್ನು ಕೆ.ಮನೋಹರ ರಾಜು ಹಾಗೂ ಎರಡು ಎಕರೆಯನ್ನು ಎಸ್.ಅಮೃತ ಕುಮಾರ ಅವರಿಗೆ 1988ರ ನವೆಂಬರ್‌ನಲ್ಲಿ ಮಾರಿದರು. ಅಂದಿನಿಂದ ಈ ಜಾಗವು ತಮ್ಮ ಹೆಸರಿನಲ್ಲಿ ಇದೆ' ಎಂಬುದು ಅರ್ಜಿದಾರರ ವಾದ.

ಈ ನಡುವೆ, ಎಲ್ಲಕುಂಟೆ ಎಕ್ಸ್‌ಟೆನ್ಶನ್ ಮತ್ತು ಹೊಸಪಾಳ್ಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಗೌರವ ಅಧ್ಯಕ್ಷ ಪ್ರಭಾರಾವ್ ಎಂಬುವವರು ಈ ಪ್ರಕರಣದ ಪ್ರತಿವಾದಿಯಾಗಿ ಸೇರ್ಪಡೆಯಾದರು. ಈ ಸರ್ವೆ ಸಂಖ್ಯೆ ಮೂಲತಃ ಖರಾಬು ಭೂಮಿ. ಈ ಜಾಗದಲ್ಲಿ ರಾಜಕಾಲುವೆ ಹಾದು ಹೋಗುವ ರಸ್ತೆ ಇದ್ದು, ಇದನ್ನು ಬಳಸಲು ಅರ್ಜಿದಾರರು ತೊಂದರೆ ನೀಡುತ್ತಿದ್ದಾರೆ ಎಂದು ದೂರಿದರು. 'ಮುನಿಗ ಅವರು ಈ ಜಾಗದಲ್ಲಿ ಕೃಷಿ ಮಾಡುತ್ತಿದ್ದರು. ಆದರೆ, ಅವರು ಈ ಜಾಗದ ಮಾಲೀಕರಲ್ಲ' ಎಂದೂ ಪ್ರಭಾರಾವ್ ಹಾಜರುಪಡಿಸಿದರು. 'ಇದು ಖರಾಬು ಭೂಮಿಯಾಗಿದ್ದು, ರಸ್ತೆ ಹಾಗೂ ಉದ್ಯಾನ ನಿರ್ಮಾಣಕ್ಕಾಗಿ ಒಂದು ಎಕರೆಯನ್ನು ಬಿಬಿಎಂಪಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಮಂಜೂರು ಮಾಡಲಾಗಿದೆ' ಎಂದು ನಗರ ಜಿಲ್ಲಾಧಿಕಾರಿ ಅವರು 2008ರಲ್ಲಿ ಆದೇಶ ಹೊರಡಿಸಿದ್ದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿ ಮೊರೆ ಹೋದರು. ಕಾನೂನಿನ ಪ್ರಕಾರ ವಿಚಾರಣೆ ನಡೆಸಿ ಇತ್ಯರ್ಥ ಮಾಡುವಂತೆ ಜಿಲ್ಲಾಧಿಕಾರಿ ಅವರಿಗೆ ನ್ಯಾಯಮಂಡಳಿ 2014ರಲ್ಲಿ ಸೂಚಿಸಿತು.

ಈ ನಡುವೆ, ಈ ಸರ್ವೆ ಸಂಖ್ಯೆಯ ಒಂದು ಎಕರೆ ಜಾಗ ತಮಗೆ ಮಂಜೂರಾಗಿದೆ ಎಂದು ಕೆ.ಆರ್.ವೇಣುಗೋಪಾಲ್ ಅವರು ಉಪವಿಭಾಗಾಧಿಕಾರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು. ಅರ್ಜಿದಾರರಿಗೆ ಸೂಕ್ತ ನೋಟಿಸ್‌ಗಳನ್ನು ನೀಡದೆ ಉಪವಿಭಾಗಾಧಿಕಾರಿ ಅವರು 2016ರಲ್ಲಿ ಆದೇಶ ಹೊರಡಿಸಿದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಜಿಲ್ಲಾಧಿಕಾರಿ ನ್ಯಾಯಾಲಯದ ಮೊರೆ ಹೋದರು. ಜಿಲ್ಲಾಧಿಕಾರಿ ಅವರು ವಿಶೇಷ ಜಿಲ್ಲಾಧಿಕಾರಿ ನ್ಯಾಯಾಲಯಕ್ಕೆ ಪ್ರಕರಣವನ್ನು ವರ್ಗಾಯಿಸಿದರು. ಇದೇ ವೇಳೆ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಭೂಕಬಳಿಕೆ ತಡೆ ವಿಶೇಷ ನ್ಯಾಯಾಲಯವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿತು. ಅರ್ಜಿದಾರರು ಸಲ್ಲಿಸಿದ ದಾಖಲೆಗಳು ಹಾಗೂ ಸರ್ಕಾರಿ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ವಿಶೇಷ ಜಿಲ್ಲಾಧಿಕಾರಿ ಅವರು, ಅರ್ಜಿದಾರರ ಹೆಸರಿನಲ್ಲಿರುವ ಮ್ಯುಟೇಷನ್ ಎಂಟ್ರಿಗಳನ್ನು ರದ್ದುಪಡಿಸುವಂತೆ ಹಾಗೂ ಜಾಗವನ್ನು ಸರ್ಕಾರದ ವಶಕ್ಕೆ ಪಡೆಯುವಂತೆ ನಿರ್ದೇಶನ ನೀಡಿದ್ದಾರೆ.

'ಅಣ್ಣಾಮಲೈ ಮೊದಲಿಯಾರ್ ಹಾಗೂ ಮುನಿಗ ಅವರಿಂದ ನಾರಾಯಣಪ್ಪ ಅವರು ಜಾಗ ಖರೀದಿ ಮಾಡಿದ್ದರು. ಇನಾಂ ರದ್ದತಿ ಕಾಯ್ದೆ ಜಾರಿಗೆ ಬಂದ ಬಳಿಕ ನಾರಾಯಣಪ್ಪ ಅವರು 1974ರಲ್ಲಿ ಈ ಜಾಗವನ್ನು ಮರು ಮಂಜೂರಾತಿ ಮಾಡಬೇಕು ಎಂದು ವಿಶೇಷ ಜಿಲ್ಲಾಧಿಕಾರಿ ಅವರಿಗೆ ಅರ್ಜಿ ಸಲ್ಲಿಸಿದರು. ಅವರು ಭೂ ನ್ಯಾಯಮಂಡಳಿಗೆ ಈ ಪ್ರಕರಣವನ್ನು ವರ್ಗಾಯಿಸಿದರು. ನಾರಾಯಣಪ್ಪ ಪರವಾಗಿ ನ್ಯಾಯಮಂಡಳಿ 1982ರಲ್ಲಿ ಆದೇಶ ಹೊರಡಿಸಿತು. ಇದನ್ನು ತಾವು ಖರೀದಿ ಮಾಡಿದ್ದೇವೆ ಎಂಬುದು ಅರ್ಜಿದಾರರ ವಾದ. ನ್ಯಾಯಮಂಡಳಿ ನೀಡಿರುವ ಆದೇಶದ ದಾಖಲೆಗಳನ್ನು ತಹಶೀಲ್ದಾರ್ ಹಾಜರುಪಡಿಸಿದರು. ಅಲ್ಲಿ ನ್ಯಾಯಮಂಡಳಿ ಅಧ್ಯಕ್ಷರು ಹಾಗೂ ಸದಸ್ಯರು ಹಾಕಿರುವ ಸಹಿಗೂ ಮತ್ತು ಅರ್ಜಿದಾರರು ಕೊಟ್ಟಿರುವ ದಾಖಲೆಯಲ್ಲಿರುವ ಸಹಿಗೂ ತಾಳೆಯಾಗುತ್ತಿಲ್ಲ. ಅರ್ಜಿದಾರರು ಸಲ್ಲಿಸಿರುವ ದಾಖಲೆಗಳು ನೈಜವಾಗಿಲ್ಲ' ಎಂದು ವಿಶೇಷ ಜಿಲ್ಲಾಧಿಕಾರಿ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಯೋಗೇಂದ್ರ ಯಾದವ್‌ಗೆ ಶಿಕ್ಷೆ ಏಕೆ: ಬಿ.ಕೆ. ಚಂದ್ರಶೇಖರ್ ಪ್ರಶ್ನೆ

ಬೆಂಗಳೂರು: ಸಾಮಾಜಿಕ ಕಾರ್ಯಕರ್ತ ಯೋಗೇಂದ್ರ ಯಾದವ್ ಅವರನ್ನು ಒಂದು ತಿಂಗಳ ಅವಧಿಗೆ ಸಂಯುಕ್ತ ಕಿಸಾನ್ ಮೋರ್ಚಾದಿಂದ (ಎಸ್‌ಕೆಎಂ) ಅಮಾನತು ಮಾಡಿರುವ ನಿರ್ಧಾರಕ್ಕೆ ಕೆಪಿಸಿಸಿ ವಕ್ತಾರ ಪ್ರೊ. ಬಿ.ಕೆ. ಚಂದ್ರಶೇಖರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಯೋಗೇಂದ್ರ ಯಾದವ್ ಅವರು ಮಾಡಿದ ತಪ್ಪಾದರೂ ಏನು? ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಾಲೀಕತ್ವದ ವಾಹನ, ಸಚಿವರ ಪುತ್ರನಿಂದ ಹಿಂತಿರುಗುತ್ತಿದ್ದ ರೈತರ ಮೇಲೆ ಹರಿದ ಸಂದರ್ಭದಲ್ಲಿ ಸಾವಿಗೀಡಾದ ಬಿಜೆಪಿ ಕಾರ್ಯಕರ್ತರೊಬ್ಬರ ಕುಟುಂಬದವರಿಗೆ ಅವರು ಸಾಂತ್ವನ ಹೇಳಿದ್ದಾರೆ. ಯೋಗೇಂದ್ರ ಯಾದವ್ ಅವರ ಈ ಮಾನವೀಯ ನಡೆ ಶ್ಲಾಘನೀಯ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಹಿಂಸೆ ಯಾರು ಮಾಡಿದರೂ, ಯಾವ ಕಾರಣಕ್ಕೆ ಮಾಡಿದರೂ ಹಿಂಸೆಯೇ. ಸಾಂತ್ವನ ಹೇಳುವುದರಿಂದ ರೈತ ಪ್ರತಿಭಟನೆಯ ಹಿತಾಸಕ್ತಿಗೆ ಹಿನ್ನಡೆಯಾಗಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ದೆಹಲಿ ಭೇಟಿಯಿಂದ ಡಿಕೆಶಿಗೆ ಕುತ್ತು: ಬಿಜೆಪಿ ವಾಗ್ದಾಳಿ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಮುಂದಿನ ದೆಹಲಿ ಭೇಟಿಯಿಂದ ಡಿ.ಕೆ. ಶಿವಕುಮಾರ್ ಅವರ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಕುತ್ತು ಬರಬಹುದು ಎಂದು ಬಿಜೆಪಿ ರಾಜ್ಯ ಘಟಕ ಹೇಳಿದೆ.

ಈ ಕುರಿತು ಬಿಜೆಪಿ ರಾಜ್ಯ ಘಟಕದ ಅಧಿಕೃತ ಖಾತೆಯಿಂದ ಭಾನುವಾರ ಸರಣಿ ಟ್ವೀಟ್ ಮಾಡಿದ್ದು, 'ಸಿದ್ದರಾಮಯ್ಯ ಅವರ ಮೊದಲ ದೆಹಲಿ ಭೇಟಿ ಶಿವಕುಮಾರ್ ಸಲ್ಲಿಸಿದ್ದ ಪದಾಧಿಕಾರಿಗಳ ಪಟ್ಟಿಯ ನಿರ್ಲಕ್ಷ್ಯಕ್ಕೆ ಕಾರಣವಾಯಿತು. ಎರಡನೇ ಭೇಟಿಯಿಂದ ಪದಾಧಿಕಾರಿಗಳ ಪಟ್ಟಿ ತಿರಸ್ಕೃತಗೊಂಡಿತು. ಮೂರನೇ ಭೇಟಿಯಿಂದ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಕುತ್ತು ಬರಲಿದೆಯೇ?' ಎಂದು ಪ್ರಶ್ನಿಸಲಾಗಿದೆ.

ಕಾಂಗ್ರೆಸ್ ಸದಸ್ಯತ್ವ ನೋಂದಣಿ ಕುರಿತು ಪ್ರತಿಕ್ರಿಯಿಸಿರುವ ಬಿಜೆಪಿ, 'ಕಾಂಗ್ರೆಸ್ ಪಕ್ಷದಲ್ಲಿ ಪ್ರಜಾಪ್ರಭುತ್ವಕ್ಕೆ ಬೆಲೆಯೇ ಇಲ್ಲ. ಆಂತರಿಕ ಚುನಾವಣೆಯೂ ನಡೆಯುವುದಿಲ್ಲ, ಸದಸ್ಯತ್ವ ನೋಂದಣಿಯೂ ಆಗುವುದಿಲ್ಲ' ಎಂದು ಟೀಕಿಸಿದೆ.

'ಕಾಂಗ್ರೆಸ್ ಸದಸ್ಯತ್ವ ಬೇಕಿದ್ದರೆ ಭ್ರಷ್ಟಾಚಾರ ಮಾಡಿರಬೇಕು. ಮನೆಯ ಆಸ್ತಿಯನ್ನೇ ದೋಚುವ ಕಲೆ ಇರಬೇಕು. ಕಾಂಗ್ರೆಸ್ ಮುಕ್ತ ಭಾರತಕ್ಕೆ ಅವಿರತ ಶ್ರಮಿಸಬೇಕು' ಎಂದು ಟೀಕಾಪ್ರಹಾರ ನಡೆಸಿದೆ.

9 ತಿಂಗಳಲ್ಲಿ 247 ಕ್ಷಯರೋಗಿಗಳ ಸಾವು

ಬಳ್ಳಾರಿ: ಬಳ್ಳಾರಿ ಮತ್ತು ಹೊಸಪೇಟೆ ಸೇರಿದಂತೆ ಅವಿಭಜಿತ ಜಿಲ್ಲೆಯಲ್ಲಿ ಕೇವಲ 9 ತಿಂಗಳಲ್ಲಿ 247 ಮಂದಿ ಕ್ಷಯರೋಗದಿಂದ ಮೃತಪಟ್ಟಿದ್ದಾರೆ!

ಬಳ್ಳಾರಿ ತಾಲ್ಲೂಕು ಒಂದರಲ್ಲೇ 93 ಮಂದಿ ಈ ರೋಗಕ್ಕೆ ಬಲಿಯಾಗಿದ್ದಾರೆ. ಎರಡನೇ ಸ್ಥಾನದಲ್ಲಿ ಸಿರುಗುಪ್ಪ ತಾಲ್ಲೂಕಿದ್ದು, 34 ಮಂದಿ ಸಾವನ್ನಪ್ಪಿದ್ದಾರೆ. ವಿಜಯನಗರ ತಾಲ್ಲೂಕಿನಲ್ಲಿ 33 ಜನ ಮೃತಪಟ್ಟಿದ್ದು, ಮೂರನೇ ಸ್ಥಾನದಲ್ಲಿದೆ. ಕ್ಷಯರೋಗ ಪ್ರಕರಣ ಜಿಲ್ಲೆಯಲ್ಲಿ ಹೆಚ್ಚಿದ್ದರೂ ಜಿಲ್ಲಾಡಳಿತ ಮಾತ್ರ ಮಾಹಿತಿ ಗೋಪ್ಯ ಕಾಪಾಡಿಕೊಂಡು ಬಂದಿದೆ!

ಕ್ಷಯರೋಗ ಪತ್ತೆ, ಚಿಕಿತ್ಸೆ ಮತ್ತು ಚಿಕಿತ್ಸೆ ಕುರಿತ ಸಮೀಕ್ಷೆಗಾಗಿ ಕೇಂದ್ರ ಆರೋಗ್ಯ ಸಚಿವಾಲಯದ ಸೂಚನೆ ಮೇಲೆ ಬಳ್ಳಾರಿ ಜಿಲ್ಲೆಗೆ ಬಂದಿರುವ ಡಾ.ತಾರಕ್ ಶಾ ಅವರ ನೇತೃತ್ವದ ವೈದ್ಯರ ತಂಡಕ್ಕೆ ಈ ಆಘಾತಕಾರಿ ಮಾಹಿತಿ ಸಿಕ್ಕಿದೆ. ತಂಡ ದೆಹಲಿಗೆ ಹಿಂತಿರುಗಿದ ಬಳಿಕ ಆರೋಗ್ಯ ಸಚಿವಾಲಯಕ್ಕೆ ವರದಿ ಸಲ್ಲಿಸಲಿದೆ.

ಚೀಮಸಂದ್ರ ಕೆರೆಗೆ ಬಾಗಿನ ಅರ್ಪಣೆ

ಪ್ರಜಾವಾಣಿ ವಾರ್ತೆ

ಚೀಮಸಂದ್ರ ಕೆರೆಗೆ ಅಲಲಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿಲ್ಪಾ ನಾಗರಾಜ್ ನೇತೃತ್ವದಲ್ಲಿ ಗ್ರಾಮಸ್ಥರು ಬಾಗಿನ ಅರ್ಪಿಸಿದರು. ಗ್ರಾಮ ಪಂಚಾಯಿತಿ ಸದಸ್ಯರಾದ ಕೆ ಶ್ರೀನಿವಾಸ್ ನಾಗರಾಜ್, ಮುನಿರತ್ನ ಮಂಜುನಾಥ್, ನಂಜಪ್ಪ, ಮುಖಂಡರಾದ ಸರಸ್ವತಮ್ಮ, ರೂಪಾ ಸಿ.ಕೆ. ರಾಜು, ಸಿ.ಎಚ್. ಚಿಕ್ಕೆಗೌಡ್ರು, ಎಚ್.ಕೆ.ಕೃಷ್ಣಪ್ಪ, ಎಂ.ವೆಂಕಟೇಶಪ್ಪ ಇದ್ದರು.

ಕೆ.ಆರ್.ಪುರ: 25 ವರ್ಷಗಳ ಬಳಿಕ ಮಳೆಯಿಂದ ಸಂಪೂರ್ಣವಾಗಿ ಭರ್ತಿಯಾಗಿ ಕೋಡಿ ಹರಿದ ಚೀಮಸಂದ್ರ ಕೆರೆಗೆ ಅಲಲಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಶಿಲ್ಪಾ ನಾಗರಾಜ್ ನೇತೃತ್ವದಲ್ಲಿ ಗ್ರಾಮಸ್ಥರು ಬಾಗಿನ ಅರ್ಪಿಸಿದರು.

ನಂತರ ಮಾತನಾಡಿದ ಶಿಲ್ಪಾ ನಾಗರಾಜ್, 'ಚೀಮಸಂದ್ರ ಕೆರೆ ಈ ಭಾಗದ ಜೀವನಾಡಿಯಾಗಿದೆ. ಒಂದು ವಾರದಿಂದ ಸುರಿಯುತ್ತಿರುವ ಮಳೆಗೆ ಜಲಕಾಯ ಭರ್ತಿಯಾಗಿದೆ. ಮುಂದಿನ ದಿನಗಳಲ್ಲಿ ಕೆರೆಯನ್ನು ಹಂತಹಂತವಾಗಿ ಅಭಿವೃದ್ಧಿಪಡಿಸಲಾಗುವುದು' ಎಂದು ಹೇಳಿದರು.

ಚೀಮಸಂದ್ರ ಗ್ರಾಮದ ಮುಖಂಡ ನಾಗರಾಜ್, 'ಕೆಲ ವರ್ಷಗಳ ಹಿಂದೆ ಚೀಮಸಂದ್ರ ಕೆರೆ ರೈತರಿಗೆ ಆಸರೆಯಾಗಿತ್ತು. ಈಗ ಜಲಕಾಯ ತುಂಬಿರುವುದು ಗ್ರಾಮಸ್ಥರಿಗೆ ಜೀವಕಳೆ ಬಂದಂತೆ ಆಗಿದೆ. ಅಂತರ್ಜಲ ಮಟ್ಟ ಹೆಚ್ಚಿ ಗ್ರಾಮಸ್ಥರಿಗೆ ಅನುಕೂಲವಾಗಲಿದೆ' ಎಂದು ಹೇಳಿದರು.

'ಎನ್‌ಪಿಎಸ್ ನೌಕರರ ಸಮಸ್ಯೆ ನಿರ್ಲಕ್ಷ್ಯ'

ಬೆಂಗಳೂರು: 'ನೂತನ ಪಿಂಚಣಿ ನೀತಿ (ಎನ್‌ಪಿಎಸ್) ವ್ಯಾಪ್ತಿಯಲ್ಲಿರುವ ನೌಕರರ ಸಮಸ್ಯೆಗಳನ್ನು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಕಡೆಗಣಿಸಿದ್ದಾರೆ. ಈ ನೌಕರರ ಸಮಸ್ಯೆ ಪರಿಹಾರಕ್ಕೆ ಸಂಘದಿಂದ ಪ್ರಯತ್ನವೇ ನಡೆದಿಲ್ಲ' ಎಂದು ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷ ಎನ್.ಇ. ನಟರಾಜ್ ದೂರಿದರು.

ನಗರದ ಗಾಂಧಿ ಭವನದಲ್ಲಿ ಭಾನುವಾರ ನಡೆದ ಒಕ್ಕೂಟದ ಕಾರ್ಯಕಾರಿ ಸಮಿತಿ ಸಭೆ ಬಳಿಕ ಮಾತನಾಡಿದ ಅವರು, 'ಎನ್‌ಪಿಎಸ್ ನೌಕರರ ಸಮಸ್ಯೆ ಪರಿಹಾರದ ಕುರಿತು ಸಂಘದ ಅಧ್ಯಕ್ಷರು ಒಂದು ದಿನವೂ ರಾಜ್ಯ ಸರ್ಕಾರದ ಜತೆ ಚರ್ಚಿಸಿಲ್ಲ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಷಡಾಕ್ಷರಿ ಮುಖ್ಯಮಂತ್ರಿಯವರ ಸಹಾಯಕರಾಗಿದ್ದರು. ಆಗಲೂ ನೌಕರರ ಪರ ಧ್ವನಿ ಎತ್ತಿಲ್ಲ' ಎಂದರು.

ಷಡಾಕ್ಷರಿ ಅವರ ಅವಧಿಯಲ್ಲಿ ಒಂದೆರಡು ಸಣ್ಣ ಕೆಲಸಗಳಾಗಿವೆ. ಉಳಿದಂತೆ ನೌಕರರ ಯಾವುದೇ ಬೇಡಿಕೆಗಳು ಈಡೇರಿಲ್ಲ. ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ನೌಕರರಿಗೆ ನ್ಯಾಯ ದೊರಕಿಸುವಲ್ಲಿ ವಿಫಲವಾಗಿದ್ದಾರೆ ಎಂದು ಹೇಳಿದರು.

ನೌಕರರ ಸಂಘದಲ್ಲಿ ಭಿನ್ನಾಭಿಪ್ರಾಯ ತಲೆದೋರಿದೆ. ಅಧ್ಯಕ್ಷರಿಗೆ ಇತರರ ಮಾತುಗಳನ್ನು ಕೇಳಿಸಿಕೊಳ್ಳುವ ಸಂಯಮ ಇಲ್ಲ' ಎಂದು ಒಕ್ಕೂಟದ ಗೌರವಾಧ್ಯಕ್ಷ ಮಹದೇವಯ್ಯ ಮಠಪತಿ ಆರೋಪಿಸಿದರು.

40 ಅಡಿ ಎತ್ತರದಿಂದ ಜಾರಿದ ಯಂತ್ರ

ಒಂದನೇ ಪುಟದಿಂದ

'ಬೆಳಿಗ್ಗೆ 6.15ರ ಸುಮಾರಿಗೆ 100ಕ್ಕೂ ಹೆಚ್ಚು ಜನ ಕೆಲಸ ಆರಂಭಿಸಿದ್ದರು. ಲಾಂಚಿಂಗ್ ಗರ್ಡರ್ ಜಾರಿದ ಜಾಗದಲ್ಲಿ ಯಾರೊಬ್ಬರೂ ಇರಲಿಲ್ಲ. ಹೀಗಾಗಿ, ಯಾವುದೇ ಅನಾಹುತ ಸಂಭವಿಸಿಲ್ಲ. ಘಟನೆ ಬಗ್ಗೆ ದೂರು ಪಡೆದಿದ್ದು, ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ಘಟನೆ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ನಿಗಮವು, 'ಇದೊಂದು ಯಾಂತ್ರಿಕ ವೈಫಲ್ಯ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಇದರಿಂದ ಯಾವುದೇ ಅವಘಡ ಸಂಭವಿಸಿಲ್ಲ. ಯಾರಿಗೂ ಹಾನಿ ಉಂಟಾಗಿಲ್ಲ. ಪಿಲ್ಲರ್ ಮೇಲೆ ಬಿದ್ದ ಲಾಂಚಿಂಗ್ ಗರ್ಡರ್ ಅನ್ನು ಸುರಕ್ಷಿತವಾಗಿ ಕೆಳಗಿಳಿಸಲಾಗುತ್ತದೆ' ಎಂದು ತಿಳಿಸಿದೆ.

'ಈ ವೈಫಲ್ಯದ ಬಗ್ಗೆ ಕಾಮಗಾರಿಯ ಗುತ್ತಿಗೆ ಕರಾರಿನ ನಿಬಂಧನೆಗಳ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ' ಎಂದೂ ನಿಗಮ ಹೇಳಿದೆ.

ಪುಸ್ತಕ ಬಿಡುಗಡೆ

ಚಾರುಮತಿ ಪ್ರಕಾಶನ ಪ್ರಕಟಿಸಿದ 'ಬಹುಮುಖಿ ಅಮೆರಿಕಾ' ಕೃತಿಯನ್ನು ಶನಿವಾರ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ್ ಬಿಡುಗಡೆ ಮಾಡಿದರು. ಗಾಯಕ ಆನಂದ ಮಾದಲಗೆರೆ, ಪ್ರಕಾಶಕ ಬಿ.ಎಸ್. ವಿದ್ಯಾರಣ್ಯ, ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಿ.ಚಿ. ಬೋರಲಿಂಗಯ್ಯ, ಲೇಖಕ ಸಿರಿಗಂಧ ವಿ. ಶ್ರೀ ನಿವಾಸಮೂರ್ತಿ ಮತ್ತು ಜಾನಪದ ಗಾಯಕ ವೇಮಗಲ್ ನಾರಾಯಣ ಸ್ವಾಮಿ ಇದ್ದರು

'ಪ್ರಜಾವಾಣಿ'ಯ ಉಪಸಂಪಾದಕರ 'ದೇವ್ರು' ಕಾದಂಬರಿ ಬಿಡುಗಡೆ

'ಚಿಂತನಾ ಶಕ್ತಿ ಕುಗ್ಗಿಸುವ ಬಹುಮಾಧ್ಯಮಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿಂತನಾ ಶಕ್ತಿ ಕುಗ್ಗಿಸುತ್ತಿರುವ ಇಂದಿನ ಬಹು ಮಾಧ್ಯಮಗಳು ನಮ್ಮ ಗಮನವನ್ನು ಸದಾ ಬೇರೆಡೆ ಸೆಳೆಯುತ್ತಿವೆ. ನಮ್ಮತನವನ್ನು ಕಾಯ್ದುಕೊಳ್ಳಲು ಆಂತರಿಕ ಶಕ್ತಿಯನ್ನು ಹೆಚ್ಚಿಸುವ ಅಗತ್ಯವಿದೆ' ಎಂದು ಪತ್ರಕರ್ತ ನಾಗೇಶ ಹೆಗಡೆ ಪ್ರತಿಪಾದಿಸಿದರು.

ಅಂಕಿತ ಪ್ರಕಾಶನ ಪ್ರಕಟಿಸಿರುವ ಸಾಹಿತಿ ಬೋಳುವಾರು ಮಹಮ್ಮದ್ ಕುಂಞ ಅವರ ಕಥಾ ಸಂಕಲನ 'ಆಕಾಶಕ್ಕೆ ನೀಲಿ ಪರದೆ' ಮತ್ತು ಲೇಖಕ ಎ.ಎನ್. ಪ್ರಸನ್ನ ಅವರ ಕಥಾ ಸಂಕಲನ 'ಬಿಡುಗಡೆ' ಹಾಗೂ 'ಪ್ರಜಾವಾಣಿ'ಯ ಉಪಸಂಪಾದಕ ಪದ್ಮನಾಭ ಭಟ್ ಶೆವ್ಕಾರ ಅವರ 'ದೇವ್ರು' ಕಾದಂಬರಿಯನ್ನು ಭಾನುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನಮ್ಮ ಗಮನವನ್ನು ವಿವಿಧ ರೀತಿಯಲ್ಲಿ ದೋಚುವ ಪ್ರಯತ್ನ ಮಾಡಲಾಗುತ್ತದೆ. ಇದರಿಂದ, ಪುಸ್ತಕ ಓದುವ ಸಂಸ್ಕೃತಿ ಮಸುಕಾಗುತ್ತಿದೆ. ಸಾಹಿತ್ಯ ಸೇರಿದಂತೆ ಸೃಜನಶೀಲ ಚಟುವಟಿಕೆಗಳಿಗೆ ಧಕ್ಕೆಯಾಗುತ್ತಿದೆ' ಎಂದು ಹೇಳಿದರು.

ನಗರದಲ್ಲಿ ಭಾನುವಾರ 'ದೇವ್ರು', 'ಬಿಡುಗಡೆ' ಮತ್ತು 'ಆಕಾಶಕ್ಕೆ ನೀಲಿ ಪರದೆ' ಕೃತಿಗಳನ್ನು ನಾಗೇಶ ಹೆಗಡೆ ಬಿಡುಗಡೆ ಮಾಡಿದರು. ಪದ್ಮನಾಭ ಭಟ್ ಶೇವ್ಕಾರ, ಎ.ಎನ್.ಪ್ರಸನ್ನ, ಎಂ.ಎಸ್.ಆಶಾದೇವಿ ಮತ್ತು ಎಚ್.ಎಸ್. ಸತ್ಯನಾರಾಯಣ ಇದ್ದರು ಪ್ರಜಾವಾಣಿ ಚಿತ್ರ

ವಿಮರ್ಶಕಿ ಎಂ.ಎಸ್. ಆಶಾದೇವಿ, 'ಭಾರತೀಯ ಸನ್ನಿವೇಶಗಳು ತಮ್ಮ ಸಾಂಪ್ರದಾಯಿಕತೆಯನ್ನು ತೊರೆದು ಆಧುನಿಕತೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಿವೆ. ಆಧುನಿಕತೆಯು ಈಗ ಆಯ್ಕೆಯಾಗಿ ಉಳಿದಿಲ್ಲ ಅದು ಅನಿವಾರ್ಯವಾಗಿದೆ ಎಂಬ ಸಂದೇಶವನ್ನು ಈ ದೇವ್ರು ಕಾದಂಬರಿ ನೀಡುತ್ತದೆ' ಎಂದು ಅಭಿಪ್ರಾಯಪಟ್ಟರು.

'ಬಿಡುಗಡೆ' ಹಾಗೂ 'ಆಕಾಶಕ್ಕೆ ನೀಲಿ ಪರದೆ' ಕುರಿತು ಮಾತನಾಡಿದ ವಿಮರ್ಶಕ ಎಚ್.ಎಸ್. ಸತ್ಯನಾರಾಯಣ, 'ಈ ಎರಡೂ ಕಥಾ ಸಂಕಲನದ ಬಹುತೇಕ ಕಥೆಗಳು ಮನುಷ್ಯ ಸಂಬಂಧಗಳ ಸ್ವರೂಪ-ಸ್ವಭಾವಗಳನ್ನು ತಿಳಿಸುತ್ತವೆ. ಇಲ್ಲಿ ಸಂಯಮದ ಕಥೆಗಳಿದ್ದು, ಮನಸ್ಸಿನ ಸೂಕ್ಷ್ಮ ಪದರುಗಳನ್ನು ವಿಶ್ಲೇಷಿಸುತ್ತವೆ' ಎಂದು ಅಭಿಪ್ರಾಯಪಟ್ಟರು.

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರಯೋಜನಕಾರಿ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗೆ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

JOB OPPORTUNITIES

Teachers/ Professors

WANTED LECTURERS: Commerce (M.Com, MBA), Srinivasa Education Society, Hosur Main Road, Kudlu Gate, Bengaluru. 9449979054/ 9341948860

Marketing & Sales

REQUIRED FIELD executives & Telecaller (M&F) For Banking Loan Collections. NOTE: Not a consultancy, direct company appointment: 8951450742, 7019700755, 080-42123018.

SESHADRIPURAM INSTITUTIONS
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail : info@set.edu.in
Require
for MBA Programme at Seshadripuram Institute of Management Studies, Yelahanka
Associate Professor
Eligibility: First Class in MBA / M. Com. In the area of Finance/Analytics. Minimum of 8 years of experience as an Assistant Professor and research / Industry. At least total 6 research publications in SCI Journals/UGC/AICTE approved list of journals. Ph.D. Degree with NET/KSET compulsory. Salary as per AICTE
Assistant Professor
Eligibility: First Class in MBA / M. Com. In the area of Analytics/Marketing and Human Resource Management. Minimum of 3 years of experience in teaching and research. NET/KSET compulsory. Ph.D. desirable. Salary as per AICTE Norms
Walk-in-Interview on Tuesday, 2nd November 2021 at 9.30 a.m.
Venue: Seshadripuram Educational Trust Office, No. 27, Nagappa Street, Seshadripuram, Bengaluru-560 020.
Eligible candidates should bring handwritten application along with resume, photos & copies of testimonials at the time of Interview
N. R. Pandith Aradhya, President — Dr. Wooday P. Krishna, Hon. General Secretary

SESHADRIPURAM INSTITUTIONS
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail : info@set.edu.in
Require
TEACHERS
for SESHADRIPURAM PUBLIC SCHOOL (Affiliated to ICSE, New Delhi) at Yelahanka New Town, Bengaluru–560 106
TRAINED GRADUATE TEACHERS
- Geography M.A. B.Ed. with two years experience.
- English M.A. B.Ed. with two years experience
- History M.A. B.Ed. with two years experience
PRIMARY TEACHERS (PRT)
- Mathematics B.Sc., B.Ed. with two years experience.
- English B.A., (Opt. English), B.Ed. with two years experience
- Music Teacher Senior in Music with two years experience
LADY PHYSICAL EDUCATION TEACHER
- Degree with B.P.Ed. with two years experience
Walk-in-Interview on Thursday, 28th October 2021 at 9.00 a.m.
Venue: Seshadripuram Educational Trust Office, No. 27, Nagappa Street, Seshadripuram, Bengaluru-560 020.
Eligible candidates should bring handwritten application along with resume, photos & copies of testimonials at the time of Interview
N. R. Pandith Aradhya, President — Dr. Wooday P. Krishna, Hon. General Secretary

PUBLIC NOTICE

PUBLIC NOTICE
Our client intends to purchase schedule mentioned property from its lawful owners (1) Smt. A. Lakshmidevi, (2)Smt.A. Geetharani, (3) Smt. A. Asharani, daughters of Late A.Ashwathnarayana (4) Smt. Sharadamma, wife of Late. A.Venugopal, all are R/at: Akkupet, Devanahalli, Bangalore Rural, Karnataka–562110, (5) Smt. A. V.Usharani, D/o. Late.A. Venugopal, #434, 3rd Cross, Hosa Road, C.K.Nagara school, Bangalore South, Electronics City, Bangalore –560100, (6) Sri.A.V.Naveen Kumar, (7) Sri.A. V.Yatishkumar, both are sons of Late.A. Venugopal, who have inherited the same from one Smt. Nagamma who is the grand-mother of owner Nos.(1) to (3) and (5) to (7) and mother-in-law of owner No.(4). And it is further represented by the said persons that the original sale deed dated: 24-11-1958 regis-tered as Document No. 2445 of 1958-1959 of Book I, Volume 748, at pages 1902 to 1904 is misplaced and to that effect they have lodged a complaint with the Bangalore City Police under vide Lost Report No. 73507 of 2020-21 dated: 22-10-2021. The public are hereby given notice that any person/s or any incorporated body claiming any right, title or interest of any nature or having any lien, charge or enforceable right in respect of the schedule property or anybody having objection to the transaction may put forth their claims in writing with the undersigned together with supporting documents within 15 days from this date, failing which it will be presumed that no valid claim/s or objection/s subsist against the purchaser and the Schedule Property is free from all encumbrances.
SCHEDULE PROPERTY
All that piece and parcel of the agricultural land bearing Sy.No. 24/1, Old Sy.No.24 [previously Inam Grant Sy.No.72] situated at Shetterahalli, Kasaba Hobli, Devanahalli Taluk, Bangalore Rural District, measuring 3 acres excluding 1.04 gunta of kharab and bounded on:
East by : Presently Sy.No.24/3;
West by : Presently Sy.No.24/2;
North by : Savaganahalli Dodda Thimmayya's Land South by : Devanahalli-Doddaballapura Road [Old NH 207].
D.R.P.Babu & Associates, Advocates, No.87, "Shreshta Bumi", U-203, II Floor, K.R.Road, Bangalore-04. Mob.:9900176271/ 9845712345
Place: Bangalore
Date: 23.10.2021
ROUNAQH

BUSINESS

Business Offers

Finance

FINANCE AGAINST Land & Building Properties Industries Schools Hospitals Projects & NRI Funds.7358729820

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411275189

EDUCATIONAL

Admission

DIRECT FINAL: LLB (Can Practice, LIMITED SEATS) B.Tech/ M.Tech/ Diploma/ B.Pharm/ D.Pharm/ MBA/ BBA/ BCA/ B.Sc (IT, CS)/ B.Com. Call: 9448460103/ 7093438248.

PERSONAL

Change of Name

I, RAMANATH Shanbhag S/o. Nagaraj Shanbhag residing at Flat No.D-2,Guniana Iris Apartment, 2nd Cross, Brahmakumari Ashrama Road, Gottigere, Bangalore-560083. Mentioned my name as Ramanath Shanbhag in Aadhaar card & Shanbhag Nagaraja Ramanath in passport, here declaring that both names belongs to me. Henceforth I shall be called as RAMANATH SHANBHAG only vide affidavit dated 23-10-2021 before notary B.M. Chandrashekar, Bangalore.

I, JANARDANA RAO VENKATADASaged about 79 years and residing at 790. 7th cross, 5th Main opposite, Naveen park corner house, M.C Layout, Vijayanagar, Bangalore North, Karnataka-560040. Have Changedmy name VENKATADAS Tto JANARDANA RAO VENKATADAS vide affidavit dated 23-10-2021, Before Notary H.R Karunakara advocate, Bangalore-560010

FOR CLASSIFIED ADVERTISEMENTS
NAME CHANGE
Contact:
Santhosh: 9880856233
Vishal: 9845114560
Ravi: 9606912256

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.
Tender Notification (Second Call)
The Karnataka State Cricket Association (KSCA), M.Chinnaswamy Stadium, Cubbon Road, Bangalore, invites sealed tenders from GST Compliant vendors of kitchen equipment (including installation) for the work of renovation/setting up of kitchens (Vegetarian & Non Vegetarian) at M.Chinnaswamy Stadium and at Alur cricket ground. Such vendors should have completed similar work of atleast Rs.1.50 Crores worth of single work.
The details of issue/submission of tender documents are as follows :-
1. Name of work :- (a) Renovation/expansion of kitchens (Vegetarian & Non Vegetarian) at M.Chinnaswamy Stadium and (b) Setting up of new kitchen at Alur cricket ground
2. Estimated Cost :- Total Rs. 3.60 Crores (Bangalore Rs.1.81 Crores, Alur Rs.1.79 Crores)
3. Earnest Money Deposit :- Rs. 7.20 lakhs should be enclosed in the technical bid cover
4. Cost of tender form :- Rs. 15,000/- plus GST (Non Refundable)
5. Issue of tender form :- 26/10/2021 to 04/11/2021
6. Last date of submission of filled tender form two covers bid system :- 12/11/2021 before 4.30 p.m. (Technical & Commercial Separately)
7. Technical Bids to be opened :- 12/11/2021 by 5:30 p.m., in case of delay bidders will be informed
8. Completion of work by :- 4 (Four) months from the date of work order
Tender documents may be obtained from the Office of the KSCA, by submitting a requisition in the company's letter head between 11.00 a.m. to 5.00 p.m. on any working days. Those who submitted Bids for the above work and were qualified in the First Call may authorize KSCA to retain their Commercial Bids or obtain Tender documents Free of Cost and submit fresh bids. For any clarification please contact Mr.H.A.Venkatesprasad, AGM Civil Engineering Dept, Mobile No. 9945604515/8150900022
Hon. Secretary, KSCA

ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್
(ಹಿಂದಿನ ಹೆಸರು: ಬೆಂಗಳೂರು ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್)
(CIN: U70102KA1937PLC001292)
ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, ನಂ. 51, 1ನೇ ಕ್ರಾಸ್, ಜೆ. ಸಿ. ರಸ್ತೆ, ಬೆಂಗಳೂರು 560027
ಫೋನ್: 080–41575566
ಇಮೇಲ್: ed_secretary@bgse.co.in; Website:www.bgse.co.in
58ನೇ ಎಜಿಎಂ ಸೂಚನೆ
ಎಜಿಎಂ ಸೂಚನೆ: ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್ (ಕಂಪನಿ), ತನ್ನ 58ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (AGM) ಗುರುವಾರ, 18ನೇ ನವೆಂಬರ್ 2021 ರಂದು ಬೆಳಿಗ್ಗೆ 10.00 ಕ್ಕೆ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದಂತೆ, ಒಂದು ಸಾಮಾನ್ಯ ಸ್ಥಳದಲ್ಲಿ, ಕಂಪನಿಗಳ ಅಧಿನಿಯಮ, 2013ರ ಅನ್ವಯವಾಗುವ ನಿಬಂಧನೆಗಳನ್ನು ಕಾರ್ಪೊರೇಟ್ ಸಚಿವಾಲಯವು (MCA) ಹೊರಡಿಸಿರುವ ಸಂ. 14/2020 ದಿ. 08ನೇ ಏಪ್ರಿಲ್ 2020, 17/2020 ದಿ. 13ನೇ ಏಪ್ರಿಲ್ 2020, 18/2020 ದಿ. 21ನೇ ಏಪ್ರಿಲ್ 2020, 20/2020 ದಿ. 05ನೇ ಮೇ 2020, 22/2020 ದಿ. 15ನೇ ಜೂನ್ 2020, 39/2020 ದಿ. 31ನೇ ಡಿಸೆಂಬರ್ 2020, ಮತ್ತು 02/2021 ದಿ. 13ನೇ ಜನವರಿ 2021 (ಇವುಗಳನ್ನು ಒಟ್ಟಾಗಿ 'ಎಂಸಿ ಸುತ್ತೋಲೆಗಳು' ಎಂದು ಉಲ್ಲೇಖಿಸಿದ್ದೇವೆ) ಸುತ್ತೋಲೆಗಳ ಜೊತೆ ಓದಿಕೊಂಡ ಪ್ರಕಾರ ವಿಡಿಯೊಕಾನ್ಫರೆನ್ಸ್ (VC) ಅಥವಾ ಇತರೆ ಶ್ರವಣ–ದೃಶ್ಯ ಮಾಧ್ಯಮಗಳ (OAVM) ಮೂಲಕ ನಡೆಸಲು ಉದ್ದೇಶಿಸಿದೆ ಎಂದು ಈ ಮೂಲಕ ಕಂಪನಿಯ ಸದಸ್ಯರೆಲ್ಲರಿಗೂ ಸೂಚನೆಯನ್ನು ನೀಡಲಾಗುತ್ತಿದೆ.
ದಾಖಲೆಗಳ ಲಭ್ಯತೆ: ಯಾರೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿ ಪಾರ್ಟಿಸಿಪೆಂಟರು (DPs) ಮತ್ತು ಕಂಪನಿಯೊಂದಿಗೆ/ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟರೊಂದಿಗೆ (RTA) ನೋಂದಾಯಿಸಿಕೊಂಡಿದ್ದಾರೋ ಅಂತಹ ಸದಸ್ಯರೆಲ್ಲರಿಗೂ ಕಂಪನಿಯು 58ನೇ ಎಜಿಎಂ ಸೂಚನೆಯ ಮತ್ತು 2020–21 ಸಾಲಿನ ವಾರ್ಷಿಕ ವರದಿಯ ಪ್ರತಿಗಳನ್ನು ಕಳುಹಿಸಲಾಗಿದೆ. ಜೊತೆಗೆ, ಈ ದಾಖಲೆಗಳು ಕಂಪನಿಯ ವೆಬ್‌ಸೈಟ್ www.bgse.co.in ನಲ್ಲೂ ಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗಿದೆ.
ಇ–ಮತದಾನ: CDSL ರಿಮೋಟ್ ಇ–ಮತದಾನದ ಸೌಲಭ್ಯವನ್ನು ಒದಗಿಸುತ್ತಿದೆ ಮತ್ತು ರಿಮೋಟ್ ಇ–ಮತದಾನವು ಸೋಮವಾರ, 15ನೇ ನವೆಂಬರ್, 2021 ರಂದು ಬೆಳಿಗ್ಗೆ 09.00ಕ್ಕೆ ಆರಂಭವಾಗಿ ಬುಧವಾರ, 17ನೇ ನವೆಂಬರ್, 2021 ರಂದು ಸಂಜೆ 05.00ಕ್ಕೆ ಕೊನೆಯಾಗುತ್ತದೆ. ಈ ಅವಧಿಯಲ್ಲಿ, ಕೊನೆಯ ದಿನಾಂಕವಾದ ಸೋಮವಾರ, 08ನೇ ನವೆಂಬರ್, 2021 ರಂದು ಕಂಪನಿಯ ಶೇರುಗಳನ್ನು ಭೌತಿಕ ರೂಪದಲ್ಲೋ ಅಥವಾ ಡೀಮ್ಯಾಟ್ ರೂಪದಲ್ಲೋ ಹೊಂದಿರುವ ಶೇರುದಾರರು ತಮ್ಮ ಮತಗಳನ್ನು ಇಲೆಕ್ಟ್ರಾನಿಕ್ ವಿಧಾನದಲ್ಲಿ ಚಲಾಯಿಸಬಹುದಾಗಿರುತ್ತದೆ.
ಯಾವ ಸದಸ್ಯರು ಡೀಮ್ಯಾಟ್ ಅಥವಾ ಭೌತಿಕ ರೂಪದಲ್ಲಿ ತಮ್ಮ ಶೇರುಗಳನ್ನು ಹೊದಿರುವರೋ, ಅಥವಾ ಯಾರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಂಡಿಲ್ಲವೋ, ಅಂತಹ ಸದಸ್ಯರು ಸಭೆಯು ನಡೆಯುವ ಅವಧಿಯಲ್ಲಿ ರಿಮೋಟ್ ಇ–ಮತದಾನ ಅಥವಾ ಇ–ಮತದಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದು. ಭೌತಿಕ ರೂಪದಲ್ಲಿ ಶೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯ ed_secretary@bgse.co.in ಇಮೇಲ್ ವಿಳಾಸಕ್ಕೆ ಬರೆದು ತಾವು ಹೊಂದಿರುವ ಶೇರುಗಳ ಕುರಿತಾದ ಅಗತ್ಯ ವಿವರಗಳನ್ನು ಮತ್ತು ದಾಖಲೆಗಳನ್ನು ನೀಡಿ ತಮ್ಮ ಇಮೇಲ್ ಐಡಿಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಳ್ಳಬಹುದು; ಇಲೆಕ್ಟ್ರಾನಿಕ್ ರೂಪದಲ್ಲಿ ಶೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯಿಂದ ಬರುವ ಎಲ್ಲ ಸಂವಹನಗಳನ್ನು ವಿದ್ಯುನ್ಮಾನ ರೂಪದಲ್ಲಿ ಸ್ವೀಕರಿಸಲು ಸಾಧ್ಯವಾಗುವಂತೆ ತಮಗೆ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ (DPs) ತಮ್ಮ ಇಮೇಲ್ ವಿಳಾಸಗಳನ್ನು ದಾಖಲಿಸಿಕೊಳ್ಳಬೇಕಾಗಿ ಅಥವಾ ನವೀಕರಿಸಬೇಕಾಗಿ ಕೋರುತ್ತೇವೆ.
ಯಾವ ಸದಸ್ಯರಿಗೆ VC ಮೂಲಕ ಸಭೆಯನ್ನು ಪ್ರವೇಶಿಸಲು ಮತ್ತು ಅದರಲ್ಲಿ ಭಾಗವಹಿಸಲು ತಾಂತ್ರಿಕ ನೆರವು ಬೇಕೆನ್ನುವ ಸದಸ್ಯರು ಇ–ಮತದಾನ ಸೇವೆಯನ್ನು ಒದಗಿಸುತ್ತಿರುವ ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಅನ್ನು ಸಂಪರ್ಕಿಸಬಹುದು; ಸಂಪರ್ಕ ವ್ಯಕ್ತಿಗಳು: ಶ್ರೀ ನಿತಿನ್ ಕುಂದರ್ (022–23058738); ಶ್ರೀ ಸೂರಜ್ ರಮೇಶ್ (022–23058543); ಶ್ರೀ ರಾಕೇಶ್ ದಳ್ವಿ (022–23058542) ಇಮೇಲ್ ಐಡಿ: helpdesk.evoting@cdslindia.com
ಡಿವಿಡೆಂಡನ್ನು ದಾಖಲಿಸುವ ದಿನಾಂಕ ಮತ್ತು ಪುಸ್ತಕ ಮುಚ್ಚುವ ದಿನಾಂಕ: ಅಂತಿಮ ಡಿವಿಡೆಂಡಿಗೆ ಅರ್ಹತೆಯನ್ನು ನಿರ್ಧರಿಸಲು ಮಂಡಲಿಯು ಸೋಮವಾರ, 08ನೇ ನವೆಂಬರ್ 2021 ದಿನಾಂಕವನ್ನು ಡಿವಿಡೆಂಡನ್ನು ದಾಖಲಿಸುವ ದಿನಾಂಕ ಎಂದು ನಿಗದಿಪಡಿಸಿದೆ. ಎಜಿಎಂ ಸಲುವಾಗಿ, ಸದಸ್ಯರ ರಿಜಿಸ್ಟರ್ ಮತ್ತು ಶೇರು ವರ್ಗಾವಣೆ ಪುಸ್ತಕಗಳನ್ನು ಮಂಗಳವಾರ, 09ನೇ ನವೆಂಬರ್, 2021 ರಿಂದ ಗುರುವಾರ, 18ನೇ ನವೆಂಬರ್, 2021 ರವರೆಗೆ (ಎರಡು ದಿನಗಳೂ ಸೇರಿದಂತೆ) ಮುಚ್ಚಲಾಗಿರುತ್ತದೆ.
ಡಿವಿಡೆಂಡ್ ಮೇಲಿನ ಟಿಡಿಎಸ್: ಎಜಿಎಂ ಸೂಚನೆಯ ಟಿಪ್ಪಣಿ ಕ್ರ. ಸಂ. 13ರಲ್ಲಿ ವಿವರವಾಗಿ ಹೇಳಿರುವಂತೆ ಡಿವಿಡೆಂಡ್ ಮೇಲೆ ಟಿಡಿಎಸ್ ಅನ್ನು ಮುರಿದುಕೊಳ್ಳಲಾಗುವುದು.
ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ
ಸಹಿ/– (ವಿನೋದ್ ಜಿ ಜೈನ್)
ಕಾರ್ಯನಿರ್ವಾಹಕ ನಿರ್ದೇಶಕರು DIN: 00248275
ಸ್ಥಳ: ಬೆಂಗಳೂರು
ದಿನಾಂಕ: 18/10/2021

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಬೆನ್ನುಮೂಳೆ ಕ್ಷಯ ಜಯಿಸಿದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆನ್ನುಮೂಳೆ ಕ್ಷಯ ಸಮಸ್ಯೆಗೆ ಒಳಗಾಗಿದ್ದ 38 ವರ್ಷದ ಮಹಿಳೆಗೆ ಎಐಎಸ್ ಸುಹಾಸ್ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ಚೇತರಿಸಿಕೊಳ್ಳಲು ನೆರವಾಗಿದ್ದಾರೆ.

ಒಂದು ವರ್ಷದಿಂದ ತೀವ್ರತರ ನೋವಿನಿಂದ ಬಳಲುತ್ತಿದ್ದ ಅವರು, ಹಾಸಿಗೆ ಹಿಡಿದಿದ್ದರು. ವೈದ್ಯಕೀಯ ತಪಾಸಣೆಗಳ ಬಳಿಕ ಬೆನ್ನಿನ ಮೂಳೆಗೆ ಹಾನಿಯಾಗಿರುವುದು ದೃಢಪಟ್ಟಿತು. ರೋಗ ಪೀಡಿತ ಬೆನ್ನುಮೂಳೆಯ ಸುತ್ತಲೂ ಕೀವು ಕಾಣಿಸಿಕೊಂಡಿತ್ತು. ಹೀಗಾಗಿ, ನಿಗದಿತ ಭಾಗದಲ್ಲಿನ ಕೀವನ್ನು ಸಂಪೂರ್ಣ ಹೊರತೆಗೆದು, ರೋಗ ಪೀಡಿತ ಪ್ರದೇಶವನ್ನು ಕತ್ತರಿಸಲಾಯಿತು. ವೀಡಿಯೊ-ಅಸಿಸ್ಟೆಡ್ ಥೊರಾಕೊಸ್ಕೋಪಿಕ್ ಶಸ್ತ್ರಚಿಕಿತ್ಸೆಯ ಮೂಲಕ ಸಮಸ್ಯೆ ನಿವಾರಿಸಲಾಯಿತು ಎಂದು ಆಸ್ಪತ್ರೆ ತಿಳಿಸಿದೆ.

ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಹೇಳಿಕೆ

ರೈತರಿಗೆ ಸಾಲ: ಈವರೆಗೆ ಶೇ 72.96 ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸಕ್ತ ಸಾಲಿನಲ್ಲಿ ಈವರೆಗೆ 12,35,033 ರೈತರಿಗೆ ₹ 9,13,689 ಕೋಟಿ ಸಾಲ ನೀಡಲಾಗಿದ್ದು, ಶೇ 72.96 ಗುರಿ ಸಾಧಿಸಲಾಗಿದೆ' ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ತಿಳಿಸಿದ್ದಾರೆ.

'ಈ ಸಾಲಿನಲ್ಲಿ 30,85,644 ರೈತರಿಗೆ ₹ 2,0810 ಕೋಟಿ ಕೃಷಿ ಸಾಲ ನೀಡುವ ಗುರಿ ಹೊಂದಲಾಗಿದೆ. ಸಾಲ ನೀಡಿಕೆಯಲ್ಲಿ ಕಳೆದ ಬಾರಿ ಶೇ 115ರಷ್ಟು ಗುರಿ ಸಾಧಿಸಿದ್ದು, ಈ ಬಾರಿ ಶೇ 125ರಷ್ಟು ಸಾಧನೆ ಮಾಡುವ ಗುರಿ ಹಾಕಿಕೊಳ್ಳಲಾಗಿದೆ' ಎಂದಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಅಕ್ಟೋಬರ್ ತಿಂಗಳಿನಲ್ಲಿಯೇ ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ ಸಾಲ ವಿತರಣೆಯಲ್ಲಿ ಗಮನಾರ್ಹ ಸಾಧನೆ ಆಗಿದೆ. ಅಲ್ಪಾವಧಿ ಸಾಲ ನೀಡಿಕೆಯಲ್ಲಿ 30,25,788 ರೈತರಿಗೆ ₹ 19,370 ಕೋಟಿ ಸಾಲ ನೀಡುವ ಗುರಿ ಹೊಂದಿದ್ದು, ಈಗಾಗಲೇ 12,25,027 ರೈತರಿಗೆ ₹ 8,742.10 ಕೋಟಿ ಸಾಲ ವಿತರಿಸಿ ಶೇ 45.55 ಸಾಧನೆ ತೋರಲಾಗಿದೆ. ಮಧ್ಯಮಾವಧಿ/ದೀರ್ಘಾವಧಿ ಸಾಲ ನೀಡಿಕೆಯಲ್ಲಿ 59,856 ರೈತರಿಗೆ ₹ 1,440 ಕೋಟಿ ಸಾಲ ನೀಡಿಕೆ ಗುರಿ ಹಾಕಿಕೊಳ್ಳಲಾಗಿದೆ. ಅದರಲ್ಲಿ 10,009 ರೈತರಿಗೆ ₹ 394.79 ಕೋಟಿ (ಶೇ 27.41) ಸಾಲ ವಿತರಿಸಲಾಗಿದೆ. ಈ ಮೂರೂ ವಿಭಾಗದಲ್ಲಿ ಇದೇ 23 ರವರೆಗೆ ಶೇ 72.96 ಸಾಧನೆ ಆಗಿದೆ' ಎಂದು ಅವರು ತಿಳಿಸಿದ್ದಾರೆ.

ಡಿಸಿಸಿ ಬ್ಯಾಂಕ್‌ಗಳ ಸಭೆ ಶೀಘ್ರ: 'ಈ ಬಾರಿ ಶೇ 125 ಸಾಲ ನೀಡಿಕೆ ಗುರಿ ನಮ್ಮದು. ಈ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಿವೆ. ನಾನು ಕೂಡಾ ಕಾಲ ಕಾಲಕ್ಕೆ ಡಿಸಿಸಿ ಬ್ಯಾಂಕ್‌ಗಳ ಪ್ರಗತಿ ಪರಿಶೀಲನೆ ಮಾಡುತ್ತಿದ್ದೇನೆ. ಸಮಸ್ಯೆಗಳನ್ನು ಆಲಿಸಿ ರೈತರಿಗೆ ಅನುಕೂಲ ಮಾಡಿಕೊಡಲು ಕಾರ್ಯ ನಿರ್ವಹಿಸಲಿದ್ದೇನೆ. ಡಿಸಿಸಿ ಬ್ಯಾಂಕ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ಶೀಘ್ರದಲ್ಲೇ ಕರೆಯುತ್ತೇನೆ. ಈ ಮೂಲಕ ಬ್ಯಾಂಕ್‌ಗಳು ತೋರಿರುವ ಸಾಧನೆ, ಎದುರಿಸುತ್ತಿರುವ ಸಣ್ಣಪುಟ್ಟ ತೊಡಕುಗಳು, ಸಮಸ್ಯೆಗಳ ಬಗ್ಗೆಯೂ ಚರ್ಚಿಸಿ, ಪರಿಹಾರಗಳನ್ನು ಸೂಚಿಸಲಾಗುವುದು' ಎಂದಿದ್ದಾರೆ.

'ರೈತರ ಕೃಷಿ ಚಟುವಟಿಕೆಗೆ ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳುವಂತೆ ಈಗಾಗಲೇ ಸೂಚನೆ ನೀಡಲಾಗಿದೆ. ಕೋವಿಡ್ ಹಿನ್ನೆಲೆಯಲ್ಲಿ ಸರ್ಕಾರ ಆರ್ಥಿಕ ಸಂಕಷ್ಟದಲ್ಲಿ ಇದ್ದರೂ 21 ಡಿಸಿಸಿ ಬ್ಯಾಂಕ್‌ಗಳು ಹಾಗೂ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಅರ್ಹ ಫಲಾನುಭವಿಗಳಿಗೆ ಸಾಲ ಕೊಡುವಂತೆ ಸೂಚಿಸಿದ್ದೇನೆ' ಎಂದಿದ್ದಾರೆ.

ಆರ್‌.ಕೆ. ಲಕ್ಷ್ಮಣ್ ಸ್ಮರಣಾರ್ಥ ವಿಶೇಷ ಅಂಚೆ ಲಕೋಟೆ

ಪ್ರಜಾವಾಣಿ ವಾರ್ತೆ

ಮೈಸೂರು: ಭಾರತೀಯ ಅಂಚೆ ಕರ್ನಾಟಕ ವೃತ್ತವು ವ್ಯಂಗ್ಯಚಿತ್ರಕಾರ ಆರ್‌.ಕೆ.ಲಕ್ಷ್ಮಣ್ ಅವರ ಜನ್ಮ ಶತಮಾನೋತ್ಸವ ಅಂಗವಾಗಿ ಹೊರತಂದಿರುವ ವಿಶೇಷ ಅಂಚೆ ಲಕೋಟೆ ಹಾಗೂ ಮೂರು ಪೋಸ್ಟ್ ಕಾರ್ಡ್‌ಗಳನ್ನು ನಗರದ ನಜರಬಾದ್‌ನ ಅಂಚೆ ತರಬೇತಿ ಕೇಂದ್ರದಲ್ಲಿ ಭಾನುವಾರ ಬಿಡುಗಡೆ ಮಾಡಲಾಯಿತು.

ವಿಶೇಷ ಅಂಚೆ ಲಕೋಟೆ ಮೇಲೆ ಆರ್‌.ಕೆ.ಲಕ್ಷ್ಮಣ್ ಭಾವಚಿತ್ರ, ಅವರ 'ಸಾಮಾನ್ಯ ವ್ಯಕ್ತಿ'ಯ ವ್ಯಂಗ್ಯ ಚಿತ್ರದ ಅಂಚೆಚೀಟಿಗಳಿದ್ದು, ಇದಕ್ಕೆ ₹ 20 ದರ ನಿಗದಿಪಡಿಸಲಾಗಿದೆ. ಮೂರು ಪೋಸ್ಟ್ ಕಾರ್ಡ್‌ಗಳಲ್ಲಿ ಆರ್‌.ಕೆ.ಲಕ್ಷ್ಮಣ್ ರಚಿತ ವ್ಯಂಗ್ಯಚಿತ್ರಗಳಿವೆ. ಈ ಮೂರು ಕಾರ್ಡ್‌ಗಳಿಗೆ ₹75 ಶುಲ್ಕ ನಿಗದಿಪಡಿಸಲಾಗಿದೆ. ಇವು ಮೈಸೂರು ಪ್ರಧಾನ ಅಂಚೆ ಕಚೇರಿಯ ಅಂಚೆಚೀಟಿಗಳ ಸಂಗ್ರಹಾಲಯದಲ್ಲಿ ಖರೀದಿಗೆ ಲಭ್ಯವಿವೆ.

ಕಾರ್ಯಕ್ರಮದಲ್ಲಿ ಮೈಸೂರು ವ್ಯಂಗ್ಯಚಿತ್ರಕಾರರ ಸಂಘದ ಸಂಸ್ಥಾಪಕ ಸದಸ್ಯ ಎಂ.ವಿ.ನಾಗೇಂದ್ರ ಬಾಬು ಅವರು ಪೋಸ್ಟ್ ಕಾರ್ಡ್ ಬಿಡುಗಡೆ ಮಾಡಿದರು. ಭಾರತೀಯ ಅಂಚೆ ಕರ್ನಾಟಕ ವೃತ್ತದ ಮುಖ್ಯ ಪ್ರಧಾನ ಪೋಸ್ಟ್‌ಮಾಸ್ಟರ್ ಶಾರದಾ ಸಂಪತ್, ಅಂಚೆ ತರಬೇತಿ ಕೇಂದ್ರದ ನಿರ್ದೇಶಕ ಎಂ.ಬಿ.ಗಜಬಾಯ್ ಪಾಲ್ಗೊಂಡಿದ್ದರು.

ಮೈಸೂರಿನ ಅಂಚೆ ತರಬೇತಿ ಕೇಂದ್ರದಲ್ಲಿ ಭಾನುವಾರ ಆರ್‌.ಕೆ.ಲಕ್ಷ್ಮಣ್ ಅವರ ಜನ್ಮ ಶತಮಾನೋತ್ಸವ ಅಂಗವಾಗಿ ಹೊರತಂದಿರುವ ವಿಶೇಷ ಅಂಚೆ ಲಕೋಟೆ ಹಾಗೂ ಪೋಸ್ಟ್ ಕಾರ್ಡ್‌ಗಳನ್ನು ಎಂ.ವಿ.ನಾಗೇಂದ್ರ ಬಾಬು (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. ಎಂ.ಬಿ.ಗಜಬಾಯ್, ಶಾರದಾ ಸಂಪತ್ ಇದ್ದಾರೆ

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ರಸ್ತೆಯ ಮೇಲೆ ಕಸ, ಕೊಳಚೆ ನೀರು

ಬೆಳ್ಳಂದೂರು ವಾರ್ಡ್‌ನ ಜುನ್ನಸಂದ್ರ ಬಳಿ ಇರುವ ಕುಮಾರಿ ಲೋಟಸ್ ಅಪಾರ್ಟ್‌ಮೆಂಟ್ ಸಮುಚ್ಚಯದ ಅಕ್ಕಪಕ್ಕದಲ್ಲಿ ಚರಂಡಿ ನೀರು ರಸ್ತೆಗಳಲ್ಲಿ ಬಂದು ನಿಂತಿದೆ. ಇಲ್ಲಿನ ರಸ್ತೆಗಳಿಗೆ ಡಾಂಬರು ಹಾಕಿಲ್ಲ. ವಾಹನ ಸವಾರರಿಗೆ ರಸ್ತೆ ಗುಂಡಿಗಳು ಮೃತ್ಯುವಿನಂತೆ ಕಾಡುತ್ತಿವೆ. ಒಂದು ತಿಂಗಳಿನಿಂದ ಸುರಿಯುತ್ತಿರುವ ಮಳೆಯಿಂದಾಗಿ ರಸ್ತೆಗಳಲ್ಲಿ ಭಾರಿ ಪ್ರಮಾಣದ ಕೊಳಚೆ ನೀರು ಸಂಗ್ರಹವಾಗಿದ್ದು, ದುರ್ವಾಸನೆಗೆ ಮನೆಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ಮನೆಯ ಒಳಗಿದ್ದವರು ಕಿಟಕಿ–ಬಾಗಿಲು ಮುಚ್ಚಿಕೊಂಡೇ ದಿನಗಳನ್ನು ಕಳೆಯುವ ಸ್ಥಿತಿ ನಿರ್ಮಾಣವಾಗಿದೆ.

ಕೊಳಚೆ ನೀರಿನಿಂದ ಸಂಜೆ ವೇಳೆ ಸೊಳ್ಳೆಗಳ ಕಾಟವೂ ಹೆಚ್ಚಾಗಿದೆ. ಈ ಪ್ರದೇಶದಲ್ಲಿ ಕಸ ಸುರಿಯಲು ಸೂಕ್ತ ಸ್ಥಳ ನಿಗದಿಯಾಗಿಲ್ಲ. ಹಾಗಾಗಿ, ಎಲ್ಲೆಂದರಲ್ಲಿ ಕಸದ ರಾಶಿ ಕಾಣಸಿಗುತ್ತದೆ. ಮಳೆ ಬಂದಾಗ ಕೊಳಚೆ ನೀರು, ಕಸ ರಸ್ತೆಯಲ್ಲೇ ಇರುತ್ತದೆ. ಈ ಸಮಸ್ಯೆಗಳ ಸರಮಾಲೆ ಕುರಿತು ಹಲವು ಭಾರಿ ದೂರು ನೀಡಿದರೂ ಪಾಲಿಕೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಜನರಿಂದ ಚಾಚೂ ತಪ್ಪದೆ ತೆರಿಗೆ ಕಟ್ಟಿಸಿಕೊಳ್ಳುವವರು ಸಮಸ್ಯೆಗಳನ್ನು ಪರಿಹರಿಸುವುದಿಲ್ಲ. ಇಲ್ಲಿನ ನಿವಾಸಿಗಳನ್ನು ಈ ಸಮಸ್ಯೆಗಳ ಸುಳಿಯಿಂದ ತಪ್ಪಿಸಿ.

ನರಸಿಂಹ ಮೂರ್ತಿ

ಬೆಳ್ಳಂದೂರಿನ ಜುನ್ನಸಂದ್ರದ ರಸ್ತೆಯಲ್ಲಿ ಚರಂಡಿ ನೀರು ಹರಿಯುತ್ತಿರುವುದು.



ಪಣತ್ತೂರು ಅಂಬೇಡ್ಕರ್ ಕಾಲೊನಿ.

ಚರಂಡಿ ಕಾಮಗಾರಿ ಪೂರ್ಣಗೊಳಿಸಿ

ಮಹದೇವಪುರ ಕ್ಷೇತ್ರದ ವರ್ತೂರು ವಾರ್ಡ್‌ನಲ್ಲಿರುವ ಪಣತ್ತೂರು ಅಂಬೇಡ್ಕರ್ ಕಾಲೊನಿಯಲ್ಲಿ ಒಳಚರಂಡಿ ಕಾಮಗಾರಿ ಆರಂಭಿಸಿ ಒಂದೂವರೆ ತಿಂಗಳಾದರೂ ಪೂರ್ಣಗೊಳಿಸಿಲ್ಲ. ಇದರಿಂದ ಮಳೆ ಬಂದು ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ಸಾರ್ವಜನಿಕರು ರಸ್ತೆಯ ಮೇಲೆ ಕಾಲಿಡಲು ಆಗದ ಪರಿಸ್ಥಿತಿ ನಿರ್ಮಾಣವಾಗಿದೆ. ಎರಡೂ ಬದಿಯ ಚರಂಡಿ ತುಂಬಿ ಹರಿಯುತ್ತಿದೆ. ಸ್ಥಳೀಯ ಅಧಿಕಾರಿಗಳು ಹಾಗೂ ಶಾಸಕರು ಈ ಬಗ್ಗೆ ವಿಶೇಷ ಗಮನ ಹರಿಸಿ, ಸಮಸ್ಯೆಗಳಿಂದ ಮುಕ್ತಿ ನೀಡಬೇಕು.

ರಾಮ ಲಕ್ಷ್ಮಣ, ಪಣತ್ತೂರು ಕಾಲೊನಿ ನಿವಾಸಿ

ನಂದಿನಿ ಬಡಾವಣೆಯಲ್ಲಿ ಸಂಪರ್ಕ ಕಳೆದುಕೊಂಡಿರುವ ಚರಂಡಿ.

ಕಾಣೆಯಾದ ಚರಂಡಿ

ನಂದಿನಿ ಬಡಾವಣೆ ಎರಡನೇ ಹಂತದ ರಾಜಕುಮಾರ್ ಪುಣ್ಯಭೂಮಿ ಎದುರಿನ ರಸ್ತೆಯಲ್ಲಿ ಚರಂಡಿ ಕಾಣೆಯಾಗಿದೆ. ಈ ಹಿಂದೆ ಚರಂಡಿ ಕಾಮಗಾರಿ ನಡೆದಿತ್ತಾದರೂ, ತರಾತುರಿಯಲ್ಲಿ ಅಪೂರ್ಣಗೊಳಿಸಿದ್ದಾರೆ. ಇಲ್ಲಿ ಸುಮಾರು ಅರ್ಧ ಕಿ.ಮೀವರೆಗೆ ಚರಂಡಿ ಸಂಪರ್ಕವೇ ಇಲ್ಲ.

ಈಗಿರುವ ಚರಂಡಿಯಲ್ಲಿ ನೀರು ಸಮರ್ಪಕವಾಗಿ ಹರಿಯಲು ಸಾಧ್ಯವಾಗದ ಕಾರಣ ಕಸ ಕಟ್ಟಿಕೊಂಡು, ಅಕ್ಕಪಕ್ಕದ ಮನೆಗಳಿಗೆ ನೀರು ನುಗ್ಗುತ್ತದೆ. ಅಪೂರ್ಣಗೊಂಡಿರುವ ಚರಂಡಿ ಸಂಪರ್ಕವನ್ನು ಸರಿಪಡಿಸಬೇಕು. ಚರಂಡಿಯಲ್ಲಿ ನೀರು ಸರಿಯಾಗಿ ಹರಿಯುವಂತೆ ಮಾಡಲು ಕಸ ಸ್ವಚ್ಛಗೊಳಿಸಬೇಕು.

ಜಯಪ್ರಕಾಶ್, ಸ್ಥಳೀಯ

‘ಸ್ವಚ್ಛ ಭಾರತ’ಕ್ಕೆ ಕಳಂಕ

ಗಿರಿನಗರದ ವಿವೇಕಾನಂದ ವೃತ್ತದ ಬಳಿ ‘ಸ್ವಚ್ಛ ಭಾರತ’ದ ಘೋಷವಾಕ್ಯ ಇರುವ ಸ್ಥಳದಲ್ಲೇ ಕಸ ರಾಶಿ ಬಿದ್ದಿರುವುದು ಶೋಚನೀಯ. ಸ್ವಚ್ಛ ಭಾರತದ ಸಂಕಲ್ಪ ಮಾಡದ ಜನರಿಂದ ಮಾತ್ರ ಇಂತಹ ಕೆಲಸಗಳನ್ನು ನಿರೀಕ್ಷಿಸಬಹುದು. ಇಲ್ಲಿ ಕಸ ತಂದು ಸುರಿಯುವ ಮೂಲಕ ಸ್ವಚ್ಛಭಾರತ ಎಂಬ ಹೆಸರಿಗೆ ಕಳಂಕ ತಂದಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿ ಬಿದ್ದಿರುವ ಕಸದ ರಾಶಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು ಹಾಗೂ ಈ ಜಾಗದಲ್ಲಿ ಕಸ ಹಾಕದಂತೆ ನೋಡಿಕೊಳ್ಳಬೇಕು.

ದೀಪಕ್ ಶಿರಾಲಿ, ತ್ಯಾಗರಾಜ ನಗರ

ಗಿರಿನಗರದ ವಿವೇಕಾನಂದ ವೃತ್ತದಲ್ಲಿ ‘ಸ್ವಚ್ಛ ಭಾರತ’ ಘೋಷವಾಕ್ಯದ ಸ್ಥಳದಲ್ಲೇ ರಾಶಿ ಬಿದ್ದಿರುವ ಕಸ.

ಗುಂಡಿಗಳ ಗೂಡಾದ ರಸ್ತೆ

ವಿದ್ಯಾರಣ್ಯಪುರದಿಂದ ಉನ್ನಿಕೃಷ್ಣನ್ ರಸ್ತೆಯನ್ನು ಸಂಪರ್ಕಿಸುವ ಜಲ್ಲಿ ಮೆಷಿನ್ ವೃತ್ತದವರೆಗಿನ ರಸ್ತೆ ತೀರಾ ಹದಗೆಟ್ಟಿದ್ದು, ಗುಂಡಿಗಳ ಗೂಡಾಗಿದೆ. ಕೇವಲ ಅರ್ಧ ಕಿಲೋ ಮೀಟರ್ ಉದ್ದವಿರುವ ಈ ರಸ್ತೆಗೆ ಹಲವಾರು ದಿನಗಳಿಂದ ದುರಸ್ತಿ ಭಾಗ್ಯವೇ ಸಿಗುತ್ತಿಲ್ಲ.

ಸಮಸ್ಯೆ ಉಲ್ಬಣಗೊಂಡರೂ ಯಾವುದೇ ಅಧಿಕಾರಿಗಳು ಇತ್ತ ಮುಖ ಮಾಡಿಲ್ಲ. ಬಸ್ ಹಾಗೂ ಖಾಸಗಿ ವಾಹನಗಳು ನರ್ತನ ಮಾಡಿಕೊಂಡೇ ಸಂಚರಿಸುತ್ತವೆ. ಶೀಘ್ರದಲ್ಲೇ ಈ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂಬ ನಂಬಿಕೆಯಲ್ಲೇ ಪ್ರತಿ ದಿನ ಈ ರಸ್ತೆಯಲ್ಲಿ ಸಾಗುತ್ತೇವೆ. ಅದು ಸುಳ್ಳಾಗದಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಲಿ.

ಬೈರೇಗೌಡ, ವಿದ್ಯಾರಣ್ಯಪುರ

ವಿದ್ಯಾರಣ್ಯಪುರದ ಜಲ್ಲಿ ಮೆಷಿನ್ ವೃತ್ತದಲ್ಲಿರುವ ಗುಂಡಿಗಳ ರಸ್ತೆ.

ಗುಂಡಿ ದಾಟುತ್ತಾ ಬಸ್ ಹತ್ತಬೇಕು

ಕೆಂಗೇರಿ ಬಸ್ ನಿಲ್ದಾಣದಲ್ಲಿ ಬೃಹತ್ ರಸ್ತೆ ಗುಂಡಿಗಳು ನಿರ್ಮಾಣವಾಗಿದ್ದು, ಪ್ರಯಾಣಿಕರು ಗುಂಡಿ ದಾಟಿಕೊಂಡು ಬಸ್ ಹತ್ತುವ ದೃಶ್ಯಗಳು ಸಾಮಾನ್ಯವಾಗಿ ನೋಡಬಹುದು. ಒಂದು ತಿಂಗಳಿಗೂ ಹೆಚ್ಚು ಸಮಯದಿಂದ ಈ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ.

ಸಂಜೆಯಾದರೆ ಇಲ್ಲಿ ವಿದ್ಯುತ್ ವ್ಯವಸ್ಥೆ ಇಲ್ಲದ ಕಾರಣ ಹಿರಿಯರು ಹಾಗೂ ಮಕ್ಕಳು ಗುಂಡಿಗಳಿಂದ ಭಾರಿ ಸಮಸ್ಯೆ ಎದುರಿಸಬೇಕಾಗಿದೆ. ಮಳೆಯಿಂದ ಗುಂಡಿಗಳಲ್ಲಿ ನೀರು ಸಂಗ್ರಹಗೊಂಡು, ಬಸ್‌ಗಳ ಸಂಚಾರದ ವೇಳೆ ಪ್ರಯಾಣಿಕರ ಮೇಲೆ ನೀರು ಎರಚುತ್ತವೆ. ದಯವಿಟ್ಟು ಈ ಸ್ಥಳವನ್ನು ಗುಂಡಿಮುಕ್ತಗೊಳಿಸಿ.

ವೆಂಕಟೇಶ್, ಕೆಂಗೇರಿ

ಕೆಂಗೇರಿ ಬಸ್ ನಿಲ್ದಾಣದಲ್ಲಿ ಗುಂಡಿಗಳ ನಡುವೆ ಪ್ರಯಾಣಿಕರ ಪರದಾಟ

ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಂಬಳಗೋಡು ವಿದ್ಯುತ್ ಕೇಂದ್ರದಲ್ಲಿ ಕೈಗೊಂಡಿರುವ ನಿರ್ವಹಣಾ ಕಾರ್ಯದಿಂದಾಗಿ ಅ.25ರಂದು ಬೆಳಿಗ್ಗೆ 9ರಿಂದ ಸಂಜೆ 6ವರೆಗೆ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಭೀಮನಕುಪ್ಪೆ, ವಿನಾಯಕ ನಗರ, ಗೇರುಪಾಳ್ಯ, ಗೇರುಪಾಳ್ಯ ಕೈಗಾರಿಕಾ ಪ್ರದೇಶ, ಒಂದನೇ ಮೈಲುಕಲ್ಲು, ಅಂಚೆ ಪಾಳ್ಯ, ಪ್ರಾವಿಡೆಂಟ್, ಹೊಸಪಾಳ್ಯ, ಕಣಮಿಣಕಿ, ಕುಂಬಳಗೋಡು ಕೈಗಾರಿಕಾ ಪ್ರದೇಶ, ಕಂಬಿಪುರ, ತೋಗಚಗುಪ್ಪೆ, ಗುಡ್ಡಿಮಾವು, ದೇವಗೇರೆ, ಗಂಗಸಂದ್ರ, ಆನೆಪಾಳ್ಯ, ಗೋಣಿಪುರ, ಗೊಳ್ಳಹಳ್ಳಿ, ತಿಪ್ಪೂರು, ಚಿನ್ನಕುರ್ಚಿ, ಕೆಂಚೆಪಾಳ್ಯ, ಬಾಬುಸಾಬ್ ಪಾಳ್ಯ, ದೊಡ್ಡಬೆಲೆ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

‘ಪೊಲೀಸ್ ಇಲಾಖೆಯಲ್ಲಿ ಪದೋನ್ನತಿ ಎಸ್‌ಸಿ, ಎಸ್‌ಟಿ ನೌಕರರಿಗೆ ಅನ್ಯಾಯ’

ಬೆಂಗಳೂರು: ‘ಬಡ್ತಿ ಮೀಸಲಾತಿ ನಿಯಮ ಉಲ್ಲಂಘಿಸಿ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಘಟಕದಲ್ಲಿ 21 ಹೆಡ್ ಕಾನ್‌ಸ್ಟೆಬಲ್‌ಗಳಿಗೆ ಸಬ್ ಇನ್‌ಸ್ಪೆಕ್ಟರ್ ಹಾಗೂ 25 ಕಾನ್‌ಸ್ಟೆಬಲ್‌ಗಳಿಗೆ ಹೆಡ್ ಕಾನ್‌ಸ್ಟೆಬಲ್ ಹುದ್ದೆಗೆ ಪದೋನ್ನತಿ ನೀಡಲಾಗಿದೆ’ ಎಂದು ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ದೂರಿದ್ದಾರೆ.

‘ಎರಡೂ ಹುದ್ದೆಗಳಿಗೆ ಬಡ್ತಿ ಪಡೆದವರಲ್ಲಿ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಒಬ್ಬರೂ ಇಲ್ಲ. ಜ್ಯೇಷ್ಠತೆ ನಿಗದಿಪಡಿಸಿ ಬಡ್ತಿ ನೀಡುವ ಸಂದರ್ಭದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇಮಕಾತಿಗೆ ಸರ್ಕಾರ ಹೊರಡಿಸಿರುವ ಆದೇಶವನ್ನು ಅಕ್ರಮವಾಗಿ ಅಳವಡಿಸಿಕೊಳ್ಳಲಾಗಿದೆ. ಅಲ್ಲದೆ, ಸಾಮಾನ್ಯ ಅರ್ಹತೆಯಡಿ ಜ್ಯೇಷ್ಠತೆಯಲ್ಲಿ ಬಡ್ತಿ ಪಡೆದವರನ್ನೂ ಎಸ್‌ಸಿ, ಎಸ್‌ಟಿಗೆ ನೀಡಬೇಕಾದ ಬಡ್ತಿ ಪ್ರಮಾಣ 15 : 3 ಅನುಪಾತಕ್ಕೆ ಸೇರಿಸಿ ಲೆಕ್ಕಹಾಕಿ ಬಡ್ತಿ ನೀಡಲಾಗಿದೆ’ ಎಂದೂ ಅವರು ಆರೋಪಿಸಿದ್ದಾರೆ.

ಚಂದ್ರಶೇಖರಯ್ಯ

‘ಕರ್ನಾಟಕ (ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಕಾಯ್ದೆ–2017 ನ್ನು ಉಲ್ಲಂಘಿಸಿ ಜ್ಯೇಷ್ಠತೆ ನಿಗದಿಪಡಿಸಿ ಎಸ್‌ಸಿ, ಎಸ್‌ಸಿ ನೌಕರರಿಗೆ ಅನ್ಯಾಯ ಮಾಡಲಾಗಿದೆ. ಈ ಬಗ್ಗೆ ಉತ್ತರ ಕನ್ನಡ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗೆ ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ನೋಟಿಸ್ ನೀಡಿ, ಎಲ್ಲ ಮುಂಬಡ್ತಿಗಳನ್ನು ರದ್ದುಪಡಿಸಿ ನಿಯಮಾನುಸಾರ ಬಡ್ತಿ ನೀಡುವಂತೆ ಸೂಚಿಸಿದ ಬಳಿಕವೂ ನಿಯಮ ಉಲ್ಲಂಘಿಸಲಾಗಿದೆ’ ಎಂದು ಅವರು ತಿಳಿಸಿದ್ದಾರೆ

‘ಜೇಷ್ಠತೆ ಸಂರಕ್ಷಿಸದೆ ಜ್ಯೇಷ್ಠತೆಯನ್ನು ಕಾನೂನುಬಾಹಿರವಾಗಿ ನಿಗದಿಪಡಿಸಿ ಕಾನ್‌ಸ್ಟೆಬಲ್ ಹುದ್ದೆಯಿಂದ ಹೆಡ್ ಕಾನ್‌ಸ್ಟೆಬಲ್ ಮತ್ತು ಹೆಡ್ ಕಾನ್‌ಸ್ಟೆಬಲ್ ಹುದ್ದೆಯಿಂದ ಎಎಸ್‌ಐ ವೃಂದಕ್ಕೆ ಬಡ್ತಿ ನೀಡಿದ ಬಗ್ಗೆ ಮಾಹಿತಿ ನೀಡುವಂತೆ ಸಮಾಜ ಕಲ್ಯಾಣ ಆಯುಕ್ತರು ಸೂಚಿಸಿದ್ದರೂ ಪೊಲೀಸ್ ವರಿಷ್ಠಾಧಿಕಾರಿ ಸ್ಪಂದಿಸಿಲ್ಲ. ಹೀಗಾಗಿ, ಈ ಬಗ್ಗೆ ಮತ್ತೊಮ್ಮೆ ದೂರು ನೀಡಿದ್ದೇವೆ. ಈಗಾಗಲೇ ನೀಡಿರುವ ಪದೋನ್ನತಿಯನ್ನು ರದ್ದುಪಡಿಸಿ, ಜ್ಯೇಷ್ಠತೆ ಪಟ್ಟಿ ಮರುನಿಗಪಡಿಸಿ ಪದೋನ್ನತಿ ಪ್ರಕ್ರಿಯೆ ನಡೆಸದಿದ್ದರೆ ನೌಕರರು ಹೋರಾಟ ಹಮ್ಮಿಕೊಳ್ಳಲಿದ್ದಾರೆ’ ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ.

ಡಾಕ್ಟರ್ ಮನೆ ಹೊಕ್ಕ ಚಿರತೆ ಕೊನೆಗೂ ಸೆರೆ

ರಾಮನಗರ: ತಾಲ್ಲೂಕಿನ ಜಾಲಮಂಗಲ ಗ್ರಾಮದ ಮನೆಯೊಂದಕ್ಕೆ ಹೊಕ್ಕು ಆತಂಕ ಸೃಷ್ಟಿಸಿದ್ದ ಚಿರತೆಯನ್ನು ಸತತ ಐದು ಗಂಟೆ ಕಾರ್ಯಾಚರಣೆ ಮೂಲಕ ಸೆರೆ ಹಿಡಿಯಲಾಯಿತು. ಇದರಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟರು.

ಶನಿವಾರ ಮಧ್ಯರಾತ್ರಿ ಆಹಾರ ಅರಸುತ್ತಾ ಜಾಲಮಂಗಲ ಗ್ರಾಮಕ್ಕೆ ಬಂದ ಚಿರತೆಯು ವೈದ್ಯ ಡಾ.ಶಿವಣ್ಣ ಎಂಬುವರ ಹೊಸ ಮನೆಯ ಒಳಗೆ ನುಗ್ಗಿತು. ಮನೆಗೆ ನುಗ್ಗಿ ಕುರಿ ಹಾಗೂ ನಾಯಿ ಹಿಡಿಯಲು ಪ್ರಯತ್ನಿಸಿತ್ತು. ಕೂಡಲೇ ಮನೆಯಲ್ಲಿದ್ದವರು ಹೊರಗೆ ಓಡಿ ಬಂದಿದ್ದು, ಚಿರತೆಯನ್ನು ಮನೆಯೊಳಗೆ ಕೂಡಿ ಹಾಕಿದರು.

ಅರಣ್ಯ ಇಲಾಖೆಯ ಅಧಿಕಾರಿಗಳು ಮಾಹಿತಿ ಪಡೆದು ಸ್ಥಳಕ್ಕೆ ಧಾವಿಸಿದರು. ಬಳಿಕ ಬನ್ನೇರುಘಟ್ಟದಿಂದ ಪಶುವೈದ್ಯರು ಹಾಗೂ ಅರಿವಳಿಕೆ ತಜ್ಞರ ತಂಡವನ್ನೂ ಕರೆಯಿಸಲಾಯಿತು. ಕಿಟಕಿಯ ಒಳಗಿನಿಂದ ಬಂದೂಕು ತೂರಿಸಿದ ತಜ್ಞರು ಹಲವು ಪ್ರಯತ್ನದ ನಂತರ ಕಡೆಗೂ ಚಿರತೆಗೆ ಅರಿವಳಿಕೆ ಇಂಜೆಕ್ಷನ್ ನೀಡುವಲ್ಲಿ ಯಶಸ್ವಿ ಆದರು.

ಪ್ರಜ್ಞೆ ತಪ್ಪಿದ ಚಿರತೆಗೆ ಬಲೆ ಹಾಕಿ ಅದನ್ನು ಸುರಕ್ಷಿತವಾಗಿ ಅರಣ್ಯ ಇಲಾಖೆಯ ಬೋನಿನೊಳಗೆ ಇರಿಸಲಾಯಿತು. ಅಲ್ಲಿಂದ ಅದನ್ನು ಕಾಡಿನತ್ತ ಕೊಂಡೊಯ್ಯಲಾಯಿತು.

ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ದೇವರಾಜು, ಎಸಿಎಫ್ ಸುರೇಂದ್ರ, ಆರ್‌ಎಫ್‌ಒ ಕಿರಣ್, ಡಿಆರ್‌ಎಫ್‌ಒ ರಾಜು ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಬನ್ನೇರುಘಟ್ಟದ ತಜ್ಞ ವೈದ್ಯ ಉಮಾಶಂಕರ್ ಸಹ ಬಂದಿದ್ದರು.

ಜಲಮಂಡಳಿಯ ಕ್ರಮಕ್ಕೆ ನಾಗರಿಕರು ಅಸಮಾಧಾನ

ಹೆಬ್ಬಾಳ ರಾಜಕಾಲುವೆಗೆ ಒಳಚರಂಡಿ ಕೊಳಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಂಬಿ ಹರಿಯುತ್ತಿರುವ ಒಳಚರಂಡಿಯ ನೀರನ್ನು ಹೆಬ್ಬಾಳ ಕೆರೆಯ ಹಿಂದಿನ ರಾಜಕಾಲುವೆಗೆ ಜಲಮಂಡಳಿಯು ಹರಿಸುತ್ತಿದೆ. ಈ ಕ್ರಮಕ್ಕೆ ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೆರೆ ಸಮೀಪ ನಿಯಮಗಳನ್ನು ಉಲ್ಲಂಘಿಸಿ ನಿರ್ಮಿಸಿರುವ ಮನೆಗಳಿಂದಾಗಿ ಈ ಸಮಸ್ಯೆಯಾಗಿದೆ. ಹೀಗಾಗಿ, ಈ ರೀತಿಯ ಕ್ರಮಕೈಗೊಳ್ಳುವುದು ಅನಿವಾರ್ಯ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇತ್ತೀಚೆಗೆ ಸುರಿಯುತ್ತಿರುವ ಭಾರಿ ಮಳೆಯಿಂದ ಹೆಬ್ಬಾಳ ಸಮೀಪದ ವೀರಭದ್ರಪ್ಪ ಬಡಾವಣೆ, ಬಾಲಾಜಿ ಬಡಾವಣೆ, ಟಾಟಾನಗರ ಮತ್ತು ಇತರ ಬಡಾವಣೆಗಳಲ್ಲಿ ಒಳಚರಂಡಿ ನೀರು ತುಂಬಿ ಹರಿಯುತ್ತಿರುವುದರಿಂದ ಜಲಮಂಡಳಿ ಕೊಳಚೆ ನೀರನ್ನು ರಾಜಕಾಲುವೆಗೆ ಹರಿಸುತ್ತಿದೆ. ಇದರಿಂದ, ಹೆಬ್ಬಾಳ ಸರೋವರ ಬಡಾವಣೆ ಮತ್ತು ಅಮೋ ಬಡಾವಣೆ ನಿವಾಸಿಗಳು ಮನೆಯಿಂದ ಹೊರಗೆ ಬರುವುದು ಕಷ್ಟವಾಗುತ್ತಿದೆ. ಕೆಲ ದಿನಗಳಿಂದ ಕೊಳಚೆ ಹರಿಯುತ್ತಿರುವುದರಿಂದ ದುರ್ನಾತ ಬೀರುತ್ತಿದ್ದು, ಮನೆಯ ಕಿಟಕಿಗಳನ್ನು ಸಹ ತೆರೆದಿಡಲು ಸಾಧ್ಯವಾಗುತ್ತಿಲ್ಲ ಎಂದು ಈ ಬಡಾವಣೆಗಳ ನಿವಾಸಿಗಳು ದೂರಿದ್ದಾರೆ.

‘ಕೊಳಚೆ ನೀರನ್ನು ಈ ರೀತಿ ಪಂಪ್ ಮಾಡುವುದು ಕಾನೂನುಬಾಹಿರ ಮತ್ತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಆದೇಶಕ್ಕೆ ವಿರುದ್ಧ’ ಎಂದು ಸ್ಥಳೀಯ ನಿವಾಸಿಗಳು ಟೀಕಿಸಿದರು.

‘ಈ ಪ್ರದೇಶವನ್ನು ಜಲಮಂಡಳಿಯು ಕೊಳಗೇರಿಯನ್ನಾಗಿ ಪರಿವರ್ತಿಸಬಾರದು. ಹಿರಿಯರು ಮತ್ತು ಮಕ್ಕಳು ಮನೆಯಿಂದ ಹೊರಗೆ ಹೋಗುವುದು ಕಷ್ಟವಾಗುತ್ತಿದೆ. ಇಡೀ ಪ್ರದೇಶದಲ್ಲಿ ದುರ್ನಾತ ಬೀರುತ್ತಿದೆ. ಕೊಳಚೆ ನೀರನ್ನು ಬೆಳಿಗ್ಗೆ ಮತ್ತು ಸಂಜೆ ರಾಜಕಾಲುವೆಗೆ ಹರಿಸಲಾಗುತ್ತಿದೆ’ ಎಂದು ಹೆಬ್ಬಾಳ ಸರೋವರ ಬಡಾವಣೆಯ ಕಿರಣ್ ಕುಮಾರ್ ದೂರಿದರು.

ಆದರೆ, ‘ಒಳಚರಂಡಿಯಿಂದ ತುಂಬಿ ಹರಿಯುತ್ತಿರುವ ಕೊಳಚೆ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸದ್ಯಕ್ಕೆ ಇದೊಂದೇ ಪರಿಹಾರ’ ಎಂದು ಜಲಮಂಡಳಿ ಅಧಿಕಾರಿಗಳು ಸಮರ್ಥಿಸಿಕೊಂಡರು.

‘ಕೆರೆ ದಂಡೆಗಳ ಮೇಲೆ ಮನೆಗಳನ್ನು ನಿರ್ಮಿಸಿರುವುದರಿಂದ ವಾಹನಗಳ ಸಂಚಾರಕ್ಕೂ ಅಡ್ಡಿಯಾಗಿದೆ. ಹಲವರು ಮಳೆ ನೀರು ಹರಿಯುವ ಕೊಳವೆಗಳನ್ನು ಒಳಚರಂಡಿ ಕೊಳವೆಮಾರ್ಗಕ್ಕೆ ಸಂಪರ್ಕಿಸಿದ್ದಾರೆ. ಭಾರಿ ಮಳೆಯಾಗಿರುವುದರಿಂದ ಅವು ತುಂಬಿ ಹರಿಯುತ್ತಿರಬಹುದು. ನಾಗರಿಕರು ಸಹಕಾರ ನೀಡಿದರೆ ಸೋಮವಾರದ ಒಳಗೆ ದುರಸ್ತಿ ಕಾರ್ಯ ಪೂರ್ಣಗೊಳಿಸುತ್ತೇವೆ’ ಎಂದು ಜಲಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ ನವನೀತ್ ತಿಳಿಸಿದರು.

‘ವಿನ್ಯಾಸದ ಲೋಪದಿಂದ ಈಗ ಸಮಸ್ಯೆ ಸೃಷ್ಟಿಯಾಗಿದೆ. ಮಳೆ ನೀರು ಹರಿಸುವ ಪೈಪ್‌ಗಳಿಂದ ಸಮಸ್ಯೆಯಾಗಿದ್ದರೆ ಜಲಮಂಡಳಿ ಅಧಿಕಾರಿಗಳು ಮೀಟರ್‌ಗಳ ತಪಾಸಣೆ ನಡೆಸುವಾಗ ಸಂಬಂಧಪಟ್ಟವರ ವಿರುದ್ಧ ಏಕೆ ಕ್ರಮಕೈಗೊಳ್ಳುತ್ತಿಲ್ಲ. ಸಮಸ್ಯೆಯಾದಾಗ ಮಾತ್ರ ಪರಿಹಾರದ ಬಗ್ಗೆ ಅವರು ಯೋಚಿಸುತ್ತಾರೆ’ ಎಂದು ಹೆಬ್ಬಾಳ ಸರೋವರ ನಿವಾಸಿಗಳ ವೇದಿಕೆಯ ಬಿ.ವಿ.ಎಸ್. ರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದರು.

ರಾಜಕಾಲುವೆಯಲ್ಲಿ ಸಂಗ್ರಹವಾಗಿರುವ ಕೊಳಚೆ ನೀರಿನಿಂದ ಸ್ಥಳೀಯ ನಿವಾಸಿಗಳು ಆತಂಕಗೊಂಡಿದ್ದಾರೆ. ಇದರಿಂದ ಮತ್ತಷ್ಟು ಸಮಸ್ಯೆಗಳು ಸೃಷ್ಟಿಯಾಗುತ್ತವೆ ಎಂದು ಅವರು ದೂರಿದರು.

ಒಳಚರಂಡಿಯ ಕೊಳಚೆ ನೀರನ್ನು ಹೆಬ್ಬಾಳ ಕೆರೆಯ ಹಿಂದಿನ ರಾಜಕಾಲುವೆಗೆ ಹರಿಸುತ್ತಿರುವುದು

ಎರಡನೇ ದಿನವೂ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ

‘ಪರ್ವ’ದ ವಿಶೇಷ ಪ್ರದರ್ಶನ ಸಂಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ದಿನ ಇಲ್ಲಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮೈಸೂರು ರಂಗಾಯಣದ ಕಲಾವಿದರು ಪ್ರದರ್ಶಿಸಿದ ‘ಪರ್ವ’ ನಾಟಕ ಭಾನುವಾರ ಸಂಪನ್ನಗೊಂಡಿತು.

ಎರಡನೇ ದಿನ ಕೂಡ ನಗರದ ಜನತೆಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಕಲಾಕ್ಷೇತ್ರದ ಎಲ್ಲ ಆಸನಗಳು ಭರ್ತಿಯಾಗಿದ್ದವು. ಪ್ರವೇಶ ದ್ವಾರದಲ್ಲಿಯೇ ‘ಆಸನಗಳು ಭರ್ತಿಯಾಗಿವೆ. ಟಿಕೆಟ್‌ಗಳು ಲಭ್ಯವಿಲ್ಲ’ ಎಂಬ ಫಲಕವನ್ನು ಹಾಕಲಾಗಿತ್ತು. ಹೀಗಾಗಿ, ಮುಂಚಿತವಾಗಿ ಟಿಕೆಟ್ ಖರೀದಿಸದ ಕೆಲವರು ನಾಟಕ ವೀಕ್ಷಿಸಲಾಗದೆಯೇ ಮನೆಗೆ ಮರಳಬೇಕಾಯಿತು. ಇನ್ನೂ ಕೆಲವರು ಟಿಕೆಟ್ ಸಿಗಬಹುದೆಂದು 10 ಗಂಟೆಯವರೆಗೂ ಕಾದು, ನಿರಾಸೆ ಅನುಭವಿಸಿದರು.

ಸಾಹಿತಿ ಎಸ್.ಎಲ್.ಭೈರಪ್ಪ ಅವರ ಕಾದಂಬರಿ ಆಧಾರಿತ 8 ಗಂಟೆಯಷ್ಟು ಸುದೀರ್ಘ ಅವಧಿಯ ಈ ನಾಟಕವನ್ನು ಎರಡು ದಿನಗಳ ಅವಧಿಯಲ್ಲಿ 1,600ಕ್ಕೂ ಅಧಿಕ ಮಂದಿ ವೀಕ್ಷಿಸಿದರು. ಮೊದಲ ದಿನದ ಪ್ರೇಕ್ಷಕರಲ್ಲಿ ಹೆಚ್ಚಿನವರು ಹಿರಿಯ ನಾಗರಿಕರಿದ್ದರೇ, ಎರಡನೇ ದಿನದ ಪ್ರೇಕ್ಷಕರಲ್ಲಿ ಬಹುತೇಕರು ಯುವಜನರೇ ಇದ್ದರು. ರಂಗಕರ್ಮಿ, ಕಿರುತೆರೆ ಕಲಾವಿದರು ಕೂಡ ಪ್ರೇಕ್ಷಕರ ಸಾಲಿನಲ್ಲಿ ಕಾಣಿಸಿಕೊಂಡರು.

ಖುಷಿ ನೀಡಿದ ಸ್ಪಂದನೆ: ‘ಎರಡು ದಿನಗಳ ಪ್ರದರ್ಶನ ಸಂಪೂರ್ಣ ತೃಪ್ತಿ ತಂದಿದೆ. ಬೆಳಿಗ್ಗೆ 10ರಿಂದ ಸಂಜೆ 6.45ರವರೆಗೆ ನಡೆದ ಪ್ರದರ್ಶನದಲ್ಲಿ ಒಬ್ಬರು ಕೂಡ ಮಧ್ಯದಲ್ಲಿ ಎದ್ದು ಹೋಗಲಿಲ್ಲ. ಪ್ರೇಕ್ಷಕರ ಸ್ಪಂದನೆ ಖುಷಿ ನೀಡಿದೆ. ಎರಡು ದಿನಗಳಲ್ಲಿ ಟಿಕೆಟ್‌ಗಳಿಂದ ₹ 5 ಲಕ್ಷ ಸಂಗ್ರಹವಾಗಿದೆ. 40 ಕಲಾವಿದರು ಸೇರಿದಂತೆ 50 ಜನರ ತಂಡಕ್ಕೆ ವಸತಿ, ಊಟದ ವ್ಯವಸ್ಥೆ, ಪ್ರಯಾಣ ಸೇರಿದಂತೆ ವಿವಿಧ ವೆಚ್ಚಗಳನ್ನು ಭರಿಸಬೇಕಾಗುತ್ತದೆ’ ಎಂದು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ತಿಳಿಸಿದರು.

‘ಬೆಂಗಳೂರಿನ ಪ್ರದರ್ಶನದ ಯಶಸ್ಸು ಸರ್ಕಾರಕ್ಕೆ ಸಂದೇಶವಾಗಿದೆ. ಬಜೆಟ್‌ನಲ್ಲಿ ಘೋಷಿಸಿದ ₹ 1 ಕೋಟಿ ಅನುದಾನವು ಬಿಡುಗಡೆಯಾದ ಬಳಿಕ ಹೊರ ರಾಜ್ಯಗಳಲ್ಲಿಯೂ ಪ್ರದರ್ಶನ ಏರ್ಪಡಿಸಲಾಗುತ್ತದೆ. ವಾರಾಣಸಿ, ಗುಜರಾತ್, ದೆಹಲಿ, ಮುಂಬೈ ಹಾಗೂ ಚಂಡೀಗಡದಲ್ಲಿ ಪ್ರದರ್ಶನಗಳನ್ನು ಏರ್ಪಡಿಸಲು ಯೋಜನೆ ರೂಪಿಸಲಾಗಿದೆ’ ಎಂದು ವಿವರಿಸಿದರು.

ರಾಜ್ಯದಲ್ಲಿ ಒಟ್ಟು 50 ಪ್ರದರ್ಶನ ಹಾಗೂ ಇತರ ಐದು ರಾಜ್ಯಗಳಲ್ಲಿ 10 ಪ್ರದರ್ಶನ ಆಯೋಜಿಸಲು ಮೈಸೂರು ರಂಗಾಯಣ ಮುಂದಾಗಿದೆ.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಮೈಸೂರು ರಂಗಾಯಣದ ಕಲಾವಿದರು ‘ಪರ್ವ’ ನಾಟಕವನ್ನು ಭಾನುವಾರ ಪ್ರಸ್ತುತ ಪಡಿಸಿದರು – ಪ್ರಜಾವಾಣಿ ಚಿತ್ರ

ನವೆಂಬರ್‌ನಲ್ಲಿ ಯುವಜನರಿಗೆ ಪ್ರದರ್ಶನ

‘ಈ ನಾಟಕವು 8 ಗಂಟೆಗಳ ಸುದೀರ್ಘ ಪ್ರದರ್ಶನ ಆಗಿರುವುದರಿಂದ ಒಂದು ಪ್ರದರ್ಶನ ಬಳಿಕ ಕಲಾವಿದರಿಗೆ ವಿರಾಮ ಬೇಕಾಗುತ್ತದೆ. ಹಾಗಾಗಿ, ಬೆಂಗಳೂರಿನಲ್ಲಿ ಎರಡು ಪ್ರದರ್ಶನಗಳನ್ನು ಮಾತ್ರ ನೀಡಲಾಗಿದೆ. ಐಟಿ ಬಿಟಿ ಉದ್ಯೋಗಿಗಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಣೆಗೆ ಆಸಕ್ತಿ ತೋರುತ್ತಿದ್ದಾರೆ. ಹಾಗಾಗಿ, ನವೆಂಬರ್ ತಿಂಗಳಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಒಂದು ಪ್ರದರ್ಶನ ನೀಡಲಾಗುವುದು’ ಎಂದು ಅಡ್ಡಂಡ ಸಿ. ಕಾರ್ಯಪ್ಪ ತಿಳಿಸಿದರು.

‘ಬಹುರೂಪಿ ನಾಟಕೋತ್ಸವವು ಡಿ.4ರಿಂದ ಡಿ.11ರವರೆಗೆ ನಡೆಯಲಿದೆ. ನಮ್ಮ ಕಲಾವಿದರು ಅದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಡಿ.15ರ ಬಳಿಕ ರಂಗ ಪಯಣ ಆರಂಭವಾಗುತ್ತದೆ. ಗಡಿ ಜಿಲ್ಲೆಗಳಲ್ಲಿ ಪ್ರದರ್ಶನ ನೀಡುತ್ತೇವೆ’ ಎಂದು ತಿಳಿಸಿದರು.

ಪಿಯು ಸ್ನೇಹಿತನ ವಿರುದ್ಧ ಎಫ್‌ಐಆರ್

ಯುವತಿ ಅರೆನಗ್ನ ಫೋಟೊ ಅಪ್‌ಲೋಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಯುಸಿ ಸ್ನೇಹಿತೆ ಜೊತೆ ಸಲುಗೆ ಬೆಳೆಸಿ ಆಕೆಯ ಅರೆನಗ್ನ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸಿಕೊಂಡು ಇನ್‌ಸ್ಟಾಗ್ರಾಮ್ ಸಾಮಾಜಿಕ ಮಾಧ್ಯಮದಲ್ಲಿ ಅಪ್‌ಲೋಡ್ ಮಾಡಿದ್ದ ಬಗ್ಗೆ ಆಗ್ನೇಯ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

’21 ವರ್ಷದ ಯುವತಿ ದೂರು ನೀಡಿದ್ದಾರೆ. ಅದರನ್ವಯ ಆರೋಪಿ ಎನ್ನಲಾದ ಉದಯ್ ಕಿರಣ್ ಎಂಬುವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆತನ ವಿಚಾರಣೆ ನಡೆಸಬೇಕಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಗರದ ಕಾಲೇಜೊಂದರಲ್ಲಿ ಯುವತಿ ವ್ಯಾಸಂಗ ಮಾಡುತ್ತಿದ್ದಾರೆ. ಅವರ ಪಿಯುಸಿ ಸ್ನೇಹಿತನಾದ ಆರೋಪಿ, ಆಗಾಗ ಯುವತಿ ಜೊತೆ ಮಾತನಾಡುತ್ತಿದ್ದ. ನಂತರ, ಇಬ್ಬರ ನಡುವೆ ಸಲುಗೆ ಬೆಳೆದಿತ್ತು. ರಾಯಚೂರಿನ ಆರೋಪಿ, ಯುವತಿಯನ್ನು ಭೇಟಿಯಾಗಲೆಂದು ಇತ್ತೀಚೆಗೆ ನಗರಕ್ಕೆ ಬಂದಿದ್ದ.

‘ಯುವತಿಯನ್ನು ಜಕ್ಕೂರು ಬಳಿಯ ವಸತಿಗೃಹವೊಂದಕ್ಕೆ ಕರೆದೊಯ್ದಿದ್ದ ಆರೋಪಿ, ಅಲ್ಲಿಯೇ ಒಂದು ದಿನ ಕಳೆದಿದ್ದ. ಅದೇ ಸಂದರ್ಭದಲ್ಲಿ ಯುವತಿಯ ಅರೆನಗ್ನ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸಿಕೊಂಡಿದ್ದ. ಇದಾದ ಕೆಲ ತಿಂಗಳ ನಂತರ, ಯುವತಿಗೆ ವಿಷಯ ಗೊತ್ತಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ವರ್ತನೆಯಿಂದ ಬೇಸತ್ತ ಯುವತಿ, ಆತನನ್ನು ದೂರ ಮಾಡಿದ್ದರು. ಅಷ್ಟಕ್ಕೆ ಕೋಪಗೊಂಡ ಆರೋಪಿ ಯುವತಿಯ ಹೆಸರಿನಲ್ಲಿ ಇನ್‌ಸ್ಟಾಗ್ರಾಮ್‌ನಲ್ಲಿ ನಕಲಿ ಖಾತೆ ತೆರೆದಿದ್ದ. ಅದೇ ಖಾತೆಯಲ್ಲಿ ಅವರ ವಿಡಿಯೊಗಳನ್ನು ಅಪ್‌ಲೋಡ್ ಮಾಡಿದ್ದ. ಅದನ್ನು ನೋಡಿದ್ದ ಯುವತಿ, ತಂದೆಗೆ ವಿಷಯ ತಿಳಿಸಿದ್ದರು. ಆರೋಪಿಗೆ ಕರೆ ಮಾಡಿದ್ದ ತಂದೆ, ಫೋಟೊ ಹಾಗೂ ವಿಡಿಯೊ ಅಳಿಸಿಹಾಕುವಂತೆ ಹೇಳಿದ್ದರು.’

‘ತಂದೆ ವಿರುದ್ಧವೇ ಆರೋಪಿ ಹರಿಹಾಯ್ದು, ನಿಂದಿಸಿದ್ದ. ನಂತರ, ಯುವತಿ ದೂರು ನೀಡಿದ್ದಾರೆ’ ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.

ಜಿಮ್ ತರಬೇತುದಾರ ಆತ್ಮಹತ್ಯೆ; ವಿಡಿಯೊ ಪತ್ತೆ

ಬೆಂಗಳೂರು: ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಯ ಮಾರಪ್ಪ ಬಡಾವಣೆಯಲ್ಲಿ ಕಾರ್ತಿಕ್ (29) ಎಂಬುವರು ನೇಣು ಹಾಕಿಕೊಂಡು ಶನಿವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಕಾರ್ತಿಕ್, ಜಿಮ್ ತರಬೇತುದಾರ. ಶನಿವಾರ ರಾತ್ರಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ' ಎಂದು ಪೊಲೀಸರು ಹೇಳಿದರು. 'ಆತ್ಮಹತ್ಯೆಗೂ ಮುನ್ನ ಕಾರ್ತಿಕ್ ಚಿತ್ರೀಕರಿಸಿದ್ದಾರೆ ಎನ್ನಲಾದ ವಿಡಿಯೊ ಸಿಕ್ಕಿದೆ. ಅದನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಲಾಗುತ್ತಿದೆ. ಯುವತಿಯೊಬ್ಬರನ್ನು ಕಾರ್ತಿಕ್ ಪ್ರೀತಿಸುತ್ತಿದ್ದು, ಮದುವೆಗೂ ಸಿದ್ಧರಾಗಿದ್ದರು. ಆದರೆ, ಇತ್ತೀಚೆಗೆ ಯುವತಿ ದೂರವಾಗಿದ್ದರು ಎಂದು ಗೊತ್ತಾಗಿದೆ. ಅದರಿಂದ ನೊಂದ ಕಾರ್ತಿಕ್, ಆತ್ಮಹತ್ಯೆಗೆ ಶರಣಾಗಿರುವ ಮಾಹಿತಿ ಇದೆ. '

'ಬೇರೆ ಯುವತಿ ಜೊತೆ ಮದುವೆ ಮಾಡಲು ತೀರ್ಮಾನಿಸಿದ್ದ ಪೋಷಕರು, ಭಾನುವಾರ ಹೆಣ್ಣು ನೋಡಲು ಹೊರಟಿದ್ದರು. ಇದಕ್ಕೂ ಮುನ್ನವೇ ಕಾರ್ತಿಕ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.' ಎಂದೂ ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಹೆಡ್ ಕಾನ್‌ಸ್ಟೆಬಲ್ ಮೇಲೆ ಕಾರು ಹರಿಸಿದ್ದವನ ಬಂಧನ

ಬೆಂಗಳೂರು: ಪಾನಮತ್ತನಾಗಿ ಅಡ್ಡಾದಿಡ್ಡಿ ಕಾರು ಚಲಾಯಿಸಿದ್ದನ್ನು ಪ್ರಶ್ನಿಸಿದ್ದ ಹೆಡ್ ಕಾನ್‌ಸ್ಟೆಬಲ್ ಮೇಲೆಯೇ, ಕಾರು ಹರಿಸಿ ಕೊಲೆಗೆ ಯತ್ನಿಸಿದ್ದ ಆರೋಪದಡಿ ರಾಮಾಂಜನೇಯ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಚಿನ್ನಪ್ಪನಹಳ್ಳಿ ನಿವಾಸಿ ರಾಮಾಂಜನೇಯ, ಬ್ಯಾಂಕೊಂದರ ವ್ಯವಸ್ಥಾಪಕ ಎಂದು ಗೊತ್ತಾಗಿದೆ. ಎಚ್‌ಎಎಲ್ ಸಂಚಾರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮುಬಾರಕ್ ಎಂಬುವರ ಮೇಲೆ ಕಾರು ಹರಿಸಿದ್ದ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ರಾಮಾಂಜನೇಯನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶನಿವಾರ ರಾತ್ರಿ ಆರೋಪಿ, ರಾಮಾಂಜನೇಯ ಮದ್ಯ ಕುಡಿದು ಕಾರು ಚಲಾಯಿಸುತ್ತಿದಿದ್ದು ಗೊತ್ತಾಗಿದೆ. ಕಾರು ಜಪ್ತಿ ಮಾಡಲು ಸಿಬ್ಬಂದಿ ಮುಂದಾಗ ಕೋಪಗೊಂಡಿದ್ದ ರಾಮಾಂಜನೇಯ, ಕಾರನ್ನು ಒತ್ತಾಯದಿಂದ ಚಲಾಯಿಸಿಕೊಂಡು ಹೋಗಲು ಯತ್ನಿಸಿ, ಹೆಡ್ ಕಾನ್‌ಸ್ಟೆಬಲ್ ಮೇಲೆಯೂ ಕಾರು ಹತ್ತಿಸಲು ಯತ್ನಿಸಿದ್ದ.’ ಎಂದೂ ಮೂಲಗಳು ತಿಳಿಸಿವೆ.

ಜಾರಕಬಂಡೆ ಕಾವಲ್ ಮೀಸಲು ಅರಣ್ಯ ಮೇಲೆ ತೋಟಗಾರಿಕಾ ಇಲಾಖೆ ಕಣ್ಣು • ಪರಿಸರ ಪ್ರೇಮಿಗಳ ಆಕ್ರೋಶ

‘ಬಂಡೆ’ಯಲ್ಲಿ ಉದ್ಯಾನ: ಮತ್ತೆ ‘ಅರಣ್ಯ’ಕ್ಕೆ ಕುತ್ತು!

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಉಳಿದಿರುವ ಅರಣ್ಯ ಪ್ರದೇಶ ಶೇ 2.28ರಷ್ಟು ಮಾತ್ರ. ಇದು ಸರ್ಕಾರಿ ದಾಖಲೆಗಳಲ್ಲಿನ ಲೆಕ್ಕಾಚಾರ. ಆದರೆ, ವಾಸ್ತವದಲ್ಲಿ ಅಷ್ಟೂ ಅರಣ್ಯ ಉಳಿದಿಲ್ಲ. ಅಳಿದುಳಿದ ಅರಣ್ಯ ಪ್ರದೇಶಗಳಲ್ಲಿ ಜಾರಕಬಂಡೆ ಕಾವಲ್‌ನ 632 ಎಕರೆ ಪ್ರದೇಶವೂ ಸೇರಿದೆ. ಈ ವಿಶಾಲವಾದ ನೈಸರ್ಗಿಕ ಕಾಡನ್ನು ಮರಗಳ ಉದ್ಯಾನವನ್ನಾಗಿ ರೂಪಿಸುವ ಕುರಿತು ಸರ್ಕಾರದ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿರುವುದು ಪರಿಸರ ಕಾರ್ಯಕರ್ತರ ಕಳವಳಕ್ಕೆ ಕಾರಣವಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಿದ್ಧಪಡಿಸಿದ್ದ 2031ರ ನಗರ ಮಹಾಯೋಜನೆಯ ಕರಡಿನ ಪ್ರಕಾರ ಇಡೀ ಬೆಂಗಳೂರು ನಗರ ಜಿಲ್ಲೆಯಲ್ಲಿ 2,190 ಚ.ಕಿ.ಮೀ.ನಷ್ಟು ಅರಣ್ಯ ಭೂಮಿ ಇದೆ. ಅದರಲ್ಲಿ 260 ಚದರ ಕಿ.ಮೀ ವ್ಯಾಪ್ತಿಯ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವೂ ಸೇರಿದೆ. ಬೆಂಗಳೂರು ಮಹಾನಗರ ಪ್ರದೇಶವನ್ನಷ್ಟೇ ಪರಿಗಣಿಸಿದರೆ, ಇಲ್ಲಿ ಉಳಿದಿರುವ ಕಾಡಿನ ಪ್ರಮಾಣ ಶೇ 5.5ರಷ್ಟೂ ಆಗದು. ಸರ್ಕಾರಿ ದಾಖಲೆಗಳ ಪ್ರಕಾರ ಗೋವಿಂದಪುರ, ಕಾಡುಗೋಡಿ, ಮಂಡೂರು, ಬಿ.ಎಂ.ಕಾವಲ್, ತುರಹಳ್ಳಿ, ಜಾರಕಬಂಡೆ, ಜಾರಕ ಬಂಡೆ ಗಂಧದ ಕಾವಲ್, ಮಾರಸಂದ್ರ, ಕುಂಬಾರನಹಳ್ಳಿ, ಮಾದಪ್ಪನಹಳ್ಳಿ ಹಾಗೂ ದೊರೆಸಾನಿ ಪಾಳ್ಯಗಳು ಈ ನಗರದ ಅರಣ್ಯ ಪ್ರದೇಶಗಳು.

ಒಂದು ಕಾಲದಲ್ಲಿ ವನ್ಯಜೀವಿಗಳ ಸಮೃದ್ಧ ನೆಲೆಯಾಗಿದ್ದ ಬೆಂಗಳೂರು ಅಭಿವೃದ್ಧಿಯ ನಾಗಾಲೋಟದಲ್ಲಿ ತನ್ನ ವನ್ಯ ಸಂಪತ್ತನ್ನೆಲ್ಲ ಕಳೆದುಕೊಳ್ಳುತ್ತಾ ಸಾಗಿದೆ. ಬೆಂಗಳೂರಿನ ತುಂಬಾ ಈಗ ಕಣ್ಣು ಹಾಯಿಸಿದಷ್ಟು ಉದ್ದಕ್ಕೂ ಕಾಂಕ್ರೀಟ್ ಕಾಡುಗಳೇ ಕಾಣಿಸುತ್ತವೆ. ದುರ್ಬೀನು ಹಾಕಿ ಹುಡುಕಿದರೂ ಕಾಣಿಸದಷ್ಟರ ಮಟ್ಟಿಗೆ ಕಾಡುಗಳು ಕ್ಷೀಣಿಸಿವೆ. ಪರಿಸ್ಥಿತಿ ಹೀಗಿರುವಾಗ ಮೀಸಲು ಅರಣ್ಯವನ್ನೂ ಅನ್ಯ ಉದ್ದೇಶಕ್ಕೆ ಬಳಸಲು ಸರ್ಕಾರ ಮುಂದಾಗಿರುವುದಕ್ಕೆ ನಗರದ ಪರಿಸರ ಪ್ರೇಮಿಗಳ ಹಾಗೂ ವನ್ಯಜೀವಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಾರಕಬಂಡೆ ಕಾವಲ್ ಮೀಸಲು ಅರಣ್ಯ

– ಪ್ರಜಾವಾಣಿ ಚಿತ್ರಗಳು/ ರಂಜು ಪಿ.

‘ನಗರದಲ್ಲಿ ಸರ್ಕಾರಿ ದಾಖಲೆಗಳಲ್ಲಿ ಇರುವ ಬಹುತೇಕ ಅರಣ್ಯ ಪ್ರದೇಶಗಳು ಒತ್ತುವರಿಯಾಗಿ ಅಭಿವೃದ್ಧಿ ಚಟುವಟಿಕೆಗಳಿಗೆ ಬಳಕೆಯಾಗಿವೆ. ಅಳಿದುಳಿದ ಕಾಡುಗಳಲ್ಲಿ ಹೆಚ್ಚು ವಿಶಾಲವಾಗಿರುವುದು ಎಂದರೆ ಜಾರಕ ಬಂಡೆ ಕಾವಲ್ ಹಾಗೂ ತುರಹಳ್ಳಿ ಕಿರು ಅರಣ್ಯಗಳು ಮಾತ್ರ. ಈ ಎರಡು ಅರಣ್ಯಗಳ ಮೇಲೆ ಏಕೆ ಸರ್ಕಾರಕ್ಕೆ ಕಣ್ಣು ಎಂದು ಅರ್ಥವಾಗುತ್ತಿಲ್ಲ. 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆ ಮತ್ತು 2002ರ ಜೀವವೈವಿಧ್ಯ ಸಂರಕ್ಷಣೆ ಕಾಯ್ದೆ ಪ್ರಕಾರ ಅರಣ್ಯಗಳನ್ನು ರಕ್ಷಿಸುವ ಹೊಣೆ ಸರ್ಕಾರದ್ದು. ಆದರೆ, ಸರ್ಕಾರವೇ ಈ ನೈಸರ್ಗಿಕ ಕಾಡುಗಳ ಪಾಲಿಗೆ ಖಳನಾಗಲು ಹೊರಟಿದೆ. ಇದು ಬೇಲಿಯೇ ಎದ್ದು ಹೊಲವನ್ನು ಮೇಯ್ದಂತೆ’ ಎಂದು ಬೇಸರ ವ್ಯಕ್ತಪಡಿಸುತ್ತಾರೆ ವನ್ಯಜೀವಿ ಕಾರ್ಯಕರ್ತರು.



ಜಾರಕ ಬಂಡೆ ಕಾವಲ್‌ನಲ್ಲಿ ಈಗಾಗಲೇ ಇರುವ ವೃಕ್ಷ ವನ

597 ಎಕರೆಗಳಷ್ಟು ವಿಶಾಲವಾಗಿರುವ ತುರಹಳ್ಳಿ ಕಿರು ಅರಣ್ಯದಲ್ಲಿ 400 ಎಕರೆಗಳಷ್ಟು ವಿಶಾಲವಾದ ಮರಗಳ ಉದ್ಯಾನವನ್ನು ನಿರ್ಮಿಸುವ ಯೋಜನೆಯನ್ನು ಸ್ವತಃ ಅರಣ್ಯ ಇಲಾಖೆ 2021ರ ಆರಂಭದಲ್ಲಿ ರೂಪಿಸಿತ್ತು. ಈ ಕಿರು ಅರಣ್ಯಕ್ಕೆ ಸೇರಿದ 40 ಎಕರೆ ಪ್ರದೇಶದಲ್ಲಿ ಅರಣ್ಯ ಇಲಾಖೆ ಈಗಾಗಲೇ ಒಂದು ವೃಕ್ಷೋದ್ಯಾನವನ್ನು ಅಭಿವೃದ್ಧಿಪಡಿಸಿದೆ. ಮತ್ತೆ ಈ ಕಾಡಿನ 400 ಎಕರೆಯನ್ನು ವೃಕ್ಷೋದ್ಯಾನ ನಿರ್ಮಾಣಕ್ಕೆ ಬಳಸುವ ಪ್ರಸ್ತಾವನ್ನು ಸ್ಥಳೀಯರು ಹಾಗೂ ವನ್ಯಜೀವಿ ಕಾರ್ಯಕರ್ತರು ಬಲವಾಗಿ ಖಂಡಿಸಿದ್ದರು. ನೂರಕ್ಕೂ ಹೆಚ್ಚು ಪ್ರಭೇದಗಳ ಪಕ್ಷಿಗಳು, 250 ಬಗೆಯ ಕ್ರಿಮಿ–ಕೀಟಗಳು, 25 ಬಗೆಯ ಸರೀಸೃಪಗಳಿಗೆ ನೆಲೆ ಒದಗಿಸಿರುವ ತುರಹಳ್ಳಿ ಕಾಡಿನಲ್ಲಿ ಮಾನವ ಹಸ್ತಕ್ಷೇಪಕ್ಕೆ ಅವಕಾಶ ಕಲ್ಪಿಸುವ ಯಾವುದೇ ಚಟುವಟಿಕೆಗೆ ಬಳಸಬಾರದು ಎಂದು ಬಲವಾಗಿ ಒತ್ತಾಯಿಸಿದ್ದರು. ಜನರ ಪ್ರತಿರೋಧಕ್ಕೆ ಮಣಿದ ಆಗಿನ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಅವರು ವೃಕ್ಷೋದ್ಯಾನ ನಿರ್ಮಿಸುವ ಪ್ರಸ್ತಾವವನ್ನು ಕೈಬಿಟ್ಟಿರುವುದಾಗಿ ಪ್ರಕಟಿಸಿದ್ದರು.

ಒಂದು ಕಂಟಕ ದೂರವಾಯಿತು ಎನ್ನುವಾಗಲೇ ಜಾರಕ ಬಂಡೆ ಕಾವಲ್‌ನ ಮೀಸಲು ಅರಣ್ಯವನ್ನು ತೋಟಗಾರಿಕಾ ಇಲಾಖೆ ಮರಗಳ ಉದ್ಯಾನ ನಿರ್ಮಿಸಲು ಮುಂದಾಗಿದೆ. ಈ ಮೀಸಲು ಅರಣ್ಯದ ಒಂದು ಭಾಗದಲ್ಲಿ ಈಗಾಗಲೇ ಟ್ರೀಪಾರ್ಕ್ ನಿರ್ಮಾಣವಾಗಿದೆ. ಈ ಮರಗಳ ಉದ್ಯಾನವನ್ನು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಇತ್ತೀಚೆಗೆ ಪರಿಶೀಲಿಸಿದ್ದಾರೆ. ಇಲ್ಲಿ ಸುಮಾರು 400 ಎಕರೆಗಳಷ್ಟು ವಿಶಾಲವಾದ ಮರಗಳ ಉದ್ಯಾನವನ್ನು ಲಾಲ್‌ಬಾಗ್ ಮಾದರಿಯಲ್ಲಿ ರೂಪಿಸುವ ಪ್ರಸ್ತಾವನೆಯನ್ನು ತೋಟಗಾರಿಕೆ ಇಲಾಖೆ ಸಿದ್ಧಪಡಿಸುತ್ತಿದೆ. ಈ ಬಗ್ಗೆ ತೋಟಗಾರಿಕಾ ಸಚಿವ ಮುನಿರತ್ನ ಅವರು ಇತ್ತೀಚೆಗೆ ಹೇಳಿಕೆಯನ್ನೂ ನೀಡಿದ್ದಾರೆ. ಆದರೆ, ‘ನಮಗಿನ್ನೂ ಈ ಕುರಿತು ಅಧಿಕೃತವಾಗಿ ಯಾವುದೇ ಪ್ರಸ್ತಾವ ಸಲ್ಲಿಕೆ ಆಗಿಲ್ಲ’ ಎನ್ನುತ್ತಾರೆ ಅರಣ್ಯ ಇಲಾಖೆ ಅಧಿಕಾರಿಗಳು.

‘ಬ್ರಿಟಿಷರ ಕಾಲದಲ್ಲೇ ಮೀಸಲು ಅರಣ್ಯದ ಪರಿಕಲ್ಪನೆ ಜಾರಿಗೆ ಬಂದಿತ್ತು. ವನ್ಯಜೀವಿಗಳಿಗಾಗಿಯೇ ಜಾಗ ಮೀಸಲಿಡಬೇಕು ಎಂಬ ಕಾಳಜಿಯನ್ನು ಬ್ರಿಟಿಷರು ಹೊಂದಿದ್ದರು. ಆದರೆ, ಈಗಿನ ಜನಪ್ರತಿಗಳಿಗೆ ಪರಿಸರದ ಬಗ್ಗೆಯಾಗಲೀ ವನ್ಯಜೀವಿಗಳ ಬಗ್ಗೆಯಾಗಲೀ ಕಿಂಚಿತ್ತೂ ಕಾಳಜಿ ಇಲ್ಲ. ಪರಿಸರ ವ್ಯವಸ್ಥೆಯಲ್ಲಿ ಪ್ರತಿಯೊಂದು ಜೀವಿಗೂ ತನ್ನೇ ಆದ ಪಾತ್ರವಿದೆ. ವನ್ಯಜೀವಿಗಳ ನೆಲೆಯನ್ನು ನಾಶಪಡಿಸಿದರೆ ಅದಕ್ಕೆ ಬೆಲೆ ತೆರಬೇಕಾಗುತ್ತದೆ’ ಎಂದು ಗೌರವ ವನ್ಯಜೀವಿ ವಾರ್ಡನ್ ಎ.ಪ್ರಸನ್ನ ಕುಮಾರ್ ಎಚ್ಚರಿಸಿದರು.

‘ಡ್ರ್ಯಾಗನ್ ಚಿಟ್ಟೆಗಳು ಸೊಳ್ಳೆಗಳ ನಿಯಂತ್ರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಬೆಂಗಳೂರಿನಲ್ಲಿ ಈ ಚಿಟ್ಟೆಗಳ ಸಂತತಿ ನಶಿಸಿದೆ. ಈ ಚಿಟ್ಟೆಗಳಿಲ್ಲದ ಕಾರಣ ನಗರದಲ್ಲಿ ಸೊಳ್ಳೆ ಹಾವಳಿ ಹೆಚ್ಚಳವಾಗಿದೆ. ಅದೇ ರೀತಿ ಆಹಾರ ಸರಪಣಿಯ ಯಾವುದೇ ಕೊಂಡಿ ತಪ್ಪಿದರೂ ಅಪಾಯ ತಪ್ಪಿದ್ದಲ್ಲ. ವನ್ಯಜೀವಿ ನೆಲೆ ನಾಶಪಡಿಸಿದರೆ ಅದರ ಪರಿಣಾಮವನ್ನು ಬೇರೆ ರೀತಿಯಲ್ಲಿ ಎದುರಿಸಬೇಕಾಗುತ್ತದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಅನುಸೂಚಿತ ಪಟ್ಟಿಯಲ್ಲಿರುವ ಪ್ರಾಣಿ ಪಕ್ಷಿಗಳಿಗೆ ವಿಶೇಷ ರಕ್ಷಣೆ ಇದೆ. ಈ ಪಟ್ಟಿಯಲ್ಲಿರುವ ರಾಷ್ಟ್ರ ಪಕ್ಷಿ ನವಿಲು, ನರಿ ಮುಂತಾದ ಅನೇಕ ಪ್ರಾಣಿ ಪಕ್ಷಿಗಳ ನೆಲವೀಡು ಜಾರಕಬಂಡೆ ಕಾವಲ್ ಅರಣ್ಯ. ಈ ಮೀಸಲು ಅರಣ್ಯವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಬೇಕು’ ಎಂದು ಅವರು ಒತ್ತಾಯಿಸಿದರು.

ಮೀಸಲು ಅರಣ್ಯ ಸೀಳಿಕೊಂಡು ಸಾಗಲಿದೆ ಪಿ.ಆರ್.ಆರ್

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ನಿರ್ಮಿಸಲು ಉದ್ದೇಶಿಸಿರುವ ಪೆರಿಫೆರಲ್ ವರ್ತುಲ ರಸ್ತೆಯು (ಪಿಆರ್‌ಆರ್) ನಗರದ ಉತ್ತರ ಭಾಗದಲ್ಲಿರುವ ಜಾರಕಬಂಡೆ ಕಾವಲ್ ಮೀಸಲು ಅರಣ್ಯವನ್ನು ಸೀಳಿಕೊಂಡು ಸಾಗಲಿದೆ. ಸದ್ಯ ಬಿಡಿಎ ಸಿದ್ಧಪಡಿಸಿರುವ ಪ್ರಸ್ತಾವದ ಪ್ರಕಾರ ಪಿಆರ್‌ಆರ್ ಸಲುವಾಗಿ 1.5 ಹೆಕ್ಟೇರ್ ಮೀಸಲು ಅರಣ್ಯ ಬಳಕೆ ಆಗಲಿದೆ.

ಜಾರಕ ಬಂಡೆ ಕಾವಲ್ ಮೀಸಲು ಅರಣ್ಯದಲ್ಲಿ ಎರಡು ಬ್ಲಾಕ್‌ಗಳಿವೆ. ಎ– ಬ್ಲಾಕ್ ಜಾಲಹಳ್ಳಿ ಬಳಿ ಇದ್ದರೆ, ಬಿ– ಬ್ಲಾಕ್ ಆವಲಹಳ್ಳಿ ಅರಣ್ಯದ ಬಳಿ ಇದೆ. ಚಿಟ್ಟೆ ಉದ್ಯಾನವನ್ನು ಹೊಂದಿರುವ ಬಿ–ಬ್ಲಾಕ್ ಮೂಲಕ ಪಿಆರ್‌ಆರ್ ಹಾದುಹೋಗಲಿದೆ. ಪಿಆರ್‌ಆರ್‌ಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ಬಳಿಕ ಬಿ–ಬ್ಲಾಕ್‌ನಲ್ಲಿ ಸುಮಾರು 150 ಮೀಟರ್ ಜಾಗವನ್ನು ಇದಕ್ಕಾಗಿ ಕಾಯ್ದಿರಿಸಿದೆ. 16 ವರ್ಷಗಳಿಂದ ಇಲ್ಲಿ ಯಾವುದೇ ಗಿಡ ಮರಗಳನ್ನು ಬೆಳೆಸಿಲ್ಲ.

‘ಗೋಮಾಳಗಳಲ್ಲಿ ಉದ್ಯಾನ ನಿರ್ಮಿಸಲಿ’



ಉದ್ಯಾನ ನಿರ್ಮಾಣಕ್ಕೆ ಮೀಸಲು ಅರಣ್ಯವನ್ನು ಬಳಸುವ ಯಾವುದೇ ಅಗತ್ಯ ಇಲ್ಲ, ನಗರದಲ್ಲಿ ಈಗ ಶೇ 0.01 ರಷ್ಟು ನೈಸರ್ಗಿಕ ಕಾಡು ಕೂಡ ಉಳಿದಿಲ್ಲ. ಅಳಿದುಳಿದ ಕಾಡನ್ನು ಉಳಿಸಿಕೊಳ್ಳುವ ಹೊಣೆ ಎಲ್ಲರ ಮೇಲೂ ಇದೆ. ನಗರದಲ್ಲಿ 40 ಸಾವಿರ ಎಕರೆಗಳಷ್ಟು ಗೋಮಾಳವಿದೆ. ಸರ್ಕಾರ ಉದ್ಯಾನ ನಿರ್ಮಾಣ ಮಾಡುವುದಾದರೆ, ಗೋಮಾಳ ಒತ್ತುವರಿ ತೆರವುಗೊಳಿಸಿ, ಅಲ್ಲಿ ನಿರ್ಮಿಸಲಿ.

ಬೆಂಗಳೂರಿನಲ್ಲಿ ಉದ್ಯಾನಗಳಿಗೆ ಕೊರತೆ ಇಲ್ಲ. ಈಗಾಗಲೇ 900ಕ್ಕೂ ಅಧಿಕ ಉದ್ಯಾನಗಳಿವೆ. ಒಂದೇ ಕಡೆ ನೂರಾರು ಎಕರೆ ಉದ್ಯಾನ ನಿರ್ಮಿಸುವ ಬದಲು, ನಗರ ಜಿಲ್ಲಾಡಳಿತವು ಒತ್ತುವರಿ ತೆರವುಗೊಳಿಸಿರುವ 10 ಎಕರೆ, ಐದು ಎಕರೆಗಳಷ್ಟು ಜಾಗಗಳಲ್ಲಿ ಸಣ್ಣ ಉದ್ಯಾನಗಳನ್ನು ನಿರ್ಮಿಸಬಹುದು.

ಅ.ನ.ಯಲ್ಲಪ್ಪ ರೆಡ್ಡಿ, ಪರಿಸರ ತಜ್ಞ

ಬಾಲಕನನ್ನು ಎಳೆದೊಯ್ದ ಮೊಸಳೆ

ದಾಂಡೇಲಿ (ಉತ್ತರ ಕನ್ನಡ): ನಗರದ ಸಮೀಪ ಹರಿಯುವ ಕಾಳಿ ನದಿಯಲ್ಲಿ ಮೀನು ಹಿಡಿಯಲು ಭಾನುವಾರ ಬೆಳಿಗ್ಗೆ ಗಾಳ ಹಾಕಿ ಕುಳಿತಿದ್ದ ವಿನಾಯಕ ನಗರದ ನಿವಾಸಿ ಮೊಹೀನ್ ಮೊಹಮ್ಮದ್ ಗುಲ್ಬರ್ಗ (15) ಎಂಬ ಬಾಲಕನನ್ನು ಮೊಸಳೆ ಎಳೆದೊಯ್ದಿದ್ದು ಆತನಿಗಾಗಿ ಶೋಧ ಕಾರ್ಯ ನಡೆದಿದೆ.

ಮೀನು ಹಿಡಿಯಲು ಕುಳಿತಿದ್ದವನ ಮೇಲೆ ಇದ್ದಕ್ಕಿದ್ದಂತೆ ದಾಳಿ ಮಾಡಿದ ಮೊಸಳೆ, ಬಾಲಕನನ್ನು ಕಚ್ಚಿ ನೀರಿಗೆಳೆದುಕೊಂಡಿತು ಎಂದು ಸ್ಥಳೀಯರು ತಿಳಿಸಿದ್ದಾರೆ.

ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಸ್ಥಳೀಯ ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ ಸಿಬ್ಬಂದಿ, ರ್‍ಯಾಫ್ಟಿಂಗ್ ತಂಡವು ಆರು ಸಣ್ಣ ಬೋಟ್ ಹಾಗೂ ಒಂದು ದೊಡ್ಡ ಬೋಟ್‌ನೊಂದಿಗೆ ಶೋಧಕಾರ್ಯದಲ್ಲಿ ನಿರತವಾಗಿದೆ. ಕಾರ್ಯಾಚರಣೆಗೆ ಅನುಕೂಲವಾಗುವಂತೆ ಸೂಪಾ ಜಲಾಶಯದಿಂದ ನೀರಿನ ಹರಿವನ್ನು ನಿಲ್ಲಿಸಲಾಗಿದೆ. ತಡರಾತ್ರಿಯವರೆಗೂ ಶೋಧಕಾರ್ಯ ಮುಂದುವರಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೊಹೀನ್ ಮೊಹಮ್ಮದ್ ಗುಲ್ಬರ್ಗ

ಬಾಲಕನ ಮೃತ ದೇಹವಿನ್ನೂ ಮೊಸಳೆ ಬಾಯಿಯಲ್ಲಿ ಇರಬಹುದು ಎಂದು ಕಾರ್ಯಾಚರಣೆ ನಡೆಸುತ್ತಿರುವ ಸಿಬ್ಬಂದಿ ಸಂದೇಹ ವ್ಯಕ್ತಪಡಿಸಿದ್ದಾರೆ.

ಸಂಗೀತ ಮತ್ತು ನೃತ್ಯ ಸ್ಪರ್ಧೆ

ಬೆಂಗಳೂರು: ರೋಟರಿ ಇಂದಿರಾನಗರ ಸಂಸ್ಥೆಯು ದಕ್ಷಿಣ ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಸ್ಪರ್ಧೆಗಳನ್ನು ಆನ್‌ಲೈನ್ ಮೂಲಕ ಏರ್ಪಡಿಸಿದೆ.

ವಿದ್ಯಾರ್ಥಿಗಳು, ಕಿರಿಯರು ಹಾಗೂ ಹಿರಿಯರ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಹೆಚ್ಚಿನ ವಿವರ ಹಾಗೂ ನೋಂದಣಿಗೆ www.raagalahari.rotaryindiranagar.org ಅನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,50,707 ▲ ಒಟ್ಟು ಸೋಂಕಿತರು
(12,50,513 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,496 ▼	12,27,966 ▲	16,244 ▲

ದಿನದ ಏರಿಕೆ

ಹೊಸ ಪ್ರಕರಣ	194	▲
ಗುಣಮುಖ	448	▲
ಸಾವು	04	

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	24.42 ಕೋಟಿ ▲	3.41 ಕೋಟಿ
ಸಕ್ರಿಯ ಪ್ರಕರಣ	1.80 ಕೋಟಿ ▲	1.62ಲಕ್ಷ ▼
ಗುಣಮುಖ	22.12 ಕೋಟಿ ▲	3.35 ಕೋಟಿ
ಸಾವು	49.62 ಲಕ್ಷ ▲	4.54 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.74 ಲಕ್ಷ ▼	14,473 ▼
ಗುಣಮುಖ	3.15 ಲಕ್ಷ ▼	17,456 ▲
ಸಾವು	5,749 ▼	442 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
28,824 ▼	44,985 ▼	37,678 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
95.05 ▼	14.79 ▲	8.33 ▲

(* ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಪ್ರಜಾವಾಣಿ ಗ್ರಾಫಿಕ್ಸ್

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.40 ಲಕ್ಷ ▲
ತಮಿಳುನಾಡು	36,004
ಕೇರಳ	28,592 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	66.02 ▲
ಕೇರಳ	49.15 ▲
ತಮಿಳುನಾಡು	26.94

ಕನ್ನಡದಲ್ಲಿ ಮಾತನಾಡಿ 'ಕನ್ನಡಕ್ಕಾಗಿ ನಾನು' ವಿಶೇಷ ಅಭಿಯಾನಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಚಾಲನೆ

‘ಕನ್ನಡ ಬೆಳೆಸೋಣ, ಉಳಿಸೋಣ, ಗೌರವಿಸೋಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕನ್ನಡದಲ್ಲಿಯೇ ಮಾತನಾಡೋಣ. ಆ ಮೂಲಕ, ಕನ್ನಡ ಬೆಳೆಸೋಣ, ಉಳಿಸೋಣ ಮತ್ತು ಗೌರವಿಸೋಣ' ಎಂದು ‘ಕನ್ನಡ’ದಲ್ಲಿಯೇ ಹೇಳುವ ಮೂಲಕ ‘ಕನ್ನಡಕ್ಕಾಗಿ ನಾನು‘ ವಿಶೇಷ ಅಭಿಯಾನಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಭಾನುವಾರ ಚಾಲನೆ ನೀಡಿದರು.

66ನೇ ಕನ್ನಡ ರಾಜ್ಯೋತ್ಸವದ ಹಿನ್ನೆಲೆಯಲ್ಲಿ ರಾಜಭವನದ ಗಾಜಿನ ಮನೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಭಿಯಾನಕ್ಕೆ ಅವರು ಚಾಲನೆ ನೀಡಿದರು.

‘ಕನ್ನಡದಲ್ಲಿ ಮಾತನಾಡಲು ಪ್ರಯತ್ನಿಸುತ್ತೇನೆ. ತಪ್ಪಿದರೆ ಕ್ಷಮಿಸಿ' ಎಂದು ಮಾತು ಆರಂಭಿಸಿದ ಅವರು, ‘ಎಲ್ಲರಿಗೂ ಶುಭ ಸಂಜೆಯ ನಮಸ್ಕಾರಗಳು. ಕನ್ನಡ ಬೆಳೆಸಲು ಎಲ್ಲರೂ ಕೈಜೋಡಿಸೋಣ' ಎಂದೂ ಕರೆ ನೀಡಿದರು.

ಅದಕ್ಕೂ ಮೊದಲು ಅವರು ‘ಮಾತಾಡ್ ಮಾತಾಡ್ ಕನ್ನಡ ಎನ್ನುವ ಘೋಷವಾಕ್ಯದ ಲಾಂಛನ ಬಿಡುಗಡೆ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್, ಕಾರ್ಯದರ್ಶಿ ಮಂಜುಳಾ ಇದ್ದರು.

‘ಮಾತಾಡ್ ಮಾತಾಡ್ ಕನ್ನಡ‘ ಕಿರು ನಾಟಕದ ದೃಶ್ಯ (ಎಡ ಚಿತ್ರ), 'ಕನ್ನಡಕ್ಕಾಗಿ ನಾನು' ವಿಶೇಷ ಅಭಿಯಾನದ ಲಾಂಛನವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಭಾನುವಾರ ಬಿಡುಗಡೆ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್, ಕಾರ್ಯದರ್ಶಿ ಮಂಜುಳಾ ಇದ್ದರು ಪ್ರಜಾವಾಣಿ ಚಿತ್ರಗಳು

ಬಳಿಕ ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು.

31ರಂದು ಸಾಮೂಹಿಕ ಗಾಯನ: ‘ಕನ್ನಡಕ್ಕಾಗಿ ನಾನು’ ಅಭಿಯಾನದ ಅಂಗವಾಗಿ ಇದೇ 31ರಂದು ಬೆಳಿಗ್ಗೆ 11 ಗಂಟೆಗೆ ರಾಜ್ಯದಾದ್ಯಂತ ಕನ್ನಡ ಗೀತೆಗಳನ್ನು ಸಾಮೂಹಿಕವಾಗಿ ಹಾಡುವ ವಿಶೇಷ ಪ್ರಯತ್ನ ಮಾಡಲಾಗಿದೆ’ ಎಂದು ವಿ. ಸುನಿಲ್ ಕುಮಾರ್ ತಿಳಿಸಿದರು.

ಲಾಲ್‌ಬಾಗ್‌ನಲ್ಲಿ ಭಾನುವಾರ ಬೆಳಿಗ್ಗೆ ಕನ್ನಡಕ್ಕಾಗಿ ನಾವು ವಿಶೇಷ ಅಭಿಯಾನಕ್ಕಾಗಿ ರಚಿಸಲಾದ ‘ಮಾತಾಡ್ ಮಾತಾಡ್ ಕನ್ನಡ’ ಎನ್ನುವ ಕಿರು ನಾಟಕಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಈ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಬೇಕು. ಗುಂಪು ಗುಂಪಾಗಿ, ಕಚೇರಿಗಳ ಮುಂಭಾಗ, ಕಾರ್ಖಾನೆಗಳಲ್ಲಿ, ವಸತಿ ಸಮುಚ್ಚಯಗಳಲ್ಲಿ, ಗಡಿನಾಡು, ಹೊರನಾಡುಗಳಲ್ಲಿಯೂ ಕನ್ನಡದ ಗೀತೆಗಳನ್ನು ಹಾಡಬೇಕು’ ಎಂದು ಮನವಿ ಮಾಡಿದರು.

‘ಅಭಿಯಾನದ ಅಂಗವಾಗಿ 31ರವರೆಗೆ ನಾಡಿನಾದ್ಯಂತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಮನೆ ಮನೆಗಳಲ್ಲಿ ಹಾಗೂ ಮನ ಮನಗಳಲ್ಲಿ ಕನ್ನಡ ಮಾತನಾಡುವ ಮೂಲಕ ಕನ್ನಡ ವಾತಾವರಣ ನಿರ್ಮಾಣ ಆಗಬೇಕಿದೆ, ಕನ್ನಡಲ್ಲಿ ಸಹಿ ಮಾಡುವ ರೂಢಿ ಹೆಚ್ಚಾಗಬೇಕು. ಚರವಾಣಿಗಳಲ್ಲಿ (ಮೊಬೈಲ್) ಕನ್ನಡ ಸಂದೇಶಗಳನ್ನು ಕಳಿಸುವ ಪದ್ಧತಿ ಶುರು ಆಗಬೇಕು’ ಎಂದರು.

ಕುವೆಂಪು ಭಾಷಾ ಭಾರತಿಯಿಂದ ಪ್ರಕಟಿಸಿರುವ ‘ಕನ್ನಡೇತರರಿಗೆ ಕನ್ನಡ ಕಲಿಸುವ ಕಿರು ಹೊತ್ತಿಗೆಯನ್ನು ಸಚಿವರು ವಿತರಿಸಿದರು. ಲಾಲ್ ಬಾಗ್ ಮೆಟ್ರೊ ನಿಲ್ದಾಣದಲ್ಲಿ ಕನ್ನಡ ಅಭಿಯಾನದ ಸ್ವಯಂ ಭಾವಚಿತ್ರ ಕೇಂದ್ರದಲ್ಲಿ (ಸೆಲ್ಫಿ) ಸ್ವತಃ ಸಚಿವರೇ ಸ್ವಯಂ ಭಾವಚಿತ್ರ ತೆಗೆದುಕೊಂಡು ಉದ್ಘಾಟಿಸಿದರು. ಬಳಿಕ ಮೆಟ್ರೊ ನಿಲ್ದಾಣದಲ್ಲಿ ‘ಮಾತಾಡ್ ಮಾತಾಡ್’ ಕನ್ನಡ ಘೋಷ ವಾಕ್ಯದ ಭಿತ್ತಿಪತ್ರಗಳನ್ನು ಅಂಟಿಸಿದರು.

ಅಭಿಯಾನದ ಅಂಗವಾಗಿ ರವೀಂದ್ರ ಕಲಾಕ್ಷೇತ್ರದಲ್ಲಿ ಮೈಸೂರಿನ ರಂಗಾಯಣ ಹಮ್ಮಿಕೊಂಡಿರುವ ಎಸ್.ಎಲ್. ಭೈರಪ್ಪ ಅವರ ಕಾದಂಬರಿ ಆಧಾರಿತ ಪರ್ವ ನಾಟಕಕ್ಕೆ ಸಚಿವರು ಚಾಲನೆ ನೀಡಿದರು. ವಿವಿಧ ವಿಡಿಯೊ ಪ್ರದರ್ಶನಗಳ ಎಲ್‌ಇಡಿ ಪರದೆ ಹೊಂದಿರುವ ವಾಹನಕ್ಕೂ ಅವರು ಚಾಲನೆ ನೀಡಿದರು.

ಕಾನ್ಪುರದಲ್ಲಿ ಮೊದಲ ಝೀಕಾ ವೈರಸ್ ಪ್ರಕರಣ ಪತ್ತೆ

ಕಾನ್ಪುರ (ಪಿಟಿಐ): ಉತ್ತರ ಪ್ರದೇಶದ ಕಾನ್ಪುರ ಜಿಲ್ಲೆಯಲ್ಲಿ ಮೊದಲ ಝೀಕಾ ವೈರಸ್ ಪ್ರಕರಣ ವರದಿಯಾಗಿದೆ ಎಂದು ಆರೋಗ್ಯ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಭಾರತೀಯ ವಾಯುಪಡೆಯ (ಐಎಎಫ್) ಅಧಿಕಾರಿಯೊಬ್ಬರಿಗೆ ಶನಿವಾರ ಸೋಂಕು ಇರುವುದು ಪತ್ತೆಯಾಯಿತು. ಇದು ಕಾನ್ಪುರದಲ್ಲಿ ಪತ್ತೆಯಾಗಿರುವ ಮೊದಲನೆ ಪ್ರಕರಣ ಎಂದು ಅವರು ಹೇಳಿದರು.

‘ಅಧಿಕಾರಿಯು ಜ್ವರದಿಂದ ಬಳಲುತ್ತಿದ್ದು, ವಾಯುಪಡೆ ಆಸ್ಪತ್ರೆಗೆ ದಾಖಲಿಸಲಾಯಿತು. ರಕ್ತದ ಮಾದರಿಯನ್ನು ಸಂಗ್ರಹಿಸಿ ಪರೀಕ್ಷೆಗಾಗಿ ಪುಣೆ ಕಳುಹಿಸಲಾಯಿತು. ರೋಗಿಗೆ ಝೀಕಾ ವೈರಸ್ ತಗುಲಿರುವುದು ದೃಢಪಟ್ಟಿದೆ’ ಎಂದು ಮುಖ್ಯ ವೈದ್ಯಾಧಿಕಾರಿ ನೇಪಾಲ್ ಸಿಂಗ್ ತಿಳಿಸಿದ್ದಾರೆ.

ರೋಗಿಯೊಂದಿಗೆ ಸಂಪರ್ಕ ಹೊಂದಿದ ವ್ಯಕ್ತಿಗಳು ಮತ್ತು ರೋಗಲಕ್ಷಣಗಳನ್ನು ಹೊಂದಿದ್ದ 22 ಜನರ ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ.

‘ರಾಜತಾಂತ್ರಿಕವಾಗಿಯೇ ಚೀನಾವನ್ನು ಎದುರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೀನಾದ ಜತೆಗಿನ ಗಡಿ ವಿವಾದಗಳಿಗೆ ರಾಜತಾಂತ್ರಿಕ ಮಾರ್ಗದ ಮೂಲಕವೇ ಪರಿಹಾರ ಕಂಡುಕೊಳ್ಳಲು ಭಾರತವು ಪ್ರಬಲ ಪ್ರಯತ್ನ ನಡೆಸಬೇಕು ಎಂದು ಪಾಕಿಸ್ತಾನದಲ್ಲಿನ ಭಾರತದ ಮಾಜಿ ಹೈಕಮಿಷನರ್ ಜಿ. ಪಾರ್ಥಸಾರಥಿ ಸಲಹೆ ನೀಡಿದರು.

ವಾಯುಪಡೆಯ ಯಲಹಂಕ ವಾಯುನೆಲೆಯಲ್ಲಿ ಭಾನುವಾರ ಮುಕ್ತಾಯವಾದ ‘ಸ್ವರ್ಣಿಮ ವಿಜಯ ವರ್ಷ’ ಸಂಭ್ರಮಾಚರಣೆಯ ಕೊನೆಯ ದಿನ ‘ಪ್ರಾದೇಶಿಕ ಭದ್ರತಾ ಆದ್ಯತೆಗಳು’ ಕುರಿತು ಮಾತನಾಡಿದ ಅವರು, ‘ಚೀನಾ ತನ್ನ ಸುತ್ತಲಿನ ಎಲ್ಲ ರಾಷ್ಟ್ರಗಳ ಜತೆಗೂ ಗಡಿ ವ್ಯಾಜ್ಯ ಹೊಂದಿದೆ. ಆಕ್ರಮಣಕಾರಿ ನಿಲುವನ್ನು ಪ್ರದರ್ಶಿಸುತ್ತಿರುವ ಅದನ್ನು ರಾಜತಾಂತ್ರಿಕವಾಗಿಯೇ ಎದುರಿಸುವುದಕ್ಕೆ ಆದ್ಯತೆ ನೀಡಬೇಕು’ ಎಂದರು.

ಭಾರತದ ಪಾಲಿಗೆ ಪಾಕಿಸ್ತಾನ ಯಾವಾಗಲೂ ಒಂದು ಸವಾಲು. ಆದರೆ, ಚೀನಾ ಒಂದು ವಿಶಿಷ್ಟ ಸವಾಲು. ರಾಜತಾಂತ್ರಿಕವಾಗಿ ಲಭ್ಯವಿರುವ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳದೇ ಇದ್ದರೆ ಚೀನಾದ ಜತೆಗಿನ ಸಮಸ್ಯೆ ಶಾಶ್ವತವಾಗಿ ಉಳಿಯುವ ಅಪಾಯವಿದೆ. ಚೀನಾದ ಆಕ್ರಮಣಕಾರಿ ನಿಲುವು ಸುತ್ತಲಿನ ಎಲ್ಲ ರಾಷ್ಟ್ರಗಳ ಪಾಲಿಗೂ ಆತಂಕಕಾರಿಯಾಗಿಯೇ ಇದೆ ಎಂದು ಹೇಳಿದರು.

‘ಬಾಂಗ್ಲಾದೇಶದ ಜತೆಗಿನ ಭೂ ವಿವಾದದಲ್ಲಿ ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಭಾರತಕ್ಕೆ ಸೋಲಾಯಿತು. ಆ ತೀರ್ಪನ್ನು ನಮ್ಮ ರಾಷ್ಟ್ರ ಒಪ್ಪಿಕೊಂಡಿತು. ಆದರೆ, ಫಿಲಿಪ್ಪೈನ್ಸ್ ಜತೆಗಿನ ಭೂ ವಿವಾದದಲ್ಲಿ ಅಂತರರಾಷ್ಟ್ರೀಯ ನ್ಯಾಯಾಲಯ ನೀಡಿದ ತೀರ್ಪನ್ನು ಚೀನಾ ಗೌರವಿಸಲೇ ಇಲ್ಲ. ಇದು ಆ ರಾಷ್ಟ್ರದ ಅತಿಕ್ರಮಣಕಾರಿ ನಿಲುವಿಗೆ ಉದಾಹರಣೆ’ ಎಂದರು.

ಚೀನಾ ಆರ್ಥಿಕವಾಗಿ ಬಲಿಷ್ಠವಾಗಿರುವ ದೇಶ. ಭಾರತದ ಆರ್ಥಿಕ ಸ್ಥಿತಿ ಆ ರೀತಿ ಇಲ್ಲ. ಆ ದೃಷ್ಟಿಯಿಂದಲೂ ಯೋಚಿಸಬೇಕಾಗಿದೆ. ನೆರೆಯ ರಾಷ್ಟ್ರಗಳ ಜತೆಗೆ ಸ್ನೇಹಯುತ ಸಂಬಂಧ, ಮಾತುಕತೆಯ ಮಾರ್ಗವನ್ನು ಆಯ್ದುಕೊಳ್ಳುವುದು ಉತ್ತಮ ಎಂದು ಹೇಳಿದರು.

ಜಾಗೃತಿ ರ್‍ಯಾಲಿ

ವಿಶ್ವ ಪೋಲಿಯೊ ದಿನದ ಅಂಗವಾಗಿ ರೋಟರಿ–3910ನೇ ಜಿಲ್ಲೆಯ ಸದಸ್ಯರು ಮಹಾತ್ಮ ಗಾಂಧಿ ರಸ್ತೆಯಲ್ಲಿ ‘ಪೋಲಿಯೊ ಅಂತ್ಯಗೊಳಿಸಿ’ ಎಂಬ ಜಾಗೃತಿ ರ್‍ಯಾಲಿಯನ್ನು ಭಾನುವಾರ ನಡೆಸಿದರು

ಪ್ರಜಾವಾಣಿ ಚಿತ್ರ

ಕಟಾವಿಗೆ ಬಂದಿದ್ದ ಈರುಳ್ಳಿ, ಮೆಕ್ಕೆಜೋಳ ಬೆಳೆಗೆ ಹಾನಿ ● ಗೋಡೆ ಕುಸಿತ, ಕೆಲವೆಡೆ ಕೆರೆಗಳ ಏರಿ ಒಡೆಯುವ ಆತಂಕ

ಹಲವೆಡೆ ಮುಂದುವರಿದ ವರುಣನ ಅಬ್ಬರ

ಪ್ರಜಾವಾಣಿ ವಾರ್ತೆ

ಹೊಸದುರ್ಗ (ಚಿತ್ರದುರ್ಗ): ತಾಲ್ಲೂಕಿನಲ್ಲಿ ವರುಣನ ಅರ್ಭಟ ಮುಂದುವರಿದಿದ್ದು, ಶನಿವಾರ ತಡರಾತ್ರಿ ಸುರಿದ ಭಾರಿ ಮಳೆಗೆ ಮತ್ತೋಡು ಹೋಬಳಿ ಗುಡ್ಡದನೇರಲಕೆರೆ ಪಂಚಾಯಿತಿ ವ್ಯಾಪ್ತಿಯ ತಾರೀಕೆರೆ ಗ್ರಾಮ ಜಲಾವೃತವಾಗಿದೆ.

ಈ ಗ್ರಾಮಕ್ಕೆ ಹೊಂದಿಕೊಂಡಂತೆ 500 ಎಕರೆ ವಿಸ್ತೀರ್ಣದ ಕೆರೆ ಇದ್ದು, ಧಾರಾಕಾರವಾಗಿ ಮಳೆ ಸುರಿದಿದ್ದರಿಂದ ಕೆರೆ ಸಂಪರ್ಕಿಸುವ ಜಿ.ಎನ್.ಕೆರೆ, ಸಿದ್ದಾಪುರ, ಬಾಲೇನಹಳ್ಳಿ ಹಳ್ಳಗಳು ತುಂಬಿಹರಿದವು. ಕೆರೆತುಂಬಿದ ನೀರು ಹೆಚ್ಚಾಗಿದ್ದರಿಂದ ಗ್ರಾಮದೊಳಗಿನ ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತಗೊಂಡಿತು.

ಜಮೀನುಗಳು ಜಲಾವೃತಗೊಂಡಿದ್ದು, ಕಟಾವಿಗೆ ಬಂದಿದ್ದ ಈರುಳ್ಳಿ, ಮೆಕ್ಕೆಜೋಳ, ಹತ್ತಿ, ಟೊಮೆಟೊ, ಹೂವು ಹಾಗೂ ತರಕಾರಿಗಳಿಗೆ ಹಾನಿಯಾಗಿದೆ. ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮನೆಯ ಗೋಡೆಗಳು ಕುಸಿದಿವೆ. ಹಳೆಯದಾದ ಈ ಕೆರೆಯ ಏರಿ ಮೂರು ಕಡೆ ಶಿಥಿಲಗೊಂಡಿದ್ದು, ಒಡೆಯುವ ಭೀತಿ ಗ್ರಾಮಸ್ಥರಿಗೆ ಎದುರಾಗಿದೆ. ಚಿಕ್ಕಜಾಜೂರು, ಭರಮಸಾಗರ, ನಾಯಕನಹಟ್ಟಿಯಲ್ಲಿ ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ನಗರ ಸೇರಿ ತಾಲ್ಲೂಕಿನ ಕೆಲ ಭಾಗಗಳಲ್ಲಿ ತುಂತುರು ಮಳೆಯಾಗಿದೆ. ದಾವಣಗೆರೆ ಜಿಲ್ಲೆಯ ವಿವಿಧೆಡೆ ಮಳೆ ಮುಂದುವರಿದಿದ್ದು, ಚನ್ನಗಿರಿ ತಾಲ್ಲೂಕಿನ ಚಿರಡೋಣಿ ಗ್ರಾಮದಲ್ಲಿ ಭಾನುವಾರ ರಾತ್ರಿ ಸಿಡಿಲು ಬಡಿದು ಹಸುವೊಂದು ಮೃತಪಟ್ಟಿದೆ.

ಧಾರಾಕಾರ ಮಳೆ: ಹಾಸನ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಭಾನುವಾರ ಧಾರಾಕಾರ ಮಳೆಯಾಗಿದೆ. ಮಧ್ಯಾಹ್ನ 3 ಗಂಟೆಗೆ ಆರಂಭವಾದ ಮಳೆ ಒಂದು ತಾಸು ಸುರಿಯಿತು. ಇದರಿಂದ ನಗರದ ಬಹುತೇಕ ರಸ್ತೆಗಳಲ್ಲಿ ನೀರು ತುಂಬಿ ಹರಿಯಿತು.

ಹಳೇಬೀಡು ದ್ವಾರಸಮುದ್ರ ಕೆರೆಯಲ್ಲಿ ನೀರು ಸಂಗ್ರಹಣೆ ಒಂದು ಅಡಿ ಏರಿಕೆಯಾಗಿದೆ. ಒಳಹರಿವು ಕೂಡ ಹೆಚ್ಚಿದೆ. ಮೈಸೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಶನಿವಾರ ರಾತ್ರಿ ಹಾಗೂ ಭಾನುವಾರ ಸಂಜೆ ಜೋರು ಮಳೆಯಾಯಿತು.

ಮುಂದುವರೆದ ಮಳೆ (ಚಿಕ್ಕಮಗಳೂರು ವರದಿ): ಕಾಫಿನಾಡಿನಲ್ಲಿ ಭಾನುವಾರವೂ ಮಳೆ ಮುಂದುವರೆದಿದೆ. ನಗರದಲ್ಲಿ ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣ ಇತ್ತು. ಬೆಳಿಗ್ಗೆ 11.30ರಿಂದ ಸುಮಾರು ಒಂದು ಗಂಟೆ ಕಾಲ ರಭಸವಾದ ಮಳೆ ಸುರಿದಿದೆ. ತಾಲ್ಲೂಕಿನ ಆಲ್ದೂರು, ವಸ್ತಾರೆ, ಅತ್ತಿಗುಂಡಿ, ಗಿರಿಶ್ರೇಣಿ ಭಾಗಗಳಲ್ಲಿ ಮಳೆಯಾಗಿದೆ. ಶೃಂಗೇರಿ ತಾಲ್ಲೂಕಿನಲ್ಲಿಯೂ ಮಳೆ ರಭಸವಾಗಿ ಸುರಿದಿದೆ.

ಕೊಪ್ಪಳ, ರಾಯಚೂರಿನಲ್ಲಿ ಮಳೆ: ಕಲಬುರಗಿ: ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯಲ್ಲಿ ಭಾನುವಾರ ಮಳೆಯಾಯಿತು.

ಕೊಪ್ಪಳ ತಾಲ್ಲೂಕಿನ ಗುಳದಳ್ಳಿ, ಇರಕಲ್ಲಗಡಾ ಭಾಗದಲ್ಲಿ ಭಾನುವಾರ ಸಂಜೆ ಉತ್ತಮ ಮಳೆಯಾಯಿತು. ಗುಳದಳ್ಳಿ ಗ್ರಾಮದಲ್ಲಿ ತೋಟದಲ್ಲಿ ಮರಗಳು ಮತ್ತು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ.

ಶನಿವಾರ ಸಂಜೆ ಸುರಿದ ಮಳೆಗೆ ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಬಸಾಪೂರ, ಹಾಲಾಪೂರ, ಜಂಗಮರಹಳ್ಳಿ ಸೇರಿ ವಿವಿಧೆಡೆ ಭತ್ತದ ಬೆಳೆ ನಾಶವಾಗಿದೆ.

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಹಿರೇಮನ್ನಾಪುರ ಗ್ರಾಮದಲ್ಲಿ ಶನಿವಾರ ಸುರಿದ ಮಳೆಗೆ ಹಳ್ಳಕ್ಕೆ ಪ್ರವಾಹ ಬಂದು, ಗ್ರಾಮಸ್ಥ ಬುಡನ್‌ಸಾಬ್ ಅಗಸಿಮುಂದಿನ (65) ಎಂಬುವವರು ನೀರಿನಲ್ಲಿ ಕೊಚ್ಚಿ ಹೋಗಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೊಸದುರ್ಗ ತಾಲ್ಲೂಕಿನ ಗುಡ್ಡದನೇರಲಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಾರೀಕೆರೆ ಗ್ರಾಮ ಭಾರಿ ಮಳೆಯಿಂದ ಜಲಾವೃತಗೊಂಡಿದೆ

ಶಿರಾ ತಾಲ್ಲೂಕಿನ ಹಾವಿನಾಳು ಗ್ರಾಮದ ಹಳ್ಳದ ಸೇತುವೆ ಕುಸಿದಿದ್ದು, ಅದರಲ್ಲಿ ಆಟೊ ಸಿಲುಕಿದೆ

ತುಮಕೂರು: ಉತ್ತಮ ಮಳೆ

ತುಮಕೂರು: ಜಿಲ್ಲೆಯ ಹಲವು ಭಾಗಗಳಲ್ಲಿ ಶನಿವಾರ ರಾತ್ರಿ ಉತ್ತಮ ಮಳೆಯಾಗಿದೆ.

ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಕೆರೆಗೆ ನೀರು ಹರಿದು ಬರುವ ಹಳ್ಳದ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ಹೆಚ್ಚಿನ ಮಳೆಯಾದ ಕಾರಣ 12 ದಿನಗಳಲ್ಲಿ ಶಿರಾ ದೊಡ್ಡ ಕೆರೆ ಹಾಗೂ ಕಳ್ಳಂಬೆಳ್ಳ ಕೆರೆ ಎರಡನೇ ಬಾರಿ ಕೋಡಿ ಬಿದ್ದಿವೆ. ಪಟ್ಟಣದ ಕೆಲವು ಮನೆಗಳಿಗೆ ಕೋಡಿ ನೀರು ನುಗ್ಗಿದೆ.

ತಾಲ್ಲೂಕಿನ ಯಲದಬಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾವಿನಾಳು ಗ್ರಾಮದ ಬಳಿ ಹಳ್ಳಕ್ಕೆ ಕಟ್ಟದ ಸೇತುವೆ ಶನಿವಾರ ರಾತ್ರಿ ಕುಸಿದಿದೆ. ಮುಂಜಾನೆ ರಸ್ತೆಯಲ್ಲಿ ಬಂದ ಹಾಲು ಸಾಗಿಸುತ್ತಿದ್ದ ಆಟೊ ಹಳ್ಳಕ್ಕೆ ಬಿದ್ದಿದೆ.

ಮಧುಗಿರಿ ತಾಲ್ಲೂಕಿನಲ್ಲಿ ಕಾಲುವೆ, ಹಳ್ಳ, ಸೇತುವೆ, ಚೆಕ್ ಡ್ಯಾಂ ಹಾಗೂ ಕೆರೆಗಳು ತುಂಬಿ ಹರಿದಿವೆ.

ತಾಲ್ಲೂಕಿನ ಮಿಡಿಗೇಶಿ ಹೋಬಳಿಯ ಲಕ್ಕೀಹಟ್ಟಿ ಗ್ರಾಮದ ಮುಖ್ಯ ರಸ್ತೆಯ ಸೇತುವೆ ಕುಸಿದಿದೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಶನಿವಾರ ರಾತ್ರಿಯಿಂದ ಭಾನುವಾರ ಸಂಜೆಯವರೆಗೆ ಉತ್ತಮ ಮಳೆಯಾಗಿದ್ದು, ಕೆರೆಗಳು ಕೋಡಿ ಹರಿಯುತ್ತಿವೆ.

ಗುಬ್ಬಿ ಪಟ್ಟಣದ ಪೊಲೀಸ್ ಠಾಣೆ ಹಿಂಭಾಗದಲ್ಲಿರುವ ಹಂದಿ ಜೋಗರ ಕಾಲೋನಿಗೆ ಶನಿವಾರ ರಾತ್ರಿ ನೀರು ನುಗ್ಗಿ, ಸಂಪೂರ್ಣ ಜಲಾವೃತಗೊಂಡ ಪರಿಣಾಮ ಅಲ್ಲಿನ ನಿವಾಸಿಗಳು ಇಡೀ ರಾತ್ರಿ ಮಳೆಯಲ್ಲಿಯೇ ಕಾಲಕಳೆದಿದ್ದಾರೆ. ತಾಲ್ಲೂಕಿನಾದ್ಯಂತ 8 ಮನೆಗಳ ಗೋಡೆ ಕುಸಿದಿವೆ. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ತಿಪಟೂರು ತಾಲ್ಲೂಕಿನ ಬೆನ್ನಾಯಕನಹಳ್ಳಿ ಕೆರೆ 15 ವರ್ಷಗಳ ನಂತರ ತುಂಬಿ, ಕೋಡಿ ಹರಿಯುತ್ತಿದೆ.

ತಿರುಪತಿ: ಲಿಂಗಸುಗೂರು ನಿವಾಸಿ ಸಾವು

ಸಂಧ್ಯಾ

ರಾಯಚೂರು: ಆಂಧ್ರಪ್ರದೇಶದ ತಿರುಪತಿಯಲ್ಲಿ ಶುಕ್ರವಾರ ತಡರಾತ್ರಿ ಸುರಿದ ಭಾರಿ ಮಳೆಯ ನೀರಿನಲ್ಲಿ ಕ್ರೂಸರ್ ವಾಹನ ಮುಳುಗಿ ಜಿಲ್ಲೆಯ ಲಿಂಗಸುಗೂರು ನಿವಾಸಿ ಸಂಧ್ಯಾ (30) ಮೃತಪಟ್ಟಿದ್ದಾರೆ.

'ಕುಟುಂಬ ಸದಸ್ಯರೊಂದಿಗೆ ಸಂಧ್ಯಾ ಅವರು ಕ್ರೂಸರ್ ವಾಹನದಲ್ಲಿ ತಿರುಪತಿಗೆ ತೆರಳಿದ್ದರು. ಅಲ್ಲಿ ಬಾಲಾಜಿ ಕಾಲೋನಿಯ ರೈಲ್ವೆ ಕೆಳ ಸೇತುವೆ ಬಳಿ ವಾಹನ ಇಳಿಜಾರಿನಲ್ಲಿ ಸಿಲುಕಿದೆ. ತಕ್ಷಣವೇ ಚಾಲಕ ಹೊರಗೆ ಜಿಗಿದು ಸಂಧ್ಯಾ ಅವರ ಅತ್ತೆಯ ಸೀರೆ ಸಹಾಯದಿಂದ ಕುಟುಂಬ ಸದಸ್ಯರನ್ನು ರಕ್ಷಿಸಿದ್ದಾರೆ. ವಾಹನದಲ್ಲಿ ಏಳು ಜನರಿದ್ದರು. ವಾಹನದಲ್ಲಿದ್ದವರನ್ನು ರಕ್ಷಿಸುವ ಸಂದರ್ಭದಲ್ಲಿ ಸಂಧ್ಯಾ ಅವರ ಎಚ್ಚರ ತಪ್ಪಿದ್ದಾರೆ. ಅಷ್ಟರಲ್ಲಿ ವಾಹನದಲ್ಲಿ ಭಾರಿ ಪ್ರಮಾಣದ ನೀರು ಸಂಗ್ರಹವಾಗಿತ್ತು. ಅದರಿಂದ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮುದಗಲ್ ಮೂಲದ ಸಂಧ್ಯಾ ಅವರು ಕಳೆದ ವರ್ಷ ಲಿಂಗಸುಗೂರಿನ ಹರೀಶ್ ಅವರನ್ನು ಮದುವೆಯಾಗಿದ್ದರು. ಹರೀಶ್ ದುಬೈನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದಾರೆ. ವಿವಾಹಕ್ಕೆ ಸ್ವಗ್ರಾಮಕ್ಕೆ ಬಂದು, ಕಾರ್ಯನಿಮಿತ್ತ ಇಲ್ಲೇ ಉಳಿದಿದ್ದರು. ಲಿಂಗಸುಗೂರಿನಲ್ಲಿ ಭಾನುವಾರ ಅಂತ್ಯಕ್ರಿಯೆ ನಡೆಯಿತು.

ಸುದ್ದಿ 2 ನಿಮಿಷ

ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ

ಕಲಬುರಗಿ: ಜಿಲ್ಲೆಯ ಆಳಂದ ತಾಲ್ಲೂಕಿನ ಮಾಡಿಯಾಳ ಹಾಗೂ ಶಹಾಬಾದ್ ತಾಲ್ಲೂಕಿನ ಭಂಕೂರು ಗ್ರಾಮದಲ್ಲಿ ಭಾನುವಾರ ನಡೆದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ನೀರಿಗೆ ಬಿದ್ದು ಇಬ್ಬರು ಮಕ್ಕಳು ಸೇರಿದಂತೆ ನಾಲ್ವರು ಸಾವಿಗೀಡಾಗಿದ್ದಾರೆ.

ಭಂಕೂರು ಘಟನೆಯಲ್ಲಿ ಕಾಗಿಣಾ ನದಿಯಲ್ಲಿ ನೀರುಪಾಲಾಗಿರುವ 9 ತಿಂಗಳ ಹೆಣ್ಣುಮಗುವಿಗಾಗಿ ಶೋಧ ಕಾರ್ಯ ಮುಂದುವರಿದಿದೆ. ಈ ಮಗುವಿನ ತಾಯಿಯ ಶವ ಪತ್ತೆಯಾಗಿದೆ.

ಮಾಡಿಯಾಳ ಗ್ರಾಮದ 'ಲಕ್ಷ್ಮಿ ಹಣಮಂತ ಏಳಿ (22) ಅವರು ತಮ್ಮ ಮಕ್ಕಳಾದ ಸ್ವಾತಿ (3), ಗೌರಮ್ಮ (8 ತಿಂಗಳು) ಅವರನ್ನು ಬಾವಿಗೆ ತಳ್ಳಿ ತಾವೂ ನೀರಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಬಾವಿಯ ದಡದಲ್ಲಿದ್ದ ಹಿರಿಯ ಪುತ್ರಿ ಐಶ್ವರ್ಯಾಳನ್ನು (5) ಸ್ಥಳೀಯರು ರಕ್ಷಿಸಿದ್ದಾರೆ. ಲಕ್ಷ್ಮಿ ಅವರಿಗೆ ಮೂವರೂ ಹೆಣ್ಣುಮಕ್ಕಳು ಜನಿಸಿದ್ದಕ್ಕೆ ಪತಿಯ ಕುಟುಂಬದವರು ಕಿರುಕುಳ ನೀಡುತ್ತಿದ್ದರು. ಇದರಿಂದ ಲಕ್ಷ್ಮಿ ಮಾನಸಿಕವಾಗಿ ಆಘಾತಗೊಂಡಿದ್ದರು. ಆಸ್ಪತ್ರೆಗೆ ಹೋಗಿ ಮಕ್ಕಳಿಗೆ ಚಿಕಿತ್ಸೆ ಕೊಡಿಸಿಕೊಂಡು ಬರುವುದಾಗಿ ಹೇಳಿ ಮನೆಯಿಂದ ಹೊರಬಂದಿದ್ದ ಅವರು ಗ್ರಾಮದ ಹೊರವಲಯದ ಬಾವಿಗೆ ಹಾರಿ ಪ್ರಾಣ ಕಳೆದುಕೊಂಡಿದ್ದಾರೆ.

ಶಿಕ್ಷಕಿ ಆತ್ಮಹತ್ಯೆ: ಶಹಾಬಾದ್ ತಾಲ್ಲೂಕಿನ ಭಂಕೂರ ಗ್ರಾಮದ ಶಿಕ್ಷಕಿ ಶಾಂತಲಾ ಮೈಲಾರ ತಮ್ಮ 9 ತಿಂಗಳ ಹೆಣ್ಣು ಮಗುವಿನೊಂದಿಗೆ ಕಾಗಿಣಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಉಚಿತ ಕಾನೂನು ನೆರವಿನ ಬಗ್ಗೆ ವಿಶ್ವಾಸ ಮೂಡಿಸಲು ಸಲಹೆ

ಕಲಬುರಗಿ: 'ದೇಶದ 100 ಕ್ರಿಮಿನಲ್ ಪ್ರಕರಣಗಳ ಪೈಕಿ ಒಂದು ಪ್ರಕರಣ ಮಾತ್ರ ಕಾನೂನು ಸೇವಾ ಪ್ರಾಧಿಕಾರದ ನೆರವು ಬಯಸುತ್ತದೆ. ಉಳಿದ 99 ಪ್ರಕರಣಗಳಲ್ಲಿ ಸಿಲುಕಿದವರಿಗೆ ಇಂತಹ ವ್ಯವಸ್ಥೆ ಇರುವ ಬಗ್ಗೆ ಮಾಹಿತಿಯೇ ಇರುವುದಿಲ್ಲ' ಎಂದು ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ (ನಾಲ್ಸಾ) ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಉದಯ್ ಯು. ಲಲಿತ್ ಬೇಸರ ವ್ಯಕ್ತಪಡಿಸಿದರು.

ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ, ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರ ಹಾಗೂ ಕಲಬುರಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದಲ್ಲಿ ಭಾನುವಾರ ನಡೆದ 'ಸುಸ್ಥಿರ ಅಭಿವೃದ್ಧಿಯ ಗುರಿ ಸಾಧಿಸುವಲ್ಲಿ ಹಕ್ಕುಗಳು ಮತ್ತು ಅಧಿಕಾರ ನೀಡುವಿಕೆ ವಾಸ್ತವೀಕರಣ-2030' ಕುರಿತ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ಧರ್ಮಸ್ಥಳದಲ್ಲಿ ಭಾನುವಾರ ತಮ್ಮ ಪಟ್ಟಾಭಿಷೇಕದ 54ನೇ ವರ್ಷದ ವರ್ಧಂತಿ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿದರು. ಡಿ. ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಸರ್ವಮಂಗಳ ಸೋಮಶೇಖರ್, ನಿವೃತ್ತ ಜಿಲ್ಲಾಧಿಕಾರಿ ತುಮಕೂರಿನ ಸಿ. ಸೋಮಶೇಖರ್, ಹೇಮಾವತಿ ವಿ. ಹೆಗ್ಗಡೆ, ಡಿ. ಸುರೇಂದ್ರ ಕುಮಾರ್, ಎಸ್‌ಡಿ.ಎಂ. ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷ ಪ್ರೊ.ಎಸ್ ಪ್ರಭಾಕರ್ ಇದ್ದರು

'ಧಾರವಾಡದಲ್ಲಿ ಕ್ಯಾನ್ಸರ್ ಚಿಕಿತ್ಸಾ ಘಟಕ'

ಉಜಿರೆ:ಧರ್ಮಸ್ಥಳದ 21ನೇ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರ ಪಟ್ಟಾಭಿಷೇಕದ 54ನೇ ವರ್ಷದ ವರ್ಧಂತಿ ಆಚರಣೆ ಭಾನುವಾರ ನಡೆಯಿತು.

ಮಂಜುನಾಥ ಸ್ವಾಮಿ ಮತ್ತು ಭಗವಾನ್ ಚಂದ್ರನಾಥ ಸ್ವಾಮಿ ಬಸದಿಗೆ ಭೇಟಿ ನೀಡಿದ ಹೆಗ್ಗಡೆ ಅವರು ವಿಶೇಷ ಪೂಜೆ ಸಲ್ಲಿಸಿದರು. ವಿವಿಧ ಮಠಗಳ ಸ್ವಾಮೀಜಿಗಳು, ಶಾಸಕರು, ಸಚಿವರು ಹೆಗ್ಗಡೆ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಅಭಿನಂದಿಸಿದರು.

ಸಂಜೆ ಧರ್ಮಸ್ಥಳದಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಹೆಗ್ಗಡೆ ಅವರು ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ವಿವಿಧ ಹೊಸ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

'ಎರಡು ವರ್ಷದೊಳಗೆ ಧಾರವಾಡದ ಎಸ್‌ಡಿಎಂ ವೈದ್ಯಕೀಯ ಕಾಲೇಜಿನಲ್ಲಿ ಕ್ಯಾನ್ಸರ್ ಚಿಕಿತ್ಸಾ ಘಟಕ ಆರಂಭಿಸಲಾಗುವುದು. ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ 2 ಹಾಗೂ ಉಜಿರೆಯಲ್ಲಿರುವ ಎಸ್‌ಡಿಎಂ ಆಸ್ಪತ್ರೆಯಲ್ಲಿ 11 ಡಯಾಲಿಸಿಸ್ ಘಟಕಗಳನ್ನು ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು.

'ಮೂರು ತಿಂಗಳೊಳಗೆ ಬೆಂಗಳೂರಿನಲ್ಲಿ 300 ಹಾಸಿಗೆ ಸಾಮರ್ಥ್ಯದ ಪ್ರಕೃತಿ ಚಿಕಿತ್ಸಾ ಕೇಂದ್ರ ಪ್ರಾರಂಭಗೊಳ್ಳಲಿದೆ. ₹6 ಕೋಟಿ ವೆಚ್ಚದಲ್ಲಿ ನಾಲ್ಕು ಆಸ್ಪತ್ರೆಗಳಿಗೆ ಸಿ.ಟಿ. ಸ್ಕ್ಯಾನ್ ಯಂತ್ರಗಳನ್ನು ಕೊಡುಗೆಯಾಗಿ ನೀಡಲಾಗುವುದು' ಎಂದರು.

8 ಜಿಲ್ಲೆಗಳಲ್ಲಿ ಯೆಲ್ಲೊ ಅಲರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡಿನಲ್ಲಿ ಅ.25 ಮತ್ತು 26ರಂದು ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ ಎಂಟು ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ತುಮಕೂರು, ಶಿವಮೊಗ್ಗ, ಮೈಸೂರು, ಮಂಡ್ಯ, ಕೊಡಗು, ಹಾಸನ, ಚಿಕ್ಕಮಗಳೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಮಳೆಯಾಗುವ ಸಾಧ್ಯತೆ ಇರುವುದರಿಂದ ಎರಡೂ ದಿನ ಯೆಲ್ಲೊ ಅಲರ್ಟ್ ನೀಡಲಾಗಿದೆ.

ಮುಂದಿನ 48 ಗಂಟೆಗಳಲ್ಲಿ ಹಿಂಗಾರು ಪ್ರವೇಶಿಸುವ ಲಕ್ಷಣಗಳು ಕಂಡುಬಂದಿವೆ. ತಮಿಳುನಾಡಿನ ಕರಾವಳಿ ಭಾಗದಲ್ಲಿ ಮೇಲ್ಮೈ ಸುಳಿಗಾಳಿ ಇರುವುದರಿಂದ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮಳೆಯಾಗಲಿದೆ. ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇದೇ 26 ರಿಂದ ಮಳೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹೇಳಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	121.90	13,204	3,876
ಹಾರಂಗಿ	2,859	2,858.32	1,076	1,200
ಕಬಿನಿ	2,284	2,283.28	8,400	5,000
ಹೇಮಾವತಿ	2,922	2,910.66	4,797	4,031
ಲಿಂಗನಮಕ್ಕಿ	1,819	1,815.15	3,495	-
ಸೂಪಾ (ಮೀ)	564	556.32	1,518	053
ಮಾಣಿ	594.36	587.06	827	-
ತುಂಗಭದ್ರಾ	1,633	1,632.92	20,471	10,942
ಮಲಪ್ರಭಾ	2,079.50	2,079.10	-	969
ಘಟಪ್ರಭಾ	2,175	2,174.75	201	2,618
ಭದ್ರಾ	186	186	9,113	9,113
ಆಲಮಟ್ಟಿ (ಮೀ)	519.60	519.58	-	2,025
ನಾರಾಯಣಪುರ (ಮೀ)	491.69	492.25	660	10,675

* ನೆಲಮಟ್ಟದಿಂದ

ಸಿಡಿಲಿಗೆ ತಂದೆ, ಮಗ ಸೇರಿ ಮೂವರ ಸಾವು

ಹುಬ್ಬಳ್ಳಿ: ಗದಗ, ಹಾವೇರಿ, ಸಿಂದಗಿ ಸೇರಿದಂತೆ ಕೆಲವೆಡೆ ಭಾನುವಾರ ಗುಡುಗು ಸಹಿತ ಮಳೆಯಾಗಿದೆ. ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ಸಿಡಿಲಿಗೆ ತಂದೆ, ಮಗ ಸೇರಿದಂತೆ ಮೂವರು ಕುರಿಗಾಹಿಗಳು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ವರಲಹಳ್ಳಿ ಗ್ರಾಮದ ಹೊರ ವಲಯದ ಅರಣ್ಯ ಪ್ರದೇಶದಲ್ಲಿ ಈ ಘಟನೆ ನಡೆದಿದ್ದು, ಸೊನ್ನದ ಮಲ್ಲೇಶ್ (33) ಅವರ ಮಗ ಸೊನ್ನದ ಮೈಲಾರಿ(10) ಮತ್ತು ಉಪ್ಪಾರ ಹನುಮಂತಪ್ಪ(38) ಮೃತರು.

ಮರಳಿ ಶಾಲೆಗಳತ್ತ ಚಿಣ್ಣರು

ಒಂದನೇ ಪುಟದಿಂದ

50 ವರ್ಷ ದಾಟಿದ ಶಿಕ್ಷಕರು ಹೆಚ್ಚುವರಿಯಾಗಿ ಫೇಸ್ ಶೀಲ್ಡ್ (ಮುಖ ಕವಚ) ಕಡ್ಡಾಯವಾಗಿ ಧರಿಸಬೇಕು ಎನ್ನುವುದೂ ಸೇರಿದಂತೆ ಹಲವು ಷರತ್ತುಗಳನ್ನು ಪಾಲಿಸಿ ತರಗತಿಗಳನ್ನು ಆರಂಭಿಸುವಂತೆ ಶಿಕ್ಷಣ ಇಲಾಖೆ ಮಾರ್ಗಸೂಚಿಯನ್ನು ಹೊರಡಿಸಿದೆ.

ಕೋವಿಡ್ ಪ್ರಮಾಣ ತಗ್ಗಿದರೂ ಮೈಮರೆಯುವಂತಿಲ್ಲ. ವಿದ್ಯಾರ್ಥಿಗಳು ಪರಸ್ಪರ ಒಂದು ಮೀಟರ್ ಅಂತರ ಪಾಲಿಸುವಂತೆ ಎಚ್ಚರ ವಹಿಸಬೇಕು. ಶಾಲೆಯ ಪ್ರವೇಶದ್ವಾರದಲ್ಲಿ ಕೋವಿಡ್ ಲಕ್ಷಣ ಕುರಿತು ತಪಾಸಣೆ ಮಾಡಬೇಕು. ಅಗತ್ಯ ಎಲ್ಲ ಮುನ್ನೆಚ್ಚರಿಕೆ ಕ್ರಮಗಳು ಮತ್ತು ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಿ ತರಗತಿಗಳನ್ನು ನಡೆಸಬೇಕು. ಶನಿವಾರ ಮತ್ತು ಭಾನುವಾರ ಶಾಲಾ ಕೊಠಡಿಗಳನ್ನು ಸ್ಯಾನಿಟೈಸ್‌ನಿಂದ ಸ್ವಚ್ಛಗೊಳಿಸಬೇಕು ಎಂದೂ ಸೂಚಿಸಲಾಗಿದೆ.

ಈಗಾಗಲೇ ಸ್ನಾತಕೋತ್ತರ, ಪದವಿ, ಪದವಿಪೂರ್ವ ಹಾಗೂ 6 ರಿಂದ 8ನೇ ತರಗತಿವರೆಗಿನ ತರಗತಿಗಳು ಆರಂಭವಾಗಿದ್ದು, ಯಶಸ್ವಿಯಾಗಿ ನಡೆಯುತ್ತಿವೆ. ಶಿಕ್ಷಣ ತಜ್ಞರು, ಆರೋಗ್ಯ ತಜ್ಞರ ಅಭಿಪ್ರಾಯ ಪಡೆದ ಬಳಿಕ ಪ್ರಾಥಮಿಕ ಹಂತದಿಂದಲೇ ಶಾಲೆಗಳನ್ನು 25ರಿಂದ ಆರಂಭಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಮಾರ್ಗಸೂಚಿಯಲ್ಲಿ ಏನಿದೆ?

- ಶೇ 50ರಷ್ಟು ಹಾಜರಾತಿಯಲ್ಲಿ ತರಗತಿ
- ಮಕ್ಕಳು ಶಾಲೆಗೆ ಹಾಜರಾಗಲು ಪೋಷಕರ ಒಪ್ಪಿಗೆ ಪತ್ರ ಕಡ್ಡಾಯ
- ಅನುಮತಿ ಪತ್ರದಲ್ಲಿ ವಿದ್ಯಾರ್ಥಿಯ ಕೋವಿಡ್ ಸೋಂಕು ಇಲ್ಲದೆ ಇರುವುದನ್ನು ದೃಢೀಕರಿಸಬೇಕು
- ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕುಡಿಯಲು ಶುದ್ಧ ಬಿಸಿ ನೀರಿನ ವ್ಯವಸ್ಥೆ ಮಾಡಬೇಕು.
- ವಿದ್ಯಾರ್ಥಿಗಳಿಗೆ ಹಾಜರಾತಿ ಕಡ್ಡಾಯವಲ್ಲ
- ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ತರಗತಿಗೂ ಅವಕಾಶ
- 15ರಿಂದ 20 ಮಕ್ಕಳ ತಂಡ ರಚಿಸಿ ಮಕ್ಕಳಿಗೆ ಪಾಠ
- ಕೋವಿಡ್ ಲಸಿಕೆ ಎರಡು ಡೋಸ್ ಪಡೆದ ಶಿಕ್ಷಕರಿಂದ ಮಾತ್ರ ಬೋಧನೆ
- 50 ವರ್ಷ ದಾಟಿದ ಶಿಕ್ಷಕರು ಫೇಸ್ ಶೀಲ್ಡ್ ಧರಿಸುವುದು ಕಡ್ಡಾಯ

ಸಾಹಿತಿ ರಂಗಾರೆಡ್ಡಿ ಕೋಡಿರಾಂಪುರ ನಿಧನ

ಚಿಕ್ಕಬಳ್ಳಾಪುರ: ಸಾಹಿತಿ ರಂಗಾರೆಡ್ಡಿ ಕೋಡಿರಾಂಪುರ (71) ಬೆಂಗಳೂರಿನ ತಮ್ಮ ನಿವಾಸದಲ್ಲಿ ಭಾನುವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಕೆಲವು ದಿನಗಳಿಂದ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು.

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಕೋಡಿರಾಂಪುರದ ರಂಗಾರೆಡ್ಡಿ, ಗೌರಿಬಿದನೂರಿನ ನ್ಯಾಷನಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ನಿವೃತ್ತಿ ನಂತರ ಬೆಂಗಳೂರಿನಲ್ಲಿ ನೆಲೆಸಿದ್ದರು. ಬಂಡಾಯ ಸಾಹಿತ್ಯ ಸಂಘಟನೆ ಮತ್ತು ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಅವರು ಸಕ್ರಿಯವಾಗಿದ್ದರು.

'ಜನಪದ ಸಂಸ್ಕೃತಿ', 'ಸಾಲು ಹೊಂಗೆಯ ತಂಪು', 'ಬಂಡಾಯ ಜನಪದ', 'ನನ್ನೂರ ಹಾಡು' ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದರು.

ಚಿಕ್ಕಬಳ್ಳಾಪುರದಲ್ಲಿ 2015ರಲ್ಲಿ ನಡೆದ ಜಿಲ್ಲಾ ಐದನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಯಕ್ಷಗಾನ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಜಾನಪದ ಅಕಾಡೆಮಿ ಸದಸ್ಯರಾಗಿಯೂ ಕೆಲಸ ಮಾಡಿದ್ದರು. ಸ್ವಗ್ರಾಮ ಕೋಡಿರಾಂಪುರದಲ್ಲಿ ಅಂತ್ಯಕ್ರಿಯೆ ನಡೆಯಿತು.

ಒಳನೋಟ

'ವಿ.ವಿಗೆ ಬೋಧಕರ ಬರ'

ಬೆಂಗಳೂರು: 'ವಿ.ವಿಗೆ ಬೋಧಕರ ಬರ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಅ.24) ಪ್ರಕಟವಾದ 'ಒಳನೋಟ' ವರದಿಗೆ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಪ್ರತಿಭಾವಂತರಿಗೆ ಆದ್ಯತೆ ನೀಡಿ

ಒಳನೋಟದ ವರದಿ ಅತ್ಯಂತ ಪ್ರಸ್ತುತವಾಗಿದೆ. ಹಿಂದಿನ ಹಲವು ವರ್ಷಗಳಲ್ಲಿ ವಿಶ್ವವಿದ್ಯಾಲಯಗಳು ಬೋಧಕ ವರ್ಗದ ನೇಮಕಾತಿಗೆ ಮುಂದಾಗಿಲ್ಲ. ಕೋವಿಡ್ ಕಾರಣದಿಂದ ನೇಮಕಾತಿ ನಿಂತಿತ್ತು. ಪಿಎಚ್‌.ಡಿ, ಎನ್‌ಇಟಿ ಅರ್ಹತೆ ಪಡೆದ ಅಭ್ಯರ್ಥಿಗಳು ನೇಮಕಾತಿಗಾಗಿ ಬಕಪಕ್ಷಿಗಳಂತೆ ಕಾಯುತ್ತಿದ್ದಾರೆ. ಜೀವನದ ಆಧಾರಕ್ಕಾಗಿ ಖಾಸಗಿ ಸಂಸ್ಥೆಗಳ ಅಲ್ಪ ಸಂಬಳಕ್ಕೆ ತೃಪ್ತಿಪಡಬೇಕಿದೆ. ವಯೋಮಿತಿ ಮೀರುವ ಆತಂಕದಲ್ಲಿರುವ ಅಭ್ಯರ್ಥಿಗಳು ಹಾಗೂ ಬೋಧಕರ ಕೊರತೆ ಎದುರಿಸುತ್ತಿರುವ ವಿದ್ಯಾರ್ಥಿಗಳ ಸಂಕಷ್ಟ ನೀಗುವಂತಾಗಲಿ. ಅರ್ಹ ಮತ್ತು ಪ್ರತಿಭಾವಂತರ ಆಯ್ಕೆ ನಡೆಯಲಿ.

ಆರ್.ಅರ್ಚನಾ, ಬೆಂಗಳೂರು

ಪಾರದರ್ಶಕ ನೇಮಕಾತಿ ನಡೆಯಲಿ

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಬೋಧಕರನ್ನು ಶೀಘ್ರವಾಗಿ ನೇಮಕ ಮಾಡುವ ಕಾರ್ಯ ಆರಂಭವಾಗಲಿ. ದೇಶದಲ್ಲೇ ಮೊದಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗಿರುವ ಹೆಗ್ಗಳಿಕೆಗೆ ಪಾತ್ರವಾಗಿರುವುದು ಹೆಮ್ಮೆಯ ಸಂಗತಿ. ಶೈಕ್ಷಣಿಕ ಹಾಗೂ ಸಂಶೋಧನೆಯ ಗುಣಮಟ್ಟದೊಂದಿಗೆ ಉನ್ನತ ಶಿಕ್ಷಣದ ಮೌಲ್ಯ ಹೆಚ್ಚುವುದು. ಅರ್ಹ ಬೋಧಕರ ನೇಮಕಾತಿಯನ್ನು ಪಾರದರ್ಶಕವಾಗಿ ನಡೆಸುವುದಾಗಿ ಉನ್ನತ ಶಿಕ್ಷಣ ಸಚಿವರು ಭರವಸೆ ನೀಡಿರುವುದು ಸ್ವಾಗತಾರ್ಹ.

ಸಿ.ಎಸ್.ಮಂಜುಳಾ, ಹಾಸನ

'ವಿಶ್ವವಿದ್ಯಾಲಯಗಳು ಹೆಚ್ಚಾದರೆ ಸಾಲದು'

ಮತದಾರರನ್ನು ವಂಚಿಸಿ ಸರ್ಕಾರದ ಗದ್ದುಗೆ ಏರಿದ ಮಹಾಶಯರಿಗೆ ಶಿಕ್ಷಣ ಹಾಗೂ ವಿಶ್ವವಿದ್ಯಾಲಯಗಳ ತಿಳಿವಳಿಕೆ ಇಲ್ಲ. ಸ್ವತಂತ್ರವಾಗಿ ಅಧಿಕಾರ ಚಲಾಯಿಸಲು ಅಶಕ್ತರಾದ ಸಚಿವರು, ವಾರ್ಷಿಕ ಬಜೆಟ್‌ನಲ್ಲಿ ಶಿಕ್ಷಣ ಇಲಾಖೆಗೆ ಹೆಚ್ಚಿಗೆ ಹಣ ನೀಡಬೇಕೆಂಬ ಅರಿವಿಲ್ಲದ ಮಂತ್ರಿಮಂಡಲವು ವಿದ್ಯಾರ್ಥಿಗಳ ಜ್ಞಾನವನ್ನು ಚಿವುಟಿ ಹಾಕುತ್ತಿದೆ. ವಿಶ್ವವಿದ್ಯಾಲಯಗಳ ಸಂಖ್ಯೆ ಏರಿದರೆ ಸಾಲದು, ಗುಣಮಟ್ಟ ಸಂಶೋಧನೆ, ಬೋಧನೆ ಏರುಗತಿಯಲ್ಲಿ ಇರಬೇಕು. ಶಿಕ್ಷಣ ದೇಶದ ಪ್ರಗತಿಗೆ ದಾರಿದೀಪವಾಗಲಿ ಹಾಗೂ ಮಾದರಿಯಾಗಿರಲಿ.

ಶಿವನಂದಪ್ಪ, ಶಿವಮೊಗ್ಗ

ಅನರ್ಹರ ನೇಮಕ ನಿಲ್ಲಲಿ

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ತರುವಲ್ಲಿ ತೋರುವ ತರಾತುರಿ, ವಿಶ್ವವಿದ್ಯಾಲಯಗಳ ಬೋಧಕರ ನೇಮಕಾತಿಯಲ್ಲಿ ಇಲ್ಲ. ಪದವಿ ಮತ್ತು ಸ್ನಾತಕೋತ್ತರ ಪದವಿಗಳ ಬೋಧನೆಗೆ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರೇ ಆಧಾರವಾಗಿದ್ದಾರೆ. ಶಿಕ್ಷಣ ವ್ಯವಸ್ಥೆಯಲ್ಲೂ ಭಾರಿ ಭ್ರಷ್ಟಾಚಾರ ನಡೆಯುತ್ತಿರುವಾಗ ಸುಧಾರಣೆ ಹೇಗೆ ಸಾಧ್ಯ? ಅನರ್ಹ ಅಧ್ಯಾಪಕರನ್ನು ಕುಲಪತಿಗಳೇ ತುಂಬಿಕೊಳ್ಳುತ್ತಿರುವಾಗ ಗುಣಾತ್ಮಕತೆಯ ಬಗ್ಗೆ ಮಾತನಾಡುವ ನೈತಿಕತೆ ಉಳಿದಿದೆಯೇ?

ಶಿವರಾಜ್, ಎಚ್‌.ಎಸ್‌.ಆರ್‌.ಬಡಾವಣೆ, ಬೆಂಗಳೂರು

ಜಾತಿ–ಸ್ವಜನ ಪಕ್ಷಪಾತ ತೊಲಗಲಿ

ಅತಿಥಿ ಉಪನ್ಯಾಸಕರನ್ನು ಹೊಂದಿರುವ ಎಲ್ಲ ವಿಶ್ವವಿದ್ಯಾಲಯಗಳು ಅವರನ್ನು ಕಾಯಂ ಮಾಡಬಹುದು ಅಥವಾ ನೇಮಕಾತಿಯಲ್ಲಿ ಶೇ 50ರಷ್ಟು ಮೀಸಲಾತಿ ನೀಡಬಹುದು. ಇವರು ಕಾಯಂ ಬೋಧಕರಿಗೆ ಸರಿಸಮಾನರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಯಾವುದೇ ಸೇವಾ ಭದ್ರತೆ ಇಲ್ಲ. ವಿಶ್ವವಿದ್ಯಾಲಯಗಳಲ್ಲಿ ಜಾತಿ ಮತ್ತು ಸ್ವಜನಪಕ್ಷಪಾತ ತೊಲಗಿದರೆ, ಶೈಕ್ಷಣಿಕ ಕ್ರಾಂತಿ ಕಾಣಬಹುದು.

ಸಿ.ಆರ್.ದಿನೇಶ್, ಮೈಸೂರು

ಖಾಸಗೀಕರಣದ ಹುನ್ನಾರ

ವಿಶ್ವವಿದ್ಯಾಲಯಗಳನ್ನು ಆರ್ಥಿಕ ಸಂಕಷ್ಟಕ್ಕೆ ಒಳಗಾಗುವಂತೆ ಮಾಡಿ, ಅವುಗಳ ಮಾನ್ಯತೆ ಕಡಿಮೆ ಮಾಡುವುದು ಹಾಗೂ ಶೈಕ್ಷಣಿಕ ಗುಣಮಟ್ಟ ಕಡಿಮೆಗೊಳಿಸಿ, ಕೊನೆಗೆ ಎಲ್ಲವನ್ನು ಖಾಸಗಿಯವರಿಗೆ ಮಾರುವ ಹುನ್ನಾರ ಕಂಡುಬರುತ್ತಿದೆ. ಈ ಪ್ರಕ್ರಿಯೆ ಮೂಲಕ ಉನ್ನತ ಶಿಕ್ಷಣವನ್ನು ಖಾಸಗಿಯವರಿಗೆ ಮಾರುವುದೇ ಇದರ ಮೂಲ ಉದ್ದೇಶ.

ಕಾರ್ತಿಕ್ ತಗಡೂರು, ಮೈಸೂರು

'ಅಕ್ರಮಗಳಿಗೆ ಕಡಿವಾಣ ಹಾಕಿ'

ವಿಶ್ವವಿದ್ಯಾಲಯಗಳಿಗೆ ಬೋಧಕರನ್ನು ಆಯ್ಕೆ ಮಾಡಿಕೊಳ್ಳುವಾಗ ಅಕ್ರಮಕ್ಕೆ ಅವಕಾಶ ನೀಡಬಾರದು. ಪ್ರವೇಶ ಪರೀಕ್ಷೆ ನಡೆಸಿ, ಅರ್ಹ ಹಾಗೂ ಪ್ರತಿಭಾವಂತರನ್ನು ಪಾರದರ್ಶಕವಾಗಿ ನೇಮಕ ಮಾಡಿಕೊಳ್ಳುವುದು ಸೂಕ್ತ. ಇದರಿಂದ ವಿ.ವಿಗಳ ಘನತೆ ಹೆಚ್ಚಾಗುವ ಜೊತೆಗೆ ಬೋಧನಾ ಗುಣಮಟ್ಟವೂ ಉತ್ತಮವಾಗಲಿದೆ.

ಹನುಮಂತ ಚನ್ನೂರ, ಯಾದಗಿರಿ

Karnataka Golf Association
No.1, Golf Avenue, Kodihalli, Bengaluru - 560 008.
NOTICE
Notice is hereby given that the 46th Annual General Meeting of the Karnataka Golf Association will be held at the KGA Club House on Friday the 26th November 2021 at 3.00 PM. Members wishing to file their nominations to serve on the Managing Committee should do so in the prescribed format available at the KGA Office by 5.00 PM on Tuesday, 2nd November 2021.
Date : 25.10.2021. Place : Bengaluru.
Sd/- Prithvi Raj Urs Hon. Secretary

ವಿಜಯನಗರ ನಿರ್ಮಿತಿ ಕೇಂದ್ರ, ವಿಜಯನಗರ ಜಿಲ್ಲೆ
No. VNK/ADM/2021-22/06 Date: 25.10.2021
ಅಧಿಸೂಚನೆ
ವಿಜಯನಗರ ನಿರ್ಮಿತಿ ಕೇಂದ್ರ, ವಿಜಯನಗರ ಜಿಲ್ಲೆ ಇವರು ಈ ಕೆಳಕಾಣಿಸಿದ ಹುದ್ದೆಗಳಿಗೆ ಒಂದು ವರ್ಷದ ಅವಧಿಗೆ ಮಾತ್ರ ಗುತ್ತಿಗೆ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ
1	ತಾಂತ್ರಿಕ ಸಹಾಯಕರು	01	ಬಿ.ಇ (ಸಿವಿಲ್) /ಬಿ.ಆರ್ಕಿಟೆಕ್ಟ್
2	ಯೋಜನಾ ಅಭಿಯಂತರರು	03	ಬಿ.ಇ. (ಸಿವಿಲ್)

ಸಂಬಂಧಿಸಿದ ಕ್ಷೇತ್ರಗಳಲ್ಲಿ ಹೆಚ್ಚಿನ ವಿದ್ಯಾರ್ಹತೆ ಮತ್ತು ಅನುಭವವುಳ್ಳವರಿಗೆ ಆದ್ಯತೆ ನೀಡಲಾಗುವುದು. ಅರ್ಹ ಅಭ್ಯರ್ಥಿಗಳು ಅರ್ಜಿ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ದಿನಾಂಕ: 05–11–2021 ಸಮಯ ಸಾಯಂಕಾಲ 5:30 ರೊಳಗೆ htpps://ballari.nic.in/ ಈ ವೆಬ್‌ಸೈಟಿನಲ್ಲಿ ಅರ್ಜಿ ಸಲ್ಲಿಸಲು ಕೋರಿದೆ. ಅಂಚೆ ಮೂಲಕವಾಗಲಿ ಮತ್ತು ಖುದ್ದಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.
ಆನ್‌ಲೈನ್ ಅರ್ಜಿ ಮತ್ತು ಅಧಿಸೂಚನೆ ವಿವರಗಳಿಗಾಗಿ https://ballari.nic.in ವೆಬ್‌ಸೈಟ್‌ನ್ನು ಸಂಪರ್ಕಿಸಲು ಕೋರಿದೆ.
ಸಹಿ/– ಅಧ್ಯಕ್ಷರು, ವಿಜಯನಗರ ನಿರ್ಮಿತಿ ಕೇಂದ್ರ ಹಾಗೂ ಜಿಲ್ಲಾಧಿಕಾರಿಗಳು, ವಿಜನಯನಗರ ಜಿಲ್ಲೆ

ಭಾರತ ಚುನಾವಣಾ ಆಯೋಗ
ಮುಖ್ಯ ಚುನಾವಣಾಧಿಕಾರಿಯವರ ಕಚೇರಿ, ಕರ್ನಾಟಕ, ಬೆಂಗಳೂರು–560 001.
ಕರ್ನಾಟಕ ವಿಧಾನ ಪರಿಷತ್ತಿನ ಕರ್ನಾಟಕ ವಾಯುವ್ಯ ಪದವೀಧರರ ಮತ್ತು ಕರ್ನಾಟಕ ದಕ್ಷಿಣ ಪದವೀಧರರ ಮತಕ್ಷೇತ್ರಗಳ ಮತದಾರರ ಪಟ್ಟಿ ತಯಾರಿಕೆ.
ಮತದಾರರ ನೋಂದಣಿ ನಿಯಮಗಳು 1960ರ 31(4)ನೇ ನಿಯಮದ ಮೇರೆಗೆ ಸೂಚನೆ
ಮತದಾರರ ನೋಂದಣಿ ನಿಯಮಗಳು 1960ರ 31(4)ನೇ ನಿಯಮದ ಅನುಸಾರ (1) ಕರ್ನಾಟಕ ವಾಯುವ್ಯ ಪದವೀಧರರ ಮತ್ತು (2) ಕರ್ನಾಟಕ ದಕ್ಷಿಣ ಪದವೀಧರರ ಕ್ಷೇತ್ರಗಳ ಮತದಾರರ ನೋಂದಣಾಧಿಕಾರಿಗಳು ದಿನಾಂಕ: 2ನೇ ಅಕ್ಟೋಬರ್, 2021 ರಂದು ಪ್ರಕಟಿಸಲಾದ ಸೂಚನೆಯಲ್ಲಿ ಸಂಬಂಧಿಸಿದ ಪದವೀಧರರ ಮತಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಲು ಅರ್ಹರಿರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರರ ನೋಂದಣಿ ನಿಯಮಗಳು 1960ಕ್ಕೆ ಲಗತ್ತಿಸಿರುವ ಮತ್ತು ದಿನಾಂಕ: 2ನೇ ಅಕ್ಟೋಬರ್, 2021ರ (1) ಪ್ರಜಾವಾಣಿ (2) ದಿ ಹಿಂದೂ (3) ವಿಜಯವಾಣಿ (4) ವಿಜಯ ಕರ್ನಾಟಕ (5) ಇಂಡಿಯನ್ ಎಕ್ಸ್‌ಪ್ರೆಸ್ (6) ಸಂಯುಕ್ತ ಕರ್ನಾಟಕ ಮತ್ತು (7) ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ ಹಾಗೂ ದಿನಾಂಕ: 16ನೇ ಅಕ್ಟೋಬರ್, 2021ರ ಟೈಮ್ಸ್ ಆಫ್ ಇಂಡಿಯಾ ಮತ್ತು ಮೇಲಿನ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುವ ಎರಡನೇ ಅನುಸೂಚಿಯಲ್ಲಿ ಪುನರುದ್ಧರಿಸಿರುವ ನಮೂನೆ 18 ರಲ್ಲಿ ಅರ್ಜಿಯನ್ನು 6ನೇ ನವೆಂಬರ್, 2021 ಅಥವಾ ಅದಕ್ಕೂ ಮೊದಲು ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳ ಕಚೇರಿಗೆ ಕಳುಹಿಸಲು ಅಥವಾ ತಲುಪಿಸಲು ಕರೆ ನೀಡಲಾಗಿತ್ತು.
ಮೇಲೆ ತಿಳಿಸಲಾದ ಎಲ್ಲಾ ವ್ಯಕ್ತಿಗಳು ತಮ್ಮ ಹೆಸರನ್ನು ಇದುವರೆವಿಗೂ ಸೇರಿಸದೇ ಇದ್ದಲ್ಲಿ ನಿಗದಿತ ನಮೂನೆ 18ರಲ್ಲಿ ದಿನಾಂಕ: 6ನೇ ನವೆಂಬರ್, 2021 ರೊಳಗೆ ಅಥವಾ ಅದಕ್ಕೂ ಮುಂಚೆ ಅರ್ಜಿಗಳನ್ನು ಸಲ್ಲಿಸಬಹುದು ಮೇಲ್ಕಂಡ ವಿವರಗಳು ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ಇವರ ವೆಬ್‌ಸೈಟ್ ವಿಳಾಸ: www.ceokarnataka.kar.nic.in ರಲ್ಲಿ ಸಹ ಲಭ್ಯವಿದೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಮುಖ್ಯ ಇಂಜಿನಿಯರ್, ವಿದ್ಯುತ್, ಬೆಂಗಳೂರು ಗ್ರಾಮೀಣ ಕ್ಷೇತ್ರ ವಲಯ, ಬೆವಿಕಂರವರು ದಿನಾಂಕ 21.10.2021ರ ವಿಚಾರಣೆ ಸಂಖ್ಯೆ: ಮುಇಬೆಗ್ರಾಕ್ಷೇವ/ಎಸ್‌ಇಒ/ಎಇಇ–2/21–22/ವಿಚಾರಣೆ ಸಂಖ್ಯೆ 10ರಿಂದ 14ರ ವರೆಗೆ ಕೆಳಗೆ ತಿಳಿಸಿರುವ ವಿಭಾಗಗಳಲ್ಲಿ 11 ಕೆವಿ ಓವರ್‌ಹೆಡ್ ಲೈನ್‌ಗಳನ್ನು ಯುಜಿ ಕೇಬಲ್ ಆಗಿ ಪರಿವರ್ತಿಸುವುದು, ಕೈಗಾರಿಕಾ ಫೀಡರ್‌ಗಳ ಡಿಟಿಸಿ ಮತ್ತು ಎಲ್‌ಟಿ ಲೈನ್‌ಗಳ ಪುನರ್ನಿರ್ಮಾಣಕ್ಕಾಗಿ ಭಾಗಶಃ ಟರ್ನ್‌ಕೀ ಆಧಾರದಲ್ಲಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಿಚಾರಣೆ ಸಂಖ್ಯೆ	ವಿವರಗಳು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ)
1	ವಿಚಾರಣೆ ಸಂ. 10	ಕೆಜಿಎಫ್ ವಿಭಾಗ, ಮಾಲೂರು ಉಪವಿಭಾಗದ ಮಾಲೂರು ಕೈಗಾರಿಕಾ ಪ್ರದೇಶ.	24.08
2	ವಿಚಾರಣೆ ಸಂ. 11	ಕೋಲಾರ ವಿಭಾಗ, ಕೋಲಾರ ಗ್ರಾಮಾಂತರ ಉಪವಿಭಾಗದ ನರಸಾಪುರ ಕೈಗಾರಿಕಾ ಪ್ರದೇಶ.	12.86
3	ವಿಚಾರಣೆ ಸಂ. 12	ನೆಲಮಂಗಲ ವಿಭಾಗ, ದಾಬಾಸ್‌ಪೇಟೆ ಉಪವಿಭಾಗದ ಸೋಂಪುರ ಕೈಗಾರಿಕಾ ಪ್ರದೇಶ.	45.41
4	ವಿಚಾರಣೆ ಸಂ. 13	ರಾಮನಗರ ವಿಭಾಗ, ಬಿಡದಿ ಉಪವಿಭಾಗದ ಬಿಡದಿ ಕೈಗಾರಿಕಾ ಪ್ರದೇಶ.	13.39
5	ವಿಚಾರಣೆ ಸಂ. 14	ಮಾಗಡಿ ವಿಭಾಗ, ತಾವರೆಕೆರೆ ಉಪವಿಭಾಗದ ಮಾಚೋಹಳ್ಳಿ ಕೈಗಾರಿಕಾ ಪ್ರದೇಶ.	42.83

ಟೆಂಡರ್‌ನಲ್ಲಿ ಭಾಗವಹಿಸುವ ಕುರಿತು ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ https://eproc.karnataka.gov.in ವೆಬ್‌ಸೈಟ್‌ನಿಂದ ದಿನಾಂಕ 27.10.2021 ಅಥವಾ ನಂತರ ಪಡೆಯಬಹುದು. ಎಲ್ಲಾ ರೀತಿಯ ಪಾವತಿ ಅಂದರೆ ಟೆಂಡರ್ ದರ, ಇತ್ಯಾದಿಗಳನ್ನು ಇ–ಪೇಮೆಂಟ್ ಮೂಲಕ ಮಾಡತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ 080–25501216 ಮತ್ತು 080–25501227ಗಳಿಗೆ ಸಂಪರ್ಕಿಸಲು ಕೋರಲಾಗಿದೆ.
ಸಹಿ/– ಮುಖ್ಯ ಇಂಜಿನಿಯರ್ (ವಿ.) ಬೆಂ.ಗ್ರಾ.ಕ್ಷೇ.ವ, ಬೆವಿಕಂ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಹಿಂದೂ ಪದ್ಧತಿ ಕಾಂಗ್ರೆಸ್‌ಗೆ ಅಲರ್ಜಿ: ಸಚಿವ ಜೋಶಿ

ಹಾವೇರಿ: 'ಕೋವಿಡ್ ಸಂಕಷ್ಟ ಕಾಲದಲ್ಲಿ ಜನರಿಗೆ ಆತ್ಮಸ್ಥೈರ್ಯ ತುಂಬಲು ದೀಪ ಬೆಳಗಿಸಿ, ಗಂಟೆ ಮತ್ತು ಜಾಗಟೆ ಬಾರಿಸಿ ಎಂದು ದೇಶದ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದರು. ಇದನ್ನು ಕಾಂಗ್ರೆಸ್ ಲೇವಡಿ ಮಾಡಿತು. ಹಿಂದೂ ಪದ್ಧತಿಯ ಆಚರಣೆಗಳೆಂದರೆ ಕಾಂಗ್ರೆಸ್‌ಗೆ ಅಲರ್ಜಿ' ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

ಹಾನಗಲ್‌ನಲ್ಲಿ ಭಾನುವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು 'ಜಗತ್ತಿನಲ್ಲಿ 700 ಕೋಟಿ ಲಸಿಕೆ ಹಾಕಿದ್ದರೆ, ಭಾರತದಲ್ಲಿ 100 ಕೋಟಿ ಡೋಸ್ ಲಸಿಕೆ ಹಾಕಲಾಗಿದೆ. ಇಷ್ಟು ದೊಡ್ಡ ಜನಸಂಖ್ಯೆಗೆ ಲಸಿಕೆ ಹಾಕಿದ ಸಾಧನೆ ಭಾರತದ್ದು. ಇದನ್ನೂ ಸಿದ್ದರಾಮಯ್ಯನವರು ಟೀಕಿಸುತ್ತಾರೆ. ಮೋದಿ ಅವರನ್ನು ವಿರೋಧಿಸುವ ಭರದಲ್ಲಿ ದೇಶದ ಸಾಧನೆಯನ್ನೇಕೆ ವಿರೋಧಿಸುತ್ತೀರಿ? ದೇಶವನ್ನೇ ವಿರೋಧಿಸಲು ಹೇಸದ ಜನ ಇವರು' ಎಂದು ವಾಗ್ದಾಳಿ ನಡೆಸಿದರು.

'ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ಕಾಂಗ್ರೆಸ್ ನಾಯಕರು ದೊಡ್ಡದಾಗಿ ಮಾತನಾಡುತ್ತಾರೆ. ಎರಡೂವರೆ ವರ್ಷಗಳಿಂದ ಎಐಸಿಸಿಗೆ ಅಧ್ಯಕ್ಷರೇ ಇಲ್ಲ. ಸಮರ್ಥ ಅಧ್ಯಕ್ಷರೊಬ್ಬರನ್ನು ನೇಮಿಸಿ ಎಂದು ಹೇಳಿದ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾಗಿದ್ದ ಗುಲಾಂ ನಬಿ ಆಜಾದ್ ಅವರನ್ನು ಹೊರಹಾಕಿದರು' ಎಂದು ಕುಟುಕಿದರು.

'ಕಗ್ಗತ್ತಲತ್ತ ಕರ್ನಾಟಕವಾಗುತ್ತಿದೆ. ರಾಜ್ಯದವರೇ ಕಲ್ಲಿದ್ದಲು ಸಚಿವರಿದ್ದರೂ ಯಾವ ಪ್ರಯೋಜನವೂ ಇಲ್ಲ' ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ, 'ಮಳೆಗಾಲದಲ್ಲಿ ಕಲ್ಲಿದ್ದಲು ಸಾಗಣೆ ತೊಡಕಾಗುತ್ತದೆ. ಹೀಗಾಗಿ ಕಲ್ಲಿದ್ದಲು ಸಂಗ್ರಹಕ್ಕೆ ಸೂಚನೆ ನೀಡಿದ್ದೆವು. ಆದರೆ. ಕಾಂಗ್ರೆಸ್ ಆಡಳಿತವಿರುವ ಮಹಾರಾಷ್ಟ್ರ ಮತ್ತು ಪಂಜಾಬ್ ರಾಜ್ಯಗಳಲ್ಲಿ ಸಂಗ್ರಹ ಮಾಡಲು ಆಸಕ್ತಿ ತೋರಲಿಲ್ಲ' ಎಂದರು.

'ಕೋವಿಡ್ ಕಾಲದಲ್ಲಿ ಹಸಿವಿನಿಂದ ಯಾರೂ ಸತ್ತಿಲ್ಲ'

ಪ್ರಹ್ಲಾದ ಜೋಶಿ

'1919ರಲ್ಲಿ ಸ್ಪ್ಯಾನಿಶ್ ಫ್ಲೂ ಬಂದಾಗ ಜಗತ್ತಿನಲ್ಲಿ ಅಂದಾಜು 5 ಕೋಟಿ ಜನ ಹಾಗೂ ದೇಶದಲ್ಲಿ 2.5 ಕೋಟಿ ಜನ ಸತ್ತಿದ್ದರು. ಅದರಲ್ಲಿ 2 ಕೋಟಿಗೂ ಹೆಚ್ಚು ಜನ ಹಸಿವಿನಿಂದ ಸತ್ತಿದ್ದರು. ಆದರೆ, ಕೋವಿಡ್- 19 ಸಂದರ್ಭ ಹಸಿವಿನಿಂದ ಯಾರೂ ಸತ್ತಿಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

'ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ ಇತ್ತೀಚೆಗೆ ಕುಸಿದಿದೆಯಲ್ಲ'ಎಂಬ ಪತ್ರಕರ್ತರ ಪ್ರಶ್ನೆಗೆ, 'ಕೋವಿಡ್ ಕಾಲದಲ್ಲಿ ಉಚಿತವಾಗಿ ದಿನಸಿ ವಸ್ತುಗಳನ್ನು ನೀಡಿದೆವು. ತೀವ್ರ ಅಪೌಷ್ಟಿಕತೆ ಸಮಸ್ಯೆ ನಿವಾರಣೆಗೆ ಇನ್ನೂ ಕೆಲಸ ಮಾಡಬೇಕಿದೆ. ಆದರೆ, ಹಸಿವಿನಿಂದ ಯಾರೂ ಸತ್ತಿಲ್ಲ' ಎಂದು ಸಮರ್ಥಿಸಿಕೊಂಡರು.

ಬಿಜೆಪಿ–ಕಾಂಗ್ರೆಸ್ ನಡುವೆ ನೇರ ಹಣಾಹಣಿ: ಜೆಡಿಎಸ್ ಆಟಕ್ಕುಂಟು–ಲೆಕ್ಕಕ್ಕಿಲ್ಲ

ತಾರಕೇಶ್ವರನ ನಾಡಿನಲ್ಲಿ ತಾರಕಕ್ಕೇರಿದ ಪ್ರಚಾರ

• ಸಿದ್ದು ಆರ್.ಜಿ.ಹಳ್ಳಿ

ಶಿವರಾಜ ಸಜ್ಜನರ (ಬಿಜೆಪಿ)

ಶ್ರೀನಿವಾಸ ಮಾನೆ (ಕಾಂಗ್ರೆಸ್)

ನಿಯಾಜ್ ಶೇಖ್ (ಜೆಡಿಎಸ್)

ಅಖಾಡದಲ್ಲೊಂದು ಸುತ್ತು

ಮತದಾರರ ವಿವರ	
ಪುರುಷ ಮತದಾರರು	1,05,405
ಮಹಿಳಾ ಮತದಾರರು	98,798
ಇತರೆ ಮತದಾರರು	03
ಒಟ್ಟು ಮತದಾರರು	2,04,206

2018ರ ಚುನಾವಣಾ ಫಲಿತಾಂಶ	
ಸಿ.ಎಂ.ಉದಾಸಿ (ಬಿಜೆಪಿ)	80,529
ಶ್ರೀನಿವಾಸ ಮಾನೆ (ಕಾಂಗ್ರೆಸ್)	74,015
ಗೆಲುವಿನ ಅಂತರ	6,514

ಹಾವೇರಿ: 'ತಾರಕೇಶ್ವರನ ನಾಡು' ಹಾನಗಲ್ ವಿಧಾನಸಭಾ ಕ್ಷೇತ್ರದಲ್ಲಿ ಉಪಚುನಾವಣೆಯ ಪ್ರಚಾರ ತಾರಕಕ್ಕೇರಿದೆ. ಮತದಾನದ ದಿನಾಂಕ ಸಮೀಪಿಸುತ್ತಿರುವಂತೆ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರು ಆರೋಪ–ಪ್ರತ್ಯಾರೋಪಗಳನ್ನು ಮಾಡುತ್ತಾ, ವಾಗ್ಬಾಣಗಳ ಸುರಿಮಳೆಗೈಯ್ಯುತ್ತಿದ್ದಾರೆ.

ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದ್ದು, 'ಗೆಲುವು' ಎರಡೂ ಪಕ್ಷಗಳ ಪಾಲಿಗೆ ಪ್ರತಿಷ್ಠೆಯಾಗಿದೆ. 'ಮುಖ್ಯಮಂತ್ರಿ ತವರು ಜಿಲ್ಲೆ'ಯ ವಿಧಾನಸಭಾ ಕ್ಷೇತ್ರದಲ್ಲಿ 'ಕೇಸರಿ' ಬಾವುಟ ಹಾರಿಸಲು ಬಿಜೆಪಿ ರಣತಂತ್ರ ರೂಪಿಸಿದೆ. ಕಳೆದ ಬಾರಿ ಕೈತಪ್ಪಿದ್ದ ಈ ಕ್ಷೇತ್ರವನ್ನು ಈ ಬಾರಿ 'ಕೈ' ವಶ ಮಾಡಿಕೊಂಡು ಸೇಡು ತೀರಿಸಿಕೊಳ್ಳಲೇಬೇಕು ಎಂದು ಕಾಂಗ್ರೆಸ್ ಪ್ರತಿತಂತ್ರ ಹೆಣೆದಿದೆ.

ಪಕ್ಷೇತರ ಅಭ್ಯರ್ಥಿ ಬಿ.ಆರ್. ಪಾಟೀಲ್ ನಿಧನದಿಂದ 1968ರಲ್ಲಿ ಹಾನಗಲ್ ಕ್ಷೇತ್ರದಲ್ಲಿ ಮೊದಲ ಉಪಚುನಾವಣೆ ನಡೆದಿತ್ತು. ಬಿಜೆಪಿ ಶಾಸಕ ಸಿ.ಎಂ.ಉದಾಸಿ ಅವರು ಅಸ್ತಂಗತರಾದ ಹಿನ್ನೆಲೆಯಲ್ಲಿ ಎರಡನೇ ಉಪಚುನಾವಣೆ ರಂಗ ಈಗ ಗರಿಗೆದರಿದೆ.

ಹಾನಗಲ್ ಕ್ಷೇತ್ರದಲ್ಲಿ ಲಿಂಗಾಯತ, ಮುಸ್ಲಿಂ, ಪರಿಶಿಷ್ಟ ಜಾತಿ ಹಾಗೂ ಗಂಗಾಮತಸ್ಥ ಸಮುದಾಯ ದೊಡ್ಡ ಸಂಖ್ಯೆಯಲ್ಲಿದ್ದು, ಈ ಮತಗಳ ಮೇಲೆ ರಾಷ್ಟ್ರೀಯ ಪಕ್ಷಗಳು ಕಣ್ಣಿಟ್ಟಿವೆ. ಜೆಡಿಎಸ್ ವಿಶೇಷವಾಗಿ ಮುಸ್ಲಿಂ ಮತಗಳನ್ನು ಸೆಳೆಯಲು ಯತ್ನಿಸುತ್ತಿದೆ. 'ಬಿಜೆಪಿಯ ಬಿ ಟೀಮ್' ಎಂಬ ಗಂಭೀರ ಆರೋಪ ಎದುರಿಸುತ್ತಿರುವ ಜೆಡಿಎಸ್ ಎಷ್ಟು ಅಲ್ಪಸಂಖ್ಯಾತರ ಮತಗಳನ್ನು ಗಳಿಸುತ್ತದೊ, ಅಷ್ಟು ಕಾಂಗ್ರೆಸ್‌ಗೆ ನಷ್ಟ, ಬಿಜೆಪಿಗೆ ಲಾಭ ಎಂದು ವಿಶ್ಲೇಷಿಸಲಾಗುತ್ತಿದೆ.

ಅಖಾಡಕ್ಕೆ ಸಿಎಂ ಪ್ರವೇಶ: ಟಿಕೆಟ್ ಘೋಷಣೆಯಾದಾಗ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಅವರಿಗೆ ಅಲ್ಪ ಮುನ್ನಡೆ ಸಿಗುತ್ತದೆ ಎಂಬ ಮಾತುಗಳು ಕ್ಷೇತ್ರದಲ್ಲಿ ಕೇಳಿಬರುತ್ತಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಏಳೆಂಟು ಸಚಿವರ ತಂಡ ಕಟ್ಟಿಕೊಂಡು ಕ್ಷೇತ್ರ ಪ್ರವೇಶಿಸಿದಾಗಿನಿಂದ ಗೆಲುವು ಬಿಜೆಪಿ ಮತ್ತು ಕಾಂಗ್ರೆಸ್ ಪಾಲಿಗೆ 50:50 ಎಂಬಂತಾಗಿದೆ.

ಪ್ರಚಾರದ ಸುನಾಮಿ: ಆರಂಭದಲ್ಲಿ ಚುನಾವಣೆಯ ಪ್ರಚಾರ ಮಂದಗತಿಯಲ್ಲಿ ಸಾಗುತ್ತಿತ್ತು. ಸಂಗೂರಿನ 'ಶುಗರ್ ಫ್ಯಾಕ್ಟರಿ' ಎಂಬ ಬಿಜೆಪಿಯ ಜೇನುಗೂಡಿಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕಲ್ಲು ಎಸೆದ ನಂತರ ಪ್ರಚಾರಗಳ ವರಸೆಯೇ ಬದಲಾಯಿತು. 'ವಿರಾಟ ನಗರಿ'ಯಲ್ಲಿ ಪ್ರಚಾರ ವಿರಾಟ ಸ್ವರೂಪವನ್ನೇ ಪಡೆಯಿತು.

ಸಿ.ಎಂ.ಉದಾಸಿ ಮತ್ತು ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ ಮೇಲೆ ಭ್ರಷ್ಟಾಚಾರ ಆರೋಪ ಮಾಡಿದ ಸಿದ್ದರಾಮಯ್ಯ ವಿರುದ್ಧ 'ಕೇಸರಿ ಕಲಿಗಳು' ಕೆಂಡಾಮಂಡಲರಾಗಿ, ಆರೋಪಗಳ ಸುರಿಮಳೆಯನ್ನೇ ಸುರಿಸಿದರು. ಎರಡೂ ಪಕ್ಷದವರು 'ಹಾವು–ಮುಂಗುಸಿಯಂತೆ' ಪರಸ್ಪರ ಕಚ್ಚಾಡುತ್ತಾ, ಪ್ರಚಾರದ ಹೆದ್ದಾರಿಯಿಂದ ಅಪಪ್ರಚಾರದ ಅಡ್ಡದಾರಿಗೂ ಇಳಿದರು.

'ಬಿಜೆಪಿ ಸಚಿವರು ಗೋಣಿಚೀಲದಲ್ಲಿ ಹಣ ತಂದು ಹಂಚುತ್ತಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಗಂಭೀರ ಆರೋಪಕ್ಕೆ, ನಂಜನಗೂಡು ಮತ್ತು ಗುಂಡ್ಲುಪೇಟೆ ಉಪಚುನಾವಣೆಯ ಅನುಭವಗಳನ್ನು ಡಿಕೆಶಿ ಹೇಳಿಕೊಳ್ಳುತ್ತಿದ್ದಾರೆ ಎಂದು ಸಿಎಂ ಬೊಮ್ಮಾಯಿ ತಿರುಗೇಟು ನೀಡಿದ್ದಾರೆ.

ತಂತ್ರ–ಪ್ರತಿತಂತ್ರ: 'ಡಬಲ್ ಎಂಜಿನ್ ಸರ್ಕಾರ' ಮತ್ತು 'ಬೊಮ್ಮಾಯಿ ಅವರು ಹಾನಗಲ್ ಅಳಿಯ' ಎಂಬ ಎರಡು ಪ್ರಬಲ ಅಸ್ತ್ರಗಳನ್ನು ಬಿಜೆಪಿ ಜಳಪಿಸುತ್ತಿದೆ. ನೀವು ನೀಡುವ ಮತಗಳು ಸಿ.ಎಂ.ಉದಾಸಿಯವರ ಆತ್ಮಕ್ಕೆ ಶಾಂತಿ ತರುತ್ತವೆ ಎಂದು ಭಾವನಾತ್ಮಕವಾಗಿ ಮತದಾರರ ಮನವೊಲಿಸಲು ಬಿಜೆಪಿ ಮುಂದಾಗಿದೆ.

'ಭಾಗ್ಯ'ಗಳ ಯೋಜನೆ ಮತ್ತು 'ಬೆಲೆ ಏರಿಕೆ' ಎಂಬ ಎರಡು ಪರಿಣಾಮಕಾರಿ ಬಾಣಗಳನ್ನು ಕಾಂಗ್ರೆಸ್ ಬಿಡುತ್ತಿದೆ. ಜತೆಗೆ, ಕೋವಿಡ್ ಎಂಬ ಕಷ್ಟಕಾಲದಲ್ಲಿ ಜನರಿಗೆ ಸಹಾಯ ಮಾಡಿದ 'ಆಪತ್ಬಾಂಧವ' ಮಾನೆ ಅವರ ಋಣ ತೀರಿಸಿ ಎಂದು ಮತದಾರರ ಮನಸ್ಸನ್ನು ಗೆಲ್ಲಲು ಯತ್ನಿಸುತ್ತಿದೆ.

ಜೋಡೆತ್ತುಗಳ ಸಂಚಾರ: ಕಾಂಗ್ರೆಸ್‌ನಲ್ಲಿ 'ಡಿಕೆಶಿ– ಸಿದ್ದರಾಮಯ್ಯ' ಎಂಬ ರಾಜ್ಯಮಟ್ಟದ ಜೋಡೆತ್ತು, ಬಿಜೆಪಿಯಲ್ಲಿ 'ಶಿವಕುಮಾರ ಉದಾಸಿ–ಶಿವರಾಜ ಸಜ್ಜನರ' ಎಂಬ ಸ್ಥಳೀಯ ಜೋಡೆತ್ತು ಕ್ಷೇತ್ರದಾದ್ಯಂತ ಅಡ್ಡಾಡುತ್ತಾ ಅಬ್ಬರದ ಪ್ರಚಾರದಲ್ಲಿ ತೊಡಗಿವೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರಚಾರಕ್ಕೆ ಇಳಿದಿರುವುದು ಬಿಜೆಪಿಗೆ 'ಆನೆಬಲ' ಬಂದಂತಾಗಿದೆ.

ಸಿಂದಗಿ ಚುನಾವಣೆಗೆ ನೀಡಿದ ಮಹತ್ವವನ್ನು 'ಜೆಡಿಎಸ್ ದಳಪತಿ'ಗಳು ಹಾನಗಲ್ ಕ್ಷೇತ್ರಕ್ಕೆ ನೀಡುತ್ತಿಲ್ಲ ಎಂಬ ಅಸಮಾಧಾನ ಕಾರ್ಯಕರ್ತರಲ್ಲಿ ಮನೆ ಮಾಡಿದೆ. ಕೊನೆಯ ಕ್ಷಣದಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹಾನಗಲ್ ಪ್ರವೇಶಿಸಿ, ಪ್ರಚಾರಕ್ಕೆ ರಂಗು ತರಲು ಯತ್ನಿಸಿದ್ದಾರೆ. ಇತ್ತ, ಕೆಆರ್‌ಎಸ್ ಪಕ್ಷದವರು ಭ್ರಷ್ಟ 'ಜೆಸಿಬಿ' (ಜೆಡಿಎಸ್–ಕಾಂಗ್ರೆಸ್–ಬಿಜೆಪಿ) ಪಕ್ಷಗಳಿಗೆ ತಕ್ಕ ಪಾಠ ಕಲಿಸಿ ಎಂದು ಮನವಿ ಮಾಡುತ್ತಿದ್ದಾರೆ.

ಅ.30ರಂದು ಮತದಾನ ನಡೆಯಲಿದ್ದು, ನ.2ರಂದು ಮತ ಎಣಿಕೆ ನಡೆಯಲಿದೆ.

ಸಾಂಪ್ರದಾಯಿಕ ಎದುರಾಳಿಗಳ ಹೋರಾಟ ಅಂತ್ಯ

ಹಾನಗಲ್ ವಿಧಾನಸಭಾ ಕ್ಷೇತ್ರದ ಚುನಾವಣಾ ಕಣದಲ್ಲಿ ಸಾಂಪ್ರದಾಯಿಕ ಎದುರಾಳಿಗಳಾದ ಬಿಜೆಪಿಯ ಸಿ.ಎಂ.ಉದಾಸಿ ಮತ್ತು ಕಾಂಗ್ರೆಸ್‌ನ ಮನೋಹರ ತಹಶೀಲ್ದಾರ್ 1983ರಿಂದ 2013ರವರೆಗೆ ನಡೆದ ಎಂಟು ಚುನಾವಣೆಗಳಲ್ಲಿ ನಿರಂತರವಾಗಿ ಮುಖಾಮುಖಿಯಾಗಿದ್ದರು. ಸಿ.ಎಂ. ಉದಾಸಿ ಒಟ್ಟು 9 ಚುನಾವಣೆಗಳನ್ನು ಎದುರಿಸಿ, 6 ಬಾರಿ ಗೆಲುವು, 3 ಬಾರಿ ಸೋಲು ಕಂಡಿದ್ದರು. ಮನೋಹರ ತಹಶೀಲ್ದಾರ್ ಒಟ್ಟು 9 ಚುನಾವಣೆಗಳಲ್ಲಿ ಸ್ಪರ್ಧಿಸಿ, 4 ಬಾರಿ ಗೆಲುವು, 5 ಬಾರಿ ಸೋಲನ್ನಪ್ಪಿದ್ದಾರೆ.

38 ವರ್ಷಗಳ ನಂತರ 'ಉದಾಸಿ–ತಹಶೀಲ್ದಾರ್' ಈ ಇಬ್ಬರೂ ಚುನಾವಣಾ ಕಣದಲ್ಲಿ ಇಲ್ಲದೇ ನಡೆಯುತ್ತಿರುವ ಈ ಬಾರಿಯ ಉಪಚುನಾವಣೆ ಮತದಾರರಲ್ಲಿ ತೀವ್ರ ಕುತೂಹಲ ಮೂಡಿಸಿದೆ. ಸಾಂಪ್ರದಾಯಿಕ ಎದುರಾಳಿಗಳ ಸುದೀರ್ಘ ಹೋರಾಟಕ್ಕೆ ತೆರೆ ಬಿದ್ದಿದೆ.

'ಎಲ್ಲಿ ಹೋಯಿತು ರಾಯಣ್ಣ ಬ್ರಿಗೇಡ್?'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಕಂಬಳಿ ಹಾಕಲು ಯೋಗ್ಯತೆ ಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನನ್ನ ವಿರುದ್ಧ ಹೇಳಿಕೆ ನೀಡಿದ್ದಾರೆ. ನಾನು ಬಾಲ್ಯದಲ್ಲಿ ಕುರಿ ಸಾಕಿದ್ದೇನೆ, ಕುರಿ ಕಾದಿದ್ದೇನೆ. ಕಂಬಳಿ ಹೊದ್ದಿದ್ದೇನೆ. ಬೊಮ್ಮಾಯಿ ನೀನು ಕುರಿ ಕಾದಿದ್ದೆಯೇನಪ್ಪಾ? ಕಂಬಳಿ ಹೊದ್ದಿದ್ದೆಯೇನಪ್ಪಾ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಸಿಂದಗಿ ಉಪ ಚುನಾವಣೆ ಹಿನ್ನೆಲೆಯೆಲ್ಲಿ ಪಟ್ಟಣದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಇತರೆ ಹಿಂದುಳಿದ ವರ್ಗಗಳ ಮುಖಂಡರ ಸಮಾವೇಶದಲ್ಲಿ ಅವರು ಮಾತನಾಡಿದರು.

'ಈಶ್ವರಪ್ಪ ನಾನು ಕುರುಬ ಅಲ್ಲ ಎಂದು ಈ ಹಿಂದೆ ಹೇಳಿದ್ದ. ಆದರೆ, ನಾನು ಕುರುಬ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಸ್ವಾರ್ಥಕ್ಕಾಗಿ ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಕಟ್ಟಿದ್ದ ಈಶ್ವರಪ್ಪ. ಈಗ ಎಲ್ಲಿ ಹೋಯಿತು ಬ್ರಿಗೇಡ್' ಎಂದು ಪ್ರಶ್ನಿಸಿದರು.

'ಕಾಗಿನೆಲೆ ಕನಕ ಗುರು ಪೀಠ, ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ, ಉಪ್ಪಾರ ಅಭಿವೃದ್ಧಿ ನಿಗಮ, ಭಗೀರಥ ಜಯಂತಿ, ದೇವರ ದಾಸಿಮಯ್ಯ ಜಯಂತಿ, ಬ್ರಹ್ಮಶ್ರೀ ನಾರಾಯಣಗುರು ಜಯಂತಿ, ವಿಶ್ವಕರ್ಮ ಜಯಂತಿ, ಕಿತ್ತೂರು ರಾಣಿ ಚನ್ನಮ್ಮ ಜಯಂತಿ, ಶ್ರೀಕೃಷ್ಣ ಜಯಂತಿ, ಕೆಂಪೇಗೌಡ ಜಯಂತಿ, ಟಿಪ್ಪು ಸುಲ್ತಾನ್ ಜಯಂತಿ, ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನ ಫೋಟೊ ಕಡ್ಡಾಯ, ಮಹಿಳಾ ವಿವಿಗೆ ಅಕ್ಕಮಹಾದೇವಿ ಹೆಸರು ನಾಮಕರಣ, ನೇಕಾರರ ಸಾಲ ಮನ್ನಾ ಮಾಡಿದ್ದು ನಾನು ಮುಖ್ಯಮಂತ್ರಿಯಾಗಿದ್ದಾಗ. ಯಡಿಯೂರಪ್ಪ, ಬೊಮ್ಮಾಯಿ ನೀವೇನು ಮಾಡಿದ್ದೀರಾ' ಎಂದು ಪ್ರಶ್ನಿಸಿದರು.

'ಕುರಿಗಳು, ಆಕಳುಗಳು ಆಕಸ್ಮಿಕವಾಗಿ ಸತ್ತರೆ ಸೂಕ್ತ ಪರಿಹಾರ ಕೊಡುವ ಯೋಜನೆ ಕೂಡ ಜಾರಿಗೆ ತಂದಿದ್ದೆ. ಆದರೆ ಬಿಜೆಪಿ ಸರ್ಕಾರ ರದ್ದುಪಡಿಸಿದೆ' ಎಂದು ದೂರಿದರು.

'ಸಿಂದಗಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್, ಬಿಜೆಪಿ ನಡುವೆ ನೇರ ಸ್ಪರ್ಧೆ ಇದೆ. ಕಣದಲ್ಲಿ ಜೆಡಿಎಸ್ ಇದೆಯಾದರೂ ಸ್ಪರ್ಧೆಯಲ್ಲಿ ಇಲ್ಲ. ಜೆಡಿಎಸ್ ಬಿಜೆಪಿಯ 'ಬಿ' ಟೀಂ ಎಂಬುದರಲ್ಲಿ ಅನುಮಾನವಿಲ್ಲ' ಎಂದು ಹೇಳಿದರು.

ನಾನೇ ಟಾರ್ಗೆಟ್: 'ಜೆಡಿಎಸ್ ಮತ್ತು ಬಿಜೆಪಿ ಮುಖಂಡರಿಗೆ ನನ್ನ ಕಂಡರೆ ಭಯ. ಇಬ್ಬರಿಗೂ ನಾನೇ ಟಾರ್ಗೆಟ್. ಸಿದ್ದರಾಮಯ್ಯನನ್ನು ಮುಗಿಸಿದರೆ ಕಾಂಗ್ರೆಸ್ ಮುಗಿಸಬಹುದು ಎಂಬುದು ಅವರ ಲೆಕ್ಕಾಚಾರ. ಆದರೆ, ನನ್ನ ಮುಗಿಸಲು ಜನ ಬಿಡುವುದಿಲ್ಲ ಎಂಬ ವಿಶ್ವಾಸವಿದೆ' ಎಂದರು.

ಬಿಜೆಪಿ ಮತ್ತು ಜೆಡಿಎಸ್ ಎರಡೂ ಪಕ್ಷಗಳು ರೈತರು, ಕೂಲಿಕಾರ್ಮಿಕರು, ಬಡವರು, ಅಲ್ಪಸಂಖ್ಯಾತರು, ದಲಿತರ ವಿರೋಧಿಯಾಗಿವೆ ಎಂದು ಆರೋಪಿಸಿದರು.

ಸಿಂದಗಿ ಉಪ ಚುನಾವಣೆ ಹಿನ್ನೆಲೆಯೆಲ್ಲಿ ಪಟ್ಟಣದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಇತರೆ ಹಿಂದುಳಿದ ವರ್ಗಗಳ ಮುಖಂಡರ ಸಮಾವೇಶದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿದರು. ಅಭ್ಯರ್ಥಿ ಅಶೋಕ ಮನಗೂಳಿ ಇದ್ದಾರೆ

ಲಾಭ ಪಡೆದುಕೊಂಡವರ್‍ಯಾರೂ ನಮ್ಮೊಂದಿಗಿಲ್ಲ: ದೇವೇಗೌಡ

ಪ್ರಜಾವಾಣಿ ವಾರ್ತೆ

ಸಿಂದಗಿ: 'ನಮ್ಮ ಪಕ್ಷದ ಲಾಭ ಪಡೆದುಕೊಂಡವರು ಯಾರೂ ಜೊತೆಯಿಲ್ಲ. ಹಣ, ಅಧಿಕಾರದ ಬೆನ್ನು ಹತ್ತಿ ಹೋಗಿದ್ದಾರೆ. ಈಗಿನ ರಾಜಕಾರಣ ತತ್ವ ರಾಜಕಾರಣದಿಂದ ವಿಮುಖವಾಗಿದೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ವಿಷಾದಿಸಿದರು.

ಇಲ್ಲಿಯ ರಾಜರಾಜೇಶ್ವರಿ ಕಲ್ಯಾಣ ಮಂಟಪದಲ್ಲಿ ಭಾನುವಾರ ಆಯೋಜಿಸಿದ್ದ ಮಹಿಳಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ದಿವಂಗತ ಎಂ.ಸಿ.ಮನಗೂಳಿ ಅವರನ್ನು ಎರಡು ಸಲ ಸಚಿವನನ್ನಾಗಿ ಮಾಡಿದ್ದೆ. ಆದರೆ ಅವರ ಮಗ ಕಾಂಗ್ರೆಸ್‌ಗೆ ಹೋದ. ಈ ಭಾಗದ ಸಂಸದ ರಮೇಶ ಜಿಗಜಿಣಗಿ ನಾನೇ ಬೆಳೆಸಿದ ವ್ಯಕ್ತಿ. ಆತ ಪಾರ್ಲಿಮೆಂಟ್ ಏರಿದ' ಎಂದು ಅವರು ನೆನಪಿಸಿಕೊಂಡರು.

'ಬರಡು ಭೂಮಿಯಾಗಿದ್ದ ಈ ನಾಡಿಗೆ ನೀರಾವರಿ ಯೋಜನೆ ಜಾರಿಗೆ ತಂದ ಕಾರಣ ರೈತರು ನನ್ನ ಮೂರ್ತಿಯನ್ನು ಸ್ಥಾಪಿಸಿದ್ದಾರೆ. ಗೋಲಗೇರಿಯಲ್ಲಿ ನನ್ನ ಮೂರ್ತಿ ಮಾಡಿ ಎಂದು ರೈತರಿಗೆ ನಾನೇನು ಅರ್ಜಿ ಹಾಕಿದ್ನಾ? ಇಲ್ಲವಲ್ಲ' ಎಂದರು.

'ಖತಲ್ ರಾತ್ರಿ ಮಾಡುವವರೇ ಕಾಂಗ್ರೆಸ್ಸಿಗರು'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಖತಲ್ ರಾತ್ರಿ' ಮಾಡುವವರೇ ಕಾಂಗ್ರೆಸ್ ಪಕ್ಷದವರು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಸಿಂದಗಿ ಮತಕ್ಷೇತ್ರದ ಕನ್ನೊಳ್ಳಿ ಗ್ರಾಮದಲ್ಲಿ ಭಾನುವಾರ ಬಿಜೆಪಿ ಅಭ್ಯರ್ಥಿ ಪರ ಪ್ರಚಾರದ ಅಂಗವಾಗಿ ನಡೆದ ರೋಡ್ ಶೋ ದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸ್ವಾರ್ಥ ರಾಜಕಾರಣ ಮಾಡಿ, ಗಳಿಸಿದ್ದ ಹಣವನ್ನು ಹಂಚುತ್ತಾರೆ ಎಂದು ದೂರಿದರು.

'ಡಿಕೆಶಿ ವಿವಿಧ ಉಪ ಚುನಾವಣೆಗಳಲ್ಲಿ ಗೋಣಿ ಚೀಲದಲ್ಲಿ ಹಣ ಹಂಚಿದ್ದಾರೆ. ಅವರ ಅನುಭವವನ್ನು ಹೇಳುವ ಮೂಲಕ ಬಿಜೆಪಿ ಮೇಲೆ ವಿನಾಕಾರಣ ಆರೋಪ ಮಾಡುತ್ತಿದ್ದಾರೆ' ಎಂದು ಕಿಡಿಕಾರಿದರು.

'ಪೂರ್ವದಲ್ಲಿ ಸೂರ್ಯ ಹುಟ್ಟುವುದು ಎಷ್ಟು ಸತ್ಯವೋ ಅಷ್ಟೆ ಸತ್ಯ ಸಿಂದಗಿ ಹಾಗೂ ಹಾನಗಲ್ ಕ್ಷೇತ್ರಗಳಲ್ಲಿ ಗೆಲುವು. ಅಷ್ಟೇ ಅಲ್ಲ ಮುಂಬರುವ 2023ರಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿಯೂ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸಿಂದಗಿ ಮತಕ್ಷೇತ್ರದ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ರಮೇಶ ಭೂಸನೂರ ಪರ ಕನ್ನೊಳ್ಳಿ ಗ್ರಾಮದಲ್ಲಿ ಭಾನುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತಯಾಚಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌ಡಿಕೆ ಪ್ರಶ್ನೆ

₹ 300 ಕೋಟಿ ಹಫ್ತಾ: ಇದೇನಾ ಆರ್‌ಎಸ್‌ಎಸ್ ಸಿದ್ಧಾಂತ?

ಪ್ರಜಾವಾಣಿ ವಾರ್ತೆ

ಮೈಸೂರು: 'ಜಮ್ಮು ಮತ್ತು ಕಾಶ್ಮೀರದಲ್ಲಿ 2 ಕಡತಗಳ ವಿಲೇವಾರಿಗಾಗಿ ಆರ್‌ಎಸ್‌ಎಸ್ ಮುಖಂಡರೊಬ್ಬರು ಹಾಗೂ ಉದ್ಯಮಿಗಳು ₹ 300 ಕೋಟಿ ಹಫ್ತಾ ಕೊಟ್ಟಿದ್ದರು ಎಂಬುದಾಗಿ ಅಲ್ಲಿನ ರಾಜ್ಯಪಾಲರೇ ಹೇಳಿಕೆ ಕೊಟ್ಟಿದ್ದಾರೆ. ಇದೇನಾ ಆರ್‌ಎಸ್‌ಎಸ್ ಸಿದ್ಧಾಂತ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.



ಕುಮಾರಸ್ವಾಮಿ

ಇಲ್ಲಿನ ಪತ್ರಕರ್ತರ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಸಂವಾದದಲ್ಲಿ ಮಾತನಾಡಿ, 'ಪ್ರಧಾನಿ ನರೇಂದ್ರ ಮೋದಿ ಮುಖೇನ ನೇಮಕವಾದ ರಾಜ್ಯಪಾಲರೇ ಹಫ್ತಾ ಬಗ್ಗೆ ಮಾತನಾಡಿದ್ದಾರೆ. ಆರ್‌ಎಸ್‌ಎಸ್ ಎಂದರೆ ಹಿಂದುತ್ವ, ದೇಶಭಕ್ತಿ, ಸಿದ್ಧಾಂತ, ಸಂಸ್ಕೃತಿ ಎನ್ನುತ್ತೀರಿ' ಎಂದು ಕುಟುಕಿದರು.

'ಈ ದೇಶದ ಹಿಂದುತ್ವ ನಾಶ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ದೇಶದ ಬ್ರ್ಯಾಂಡ್ ಹಿಂದುತ್ವ. ಅದಕ್ಕೆ ನಾವೂ ಕೈ ಜೋಡಿಸುತ್ತೇವೆ. ಆದರೆ, ನಾನು ಆರ್‌ಎಸ್‌ಎಸ್ ಕುರಿತು ಕೆಲವು ಲೇಖಕರು ಬರೆದ ಪುಸ್ತಕಗಳಲ್ಲಿನ ಅಂಶಗಳನ್ನಷ್ಟೇ ಪ್ರಸ್ತಾಪಿಸಿದ್ದೇನೆ. ಇದು ಮಹಾ ಅಪರಾಧವೇ? ಆರ್‌ಎಸ್‌ಎಸ್ ಕುರಿತು ನಾನು ಎತ್ತಿರುವ ಪ್ರಶ್ನೆಗಳಿಗಷ್ಟೇ ಉತ್ತರ ನೀಡಲಿ' ಎಂದು ಸವಾಲು ಹಾಕಿದರು.

ಕುಟುಂಬ ರಾಜಕಾರಣಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿ, 'ಜೆಡಿಎಸ್ ಅಲ್ಲ; ಜೆಡಿಎಫ್ (ಜನತಾದಳ ಫ್ಯಾಮಿಲಿ) ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಹಾಗಿದ್ದರೆ, ರಾಜಕಾರಣದಲ್ಲೇ ಇರದ ಯತೀಂದ್ರ ಅವರನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿದ್ದೀರಲ್ಲಾ, ಅದು ಕಾಂಗ್ರೆಸ್ ಫ್ಯಾಮಿಲಿಯೇ? ಅಥವಾ ಸಿದ್ದರಾಮಯ್ಯ ಫ್ಯಾಮಿಲಿಯೇ? ಎಲ್ಲರ ಮನೆ ದೋಸೆಯೂ ತೂತು. ಈ ವಿಚಾರವನ್ನು ಪದೇಪದೇ ಚರ್ಚೆ ಮಾಡುವುದನ್ನು ನಿಲ್ಲಿಸಲಿ' ಎಂದು ತಾಕೀತು ಮಾಡಿದರು.

'ಸಿದ್ದರಾಮಯ್ಯ ಜೆಡಿಎಸ್‌ನಲ್ಲಿದ್ದಾಗ ನಾವು ಹಣ ಖರ್ಚು ಮಾಡಿ ವೇದಿಕೆ ನಿರ್ಮಿಸಿ ಬ್ಯಾನರ್ ಕಟ್ಟಿ ಜನರನ್ನು ಸೇರಿಸಿದ ಮೇಲೆ ಬರುತ್ತಿದ್ದರು. ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮದ ಬ್ಯಾನರ್‌ನಲ್ಲಿ ತಮ್ಮ ಫೋಟೋ ಇರಲಿಲ್ಲ ಎಂಬ ಕಾರಣಕ್ಕೆ ಬರುವುದಿಲ್ಲ ಎಂದು ಕೂತಿದ್ದರು. ಕಾರ್ಯಕ್ರಮಗಳಲ್ಲೂ ಎಚ್.ಡಿ.ದೇವೇಗೌಡರಿಗೆ ಚಪ್ಪಲಿ ತಾಗುವಂತೆ ಕಾಲಮೇಲೆ ಕಾಲು ಹಾಕಿಕೊಂಡು ಕೂರುತ್ತಿದ್ದರು. ಅಂತಹ ಮನಸ್ಥಿತಿಯ ಅವರು ಮುಖ್ಯಮಂತ್ರಿಗಿರಿಯನ್ನು ಸುಲಭವಾಗಿ ಬಿಟ್ಟುಕೊಡುತ್ತಾರೆಯೇ' ಎಂದು ಪ್ರಶ್ನಿಸಿದರು.

'ನನ್ನಿಂದ ಯಾರು ಏನೇನು ಪಡೆದಿದ್ದಾರೆ ಎಂಬುದು ಗೊತ್ತು. ಜಮೀರ್ ಅಹಮ್ಮದ್ ಅವರನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿದ್ದೆ ನಾನು. ಅವರೀಗ ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದಾರೆ. ನಡೆದು ಹೋಗುವ ಆನೆ ಹಿಂದೆ ನಾಯಿಗಳು ಬೊಗಳುತ್ತವೆ. ಇದಕ್ಕೆಲ್ಲಾ ಉತ್ತರ ನೀಡಬೇಕೇ? ನಾಲಿಗೆ ಇದೆಯೆಂದು ಹೊಲಸು ಮಾತನಾಡಬಾರದು. ನಮ್ಮ ಕುಟುಂಬದ ಬಗ್ಗೆ ಮಾತನಾಡುವವರಿಗೆ ಆ ಚಾಮುಂಡೇಶ್ವರಿ, ಅಲ್ಲಾ ನೋಡಿಕೊಳ್ಳುತ್ತಾನೆ' ಎಂದು ಹೇಳಿದರು.

'ಆಡಳಿತಯಂತ್ರ ಸ್ಥಗಿತ'

'ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಬಿಜೆಪಿಯು ಪ್ರತಿ ಬೂತ್‌ಗೆ ಒಬ್ಬರಂತೆ ಸಚಿವರನ್ನು ನೇಮಿಸಿದೆ. ಇದರಿಂದ ರಾಜ್ಯದ ಆಡಳಿತ ಯಂತ್ರ ಸ್ಥಗಿತಗೊಂಡಿದೆ. ಮಂತ್ರಿಗಳು ವಿಧಾನಸೌಧಕ್ಕೆ ಬೀಗ ಜಡಿದು ಸಿಂದಗಿ, ಹಾನಗಲ್ ಕ್ಷೇತ್ರಗಳಲ್ಲಿ ಬೀಡುಬಿಟ್ಟಿದ್ದಾರೆ. ಮಳೆಯಿಂದ ಉಂಟಾಗಿರುವ ಹಾನಿ, ಜನರ ಸಮಸ್ಯೆಗಳಿಗಿಂತ ಚುನಾವಣೆಯಲ್ಲಿ ಗೆಲ್ಲುವುದೇ ಮುಖ್ಯವಾಗಿದೆ. ಕಾಂಗ್ರೆಸ್ ಕೂಡ ಬೂತ್‌ಗೆ ಒಬ್ಬರಂತೆ ನಾಯಕರನ್ನು ನೇಮಿಸಿದೆ' ಎಂದು ಎಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

'ಆರ್‌ಎಸ್‌ಎಸ್ ಟೀಕಿಸದಿದ್ದರೆ ಜೀರ್ಣವಾಗುವುದಿಲ್ಲವೇ?'

ಹಾವೇರಿ: 'ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮತ್ತು ಎಚ್.ಡಿ. ಕುಮಾರಸ್ವಾಮಿ ಸ್ಪರ್ಧೆಗೆ ಬಿದ್ದವರಂತೆ ಆರ್‌ಎಸ್‌ಎಸ್ ಅನ್ನು ಟೀಕೆ ಮಾಡುತ್ತಿದ್ದಾರೆ. ಟೀಕಿಸದಿದ್ದರೆ ತಿಂದದ್ದು ಜೀರ್ಣವಾಗುವುದಿಲ್ಲವೆ' ಎಂದು ಶಾಸಕ ಎಂ.ಪಿ.ರೇಣುಕಾಚಾರ್ಯ ತಿರುಗೇಟು ನೀಡಿದರು.

ಹಾನಗಲ್‌ನಲ್ಲಿ ಭಾನುವಾರ ಮಾಧ್ಯಮಗೋಷ್ಠಿಯಲ್ಲಿ ಅವರು ಮಾತನಾಡಿ, 'ಕುಮಾರಸ್ವಾಮಿಯವರೇ ಒಮ್ಮೆ ಸಂಘದ ಶಾಖೆಗೆ ಬನ್ನಿ. ಸಂಘದ ಸಂಸ್ಕಾರ ಎಂಥದ್ದು ಎಂಬುದು ತಿಳಿಯುತ್ತದೆ. ಬ್ಲೂಫಿಲಂ ಅನುಭವ ನಿಮಗಿರಬಹುದು, ನಮಗಿಲ್ಲ. 'ಕುಟುಂಬ ರಾಜಕಾರಣ' ಮಾಡಿದ್ದೇ ಜೆಡಿಎಸ್ ಸಾಧನೆ' ಎಂದು ವಾಗ್ದಾಳಿ ನಡೆಸಿದರು.

'ಜನತಾ ಪರಿವಾರದಲ್ಲಿದ್ದಾಗ ಸಿದ್ದರಾಮಯ್ಯ ಅವರು ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಬಗ್ಗೆ ಕೆಟ್ಟ ಶಬ್ದಗಳನ್ನು ಆಡಿದ್ದಾರೆ. ಆ ಬಗ್ಗೆ ನನ್ನ ಬಳಿ ದಾಖಲೆಗಳಿವೆ. ನಾಲಿಗೆ ಮೇಲೆ ಹಿಡಿತವಿಲ್ಲದೇ ದೇಶದ ಪ್ರಧಾನಿ ಬಗ್ಗೆ ನಾಲಿಗೆ ಹರಿಬಿಟ್ಟಿದ್ದೀರಿ. ಇದು ಸರಿಯೇ?' ಎಂದು ತಿರುಗೇಟು ನೀಡಿದರು.

ಪರೀಕ್ಷೆಯಲ್ಲಿ ನಕಲು: 14 ಮಂದಿ ಬಂಧನ

ಬೆಳಗಾವಿ: ನಗರದಲ್ಲಿ ಭಾನುವಾರ ನಡೆದ ನಾಗರಿಕ ಪೊಲೀಸ್ ಕಾನ್‌ಸ್ಟೆಬಲ್ ಲಿಖಿತ ಪರೀಕ್ಷೆಯ ವೇಳೆ ಬ್ಲೂಟೂತ್ ಸಾಧನ ಬಳಸಿ ನಕಲು ಮಾಡಲು ಯತ್ನಿಸಿದ ಯುವಕ, ಯುವತಿ ಸೇರಿದಂತೆ 14 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಅವರಿಂದ 33 ಮೊಬೈಲ್‌ಗಳು, 9 ಮಾಸ್ಟರ್ ಕಾರ್ಡ್ ಸಾಧನಗಳು, 19 ಬ್ಲೂಟೂತ್ ಉಪಕರಣಗಳು, 3 ಟ್ಯಾಬ್‌ಗಳು, 1 ಲ್ಯಾಪ್‌ಟಾಪ್, 1 ಪ್ರಿಂಟರ್, 1 ಕಾರು ಹಾಗೂ ಮೂರು ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಬ್ಲೂಟೂತ್ ಸಾಧನ ಬಳಸಿ ಪರೀಕ್ಷಾ ಅಕ್ರಮ ಎಸಗಲು ಯತ್ನಿಸಿದ ಬಗ್ಗೆ ಬಂದ ಖಚಿತ ಮಾಹಿತಿ ಆಧರಿಸಿ ಸಿಇಎನ್ ಠಾಣೆ ಹಾಗೂ ಡಿಸಿಐಬಿ ಪೊಲೀಸರು ಈ ಕಾರ್ಯಾಚರಣೆ ನಡೆಸಿದ್ದಾರೆ.

ರಾಮತೀರ್ಥ ನಗರದಲ್ಲಿರುವ ಎಸ್.ಎಸ್. ಡೆಕೊರೇಟರ್ ಮತ್ತು ಈವೆಂಟ್ ಪ್ಲ್ಯಾನರ್ ಕಚೇರಿಯ ಮೇಲೆ ದಾಳಿ ನಡೆಸಿದ್ದಾರೆ. ಅಲ್ಲಿ ಕುಳಿತಿದ್ದ ಕೆಲವರು ಮೊಬೈಲ್ ಫೋನ್ ಮತ್ತು ಬ್ಲೂಟೂತ್ ಸಾಧನ ಬಳಸಿ, ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಿಗೆ ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗಳನ್ನು ಬಿಡಿಸಲು ಸಹಾಯ ಮಾಡುತ್ತಿದ್ದುದು ಕಂಡುಬಂದಿತು. ಸ್ಥಳದಲ್ಲಿದ್ದ ಒಟ್ಟು 12 ಮಂದಿಯನ್ನು ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಅದೇ ಪ್ರಕರಣಕ್ಕೆ ಸಂಬಂಧಿಸಿದಂತೆ ವನಿತಾ ವಿದ್ಯಾಲಯ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಹಾಗೂ ಸರ್ದಾರ್ ಪಿಯು ಕಾಲೇಜಿನ ಕೇಂದ್ರದಲ್ಲಿ ಮಾಸ್ಟರ್ ಕಾರ್ಡ್ ಹಾಗೂ ಬ್ಲೂಟೂತ್ ಸಾಧನ ಬಳಸಿ ಪರೀಕ್ಷೆ ಬರೆಯುತ್ತಿದ್ದರು. ಅವರನ್ನು ಬಂಧಿಸಲಾಗಿದೆ.

ಮಾಳಮಾರುತಿ, ಕ್ಯಾಂಪ್ ಹಾಗೂ ಖಡೇಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿಲ್ಲಾ ಹಾಗೂ ನಗರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಗ್ದಾಳಿ

ವಿಧಾನಸೌಧಕ್ಕೆ ಬೀಗ; ಹಾನಗಲ್‌ನಲ್ಲಿ ಬಿಡಾರ ಹೂಡಿದ ಮಂತ್ರಿಮಂಡಲ

ಪ್ರಜಾವಾಣಿ ವಾರ್ತೆ

ಹಾನಗಲ್: 'ಇಡೀ ಮಂತ್ರಿಮಂಡಲ ವಿಧಾನಸೌಧಕ್ಕೆ ಬೀಗ ಜಡಿದು ಹಾನಗಲ್‌ನಲ್ಲಿ ಬಿಡಾರ ಹೂಡಿದೆ. ಸರ್ಕಾರ ಸರಿಯಾಗಿ ಕೆಲಸ ಮಾಡಿ, ಯೋಜನೆಗಳನ್ನು ತಲುಪಿಸಿದ್ದರೆ ಈ ಪರಿಸ್ಥಿತಿ ಬರುತ್ತಿತ್ತೇ? ಜನರಿಗೆ ಆಮಿಷ ಒಡ್ಡುವ ಸ್ಥಿತಿ ನಿರ್ಮಾಣವಾಗುತ್ತಿತ್ತೇ? ಇದಕ್ಕೆ ಜನರೇ ಪಾಠ ಕಲಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಶಿವಕುಮಾರ್

ಹಾನಗಲ್‌ನಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮುಖ್ಯಮಂತ್ರಿಗಳ ಕಚೇರಿಯಲ್ಲಿರುವವರಿಗೆ ಪರಿಜ್ಞಾನ ಇದೆಯೋ? ಇಲ್ಲವೋ? ಎಂಬ ಪ್ರಶ್ನೆ ಕಾಡುತ್ತಿದೆ. ಬಿಜೆಪಿ ಬಿಡುಗಡೆ ಮಾಡಿರುವ ಈ ಪ್ರಣಾಳಿಕೆ ಮಾಡಿದ್ದು ಯಾರು? ಯಾರನ್ನು ಮೂರ್ಖರನ್ನಾಗಿಸಲು ಇದನ್ನು ಬಿಡುಗಡೆ ಮಾಡಲಾಗಿದೆ? ಇದರಲ್ಲಿ ಆಯುಷ್ಮಾನ್ ಭಾರತ ಯೋಜನೆಯಲ್ಲಿ ಆರೋಗ್ಯಕ್ಕಾಗಿ ₹5 ಲಕ್ಷ ನೀಡುತ್ತಾರಂತೆ. ಕಳೆದ 2 ವರ್ಷಗಳಲ್ಲಿ ಸತ್ತವರಿಗೆ ಈ ವಿಮೆಯಿಂದಲೇ ಪರಿಹಾರ, ಆಸ್ಪತ್ರೆಯಲ್ಲಿ ದುಬಾರಿ ಬಿಲ್ ತೆತ್ತವರಿಗೆ ಸಹಾಯ ಮಾಡಬಹುದಿತ್ತಲ್ಲವೇ? ಯಾಕೆ ಮಾಡಲಿಲ್ಲ? ಎಂದರು.

ಬಿಜೆಪಿ ಆಡಳಿತದಲ್ಲಿ ಮಹಿಳೆಯರಿಗಿಲ್ಲ ರಕ್ಷಣೆ: 'ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷೆ ಬೇಬಿರಾಣಿ ಮೌರ್ಯ ಅವರು ಕತ್ತಲಾದ ಮೇಲೆ ಯಾವುದೇ ಹೆಣ್ಣುಮಕ್ಕಳು ಒಂಟಿಯಾಗಿ ಪೊಲೀಸ್ ಠಾಣೆಗೆ ಹೋಗಬಾರದು. ಹೋಗಬೇಕಾದ ಸ್ಥಿತಿ ಬಂದರೆ ಅಣ್ಣ, ಅಪ್ಪ, ಪತಿ ಯಾರನ್ನಾದರೂ ಜತೆಯಲ್ಲಿ ಕರೆದುಕೊಂಡು ಹೋಗಬೇಕು' ಎಂದು ಪ್ರಧಾನಿ ಪ್ರತಿನಿಧಿಸುವ ಕ್ಷೇತ್ರ ವಾರಾಣಸಿಯಲ್ಲಿ ಹೇಳಿದ್ದಾರೆ. ಈ ದೇಶ ಹಾಗೂ ರಾಜ್ಯದಲ್ಲಿ ಯಾವ ರೀತಿ ಮಹಿಳೆಯರಿಗೆ ರಕ್ಷಣೆ ಸಿಗುತ್ತಿದೆ ಎಂದು ನಾವು ನೋಡುತ್ತಿದ್ದು, ಈ ವಿಚಾರ ಗಂಭೀರವಾಗಿ ಪರಿಗಣಿಸುವಂತೆ ಮಹಿಳೆಯರಲ್ಲಿ ಮನವಿ ಮಾಡುತ್ತೇನೆ. ದೇಶದ ಎಲ್ಲ ಮಹಿಳೆಯರು ಧ್ವನಿ ಎತ್ತಿ ಹೋರಾಡಬೇಕು. ಬಿಜೆಪಿ ವಿರುದ್ಧ ಮತ ಹಾಕಿ, ತಮ್ಮ ಸುರಕ್ಷತೆಯತ್ತ ಗಮನ ಹರಿಸಬೇಕು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಯಾವ ಕಾರಣಕ್ಕೆ ಬಿಜೆಪಿ ಸಂಭ್ರಮ?: ದೇಶದಲ್ಲಿ 100 ಕೋಟಿ ಲಸಿಕೆ ನೀಡಲಾಗಿದೆ ಎಂದು ಬಿಜೆಪಿಯವರು ಸಂಭ್ರಮಿಸುತ್ತಿದ್ದಾರೆ. ಆದರೆ ಎರಡೂ ಡೋಸ್ ಲಸಿಕೆ ಕೊಟ್ಟಿರುವುದು ಶೇ 21ರಷ್ಟು ಮಂದಿಗೆ ಮಾತ್ರ. ಕೋವಿಡ್‌ನಿಂದ ಜನರನ್ನು ರಕ್ಷಿಸಿ, ಉಳಿಸಿಕೊಂಡಿದ್ದರೆ ಸಂಭ್ರಮ ಪಡಬಹುದಿತ್ತು. ಈ ಸರ್ಕಾರ ಸತ್ತವರಿಗೆ ಪರಿಹಾರ ಕೊಡದಿರುವುದಕ್ಕೆ ಈ ಸಂಭ್ರಮಾಚರಣೆಯೇ?, ರೈತ ಕುಟುಂಬಗಳು ಕಣ್ಣೀರಿನಲ್ಲಿ ಕೈತೊಳೆಯುತ್ತಿರುವುದಕ್ಕೆ ಈ ಸಂಭ್ರಮಾಚರಣೆಯೇ? ಎಂದು ಪ್ರಶ್ನಿಸಿದರು.

ಮುಖ್ಯಾಂಶಗಳು

- 'ಸರ್ಕಾರ ಸರಿಯಾಗಿ ಕೆಲಸ ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ'
- 'ದೇಶ ಹಾಗೂ ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆ ಸಿಗುತ್ತಿಲ್ಲ'

NAYARA ENERGY

ಟೆಂಡರ್ ನೋಟೀಸ್
ಆ್ಯನ್‌ಹೈಡ್ರಸ್ ಎಥೆನಾಲ್ ಖರೀದಿಗಾಗಿ

ನಯಾರಾ ಎನರ್ಜಿಯು ಅಂತರಾಷ್ಟ್ರೀಯ ಮಟ್ಟದ ಆಯಿಲ್ ಕಂಪನಿಯಾಗಿದ್ದು ಗುಜರಾತ್‌ನ ವಾಡಿನಾರ್‌ನಲ್ಲಿ ಭಾರತದ 2ನೇ ಅತ್ಯಂತ ದೊಡ್ಡ ಸಿಂಗಲ್–ಸೈಟ್ ರಿಫೈನರಿ ಹೊಂದಿದೆ ಹಾಗೂ 6300+ ಪೆಟ್ರೋಲ್‌ಪಂಪ್‌ಗಳ ಭಾರತದ ಅತಿ ದೊಡ್ಡ ಖಾಸಗಿ ನೆಟ್‌ವರ್ಕ್ ಅನ್ನು ನಿರ್ವಹಿಸುತ್ತಿದೆ.

ನಯಾರಾ **ಡಿಸೆಂಬರ್–21 ರಿಂದ ನವೆಂಬರ್ 22ರ ಅವಧಿಗಾಗಿ IS:15464:2004 ರ ಪ್ರಕಾರ ವಿವಿಧ ಕಚ್ಚಾವಸ್ತುಗಳಿಂದ ಇಂಡೀಜಿನಿಯಸ್ ಆ್ಯನ್‌ಹೈಡ್ರಸ್ ಎಥೆನಾಲ್‌ನ 24 ಕೋಟಿ ಲೀಟರ್‌ಗಳ ಖರೀದಿಗಾಗಿ** ಟೆಂಡರ್‌ನಲ್ಲಿ ಭಾಗವಹಿಸಲು ಬಿಡ್ಡರ್‌ಗಳನ್ನು ಆಹ್ವಾನಿಸುತ್ತದೆ.

ಈ ಕೆಳಗಿನ ಸ್ಥಳಗಳಲ್ಲಿ ಅಗತ್ಯವಿದೆ

ಸ್ಥಳ	ರಾಜ್ಯ	ಸ್ಥಳ	ರಾಜ್ಯ
ವಾಡಿನಾರ್	ಗುಜರಾತ್	ವೈಜಾಗ್	ಆಂಧ್ರ ಪ್ರದೇಶ
ಮುಂಬಯಿ	ಮಹಾರಾಷ್ಟ್ರ	ಕೋಚಿ	ಕೇರಳಾ
ವರ್ಧಾ	ಮಹಾರಾಷ್ಟ್ರ	ಬಡ್ಜ್ ಬಡ್ಜ್	ಪಶ್ಚಿಮ ಬಂಗಾಳ
ಮಂಗಳೂರು	ಕರ್ನಾಟಕ	ಎನ್ನೋರ್	ತಮಿಳುನಾಡು
ಕಾಕಿನಾಡ	ಆಂಧ್ರ ಪ್ರದೇಶ	ಮಾಂಗಲಿಯಾ	ಮಧ್ಯಪ್ರದೇಶ

ಟೆಂಡರ್ ಕಾಗದಪತ್ರಗಳು ಇಲ್ಲಿ ಲಭ್ಯವಿರುತ್ತವೆ: https://tender.nayaraenergy.com/TenderList.aspx

ಇಲ್ಲಿ ವೆಂಡರ್ (ಮಾರಾಟಗಾರರ) ಕಡ್ಡಾಯ ನೋಂದಣಿ : https://suppliers.nayaraenergy.com

ಇಮೇಲ್: hydrocarbon.procurement@nayaraenergy.com

ಸಂಪರ್ಕ: ರಾಕೇಶ್ ಕುಮಾರ + 91 8097506083

ಗುಂಡಿನ ಚಕಮಕಿ, ನಾಗರಿಕ ಸಾವು

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಭಾನುವಾರ ಉಗ್ರರು ಹಾಗೂ ಸಿಆರ್‌ಪಿಎಫ್ ಯೋಧರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ನಾಗರಿಕನೊಬ್ಬ ಮೃತಪಟ್ಟಿದ್ದಾನೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆ ಕುರಿತು ರಾಜಕೀಯ ಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ತನಿಖೆಗೆ ಒತ್ತಾಯಿಸಿವೆ. ಮೃತ ವ್ಯಕ್ತಿಯನ್ನು ಶಾಹಿದ್ ಅಹ್ಮದ್ ಎಂದು ಗುರುತಿಸಲಾಗಿದೆ.

ಈ ಘಟನೆ ಕುರಿತು ಟ್ವೀಟ್ ಮಾಡಿರುವ ನ್ಯಾಷನಲ್ ಕಾನ್ಫರೆನ್ಸ್ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ 'ಮೊದಲು ಗುಂಡು ಹಾರಿಸಿ ಎಂಬ ನೀತಿಯು ಜನರನ್ನು ಸರ್ಕಾರದಿಂದ ಮತ್ತಷ್ಟು ದೂರವಿಡುತ್ತದೆ. ಕಾಶ್ಮೀರ ಯುವಕರ ಸ್ನೇಹ ಬೇಕು ಎನ್ನುವ ಅಮಿತ್ ಶಾ ಅವರು ಇಂತಹ ಧೋರಣೆಯಿಂದ ಸರ್ಕಾರ ನಡೆಸಿದರೆ ಜನರ ಸ್ನೇಹ ಗಳಿಸಲು ಸಾಧ್ಯವಿಲ್ಲ.' ಎಂದಿದ್ದಾರೆ.

ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರು 'ಕಾಶ್ಮೀರದಲ್ಲಿ ಸಶಸ್ತ್ರ ಪಡೆಗಳು ನಿರ್ಭಯದಿಂದ ಕಾರ್ಯನಿರ್ವಹಿಸುತ್ತಿರುವುದು ದುಃಖಕರ. ಆತನ ಕುಟುಂಬಕ್ಕೆ ನನ್ನ ಸಂತಾಪಗಳು' ಎಂದಿದ್ದಾರೆ.

ಪಾಕ್ ಉಗ್ರನ ಹತ್ಯೆ: ಪೂಂಚ್ ಜಿಲ್ಲೆಯ ಅರಣ್ಯ ಪ್ರದೇಶದೊಳಗೆ ಭಾನುವಾರ ಸೇನೆ– ಪೊಲೀಸರು ನಡೆಸಿದ ಜಂಟಿ ಶೋಧ ಕಾರ್ಯಾಚರಣೆ ವೇಳೆ ಉಗ್ರರೊಂದಿಗೆ ನಡೆದ ಗುಂಡಿನ ದಾಳಿಯಲ್ಲಿ ಪಾಕಿಸ್ತಾನದ ಬಂಧಿತ ಉಗ್ರನೊಬ್ಬ ಹತ್ಯೆಗೀಡಾಗಿದ್ದು, ಭದ್ರತಾ ಪಡೆಯ 3 ಸಿಬ್ಬಂದಿ ಗಾಯಗೊಂಡಿದ್ದಾರೆ.

'ಕಾರ್ಯಾಚರಣೆ ವೇಳೆ ಉಗ್ರರ ಅಡಗುತಾಣ ಪತ್ತೆ ಹಚ್ಚಲು ಪಾಕಿಸ್ತಾನದ ಬಂಧಿತ ಭಯೋತ್ಪಾದಕ, ಎಲ್‌ಇಟಿಯ ಜೊತೆ ನಂಟು ಹೊಂದಿರುವ ಜಿಯಾ ಮುಸ್ತಫಾನನ್ನು ಜತೆಗೆ ಕರೆದೊಯ್ಯಲಾಗಿತ್ತು. ಅದೇ ವೇಳೆ ಉಗ್ರರು ಹಾರಿಸಿದ ಗುಂಡಿಗೆ ಆತ ಗಾಯಗೊಂಡಿದ್ದ. ಎಂದು ಪೊಲೀಸ್ ವಕ್ತಾರರು ಮಾಹಿತಿ ನೀಡಿದ್ದಾರೆ.

ಜಮ್ಮು–ಕಾಶ್ಮೀರದಲ್ಲಿ ಶಾಂತಿ ಭಂಗಕ್ಕೆ ಅವಕಾಶ ಇಲ್ಲ: ಗೃಹ ಸಚಿವ ಅಮಿತ್ ಶಾ

ನಾಗರಿಕರ ಹತ್ಯೆ ಕೊನೆಗಾಣಿಸುವ ಗುರಿ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ಅಳಿಸುವ ಮತ್ತು ನಾಗರಿಕರ ಹತ್ಯೆಗಳನ್ನು ಕೊನೆಗಾಣಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಹೇಳಿದರು. ಈ ಕೇಂದ್ರಾಡಳಿತ ಪ್ರದೇಶವು ಪ್ರಧಾನಿ ನರೇಂದ್ರ ಮೋದಿ ಅವರ ಹೃದಯದಲ್ಲಿ ಜಾಗ ಪಡೆದಿದೆ. ಇದರ ಶಾಂತಿ ಮತ್ತು ಅಭಿವೃದ್ಧಿಗೆ ಧಕ್ಕೆ ಉಂಟು ಮಾಡಲು ಯಾರಿಗೂ ಅವಕಾಶ ನೀಡುವುದಿಲ್ಲ ಎಂದರು.

ಮೂರು ದಿನಗಳ ಪ್ರವಾಸಕ್ಕಾಗಿ ಅಮಿತ್ ಶಾ ಇಲ್ಲಿಗೆ ಆಗಮಿಸಿದ್ದಾರೆ. ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ಇದ್ದ ವಿಶೇಷ ಸ್ಥಾನಮಾನ ರದ್ದತಿ ಬಳಿಕ ಇದೇ ಮೊದಲಿಗೆ ಶಾ ಅವರು ಇಲ್ಲಿಗೆ ಭೇಟಿ ಕೊಟ್ಟಿದ್ದಾರೆ.

ಇಲ್ಲಿಯ ಭಗವತಿ ನಗರದಲ್ಲಿ ಸಾರ್ವಜನಿಕ ರ್‍ಯಾಲಿ ನಡೆಸಿದ ಅವರು, ಪಕ್ಷಗಳ ಹೆಸರು ಹೇಳದೇ ಕಾಂಗ್ರೆಸ್, ನ್ಯಾಷನಲ್ ಕಾನ್ಫರೆನ್ಸ್ ಮತ್ತು ಪಿಡಿಪಿ ವಿರುದ್ಧ ಟೀಕೆ ಮಾಡಿದರು. ಜಮ್ಮು ಮತ್ತು ಕಾಶ್ಮೀರಕ್ಕೆ ಸರ್ಕಾರ ಏನು ಕೊಡುತ್ತದೆ ಎಂದು ಮೂರು ಕುಟುಂಬಗಳು ಕೇಳುತ್ತಿದ್ದವು. ನಾವು ಏನು ಕೊಟ್ಟಿದ್ದೇವೆ ಎಂಬುದು ಜನರಿಗೆ ತಿಳಿದಿದೆ. ಕಳೆದ ಏಳು ದಶಕಗಳಿಂದ ಜಮ್ಮು ಮತ್ತು ಕಾಶ್ಮೀರವನ್ನು ಏಕೆ ಅಭಿವೃದ್ಧಿಪಡಿಸಲಿಲ್ಲ ಎಂದು ಮೂರು ಕುಟುಂಬಗಳು ಜನರಿಗೆ ಉತ್ತರಿಸಬೇಕು ಎಂದರು.

₹12,000 ಕೋಟಿ ಮೊತ್ತದ ಬಂಡವಾಳ ಈಗಾಗಲೇ ಜಮ್ಮು ಮತ್ತು ಕಾಶ್ಮೀರಕ್ಕೆ ಹರಿದು ಬಂದಿದೆ. 2022ರ ಅಂತ್ಯದ ವೇಳೆಗೆ ₹51,000 ಕೋಟಿ ಬಂಡವಾಳ ತರುವ ಮತ್ತು ಐದು ಲಕ್ಷ ಸ್ಥಳೀಯ ಯುವಕರಿಗೆ ಉದ್ಯೋಗ ನೀಡುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದರು. ಸೇವಾ ವಲಯದಿಂದ ಕಳೆದ ಎರಡು ವರ್ಷಗಳಲ್ಲಿ ಸುಮಾರು 25,000 ಜನರಿಗೆ ಉದ್ಯೋಗ ನೀಡಲಾಗಿದೆ ಎಂದರು.

ಈ ತಿಂಗಳು ಕಾಶ್ಮೀರ ಗಡಿಯಲ್ಲಿ ನಡೆದ ಭಯೋತ್ಪಾದಕ ದಾಳಿಗಳಲ್ಲಿ 11 ಜನರು ಮೃತಪಟ್ಟಿದ್ದ ಕುರಿತು ಎದ್ದಿದ್ದ ಟೀಕೆಗಳ ಕುರಿತು ಮಾತನಾಡಿದ ಅವರು, ಜಮ್ಮು ಮತ್ತು ಕಾಶ್ಮೀರದಲ್ಲಿಯ ಭದ್ರತೆ ಕುರಿತು ಹಲವರು ಪ್ರಶ್ನೆಗಳನ್ನು ಎತ್ತಿದ್ದಾರೆ. ಅವರಿಗೆ ವಸ್ತುಸ್ಥಿತಿ ಮತ್ತು ಅಂಕಿಅಂಶಗಳ ಮೂಲಕ ಉತ್ತರಿಸಲು ಬಯಸುತ್ತೇನೆ ಎಂದರು. 2004ರಿಂದ 2014ರ ವರೆಗೆ ಒಟ್ಟು 2,081 ನಾಗರಿಕರು ಮೃತಪಟ್ಟಿದ್ದಾರೆ. ಅಂದರೆ ವರ್ಷಕ್ಕೆ ಸರಾಸರಿ 239 ಜನರು ಮೃತಪಟ್ಟಿದ್ದಾರೆ. 2014ರಿಂದ ಈ ವರ್ಷದ ಸೆಪ್ಟೆಂಬರ್ ವರೆಗೆ 239 ನಾಗರಿಕರು ಮೃತಪಟ್ಟಿದ್ದಾರೆ. ಅದರರ್ಥ ವರ್ಷಕ್ಕೆ ಸರಾಸರಿ 30 ಜನರು ಮೃತಪಟ್ಟಿದ್ದಾರೆ. ಸಾವಿನ ಪ್ರಮಾಣದಲ್ಲಿ ಸಾಕಷ್ಟು ಕಡಿಮೆ ಆಗಿದೆ. ಆದರೆ ನಮಗೆ ತೃಪ್ತಿ ಇಲ್ಲ. ಒಬ್ಬ ವ್ಯಕ್ತಿಯ ಜೀವಹಾನಿಯೂ ಆಗದಂಥ ವಾತಾವರಣವನ್ನು ನಿರ್ಮಿಸಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದರು.

'ಮೋದಿ ಅವರು ಪ್ರಧಾನಿ ಆಗುತ್ತಿದ್ದಂತೆ ಜಮ್ಮು ಮತ್ತು ಕಾಶ್ಮೀರಕ್ಕೆ ₹55,000 ಕೋಟಿ ಅನುದಾನ ನೀಡಿದರು. ಅದರಲ್ಲಿ ₹33,000 ಕೋಟಿಯನ್ನು ಹಲವಾರು ಅಭಿವೃದ್ಧಿ ಕೆಲಸಗಳಿಗೆ ವ್ಯಯಿಸಲಾಗಿದೆ. ಈ ದಿನ ನಾನು ₹15,000 ಕೋಟಿ ವೆಚ್ಚದ ಹಲವು ಯೋಜನೆಗಳ ಶಿಲಾನ್ಯಾಸ ನೆರವೇರಿಸಿದೆ. ಮೂರು ಕುಟುಂಬಗಳು ಈ ವರೆಗೂ ಇಷ್ಟು ಅಭಿವೃದ್ಧಿಯನ್ನು ಇಲ್ಲಿ ಮಾಡಿಲ್ಲ' ಎಂದರು.

ಜಮ್ಮುವಿನಲ್ಲಿರುವ ಗುರುದ್ವಾರ ಡಿಗಿಯಾನಾ ಆಶ್ರಮಕ್ಕೆ ಅಮಿತ್ ಶಾ ಭೇಟಿ ಕೊಟ್ಟರು. ಜಮ್ಮು–ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಜತೆಗಿದ್ದರು –ಪಿಟಿಐ ಚಿತ್ರ

> **ಮೋದಿ ಅವರ ನಾಯಕತ್ವದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಹೊಸ ಶಕೆ ಆರಂಭವಾಗಿದೆ. ಆದರೆ ಕೆಲ ಸಂಕುಚಿತ ಮನಸ್ಥಿತಿಗಳು ಅಭಿವೃದ್ಧಿಗೆ ಅಡಚಣೆ ತರುತ್ತಿವೆ**
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಮುಖರ್ಜಿ ಕನಸು ಈಡೇರಿಕೆ

ಜನಸಂಘದ ಸ್ಥಾಪಕ ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಕನಸನ್ನು ಈಡೇರಿಸುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರ ವೈಯಕ್ತಿಕ ಪ್ರಯತ್ನದಿಂದ ಸಂವಿಧಾನದ 370ನೇ ವಿಧಿ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನ ರದ್ದುಪಡಿಸಲಾಯಿತು ಎಂದು ಶಾ ಹೇಳಿದ್ದಾರೆ.

ಮೋದಿ ಅವರು ಜಮ್ಮು–ಕಾಶ್ಮೀರದಲ್ಲಿ ತಳಮಟ್ಟದ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ್ದಾರೆ. ವಿಶೇಷ ಸ್ಥಾನದ ಮರೆಯಲ್ಲಿ ಜಮ್ಮು–ಕಾಶ್ಮೀರದ ಲಕ್ಷಾಂತರ ಜನರು ಅನುಭವಿಸುತ್ತಿದ್ದ ಅನ್ಯಾಯ ಕೊನೆಯಾಗಿದೆ. ಅಭಿವೃದ್ಧಿಯ ಹೊಸ ಶಕೆ ಆರಂಭವಾಗಿದೆ ಎಂದು ಅವರು ಹೇಳಿದರು.

70 ವರ್ಷದ ಬಳಿಕ ಜಮ್ಮು–ಕಾಶ್ಮೀರದಲ್ಲಿ ತಳಮಟ್ಟದ ಪ್ರಜಾಪ್ರಭುತ್ವ ಸ್ಥಾಪನೆಯ ಗೌರವವು ಬಿಜೆಪಿಗೆ ಸಲ್ಲಬೇಕು. ಈಗ, ಯರು ಬೇಕಿದ್ದರು ಜಮ್ಮು–ಕಾಶ್ಮೀರದ ಸಚಿವರಾಗಬಹುದು, ಮುಖ್ಯಮಂತ್ರಿಯೂ ಆಗಬಹುದು. ಪಂಡಿತ ಸಮುದಾಯವನ್ನು ಮತ ಬ್ಯಾಂಕ್ ಆಗಿ ಮಾತ್ರ ನೋಡಲಾಗಿತ್ತು. ಈಗ ಅವರಿಗೂ ಪ್ರಾತಿನಿಧ್ಯ ಇದೆ. ಅವರ ಪ್ರತಿನಿಧಿಯು ಮುಖ್ಯಮಂತ್ರಿ ಆಗುವ ಅವಕಾಶವೂ ಇದೆ ಎಂದು ಶಾ ಹೇಳಿದ್ದಾರೆ.

ಐಐಟಿ ಉದ್ಘಾಟನೆ: ಐಐಟಿ ಜಮ್ಮುವಿನ ಹೊಸ ಕ್ಯಾಂಪಸ್ ಅನ್ನು ಅಮಿತ್ ಶಾ ಅವರು ಉದ್ಘಾಟಿಸಿದರು. ₹210 ಕೋಟಿ ವೆಚ್ಚದಲ್ಲಿ ಈ ಕ್ಯಾಂಪಸ್ ನಿರ್ಮಿಸಲಾಗಿದೆ. ಉನ್ನತ ಶಿಕ್ಷಣ ಕೇಂದ್ರದ ಜತೆಗೆ ಹಾಸ್ಟೆಲ್, ಜಿಮ್ ಮತ್ತಿತರ ಸೌಲಭ್ಯಗಳನ್ನು ಈ ಕ್ಯಾಂಪಸ್‌ನಲ್ಲಿ ಒದಗಿಸಲಾಗಿದೆ. ಸಂಶೋಧನಾ ಕೇಂದ್ರವಾಗಿ ಈ ಕ್ಯಾಂಪಸ್ ಅನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಜನರಿಗೆ ಕಷ್ಟ ಕೊಡುವುದರಲ್ಲಿ ಮೋದಿ ಸರ್ಕಾರದಿಂದ ದಾಖಲೆ'

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಏರಿಸುತ್ತಲೇ ಇರುವ ಕೇಂದ್ರ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ, 'ಜನರಿಗೆ ತೊಂದರೆ ಕೊಡುವುದರಲ್ಲಿ ಮೋದಿ ಸರ್ಕಾರ ದಾಖಲೆ ನಿರ್ಮಿಸಿದೆ' ಎಂದು ವ್ಯಂಗ್ಯವಾಡಿದ್ದಾರೆ.

ಈ ಬಗ್ಗೆ ಭಾನುವಾರ ಟ್ವೀಟ್ ಮಾಡಿರುವ ಅವರು, ಪೆಟ್ರೋಲ್‌ಗೆ ಈ ವರ್ಷ ಲೀಟರ್‌ಗೆ ದಾಖಲೆಯ ₹23.53 ರೂಪಾಯಿಯಷ್ಟು ಹೆಚ್ಚಳವಾಗಿದೆ ಎಂಬ ಮಾಧ್ಯಮ ವರದಿಯೊಂದನ್ನು ಟ್ಯಾಗ್ ಮಾಡಿದ್ದಾರೆ.

'ಜನರಿಗೆ ತೊಂದರೆ ಕೊಡುವುದರಲ್ಲಿ ಮೋದಿ ಸರ್ಕಾರ ದೊಡ್ಡ ದಾಖಲೆ ನಿರ್ಮಿಸಿದೆ. ಮೋದಿ ಸರ್ಕಾರದ ಅವಧಿಯಲ್ಲಿ ಅತ್ಯಧಿಕ ನಿರುದ್ಯೋಗ ಸೃಷ್ಟಿಯಾಗಿದೆ. ಸರ್ಕಾರಿ ಆಸ್ತಿಗಳನ್ನು ಮಾರಾಟ ಮಾಡಲಾಗುತ್ತಿದೆ. ಒಂದು ವರ್ಷದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಪೆಟ್ರೋಲ್ ದರ ಏರಿಕೆಯಾಗಿದೆ' ಎಂದು ಅವರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

'ಪೆಟ್ರೋಲ್ ಬೆಲೆ ಮೇಲಿನ 'ತೆರಿಗೆ ಡಕಾಯಿತಿ' ಏರಿಕೆಯಾಗುತ್ತಿದೆ ಮತ್ತು ಎಲ್ಲಿಯೋ ಚುನಾವಣೆಗಳು ನಡೆದಾಗ ಮಾತ್ರ ಅದಕ್ಕೆ ಸ್ವಲ್ಪ ವಿರಾಮ ಸಿಗುತ್ತದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೂಡ ಆರೋಪಿಸಿದ್ದಾರೆ.

'ಲಸಿಕಾ ಅಭಿಯಾನ ಯಶಸ್ಸು ದೇಶದ ಸಾಮರ್ಥ್ಯ ತೋರಿಸಿದೆ'

ನವದೆಹಲಿ (ಪಿಟಿಐ): 'ಭಾರತದ ಕೋವಿಡ್ ಲಸಿಕಾ ಅಭಿಯಾನದ ಯಶಸ್ಸು ದೇಶದ ಸಾಮರ್ಥ್ಯವನ್ನು ತೋರಿದ್ದು, 100 ಕೋಟಿ ಲಸಿಕೆಯ ಡೋಸ್‌ಗಳ ಮೈಲಿಗಲ್ಲನ್ನು ದಾಟಿದ ನಂತರ ಹೊಸ ಶಕ್ತಿಯೊಂದಿಗೆ ಮುಂದುವರಿಯುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ.

ತಮ್ಮ ಮಾಸಿಕ 'ಮನ್ ಕಿ ಬಾತ್'ನಲ್ಲಿ ಭಾನುವಾರ ಮಾತನಾಡಿದ ಅವರು. ಈ ಸಾಧನೆಗೆ ಕಾರಣರಾದ ಆರೋಗ್ಯ ಕಾರ್ಯಕರ್ತರನ್ನು ಶ್ಲಾಘಿಸಿದರು.

'ಆರೋಗ್ಯ ಕಾರ್ಯಕರ್ತರು ದೇಶದಲ್ಲಿ ಲಸಿಕೆ ಹಾಕಿಸಿಕೊಳ್ಳದ ಯಾರನ್ನೂ ಬಿಡುವುದಿಲ್ಲ ಎಂದು ನನಗೆ ತಿಳಿದಿದೆ' ಎಂದೂ ಪ್ರಧಾನಿ ಹೇಳಿದರು.

'ನಮ್ಮ ಲಸಿಕಾ ಅಭಿಯಾನದ ಯಶಸ್ಸು ಭಾರತದ ಸಾಮರ್ಥ್ಯ ಮತ್ತು ಸಾಮೂಹಿಕ ಪ್ರಯತ್ನದ ಶಕ್ತಿಯನ್ನು ತೋರುತ್ತದೆ. ಈ ಮೈಲಿಗಲ್ಲನ್ನು ದಾಟಿದ ನಂತರ ದೇಶವು ಹೊಸ ಶಕ್ತಿ ಮತ್ತು ಉತ್ಸಾಹದಿಂದ ಮುನ್ನಡೆಯುತ್ತಿದೆ' ಎಂದು ಪ್ರಧಾನಿ ಮೋದಿ ಹೇಳಿದರು.

ರೋಮ್: 30ರಿಂದ ಜಿ–20 ಶೃಂಗಸಭೆ ಮೋದಿ ಭಾಗಿ

ನವದೆಹಲಿ (ಪಿಟಿಐ): ಇಟಲಿಯ ರಾಜಧಾನಿ ರೋಮ್‌ನಲ್ಲಿ ಇದೇ 30–31ರಂದು ನಡೆಯಲಿರುವ ಜಿ–20 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ ಎಂದು ಮೂಲಗಳು ಭಾನುವಾರ ಹೇಳಿವೆ.

ಮೋದಿ ಅವರು ಇದೇ 29ರಿಂದ ನವೆಂಬರ್ 2ರವರೆಗೆ ಇಟಲಿ ಮತ್ತು ಬ್ರಿಟನ್ ಪ್ರವಾಸ ಕೈಗೊಳ್ಳಲಿದ್ದಾರೆ. ರೋಮ್‌ನಿಂದ ಅವರು ಗ್ಲಾಸ್ಗೊಗೆ ತೆರಳಿ ವಿಶ್ವ ನಾಯಕರ ಶೃಂಗಸಭೆಯಲ್ಲೂ ಭಾಗವಹಿಸುವರು. ನವೆಂಬರ್ 1 ಮತ್ತು 2ರಂದು ಈ ಶೃಂಗಸಭೆ ನಡೆಯಲಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30 : ದಿನದ ಸೂಕ್ತಿ, ಬೆಳಿಗ್ಗೆ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ, ಮಧ್ಯಾಹ್ನ 2: ಪ್ರಜಾವಾಣಿ ವಾರ್ತೆ, ಬುಲೆಟಿನ್, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್
ಪ್ರಜಾವಾಣಿ ಕನ್ನಡ ಧ್ವನಿ

ಐಷಾರಾಮಿ ಹಡಗು ಡ್ರಗ್ಸ್ ಪ್ರಕರಣ: ಭಾರಿ ಲಂಚದ ಬಗ್ಗೆ ಸಾಕ್ಷಿಯಿಂದ ಆರೋಪ

'₹25 ಕೋಟಿಗೆ ಬೇಡಿಕೆ; ₹18 ಕೋಟಿಗೆ ಒಪ್ಪಿಗೆ'

ಮುಂಬೈ (ಪಿಟಿಐ): ಐಷಾರಾಮಿ ಹಡಗಿನ ಮೇಲೆ ದಾಳಿ ನಡೆದ ರಾತ್ರಿ ಕೆ.ಪಿ. ಗೋಸಾವಿ ಜತೆಗೆ ತಾನೂ ಹಡಗಿನ ಒಳಗೆ ಹೋಗಿದ್ದೆ ಎಂದು ಪ್ರಕರಣದ ಸಾಕ್ಷಿಯಾಗಿರುವ ಪ್ರಭಾಕರ ಸೈಲ್ ಹೇಳಿಕೊಂಡಿದ್ದಾರೆ. ಸೈಲ್ ಅವರು ಗೋಸಾವಿಯ ಅಂಗರಕ್ಷಕ. ದಾಳಿ ನಡೆದ ದಿನ ಆರ್ಯನ್ ಖಾನ್‌ನನ್ನು ಎನ್‌ಸಿಬಿ ಕಚೇರಿಗೆ ಕರೆತಂದ ಬಳಿಕ ಗೋಸಾವಿಯು ಸ್ಯಾಮ್ ಡಿಸೋಜಾ ಎಂಬವರನ್ನು ಭೇಟಿ ಮಾಡಿದ್ದಾರೆ. ಡಿ ಸೋಜಾ ಜತೆ ಮಾತನಾಡುತ್ತಿದ್ದಾಗ ಗೋಸಾವಿಯು ₹25 ಕೋಟಿ ಬಗ್ಗೆ ಉಲ್ಲೇಖಿಸಿದ್ದನ್ನು ತಾನು ಕೇಳಿಸಿಕೊಂಡಿದ್ದೇನೆ. ಎನ್‌ಸಿಬಿ ಪ್ರಾದೇಶಿಕ ನಿರ್ದೇಶಕ ಮತ್ತು ಹಡಗು ಡ್ರಗ್ಸ್ ಪ್ರಕರಣದ ತನಿಖೆಯ ಉಸ್ತುವಾರಿ ಹೊತ್ತಿರುವ ಸಮೀರ್ ವಾಂಖೆಡೆಗೆ ₹8 ಕೋಟಿ ಕೊಡಬೇಕಿರುವುದರಿಂದ ₹18 ಲಕ್ಷಕ್ಕೆ ಒಪ್ಪಿಕೊಳ್ಳಬಹುದು ಎಂದೂ ಅವರು ಹೇಳಿದ್ದರು ಎಂದು ಸೈಲ್ ಆರೋಪಿಸಿದ್ದಾರೆ.

ಶಾರುಕ್ ಅವರ ಮ್ಯಾನೇಜರ್ ಪೂಜಾ ದದ್ಲಾನಿ ಅವರು ಆರ್ಯನ್ ಬಂಧನದ ಬಳಿಕ ಎನ್‌ಸಿಬಿ ಕಚೇರಿಗೆ ಬಂದಿದ್ದರು. ಗೋಸಾವಿ ಮತ್ತು ಡಿಸೋಜಾ ಜತೆಗೆ ಅವರು ಮಾತನಾಡಿದ್ದನ್ನು ತಾವು ನೋಡಿದ್ದಾಗಿ ಸೈಲ್ ಹೇಳಿದ್ದಾರೆ.

ವಾಂಖೆಡೆ ಅವರು ಆರೋಪಗಳನ್ನು ಸಾರಾಸಗಟಾಗಿ ಅಲ್ಲಗಳೆದಿದ್ದಾರೆ ಎಂದು ಎನ್‌ಸಿಬಿ ಹೇಳಿದೆ. ಪ್ರಕರಣವು ನ್ಯಾಯಾಲಯದಲ್ಲಿದೆ. ಹಾಗಾಗಿ, ಈ ಬಗ್ಗೆ ಹೇಳಿಕೆಗಳನ್ನು ನೀಡಲಾಗದು ಎಂದಿದೆ. ಈ ಹಂತದಲ್ಲಿ ಏನನ್ನಾದರೂ ಹೇಳುವುದಿದ್ದರೆ ಅದನ್ನು ಸೈಲ್ ಅವರು ನ್ಯಾಯಾಲಯದ ಮುಂದೆ ಹೇಳಬೇಕಿತ್ತು ಎಂದು ಹೇಳಿದೆ. ಸೈಲ್ ಅವರು ಪ್ರಕರಣದ ಸಾಕ್ಷಿ ಎಂಬುದು ಕೂಡ ಸಾಮಾಜಿಕ ಜಾಲತಾಣ ಮೂಲಕವೇ ತಮಗೆ ತಿಳಿಯಿತು ಎಂದು ಎನ್‌ಸಿಬಿ ಉಪ ಮಹಾನಿರ್ದೇಶಕ ಮುಥಾ ಅಶೋಕ್ ಜೈನ್ ಹೇಳಿದ್ದಾರೆ.

ಸೈಲ್ ಅವರ ಆರೋಪವು ಬಹಳ ಗಂಭೀರ ಎಂದು ಮಹಾರಾಷ್ಟ್ರದ ಸಚಿವ ಮತ್ತು ಎನ್‌ಸಿಪಿ ವಕ್ತಾರ ನವಾಬ್ ಮಲಿಕ್ ಹೇಳಿದ್ದಾರೆ. ಹಡಗಿನಲ್ಲಿ ಡ್ರಗ್ಸ್ ಪ್ರಕರಣವು ನಕಲಿ ಎಂದು ಅವರು ಆರಂಭದಿಂದಲೂ ಹೇಳುತ್ತಿದ್ದಾರೆ. ಸೈಲ್ ಆರೋಪಗಳ ಬಗ್ಗೆ ವಿಶೇಷ ತನಿಖಾ ತಂಡದಿಂದ ತನಿಖೆ ಆಗಬೇಕು ಎಂದೂ ಅವರು ಒತ್ತಾಯಿಸಿದ್ದಾರೆ. ಮಾಧ್ಯಮ ಪ್ರತಿನಿಧಿಗಳ ಜತೆಗೆ ಅವರು ಬೀಡ್‌ನಲ್ಲಿ ಮಾತನಾಡಿದರು.

ವಾಂಖೆಡೆ ಅವರು ಸುಲಿಗೆಯಲ್ಲಿ ತೊಡಗಿದ್ದಾರೆ. ಮುಂಬೈ ಸಿನಿಮಾ ಉದ್ಯಮವನ್ನು ಅವರು ಭೀತಿಗೆ ಒಳಪಡಿಸಿದ್ದಾರೆ ಎಂಬ ಆರೋಪವನ್ನು ಮಲಿಕ್ ಅವರು ಪುನರುಚ್ಚರಿಸಿದ್ದಾರೆ. ಮಹಾರಾಷ್ಟ್ರದ ಮುಖ್ಯಮಂತ್ರಿ ಮತ್ತು ಗೃಹ ಸಚಿವರನ್ನು ಸೋಮವಾರ ಭೇಟಿಯಾಗಿ ಸೈಲ್ ಅವರ ಆರೋಪಗಳ ಬಗ್ಗೆ ವಿಶೇಷ ತನಿಖಾ ತಂಡದಿಂದ ತನಿಖೆ ನಡೆಸುವಂತೆ ಕೋರುವುದಾಗಿ ಹೇಳಿದ್ದಾರೆ.

ಶಿವಸೇನಾ ಸಂಸದ ಸಂಜಯ್ ರಾವುತ್ ಅವರು ಆರೋಪಕ್ಕೆ ಸಂಬಂಧಿಸಿ ಟ್ವೀಟ್ ಮಾಡಿದ್ದಾರೆ. 'ಆರ್ಯನ್ ಖಾನ್ ಪ್ರಕಣದಲ್ಲಿ ಎನ್‌ಸಿಬಿ ಖಾಲಿ ಹಾಳೆಯಲ್ಲಿ ಸಹಿ ಮಾಡಿಸಿದ್ದು ಆಘಾತಕರ. ಭಾರಿ ದೊಡ್ಡ ಮೊತ್ತಕ್ಕೆ ಬೇಡಿಕೆ ಇರಿಸಲಾಗಿದೆ ಎಂಬ ವರದಿಗಳೂ ಇವೆ. ಮಹಾರಾಷ್ಟ್ರದ ವರ್ಚಸ್ಸು ಕುಂದಿಸುವುದಕ್ಕಾಗಿಯೇ ಈ ಪ್ರಕರಣವನ್ನು ಸೃಷ್ಟಿಸಲಾಗಿದೆ ಎಂದು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿದ್ದರು. ಅದು ನಿಜವಾದಂತೆ ತೋರುತ್ತಿದೆ. ಪೊಲೀಸರು ಈ ಬಗ್ಗೆ ಸ್ವಯಂ ಪ್ರೇರಣೆಯಿಂದ ಕ್ರಮ ಕೈಗೊಳ್ಳಬೇಕು' ಎಂದು ರಾವುತ್ ಹೇಳಿದ್ದಾರೆ.

ಕೇಂದ್ರದ ತನಿಖಾ ಸಂಸ್ಥೆಗಳು ವಿರೋಧ ಪಕ್ಷಗಳನ್ನು ಗುರಿಯಾಗಿಸಿ ಕೆಲಸ ಮಾಡುತ್ತಿವೆ ಎಂಬ ಕಾಂಗ್ರೆಸ್ ಪಕ್ಷದ ಆರೋಪವನ್ನು ಸೈಲ್ ಅವರ ಆರೋಪಗಳು ದೃಢೀಕರಿಸಿವೆ ಎಂದು ಕಾಂಗ್ರೆಸ್‌ನ ವಕ್ತಾರ ಅತುಲ್ ಲೋಂಡೆ ಹೇಳಿದ್ದಾರೆ.

ಮಾದಕ ವ್ಯಸನಿಗೆ ಶಿಕ್ಷೆಗೆ ಬದಲು ಚಿಕಿತ್ಸೆಗೆ ಶಿಫಾರಸು

ನವದೆಹಲಿ (ಪಿಟಿಐ): ಸ್ವಂತ ಬಳಕೆಗಾಗಿ ಸಣ್ಣ ಪ್ರಮಾಣದಲ್ಲಿ ಮಾದಕ ವಸ್ತು ಇಟ್ಟುಕೊಳ್ಳುವುದನ್ನು ಕಾನೂನು ಬಾಹಿರ ಎಂದು ಪರಿಗಣಿಸದೇ ಅಪರಾಧಮುಕ್ತಗೊಳಿಸಬೇಕು ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ರೆವೆನ್ಯೂ ಇಲಾಖೆಗೆ ಶಿಫಾರಸು ಮಾಡಿದೆ.

ತಮ್ಮ ಬಳಕೆಗಾಗಿ, ಅತಿ ಸಣ್ಣ ಪ್ರಮಾಣದಲ್ಲಿ ಮಾದಕ ಪದಾರ್ಥಗಳನ್ನು ಇಟ್ಟುಕೊಂಡವರು ಸಿಕ್ಕಿಹಾಕಿಕೊಂಡಲ್ಲಿ ಅವರನ್ನು ಬಂಧಿಸಿ ಜೈಲಿನಲ್ಲಿ ಇಡುವ ಬದಲು, ಅವರಿಗೆ ಸರ್ಕಾರಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ಚಿಕಿತ್ಸೆ ಕೊಡಿಸಬೇಕು ಎಂದು ಸಚಿವಾಲಯವು ಶಿಫಾರಸು ಮಾಡಿದ್ದಾಗಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆಯ ಅಡಿಯಲ್ಲಿ ಸದ್ಯಕ್ಕೆ ಈ ಅವಕಾಶ ಇಲ್ಲ. ಆದರೆ, ಮಾದಕ ವ್ಯಸನಿಯು ವ್ಯಸನ ಮುಕ್ತಿಗಾಗಿ ಚಿಕಿತ್ಸೆಗೆ ಇಚ್ಛಿಸಿದರೆ ಮಾತ್ರ ಕಾನೂನು ಕ್ರಮದಿಂದ ರಿಯಾಯಿತಿ ನೀಡಲಾಗುತ್ತದೆ.

'ಜೀವಕ್ಕೆ ಅಪಾಯ'

ತಮ್ಮ ಜೀವಕ್ಕೆ ಅಪಾಯ ಇದೆ ಎಂದು ಸಾಮಾಜಿಕ ಜಾಲ ತಾಣದಲ್ಲಿ ಪೋಸ್ಟ್ ಮಾಡಿದ ವಿಡಿಯೊ ಸಂದೇಶದಲ್ಲಿ ಸೈಲ್ ಹೇಳಿದ್ದಾರೆ.

'ಗೋಸಾವಿ ಅವರು ನಾಪತ್ತೆ ಆಗಿದ್ದಾರೆ. ಮುಂದೆ, ಗೋಸಾವಿಯ ರೀತಿಯಲ್ಲಿಯೇ, ಎನ್‌ಸಿಬಿ ಅಧಿಕಾರಿಗಳು ಮತ್ತು ಪ್ರಕರಣದಲ್ಲಿ ಭಾಗಿಯಾಗಿರುವ ಇತರರು ನನ್ನನ್ನು ಕೊಲ್ಲಬಹುದು ಅಥವಾ ಅಪಹರಣ ಮಾಡಬಹುದು. ದೊಡ್ಡ ದೊಡ್ಡ ಪ್ರಕರಣದಲ್ಲಿ ಆರೋಪಿಗಳು ಸಾಮಾನ್ಯವಾಗಿ ಕೊಲೆ ಆಗುತ್ತಾರೆ. ಹಾಗಾಗಿಯೇ, ಸತ್ಯ ಹೊರಗೆ ಬರಲು ನಾನು ಬಯಸಿದ್ದೇನೆ' ಎಂದು ಸೈಲ್ ವಿಡಿಯೊದಲ್ಲಿ ವಿವರಿಸಿದ್ದಾರೆ.

ಐಎಸ್ ನಂಟು: ಬೆಂಗಳೂರಿನ ಯುವಕ ಮೊಹಮ್ಮದ್ ತೌಕೀರ್ ಬಂಧನ

ಬೆಂಗಳೂರು: ದಕ್ಷಿಣ ಭಾರತದ ಯುವಕರನ್ನು ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರ ಸಂಘಟನೆಗೆ ಸೇರಿಸಿ ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸಿದ್ದ ಪ್ರಕರಣದಲ್ಲಿ ಮತ್ತೊಬ್ಬ ಶಂಕಿತ ಉಗ್ರ ಮೊಹಮ್ಮದ್ ತೌಕೀರ್ (33) ಎಂಬಾತನನ್ನು ಎನ್‌ಐಎ ಅಧಿಕಾರಿಗಳು ನಗರದಲ್ಲಿ ಬಂಧಿಸಿದ್ದಾರೆ.

'ನಗರದ ಶಿವಾಜಿನಗರ ನಿವಾಸಿ ತೌಕೀರ್, ಉಗ್ರ ಸಂಘಟನೆಯಲ್ಲಿ ಸಕ್ರಿಯ ಆಗಿದ್ದ. ಯುವಕರನ್ನು ಸೆಳೆದು ಐಎಸ್‌ಗೆ ನೇಮಕ ಮಾಡುತ್ತಿದ್ದ. ಅದೇ ಯುವಕರನ್ನು ತರಬೇತಿಗಾಗಿ ಸಿರಿಯಾಗೆ ಕಳುಹಿಸುತ್ತಿದ್ದ' ಎಂದು ಎನ್‌ಐಎ ಮೂಲಗಳು ಹೇಳಿವೆ. 'ದುಬೈನಲ್ಲಿ ಕೆಲ ವರ್ಷ ವಾಸವಿದ್ದ ತೌಕೀರ್ ವಿರುದ್ಧ ವಾರಂಟ್ ಹೊರಡಿಸಲಾಗಿತ್ತು. ಆತನನ್ನು ಅಲ್ಲಿಯ ಪೊಲೀಸರು ಬಂಧಿಸಿ ಭಾರತಕ್ಕೆ ಗಡಿಪಾರು ಮಾಡಿದ್ದರು. ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ. ಶಿವಾಜಿನಗರ ಹಾಗೂ ಫ್ರೇಜರ್‌ಟೌನ್ ಮನೆಗಳಲ್ಲಿ ನೆಲೆಸಿದ್ದ. ಈ ಬಗ್ಗೆ ಮಾಹಿತಿ ಕಲೆಹಾಕಿ ಆತನನ್ನು ಬಂಧಿಸಲಾಗಿದೆ' ಎಂದೂ ತಿಳಿಸಿವೆ.

'ಉಗ್ರ ಸಂಘಟನೆಗೆ ಯುವಕರನ್ನು ನೇಮಿಸಲು ಸಹ ತೌಕೀರ್ ಹಣಕಾಸು ನೆರವು ನೀಡುತ್ತಿದ್ದ. ಭಾರತದಲ್ಲಿ ಐಎಸ್ ಸಂಘಟನೆ ಮೂಲಕ ಭಯೋತ್ಪಾದನಾ ಕೃತ್ಯ ಎಸಗುವುದು ಹಾಗೂ ಜನರಲ್ಲಿ ಭಯವನ್ನುಂಟು ಮಾಡುವುದು ಬಂಧಿತನ ಉದ್ದೇಶವಾಗಿತ್ತು.'

'ಈ ಪ್ರಕರಣದಲ್ಲಿ ಈಗಾಗಲೇ ಹಲವರನ್ನು ಬಂಧಿಸಲಾಗಿದೆ. ಈಗ ಮತ್ತೊಬ್ಬ ಸೆರೆ ಸಿಕ್ಕಿದ್ದಾನೆ' ಎಂದೂ ವಿವರಿಸಿವೆ.

ಫೇಸ್‌ಬುಕ್ ಬಳಕೆ ಕುರಿತ ಅಧ್ಯಯನದ ಆಂತರಿಕ ವರದಿಯಲ್ಲಿ ಉಲ್ಲೇಖ

'ಭಾರತದಲ್ಲಿ ದ್ವೇಷ ಭಾಷಣ ನಿಯಂತ್ರಣಕ್ಕೆ ಫೇಸ್‌ಬುಕ್ ಹೆಣಗಾಟ'

ನ್ಯೂಯಾರ್ಕ್ (ಪಿಟಿಐ): 'ಭಾರತದಲ್ಲಿ ದ್ವೇಷ ಭಾಷಣ, ಸುಳ್ಳುಸುದ್ದಿಗಳು ಮತ್ತು ಹಿಂಸಾಚಾರದ ಸಂಭ್ರಮವನ್ನು ನಿಯಂತ್ರಿಸಲು ಫೇಸ್‌ಬುಕ್‌ಗೆ ಕಷ್ಟವಾಗುತ್ತಿದೆ' ಎಂದು ಫೇಸ್‌ಬುಕ್‌ನ ಆಂತರಿಕ ವರದಿಯಲ್ಲಿ ವಿವರಿಸಲಾಗಿದೆ. 'ಕೆಲವು ಗುಂಪುಗಳು ಮುಸ್ಲಿಂ ವಿರೋಧಿ ವಿಚಾರಗಳು ಮತ್ತು ಮುಸ್ಲಿಂ ಅವಹೇಳನಕಾರಿ ವಿಚಾರಗಳನ್ನು ಪದೇ ಪದೇ ಹಂಚಿಕೊಳ್ಳುತ್ತವೆ' ಎಂದೂ ಈ ವರದಿಗಳಲ್ಲಿ ವಿವರಿಸಲಾಗಿದೆ.

ಭಾರತದಲ್ಲಿ ಫೇಸ್‌ಬುಕ್ ಬಳಕೆ ಕುರಿತು, ಫೇಸ್‌ಬುಕ್ ಆಂತರಿಕವಾಗಿ ನಡೆಸಿದ ಸಂಶೋಧನೆಯ ವರದಿಗಳಲ್ಲಿ ಈ ಮಾಹಿತಿ ಇದೆ. ಫೇಸ್‌ಬುಕ್‌ನ ಮಾಜಿ ಉದ್ಯೋಗಿ ಫ್ರಾನ್ಸಿಸ್ ಹಾಗನ್ ಅವರು ಬಹಿರಂಗಪಡಿಸಿರುವ ದಾಖಲೆಗಳಲ್ಲಿ ಈ ವರದಿಗಳೂ ಇವೆ. ನ್ಯೂಯಾರ್ಕ್ ಟೈಮ್ಸ್ ಈ ವರದಿಗಳನ್ನು ಆಧರಿಸಿ, ಪತ್ರಿಕಾ ವರದಿ ಪ್ರಕಟಿಸಿದೆ. ದ್ವೇಷ ಭಾಷಣ, ಸುಳ್ಳುಸುದ್ದಿಗಳು ಮತ್ತು ಹಿಂಸಾಚಾರದ ಸಂಭ್ರಮವನ್ನು ಫೇಸ್‌ಬುಕ್‌ನ ನಿಯಮಗಳಿಂದ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ ಎಂಬುದು ಈ ವರದಿಯಲ್ಲಿ ಇದೆ.

'ಫೇಸ್‌ಬುಕ್‌ನ ಉದ್ಯೋಗಿಯೊಬ್ಬರು, ತಾವು ಕೇರಳದವರು ಎಂದು ಬಿಂಬಿಸಿಕೊಳ್ಳುವಂತಹ ನಕಲಿ ಖಾತೆಯನ್ನು 2019ರ ಫೆಬ್ರುವರಿಯಲ್ಲಿ ಆರಂಭಿಸಿದ್ದರು. ಆ ಖಾತೆಗೆ ಬರುವ ಸ್ನೇಹ ಸಲಹೆಗಳು, ಸ್ನೇಹ ವಿನಂತಿಗಳು, ವಿಡಿಯೊ ಮತ್ತು ಪೋಸ್ಟ್ ಸಲಹೆಗಳನ್ನು ಫೇಸ್‌ಬುಕ್ ನಿಯಮಕ್ಕೆ ಅನುಗುಣವಾಗಿ ಅಂಗೀಕರಿಸುತ್ತಾ ಹೋಗುವುದು ಈ ಅಧ್ಯಯನದ ಭಾಗವಾಗಿತ್ತು. ಆ ಖಾತೆ ಆರಂಭಿಸಿ ಮೂರು ವಾರಗಳ ಅವಧಿಯಲ್ಲಿ ದ್ವೇಷ ಭಾಷಣ, ಸುಳ್ಳು ಸುದ್ದಿ ಮತ್ತು ಹಿಂಸಾಚಾರವನ್ನು ಉದ್ದೀಪಿಸುವ ಫೇಸ್‌ಬುಕ್ ಗುಂಪುಗಳ, ಖಾತೆಗಳ, ಪೋಸ್ಟ್‌ಗಳ ಸಲಹೆಗಳು ಹೆಚ್ಚಿನ ಪ್ರಮಾಣದಲ್ಲಿ ಬಂದಿದ್ದವು. ಇದಕ್ಕೆ ಸಂಬಂಧಿಸಿದ ವರದಿಯನ್ನು ನಂತರದ ಒಂದು ತಿಂಗಳಲ್ಲಿ ಫೇಸ್‌ಬುಕ್ ಆಂತರಿಕವಾಗಿ ಪ್ರಕಟಿಸಿತ್ತು' ಎಂದು ನ್ಯೂಯಾರ್ಕ್ ಟೈಮ್ಸ್ ತನ್ನ ವರದಿಯಲ್ಲಿ ವಿವರಿಸಿದೆ.

2019ರ ಚುನಾವಣೆ ಸಂದರ್ಭದಲ್ಲಿ ಆಡಳಿತ ಪಕ್ಷಕ್ಕೆ ಸಂಬಂಧಿಸಿದ ಬಾಟ್‌ಗಳು (ಕೃತಕ ಬುದ್ಧಿಮತೆ ನಿರ್ವಹಣೆಯ ಖಾತೆಗಳು) ಮತ್ತು ನಕಲಿ ಖಾತೆಗಳು, ಚುನಾವಣೆಯಲ್ಲಿ ಹೇಗೆ ಕೋಲಾಹಲ ಎಬ್ಬಿಸಿದ್ದವು ಎಂಬುದನ್ನೂ ಈ ಅಧ್ಯಯನದ ವರದಿಯು ದಾಖಲಿಸಿದೆ. ಚುನಾವಣೆ ಸಂದರ್ಭದಲ್ಲಿ ಪಶ್ಚಿಮ ಬಂಗಾಳದಲ್ಲಿ ಹೆಚ್ಚು ವೀಕ್ಷಣೆಗೆ ಒಳಗಾದ ಪೋಸ್ಟ್‌ಗಳಲ್ಲಿ ಶೇ 40ರಷ್ಟು ಪೋಸ್ಟ್‌ಗಳು ಸುಳ್ಳು ಸುದ್ದಿಗಳಾಗಿದ್ದವು ಮತ್ತು ದೃಢೀಕರಿಸಲಾಗದಂತಹ ಮಾಹಿತಿಗಳಾಗಿದ್ದವು. ಈ ರೀತಿಯ ಒಂದೇ ಒಂದು ಖಾತೆಯಿಂದ ಮಾಡಲಾದ ಪೋಸ್ಟ್ ಅನ್ನು 3 ಕೋಟಿ ಜನರು ವೀಕ್ಷಿಸಿದ್ದರು ಎಂದು ವರದಿಯಲ್ಲಿ ವಿವರಿಸಲಾಗಿದೆ.

2019ರ ಚುನಾವಣೆ ಸಂದರ್ಭದಲ್ಲಿ ಫೇಸ್‌ಬುಕ್ ಕೇಂದ್ರ ಕಚೇರಿಯ ಸಂಶೋಧಕರು ಭಾರತಕ್ಕೆ ಭೇಟಿ ನೀಡಿ, ಅಲ್ಲಿನ ಉದ್ಯೋಗಿಗಳ ಜತೆ ಮಾತುಕತೆ ನಡೆಸಿದ್ದರು. ಭಾರತದಲ್ಲಿ ಸುಳ್ಳು ಸುದ್ದಿ ಹರಡುವುದನ್ನು ತಡೆಯಲು ಕಠಿಣವಾದ ನಿಯಮಗಳ ಅಗತ್ಯವಿದೆ. ಅವುಗಳನ್ನು ಕಾರ್ಯರೂಪಕ್ಕೆ ತರಬೇಕು ಎಂಬುದು ಅಲ್ಲಿನ ಉದ್ಯೋಗಿಗಳ ಅಭಿಪ್ರಾಯವಾಗಿತ್ತು ಎಂಬುದನ್ನು 'ಇಂಡಿಯನ್ ಎಲೆಕ್ಷನ್ ಕೇಸ್ ಸ್ಟಡಿ' ವರದಿಯಲ್ಲಿ ಫೇಸ್‌ಬುಕ್ ದಾಖಲಿಸಿದೆ.

ಫೇಸ್‌ಬುಕ್‌ನಲ್ಲಿ ಸುಳ್ಳುಸುದ್ದಿ ಪ್ರಕಟವಾಗುವುದನ್ನು ತಡೆಯಲು ಭಾರತದಲ್ಲಿ ಕೃತಕ ಬುದ್ಧಿಮತ್ತೆ ವ್ಯವಸ್ಥೆಯನ್ನು ಫೇಸ್‌ಬುಕ್ ಅಳವಡಿಸಿಕೊಂಡಿದೆ. ಭಾರತದಲ್ಲಿ 22 ಭಾಷೆಗಳಲ್ಲಿ ಫೇಸ್‌ಬುಕ್ ಸೇವೆ ನೀಡುತ್ತಿದೆ. ಆದರೆ ಐದು ಭಾಷೆಗಳಲ್ಲಿ ಮಾತ್ರ ಈ ವ್ಯವಸ್ಥೆ ಇದೆ. ಹೆಚ್ಚು ಬಳಕೆಯಲ್ಲಿರುವ ಹಿಂದಿ ಮತ್ತು ಬಂಗಾಳಿ ಭಾಷೆಯಲ್ಲಿ ಈ ವ್ಯವಸ್ಥೆ ಲಭ್ಯವಿಲ್ಲ. ಹೀಗಾಗಿ ಸುಳ್ಳುಸುದ್ದಿ, ದ್ವೇಷ ಭಾಷಣಕ್ಕೆ ಫೇಸ್‌ಬುಕ್ ಬಳಕೆಯಾಗುವುದನ್ನು ತಡೆಯಲು ಸಾಧ್ಯವಾಗುತ್ತಿಲ್ಲ. ಇದನ್ನು ಶೀಘ್ರವೇ ಆರಂಭಿಸಬೇಕು ಎಂದು ಆಂತರಿಕ ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು.

ಚುನಾವಣೆ ಸಂದರ್ಭದಲ್ಲಿ ಸುಳ್ಳುಸುದ್ದಿ ಹರಡುವುದನ್ನು ತಡೆಯಲು ಫೇಸ್‌ಬುಕ್ ಹಲವು ಕ್ರಮಗಳನ್ನು ತೆಗೆದುಕೊಂಡಿತ್ತು. ಸುಳ್ಳುಸುದ್ದಿ ಪತ್ತೆಮಾಡಲು ಬೇರೊಂದು ಕಂಪನಿಗೆ ಹೊರಗುತ್ತಿಗೆ ನೀಡಲಾಗಿತ್ತು ಎಂದು ವರದಿಯಲ್ಲಿ ವಿವರಿಸಲಾಗಿದೆ.

ಮುಖ್ಯಾಂಶಗಳು

- ಸುಳ್ಳುಸುದ್ದಿ ಕುರಿತು ಆಂತರಿಕ ಸಂಶೋಧಕರ ಅಧ್ಯಯನ ವರದಿ
- ಕೇರಳದಲ್ಲಿ ನಕಲಿ ಖಾತೆ ಸೃಷ್ಟಿಸಿ ಅಧ್ಯಯನ ನಡೆಸಿದ್ದ ಫೇಸ್‌ಬುಕ್ ಸಂಶೋಧಕ
- ಮುಸ್ಲಿಂ ವಿರೋಧಿ ಪೋಸ್ಟ್‌ಗಳು ಹೆಚ್ಚು ಎಂದು ವರದಿಯಲ್ಲಿ ಉಲ್ಲೇಖ

'ಬಜರಂಗದಳ ಅಪಾಯಕಾರಿ ಸಂಘಟನೆ'

ಕೆಲವು ಗುಂಪುಗಳು ಅದರಲ್ಲೂ ಪ್ರಧಾನವಾಗಿ ಬಜರಂಗ ದಳವು ಮುಸ್ಲಿಂ ವಿರೋಧಿ ಭಾವನೆಯನ್ನು ಕೆರಳಿಸುವ ಪೋಸ್ಟ್‌ಗಳನ್ನು ಮಾಡುತ್ತಿತ್ತು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಬಜರಂಗ ದಳವು ಧರ್ಮಾಧಾರಿತ ಹಿಂಸಾಚಾರವನ್ನು ಉದ್ದೀಪಿಸುವ ಕಾರಣ, ಫೇಸ್‌ಬುಕ್ ಅದನ್ನು ಅಪಾಯಕಾರಿ ಸಂಘಟನೆ ಎಂದು ಪರಿಗಣಿಸಿತ್ತು. ಆದರೆ ಭಾರತದಲ್ಲಿ ಫೇಸ್‌ಬುಕ್‌ಗೆ ಹೆಚ್ಚಿನ ಅಧಿಕಾರ ಇಲ್ಲದೇ ಇದ್ದ ಕಾರಣಕ್ಕೆ, ಇಂತಹ ಪೋಸ್ಟ್‌ಗಳ ನಿಯಂತ್ರಣ ಸಾಧ್ಯವಾಗಿರಲಿಲ್ಲ. ಭಾರತವೂ ಸೇರಿದಂತೆ ವಿಶ್ವದ ಹಲವೆಡೆ ಮುಸ್ಲಿಂ ವಿರೋಧಿ ಭಾವನೆಯನ್ನು ಕೆರಳಿಸುವ ಪೋಸ್ಟ್‌ಗಳು ಹೆಚ್ಚಾಗುತ್ತಿದ್ದ ಕಾಲವದು. ಆದರೆ ಈಗ ಅದನ್ನು ನಿಯಂತ್ರಿಸಲು ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ' ಎಂದು ಫೇಸ್‌ಬುಕ್‌ನ ಆಂತರಿಕ ವರದಿಯಲ್ಲಿ ವಿವರಿಸಲಾಗಿದೆ.

ಡ್ರೋನ್ ಗುಂಪು ದಾಳಿಗೆ 'ವೈರಿ ನೆಲೆ' ಭಸ್ಮ!

ಒಂದನೇ ಪುಟದಿಂದ

ನಿರ್ದಿಷ್ಟ ಪ್ರದೇಶದ ಕಣ್ಗಾವಲಿಗೆ ಮೊದಲು ಒಂದು ಡ್ರೋನ್ ಆಗಸಕ್ಕೇರುತ್ತದೆ. ಅದು ತನ್ನ ಸುತ್ತಲಿನ ಪ್ರದೇಶದ ಮೇಲೆ ಕಣ್ಣು ಹಾಯಿಸಿ, ವೈರಿಯ ಇರುವಿಕೆ ಕುರಿತು ಖಚಿತ ಸಂದೇಶವನ್ನು ಇತರ ಡ್ರೋನ್‌ಗಳ ಗುಂಪಿಗೆ ರವಾನಿಸುತ್ತದೆ. ಕ್ಷಣ ಮಾತ್ರದಲ್ಲೇ ಆರು ದೊಡ್ಡ ಗಾತ್ರದ 'ಯೋಧ' ಡ್ರೋನ್‌ಗಳು ಮತ್ತು ನಾಲ್ಕು ಸಣ್ಣ ಗಾತ್ರದ 'ಘಾತಕ್' ಡ್ರೋನ್‌ಗಳು ಆಗಸಕ್ಕೆ ಚಿಮ್ಮಿದವು.

ಕೆಲಕಾಲ ವೈರಿಯ ಸುತ್ತ ಚಲಿಸಿದ 'ಯೋಧ' ಡ್ರೋನ್‌ಗಳು ತಮ್ಮೊಳಗೆ ಅಡಗಿಸಿಕೊಂಡಿದ್ದ ಬಾಂಬ್‌ಗಳನ್ನು ಬೀಳಿಸಿದವು. ಈ ಎಲ್ಲ ಬೆಳವಣಿಗೆಗಳ ನಡುವೆಯೇ ವೈರಿಯತ್ತ ನುಗ್ಗಿಬಂದ ಪುಟ್ಟ 'ಘಾತಕ್' ಡ್ರೋನ್‌ಗಳು ತಮ್ಮನ್ನೇ ಸ್ಫೋಟಿಸಿಕೊಂಡು ವೈರಿಯನ್ನು ಭಸ್ಮಗೊಳಿಸಿದವು. ವೈರಿಗಳ ನೆಲೆ ಎಂಬುದಾಗಿ ಗುರುತಿಸಿದ್ದ ಮೂರು ಗುರಿಗಳನ್ನು ಈ ರೀತಿ ಯಶಸ್ವಿಯಾಗಿ ಸ್ಫೋಟಿಸಲಾಯಿತು.

ಮೂರು ಬಗೆಯ ಡ್ರೋನ್‌ಗಳ ನಡುವೆ ಪರಸ್ಪರ ಸಂಪರ್ಕ ಕಲ್ಪಿಸಲಾಗಿದೆ. ಒಂದಕ್ಕೊಂದು ಮಾಹಿತಿ ರವಾನಿಸುತ್ತಾ, ಮುಂದಿನ ಹೆಜ್ಜೆಯ ಕುರಿತು ನಿರ್ದೇಶನ ನೀಡುತ್ತವೆ. ಹಲವು ಡ್ರೋನ್‌ಗಳು ಸಮೀಪದಲ್ಲೇ ಹಾರಾಡುತ್ತಿದ್ದರೂ, ಡಿಕ್ಕಿಯಾಗದಂತೆ ತಡೆಯುವ ತಂತ್ರಜ್ಞಾನವನ್ನೂ ಅಳವಡಿಸಲಾಗಿದೆ. ಮಾನವ ರಹಿತ ಯುದ್ಧ ತಂತ್ರಜ್ಞಾನವನ್ನು ದೂರದಲ್ಲಿರುವ ನಿಯಂತ್ರಣ ಕೇಂದ್ರದಲ್ಲಿ ಕುಳಿತೇ ಸುಲಭವಾಗಿ ಬಳಸಲು ಸಾಧ್ಯವಾಗುವಂತೆ ರೂಪಿಸಲಾಗಿದೆ.

ಡ್ರೋನ್‌ಗಳು ನಿಗದಿತ ಗುರಿಯನ್ನು ನಾಶಗೊಳಿಸಿದ ಸಾಹಸದ ರೋಚಕ ದೃಶ್ಯ

ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಸೇರಿದಂತೆ ನೂರಾರು ಹಿರಿಯ ಅಧಿಕಾರಿಗಳು ಡ್ರೋನ್ ಮೂಲಕ ವೈರಿಯನ್ನು ನಾಶಪಡಿಸುವ ಪ್ರಾಯೋಗಿಕ ದಾಳಿಯನ್ನು ವೀಕ್ಷಿಸಿದರು. ಕೃತಕ ಬುದ್ಧಿಮತ್ತೆಯನ್ನೇ ಆಧರಿಸಿರುವ ಹೊಸ ಯುದ್ಧ ತಂತ್ರಜ್ಞಾನವನ್ನು ದೇಶೀಯವಾಗಿ ಅಭಿವೃದ್ಧಿಪಡಿಸಿರುವುದಕ್ಕೆ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಬೇಡಿಕೆ ಆಧರಿಸಿ ಸುಧಾರಣೆ: 'ಸದ್ಯ ಒಂದು ಕೆ.ಜಿ.ಯಷ್ಟು ಸ್ಫೋಟಕವನ್ನು ಮೇಲಕ್ಕೆ ಸಾಗಿಸಿ ನಿರ್ದಿಷ್ಟ ಗುರಿಯ ಮೇಲೆ ದಾಳಿಮಾಡಬಲ್ಲ ಸಾಮರ್ಥ್ಯವನ್ನು ದಕ್ಷ ತಂಡ ಅಭಿವೃದ್ಧಿಪಡಿಸಿರುವ ಡ್ರೋನ್‌ಗಳು ಹೊಂದಿವೆ. ಮುಂದೆ, ಸೇನೆಯ ಬೇಡಿಕೆಗೆ ತಕ್ಕಂತೆ ಸುಧಾರಣೆ ತರುವ ಉದ್ದೇಶವಿದೆ' ಎಂದು ಅಣ್ಣಾ–ದಕ್ಷ ತಂಡದಲ್ಲಿರುವ ನಿವೃತ್ತ ವಿಂಗ್ ಕಮಾಂಡರ್ ಕೆ.ಆರ್. ಶ್ರೀಕಾಂತ್ ತಿಳಿಸಿದರು.

ನಾಲ್ಕು ತಂಡಗಳಿಗೆ ಪ್ರಶಸ್ತಿ

'ಮೆಹರ್ ಬಾಬಾ ಸ್ವಾರ್ಮ್ ಡ್ರೋನ್ ಸ್ಪರ್ಧೆ' 2018ರ ಅಕ್ಟೋಬರ್‌ನಲ್ಲಿ ಆರಂಭವಾಗಿತ್ತು. 154 ತಂಡಗಳು ಅರ್ಜಿ ಸಲ್ಲಿಸಿದ್ದು, 57 ತಂಡಗಳು ಮೊದಲ ಸುತ್ತು ಪ್ರವೇಶಿಸಿದ್ದವು. 20 ತಂಡಗಳು ಎರಡನೇ ಸುತ್ತು ಪ್ರವೇಶಿಸಿದ್ದವು. ಗುಂಪು ಡ್ರೋನ್ ದಾಳಿಯ ಯಶಸ್ವಿ ತಂತ್ರಜ್ಞಾನ ಅಭಿವೃದ್ಧಿಪಡಿಸಿರುವ ನಾಲ್ಕು ತಂಡಗಳಿಗೆ ವಾಯುಪಡೆಯ ತಜ್ಞರ ಸಮಿತಿ ಬಹುಮಾನ ಘೋಷಿಸಿದೆ.

ಅತ್ಯುತ್ತಮ ಗುಂಪು ವಿನ್ಯಾಸಕ್ಕೆ ಬೆಂಗಳೂರಿನ ನ್ಯೂಸ್ಪೇಸ್ ರೀಸರ್ಚ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಅತ್ಯುತ್ತಮ ಸಂವಹನ ವಿನ್ಯಾಸಕ್ಕೆ ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ಫ್ಲೇರ್ ಅನ್‌ಮ್ಯಾನ್ಡ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ತಂಡಕ್ಕೆ, ಅತ್ಯುತ್ತಮ ಡ್ರೋನ್ ವಿನ್ಯಾಸಕ್ಕೆ ದಕ್ಷ ಅನ್‌ಮ್ಯಾನ್ಡ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಚೆನ್ನೈನ ಅಣ್ಣಾ ವಿಶ್ವವಿದ್ಯಾಲಯದ ತಂಡಕ್ಕೆ ಹಾಗೂ ಅತ್ಯುತ್ತಮ ಆವಿಷ್ಕಾರ ವಿನ್ಯಾಸಕ್ಕೆ ನೊಯ್ಡಾದ ವೇದಾ ಡಿಫೆನ್ಸ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಪ್ರಥಮ ಸ್ಥಾನ ಲಭಿಸಿದೆ.

ನಾಲ್ಕೂ ತಂಡಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ, 'ಗುಂಪು ಡ್ರೋನ್ ತಂತ್ರಜ್ಞಾನ ವಿನ್ಯಾಸ, ಅಭಿವೃದ್ಧಿ ಮತ್ತು ಪ್ರಯೋಗದ ಸ್ಪರ್ಧೆಗೆ ವಾಯುಪಡೆಯಿಂದ ಪೂರ್ಣ ಆರ್ಥಿಕ ನೆರವು ನೀಡಲಾಗಿದೆ. ಇನ್ನು ಮುಂದೆ ಪ್ರತಿ ವರ್ಷವೂ ಈ ಸ್ಪರ್ಧೆ ನಡೆಸಲಾಗುವುದು' ಎಂದು ಪ್ರಕಟಿಸಿದರು.

'ತಂತ್ರಾಂಶದಲ್ಲಿ ಸ್ವಾವಲಂಬನೆ ಸಾಧ್ಯ'

'ವಿದೇಶಿ ನಿರ್ಮಿತ ಡ್ರೋನ್‌ಗಳನ್ನು ಈಗಲೂ ಸೇನೆಯಲ್ಲಿ ಬಳಸಲಾಗುತ್ತಿದೆ. ಆದರೆ, ವಿದೇಶಗಳು ರಕ್ಷಣಾ ಉದ್ದೇಶದ ಬಳಕೆಯ ತಂತ್ರಜ್ಞಾನವನ್ನು ಪೂರ್ಣವಾಗಿ ಹಂಚಿಕೊಳ್ಳುವುದಿಲ್ಲ. ದೇಶೀಯವಾಗಿ ಅಭಿವೃದ್ಧಿಪಡಿಸುವ ಡ್ರೋನ್‌ಗಳಿಂದ ರಕ್ಷಣಾ ಕ್ಷೇತ್ರದಲ್ಲಿ ತಂತ್ರಜ್ಞಾನದ ಸ್ವಾವಲಂಬನೆಯೂ ಸಾಧ್ಯವಾಗಲಿದೆ' ಎಂದು ನ್ಯೂಸ್ಪೇಸ್ ಟೆಕ್ನಾಲಜೀಸ್‌ನ ಮುಖ್ಯಸ್ಥ ಸಮೀರ್ ಜೋಶಿ ಹೇಳಿದರು.

ನಾಗರಿಕ ಉದ್ದೇಶ ಮತ್ತು ಮಿಲಿಟರಿ ಉದ್ದೇಶಕ್ಕೆ ಡ್ರೋನ್‌ಗಳ ಬಳಕೆ ಕುರಿತು ಸ್ಪಷ್ಟವಾದ ನೀತಿ ಅಗತ್ಯವಿದೆ. ಇದರಿಂದ ಈ ಉದ್ಯಮ ಬೃಹತ್ತಾಗಿ ಬೆಳೆಯುತ್ತದೆ. ರಕ್ಷಣಾ ಕ್ಷೇತ್ರದಲ್ಲಿ ಡ್ರೋನ್‌ಗಳ ಬಳಕೆಯ ವಿಚಾರದಲ್ಲಿ ಭಾರತ ಇನ್ನೂ ಆರಂಭಿಕ ಹಂತದಲ್ಲಿದೆ ಎಂದರು.

'ಕಾಂಗ್ರೆಸ್ ಸೇರಬೇಕಿದ್ರೆ ಮದ್ಯಪಾನ, ಡ್ರಗ್ಸ್, ಪಕ್ಷದ ಬಹಿರಂಗ ಟೀಕೆ ನಿಷಿದ್ಧ'

ನವದೆಹಲಿ: ಹೊಸದಾಗಿ ಕಾಂಗ್ರೆಸ್ ಸದಸ್ಯತ್ವ ಪಡೆಯುವವರಿಗೆ ಪಕ್ಷವು ಕೆಲವು ಷರತ್ತುಗಳನ್ನು ವಿಧಿಸಿದೆ. ಅದರಂತೆ, ಪ್ರಾಥಮಿಕ ಸದಸ್ಯತ್ವ ಪಡೆಯುವವರು ಮದ್ಯಪಾನ, ಡ್ರಗ್ಸ್‌ನಿಂದ ದೂರವಿರುವುದಾಗಿಯೂ ಬಹಿರಂಗ ವೇದಿಕೆಗಳಲ್ಲಿ ಪಕ್ಷವನ್ನು ಟೀಕಿಸುವುದಿಲ್ಲವೆಂದೂ ಘೋಷಿಸಿಕೊಳ್ಳಬೇಕಾಗುತ್ತದೆ.

ಪಕ್ಷದ ಸದಸ್ಯತ್ವ ನೋಂದಣಿ ಪತ್ರದಲ್ಲಿರುವ ಪ್ರಕಾರ, ಸದಸ್ಯತ್ವ ಪಡೆಯುವವರು ಕಾನೂನು ವ್ಯಾಪ್ತಿ ಮೀರಿ ಆಸ್ತಿ ಹೊಂದಿರುವುದಿಲ್ಲವೆಂದೂ ಪಕ್ಷದ ನೀತಿಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ದೈಹಿಕ ಶ್ರಮದ ಕೆಲಸಗಳನ್ನು ಮಾಡಲೂ ಹಿಂಜರಿಯುವುದಿಲ್ಲ ಎಂದು ಘೋಷಿಸಿಕೊಳ್ಳಬೇಕಾಗುತ್ತದೆ.

ಸದಸ್ಯತ್ವ ಅಭಿಯಾನ ಹಮ್ಮಿಕೊಳ್ಳುವ ಸಲುವಾಗಿ ಕಾಂಗ್ರೆಸ್ ಅರ್ಜಿ ನಮೂನೆಯನ್ನು ಸಿದ್ಧಪಡಿಸಿದ್ದು, 10 ಅಂಶಗಳ ವೈಯಕ್ತಿಕ ದೃಢೀಕರಣಗಳನ್ನು ಉಲ್ಲೇಖಿಸಿದೆ.

ನವೆಂಬರ್ 1ರಿಂದ ಆರಂಭವಾಗಲಿರುವ ಸದಸ್ಯತ್ವ ಅಭಿಯಾನ ಮುಂದಿನ ವರ್ಷ ಮಾರ್ಚ್ ವರೆಗೆ ಮುಂದುವರಿಯಲಿದೆ.

ಐಐಟಿ, ಐಐಎಸ್‌ಸಿ ಸ್ನಾತಕೋತ್ತರ ದಾಖಲಾತಿಗೆ

ಮಾಸ್ಟರ್ಸ್‌ಗಾಗಿ ಜಂಟಿ ಪ್ರವೇಶ ಪರೀಕ್ಷೆ

ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಾದ ಐಐಟಿಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಇಂಟಿಗ್ರೇಟೆಡ್ ಎಂಎಸ್‌ಸಿ, ಪಿಎಚ್‌ಡಿ ಕೋರ್ಸ್‌ಗಳು ಇವೆ. ಇವುಗಳಿಗೆ ಪ್ರವೇಶ ಪಡೆಯುವುದು ಹೇಗೆ?

ಐಐಎಸ್‌ಸಿ ಬೆಂಗಳೂರು

ನಾಗರಾಜ ಕೆ.ಎಲ್.

ಕಲೆ ಅಥವಾ ವಿಜ್ಞಾನ ವಿಷಯಗಳಲ್ಲಿ ಪದವಿ ಪೂರೈಸಿದವರು ಸಾಮಾನ್ಯವಾಗಿ ತಮ್ಮ ಸಮೀಪದ ವಿಶ್ವವಿದ್ಯಾಲಯಗಳಲ್ಲಿ ಅಥವಾ ಆಯಾ ರಾಜ್ಯದ ಪ್ರತಿಷ್ಠಿತ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯುತ್ತಾರೆ. ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಾದ ಭಾರತೀಯ ತಂತ್ರಜ್ಞಾನ ಸಂಸ್ಥೆಗಳಲ್ಲಿ (ಐಐಟಿ) ಸ್ನಾತಕೋತ್ತರ ಪದವಿ ಹಾಗೂ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಇಂಟಿಗ್ರೇಟೆಡ್ ಎಂಎಸ್‌ಸಿ, ಪಿಎಚ್‌ಡಿ ಕೋರ್ಸ್‌ಗಳು ಇವೆ ಎಂಬುದು ಹಲವರಿಗೆ ತಿಳಿಯದೇ ಇರಬಹುದು. ಈ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವುದು ಹೇಗೆ ಎಂಬ ಪ್ರಶ್ನೆ ಮೂಡುತ್ತದೆ ಅಲ್ಲವೆ? ಹಾಗೆ ಪ್ರವೇಶ ಪಡೆಯಲು ಅಭ್ಯರ್ಥಿಗಳು ಪ್ರತಿ ವರ್ಷ ನಡೆಯುವ ರಾಷ್ಟ್ರಮಟ್ಟದ 'ಮಾಸ್ಟರ್ಸ್‌ಗಾಗಿ ಜಂಟಿ ಪ್ರವೇಶ ಪರೀಕ್ಷೆ' (JAM – Joint admission test for Masters) ತೇರ್ಗಡೆ ಆಗಬೇಕು. ಈ ಪರೀಕ್ಷೆಯ ಕುರಿತ ಮಾಹಿತಿ ಇಲ್ಲಿದೆ.

ಉದ್ದೇಶ

ದೇಶದ ವಿವಿಧ ಐಐಟಿಗಳಲ್ಲಿ ಎಂಎಸ್‌ಸಿ (ಎರಡು ವರ್ಷ), ಜಂಟಿ ಎಂಎಸ್‌ಸಿ- ಪಿಎಚ್‌ಡಿ, ಎಂಎಸ್‌ಸಿ- ಪಿಎಚ್‌ಡಿ ಡ್ಯುಯಲ್ ಡಿಗ್ರಿ ಹಾಗೂ ಇತರ ಸ್ನಾತಕೋತ್ತರ ಪದವಿ ಮತ್ತು ಐಐಎಸ್‌ಸಿಯಲ್ಲಿ ಪಿಎಚ್‌ಡಿ ಅಧ್ಯಯನಕ್ಕೆ ಪ್ರವೇಶ ಒದಗಿಸುವ ಮೂಲಕ ದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಮತ್ತು ಅಧ್ಯಯನ ಪೂರ್ಣಗೊಂಡ ನಂತರ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ಒದಗಿಸುವುದು ಈ ಪರೀಕ್ಷೆಯ ಉದ್ದೇಶವಾಗಿದೆ. 2020ರವರೆಗೂ ವಿಜ್ಞಾನ ವಿಷಯಗಳಿಗೆ ಮಾತ್ರ ಆಯೋಜಿಸಲಾಗುತ್ತಿದ್ದ ಪ್ರವೇಶ ಪರೀಕ್ಷೆಯನ್ನು, 2021ರಿಂದ ಸಮಾಜ ವಿಜ್ಞಾನ ವಿಭಾಗದ ಅರ್ಥಶಾಸ್ತ್ರ ವಿಷಯಕ್ಕೂ ಆಯೋಜಿಸಲಾಗುತ್ತಿದೆ.

ಎಲ್ಲೆಲ್ಲಿ ಮಾನ್ಯತೆ?

ಈ ಪರೀಕ್ಷೆಯು ಐಐಟಿ, ಐಐಎಸ್‌ಸಿ ಪ್ರವೇಶಕ್ಕೆ ಮಾತ್ರವಲ್ಲದೆ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಬಹುತೇಕ ವಿವಿಗಳು ವಿವಿಧ ಕೋರ್ಸ್‌ಗಳ ಪ್ರವೇಶಕ್ಕೂ ಈ ಫಲಿತಾಂಶಕ್ಕೆ ಮನ್ನಣೆ ನೀಡುತ್ತವೆ. ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ (ಐಐಎಸ್‌ಇಆರ್), ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ (ಎನ್‌ಐಟಿ), ಗುಲ್ಬರ್ಗಾ ಕೇಂದ್ರೀಯ ವಿವಿ ಸೇರಿದಂತೆ ಕೆಲವು ಕೇಂದ್ರೀಯ ವಿಶ್ವವಿದ್ಯಾಲಯಗಳು ಈ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಫಲಿತಾಂಶವನ್ನು ಪರಿಗಣಿಸುತ್ತವೆ. ಅದರ ಆಧಾರದಲ್ಲಿ ಉನ್ನತ ಶಿಕ್ಷಣಕ್ಕೆ ಅಥವಾ ಸಂಶೋಧನೆಗೆ ಅವಕಾಶ ನೀಡುತ್ತವೆ.

ಅರ್ಥಶಾಸ್ತ್ರದಲ್ಲಿ ಮಾಸ್ಟರ್ಸ್ ಪದವಿ

ಸಾಮಾನ್ಯವಾಗಿ ಐಐಟಿಗಳು ಎಂದರೆ ಎಂಜಿನಿಯರಿಂಗ್ ವಿಷಯದ ಅಧ್ಯಯನಕ್ಕೆ ಮಾತ್ರ ಎಂಬ ಭಾವನೆ ಇದೆ. ಆದರೆ, ಐಐಟಿಗಳಲ್ಲಿ ಮೂಲವಿಜ್ಞಾನದ ವಿಷಯಗಳು ಸೇರಿದಂತೆ, ಅರ್ಥಶಾಸ್ತ್ರ ವಿಷಯದಲ್ಲಿಯೂ ಸ್ನಾತಕೋತ್ತರ ಪದವಿ ಕೋರ್ಸ್ ಲಭ್ಯವಿದೆ. ಐಐಟಿ ದೆಹಲಿ ಮತ್ತು ಐಐಟಿ ರೂರ್ಕಿಯಲ್ಲಿ 2020ರಿಂದ ಅರ್ಥಶಾಸ್ತ್ರ ವಿಷಯದಲ್ಲಿ ಎರಡು ವರ್ಷದ ಸ್ನಾತಕೋತ್ತರ ಕೋರ್ಸ್ ಪ್ರಾರಂಭಿಸಲಾಗಿದೆ. ಅರ್ಥಶಾಸ್ತ್ರದಲ್ಲಿ ಉನ್ನತ ಶಿಕ್ಷಣ ಪಡೆಯಲು ಬಯಸುವ ವಿದ್ಯಾರ್ಥಿಗಳು ಈ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ನಡೆಸುವ ಬಗ್ಗೆ ಯೋಚಿಸುವುದು ಒಳಿತು.

ಅರ್ಹತೆ

ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರ ವಿಷಯ ಒಳಗೊಂಡ ಪದವಿ ಅಥವಾ ಮೂಲವಿಜ್ಞಾನ ವಿಷಯಗಳನ್ನು (ಭೌತಶಾಸ್ತ್ರ, ಗಣಿತ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಜೈವಿಕ ತಂತ್ರಜ್ಞಾನ, ಸಂಖ್ಯಾಶಾಸ್ತ್ರ ಇತ್ಯಾದಿ) ಒಳಗೊಂಡ ಪದವಿ ಪೂರೈಸಿದವರು ಅಥವಾ ಪದವಿಯ ಅಂತಿಮ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವವರು ಈ ಪ್ರವೇಶ ಪರೀಕ್ಷೆಯನ್ನು ಎದುರಿಸಬಹುದು. ಅರ್ಹತೆ, ವಯೋಮಿತಿ, ಪ್ರವೇಶ ಪರೀಕ್ಷೆಯ ವಿಷಯಗಳು ಮುಂತಾದ ಮಾಹಿತಿಗಾಗಿ https://jam.iitr.ac.inಗೆ ಭೇಟಿ ಕೊಡಿ.

ಐಐಎಸ್‌ಸಿಯಲ್ಲಿ ಲಭ್ಯವಿರುವ ವಿಷಯಗಳು

ಇಂಟಿಗ್ರೇಟೆಡ್ ಎಂಎಸ್‌ಸಿ- ಪಿಎಚ್‌ಡಿ: ಜೀವ ವಿಜ್ಞಾನ, ರಸಾಯನ ವಿಜ್ಞಾನ, ಗಣಿತ ವಿಜ್ಞಾನ ಹಾಗೂ ಭೌತ ವಿಜ್ಞಾನ.

ವಿವಿಧ ಐಐಟಿಯಲ್ಲಿ ಲಭ್ಯವಿರುವ ಕೋರ್ಸ್‌ಗಳು

ಎರಡು ವರ್ಷದ ಎಂಎಸ್‌ಸಿ: ರಸಾಯನ ಶಾಸ್ತ್ರ, ಗಣಿತ ಮತ್ತು ಕಂಪ್ಯೂಟಿಂಗ್, ಗಣಿತ, ಭೌತಶಾಸ್ತ್ರ, ಅನ್ವಯಿಕ ಭೂಗರ್ಭಶಾಸ್ತ್ರ, ಅನ್ವಯಿಕ ಭೂಭೌತಶಾಸ್ತ್ರ, ಅಪ್ಲೈಡ್ ಸ್ಟ್ಯಾಟಿಸ್ಟಿಕ್ಸ್ ಮತ್ತು ಇನ್‌ಫಾರ್ಮ್ಯಾಟಿಕ್ಸ್, ಜೈವಿಕ ತಂತ್ರಜ್ಞಾನ, ಖಗೋಳವಿಜ್ಞಾನ, ಸಂಖ್ಯಾಶಾಸ್ತ್ರ.

ಜಂಟಿ ಎಂಎಸ್‌ಸಿ- ಪಿಎಚ್‌ಡಿ: ವಾತಾವರಣ ಮತ್ತು ಸಾಗರ ಅಧ್ಯಯನ, ರಸಾಯನಶಾಸ್ತ್ರ, ಭೂಗರ್ಭಶಾಸ್ತ್ರ, ಗಣಿತ, ಭೌತಶಾಸ್ತ್ರ, ಭೂಭೌತಶಾಸ್ತ್ರ, ವೈದ್ಯಕೀಯ ಭೌತಶಾಸ್ತ್ರ, ಅನ್ವಯಿಕ ವೈದ್ಯಕೀಯ ಸೂಕ್ಷ್ಮಜೀವಶಾಸ್ತ್ರ, ನ್ಯೂಕ್ಲಿಯರ್ ಮೆಡಿಸಿನ್.

ಎಂಎಸ್‌ಸಿ- ಪಿಎಚ್‌ಡಿ ಡ್ಯುಯಲ್ ಡಿಗ್ರಿ: ಶಕ್ತಿ, ಪರಿಸರ ವಿಜ್ಞಾನ, ಆಪರೇಷನ್ಸ್ ರಿಸರ್ಚ್, ಅನ್ವಯಿಕ ಭೂಗರ್ಭಶಾಸ್ತ್ರ, ಅನ್ವಯಿಕ ಭೂಭೌತಶಾಸ್ತ್ರ.

ಮೂರು ವರ್ಷದ ಎಂಎಸ್‌ಸಿ (ತಂತ್ರಜ್ಞಾನ): ಎಂಎಸ್‌ಸಿ- ಎಂ.ಟೆಕ್ ಡ್ಯುಯಲ್ ಡಿಗ್ರಿ: ಗಣಿತ–ಡೇಟಾ & ಕಂಪ್ಯುಟೇಷನಲ್ ಸೈನ್ಸಸ್, ಫಿಸಿಕ್ಸ್ ಮತ್ತು ಮೆಟೀರಿಯಲ್ಸ್ ಎಂಜಿನಿಯರಿಂಗ್.

ಐಐಟಿ, ಐಐಎಸ್‌ಸಿ ಏಕೆ?

ದೇಶದಾದ್ಯಂತ ಇರುವ ವಿಶ್ವವಿದ್ಯಾಲಯಗಳ ಶಿಕ್ಷಣದ ಗುಣಮಟ್ಟಕ್ಕಿಂತ ಐಐಟಿ, ಐಐಎಸ್‌ಸಿಯಲ್ಲಿ ದೊರೆಯುವ ಶಿಕ್ಷಣದ ಗುಣಮಟ್ಟ ಅತ್ಯುತ್ತಮವಾಗಿದೆ. ವಿಶ್ವದರ್ಜೆಯ ಶಿಕ್ಷಣ, ಅನುಭವಿ ಹಾಗೂ ಪ್ರತಿಭಾವಂತ ಪ್ರಾಧ್ಯಾಪಕರು, ಸುಧಾರಿತ ಪ್ರಯೋಗಾಲಯಗಳು, ಆಧುನಿಕ ಪ್ರಯೋಗಾಲಯ ಉಪಕರಣಗಳು, ಸಂಶೋಧನೆಗೆ ಅವಕಾಶ, ವೈವಿಧ್ಯಮಯ ಹಾಗೂ ವಿಶಿಷ್ಟ ಕೋರ್ಸ್‌ಗಳು ಇಲ್ಲಿ ಲಭ್ಯ. ಇಲ್ಲಿನ ಕೋರ್ಸ್‌ಗಳಿಗೆ ಪ್ರವೇಶ ಗಿಟ್ಟಿಸಲು ಇರುವ ಸ್ಪರ್ಧೆ, ಈ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಪೂರೈಸಿ ಹೊರಬಂದವರಿಗೆ ಉನ್ನತ ಶಿಕ್ಷಣ, ಸಂಶೋಧನೆ ಮತ್ತು ಔದ್ಯೋಗಿಕ ವಲಯದಲ್ಲಿ ಇರುವ ಬೇಡಿಕೆ ಗಮನಿಸಿದರೆ ಇಲ್ಲಿ ಏಕೆ ಅಧ್ಯಯನ ಮಾಡಬೇಕು ಎಂಬುದು ಮನವರಿಕೆಯಾಗುತ್ತದೆ.

ಸಿದ್ಧತೆ, ತರಬೇತಿ

'ಮಾಸ್ಟರ್ಸ್‌ಗಾಗಿ ಜಂಟಿ ಪ್ರವೇಶ ಪರೀಕ್ಷೆ'ಗೆ ಸಿದ್ಧರಾಗುವುದು ಸುಲಭವೇನಲ್ಲ. ಪದವಿ ಮುಗಿಸಿದ ನಂತರ ಈ ಪರೀಕ್ಷೆ ಎದುರಿಸುವ ಬಗ್ಗೆ ಯೋಚಿಸಿದರೆ, ಸಿದ್ಧತೆಗಾಗಿ ಕನಿಷ್ಠ 8 - 12 ತಿಂಗಳು ಬೇಕಾಗಬಹುದು. ಐಐಟಿ, ಐಐಎಸ್‌ಸಿಯಲ್ಲಿ ಅಧ್ಯಯನ ಮಾಡುವ ಕನಸನ್ನು ಎಳವೆಯಲ್ಲಿಯೇ ಕಂಡಿದ್ದರೆ, ಪದವಿಯ ಮೊದಲ ವರ್ಷದಿಂದಲೇ ಸಿಲಬಸ್‌ಗೆ ಅನುಗುಣವಾಗಿ ನಿರಂತರ ಅಧ್ಯಯನ ಮಾಡುವುದು ಅತ್ಯವಶ್ಯ. ಯಾವ ಐಐಟಿಗಳಲ್ಲಿ ಯಾವ ಕೋರ್ಸ್‌ಗಳಿವೆ, ಭವಿಷ್ಯದಲ್ಲಿ ಅವುಗಳಿಗೆ ಬರಬಹುದಾದ ಬೇಡಿಕೆ ಏನು, ಪ್ರಶ್ನೆಗಳ ಕಠಿಣತೆ, ಹಿಂದಿನ ಪ್ರಶ್ನೆಪತ್ರಿಕೆಗಳ ವಿಶ್ಲೇಷಣೆ, ಈ ಎಲ್ಲ ವಿವರಗಳನ್ನು ತಿಳಿದುಕೊಳ್ಳುವುದು ಅಗತ್ಯ. ಪರೀಕ್ಷೆಯ ಸ್ವರೂಪದ ಬಗ್ಗೆ ಲಭ್ಯವಿರುವ ಮಾಹಿತಿಯನ್ನು ಕೆಲವು ಯೂಟ್ಯೂಬ್ ಚಾನೆಲ್‌ಗಳು ನೀಡುತ್ತವೆ. ಅವುಗಳನ್ನು ವೀಕ್ಷಿಸುವುದು ಒಳಿತು. ಈ ಎಲ್ಲವುಗಳನ್ನೂ ವಿವರವಾಗಿ ತಿಳಿದ ಮೇಲೆ ಸಿದ್ಧತೆ ಬಗೆಗಿನ ಯೋಜನೆಗಳನ್ನು ರೂಪಿಸಿಕೊಳ್ಳಿ. ಸಮಯಾವಕಾಶ ಕಡಿಮೆ ಇದ್ದರೆ ಅಥವಾ ಹೆಚ್ಚಿನ ಆತ್ಮವಿಶ್ವಾಸದೊಂದಿಗೆ ಪರೀಕ್ಷೆ ಎದುರಿಸಲು ತರಬೇತಿ ಅಗತ್ಯವೆನಿಸಿದರೆ ಆಫ್‌ಲೈನ್ ಅಥವಾ ಆನ್‌ಲೈನ್ ತರಬೇತಿ ಪಡೆದುಕೊಳ್ಳಿ. ಈ ಹಿಂದೆ ಪರೀಕ್ಷೆ ಬರೆದು ತೇರ್ಗಡೆಯಾದವರು, ಐಐಟಿ, ಐಐಎಸ್‌ಸಿಯಲ್ಲಿ ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಸಂಪರ್ಕಿಸಿ, ಪೂರಕ ಮಾಹಿತಿ ಕಲೆಹಾಕಿ.

ಸಿಬಿಎಸ್‌ಇ: ಬದಲಾದ ಮೌಲ್ಯಮಾಪನಕ್ಕೆ ಪೂರಕವಾಗಿರಲಿ ವಿದ್ಯಾರ್ಥಿಗಳ ಸಿದ್ಧತೆ

ವೆಂಕಟಸುಬ್ಬರಾವ್. ವಿ.

ಸಿಬಿಎಸ್‌ಇ ಯು, ಶೈಕ್ಷಣಿಕ ವರ್ಷ 2021-22ಕ್ಕೆ ಅನ್ವಯವಾಗುವಂತೆ ಹೊಸ ಮೌಲ್ಯಮಾಪನದ ರೂಪುರೇಷೆಗಳನ್ನು ಪ್ರಕಟಿಸಿದೆ. ಈ ಬದಲಾದ ನಿಯಮಗಳನ್ನು ಅರಿತುಕೊಂಡರೆ ವಿದ್ಯಾರ್ಥಿಗಳು ಯಾವ ಗೊಂದಲವಿಲ್ಲದೇ ಪರೀಕ್ಷೆ ಎದುರಿಸಬಹುದು.

ಇಷ್ಟು ತಿಂಗಳುಗಳ ನಂತರ ಈಗ ಕಲಿಕೆಯ ವಾತಾವರಣವು ಸಹಜಸ್ಥಿತಿಯತ್ತ ಮರಳುತ್ತಿರುವುದು ನಿಜವಾಗಿಯೂ ಸಂತಸದ ವಿಷಯ. ಈ ಬದಲಾದ ಸನ್ನಿವೇಶದಲ್ಲಿ ಅನಿವಾರ್ಯವಾಗಿ ಕಲಿಯುವ ಮತ್ತು ಕಲಿಸುವ ರೀತಿಗಳು, ಪದ್ಧತಿಗಳು ಬದಲಾಗುತ್ತಿವೆ, ಬದಲಾಗಿವೆ. ಒಂದು ಕಡೆ ಕಲಿಕೆಯ ರೀತಿ-ನೀತಿಗಳ ಬದಲಾವಣೆ, ಮತ್ತೊಂದೆಡೆ ಮುಂದೇನು ಎನ್ನುವುದರ ಅನಿಶ್ಚಿತತೆ! ಇವುಗಳ ಮಧ್ಯೆ ಸರಿಯಾದ ರೀತಿಯ ಕಲಿಕೆಯ ಮೌಲ್ಯಮಾಪನ ಮಾಡಲೇಬೇಕಾದ ಅವಶ್ಯಕತೆ.

ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಸಿಬಿಎಸ್‌ಇ ಯು, ಮೌಲ್ಯಮಾಪನದ ಸುಧಾರಣೆಗಳು – 2021-22 ಹೆಸರಿನಲ್ಲಿ ಶೈಕ್ಷಣಿಕ ವರ್ಷ 2021-22ಕ್ಕೆ ಅನ್ವಯವಾಗುವಂತೆ ಹೊಸ ಮೌಲ್ಯಮಾಪನದ ರೂಪುರೇಷೆಗಳನ್ನು ಪ್ರಕಟಿಸಿದೆ. ಈ ರೂಪುರೇಷೆಗಳು ಸಿಬಿಎಸ್‌ಇ ಶಾಲೆಗಳಿಗೆ ಅನ್ವಯಿಸುತ್ತವೆ.

ಸಿಬಿಎಸ್‌ಇಯ ಮೌಲ್ಯಮಾಪನದ ಸುಧಾರಣೆಗಳು – 2021-22ರ ಕೆಲವು ಪ್ರಮುಖ ಅಂಶಗಳನ್ನು ಗಮನಿಸೋಣ.

ಈ ಶೈಕ್ಷಣಿಕ ವರ್ಷವನ್ನು ಎರಡು ಅವಧಿಗಳಾಗಿ ವಿಂಗಡಿಸಲಾಗಿದೆ. ಪ್ರತಿ ಅವಧಿಯಲ್ಲಿಯೂ ಶೇ 50 ರಷ್ಟು ಪಠ್ಯಕ್ರಮವನ್ನು ಬೋಧಿಸಲಾಗುವುದು. ಪ್ರತಿ ಅವಧಿಯ ಕೊನೆಯಲ್ಲಿ ಮೌಲ್ಯಮಾಪನವನ್ನು ಮಾಡಲಾಗುವುದು.

ಆಂತರಿಕ ಮೌಲ್ಯಮಾಪನ, ಪ್ರಯೋಗಗಳು ಮತ್ತು ಪ್ರಾಯೋಗಿಕ ಕಾರ್ಯಗಳು, ಪ್ರಾಜೆಕ್ಟುಗಳನ್ನು ಗಂಭೀರವಾಗಿ ಪರಿಗಣಿಸಿ, ಸರಿಯಾದ ರೀತಿಯಲ್ಲಿ ಮಾಡಿ, ಅವುಗಳ ಮೌಲ್ಯಮಾಪನಗಳಿಗೆ ಹೆಚ್ಚು ಒತ್ತುಕೊಡಲಾಗುತ್ತದೆ.

ಆಂತರಿಕ ಮೌಲ್ಯಮಾಪನವು ಇವುಗಳನ್ನು ಒಳಗೊಂಡಿರುತ್ತದೆ

9 ಮತ್ತು 10ನೆಯ ತರಗತಿಗಳಿಗೆ,

- 3 ಆಂತರಿಕ ಕಿರು-ಪರೀಕ್ಷೆಗಳು (ವರ್ಷದಲ್ಲಿ)
- ಪೋರ್ಟ್‌ಫೋಲಿಯೊ
- ವಿವಿಧ ರೀತಿಯ ಚಟುವಟಿಕೆಗಳ ಮೌಲ್ಯಮಾಪನ
- ಕಲಿಕಾ ಪ್ರಗತಿಯ/ ಅಭಿವೃದ್ಧಿ ಚಟುವಟಿಕೆಗಳ ಮೌಲ್ಯಮಾಪನ

11 ಮತ್ತು 12ನೆಯ ತರಗತಿಗಳಿಗೆ

- ಪ್ರತಿಯೊಂದು ಪಾಠದ ಕೊನೆಯಲ್ಲಿ ನಡೆಸುವ ಕಿರು-ಪರೀಕ್ಷೆಗಳು
- ಪ್ರಾಯೋಗಿಕ ಚಟುವಟಿಕೆಗಳು
- ಪ್ರಾಜೆಕ್ಟ್‌ಗಳು
- ಇತರೆ ಕಲಿಕಾ ಚಟುವಟಿಕೆಗಳು

ಮೊದಲನೆಯ ಅವಧಿಯ ಪರೀಕ್ಷೆ

- ಒಟ್ಟು ಅಂಕಗಳು 50. ಆಂತರಿಕ ಮೌಲ್ಯಮಾಪನದ ಅಂಕಗಳು 10. ಮೊದಲನೆಯ ಅವಧಿಯ ಪರೀಕ್ಷೆಯ ಅಂಕಗಳು: 40
- ಮೊದಲನೆಯ ಅವಧಿಯ ಪರೀಕ್ಷೆಗಳು ನವೆಂಬರ್‌ನಲ್ಲಿ ಪ್ರಾರಂಭವಾಗುತ್ತವೆ.
- ಮೊದಲನೆಯ ಅವಧಿಯ ಪರೀಕ್ಷೆಗಳಲ್ಲಿ, ಬಹು-ಆಯ್ಕೆ ಉತ್ತರದ ಪ್ರಶ್ನೆಗಳು ಮಾತ್ರ ಇರುತ್ತವೆ.
- ಶೇ 50ರಷ್ಟು ಪಠ್ಯಕ್ರಮವನ್ನು ಮಾತ್ರ ಒಳಗೊಂಡಿರುತ್ತದೆ.
- ಕೆಲವು ವಿಷಯಗಳಲ್ಲಿ 50 ಪ್ರಶ್ನೆಗಳಿಗೆ (ಉದಾ: ವಿಜ್ಞಾನ) ಮತ್ತು ಕೆಲವು ವಿಷಯಗಳಲ್ಲಿ 40 ಪ್ರಶ್ನೆಗಳಿಗೆ (ಉದಾ: ಗಣಿತ) ಉತ್ತರಿಸಬೇಕಾಗಿರುತ್ತದೆ.
- ಪ್ರಶ್ನೆಗಳನ್ನು ಭಾಗ-ಎ, ಭಾಗ-ಬಿ ಮತ್ತು ಭಾಗ-ಸಿ ಎಂದು ಮೂರು ಭಾಗಗಳಾಗಿ ವಿಂಗಡಿಸಲಾಗಿರುತ್ತದೆ
- ಪ್ರಶ್ನೆಪತ್ರಿಕೆಯು ಸರಳ, ಕ್ಲಿಷ್ಟ ಮತ್ತು ತಾರ್ಕಿಕ ಪ್ರಶ್ನೆಗಳನ್ನೊಳಗೊಂಡಿರುತ್ತದೆ.
- ಉತ್ತರಗಳನ್ನು ಒ.ಎಮ್.ಆರ್. ಹಾಳೆಗಳಲ್ಲಿ ತುಂಬಬೇಕು.
- ಪರೀಕ್ಷೆಯ ಅವಧಿ: 90 ನಿಮಿಷಗಳು
- ಪ್ರಶ್ನೆಪತ್ರಿಕೆಗಳನ್ನು ಓದಲು ನಿಗದಿಪಡಿಸಿದ ಸಮಯ: 20 ನಿಮಿಷಗಳು
- ಪರೀಕ್ಷೆಗಳು ಆಯಾ ಶಾಲೆಗಳಲ್ಲಿಯೇ ನಡೆಯುತ್ತವೆ. ಸಿಬಿಎಸ್‌ಇ ಯಿಂದ ನಿಯೋಜಿತರಾದ ವೀಕ್ಷಕರ ಮೇಲ್ವಿಚಾರಣೆಯಲ್ಲಿ ಪರೀಕ್ಷೆಗಳು ನಡೆಯುತ್ತವೆ.

ಮೊದಲನೆಯ ಅವಧಿಯಲ್ಲಿ ಗಳಿಸಿದ ಅಂಕಗಳು, ಅಂತಿಮ ಫಲಿತಾಂಶದ ಭಾಗವಾಗುವುದರಿಂದ, ವಿದ್ಯಾರ್ಥಿಗಳು ಈ ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಎರಡನೆಯ ಅವಧಿಯ ಪರೀಕ್ಷೆ

- ಒಟ್ಟು ಅಂಕಗಳು 50.
- ಆಂತರಿಕ ಮೌಲ್ಯಮಾಪನದ ಅಂಕಗಳು 10 ಮತ್ತು ಎರಡನೆಯ ಅವಧಿಯ ಪರೀಕ್ಷೆಯ ಅಂಕಗಳು: 40
- ಎರಡನೆಯ ಅವಧಿಯ ಪರೀಕ್ಷೆಗಳು ಮಾರ್ಚ್-ಏಪ್ರಿಲ್-2022 ರಲ್ಲಿ ನಡೆಯುತ್ತವೆ.
- ಎರಡನೆಯ ಅವಧಿಯ ಪರೀಕ್ಷೆಯ ಪ್ರಶ್ನೆಪತ್ರಿಕೆಯು ಸಾಮಾನ್ಯ ಪ್ರಶ್ನೆಪತ್ರಿಕೆಯಂತೆಯೇ ಇರುತ್ತದೆ.
- ಶೇ 50ರಷ್ಟು ಪಠ್ಯಕ್ರಮವನ್ನು ಮಾತ್ರ ಒಳಗೊಂಡಿರುತ್ತದೆ.
- ಪರೀಕ್ಷೆಯ ಅವಧಿ : 120 ನಿಮಿಷಗಳು
- ಆ ಸಮಯದಲ್ಲಿ (ಮಾರ್ಚ್ – ಏಪ್ರಿಲ್-2022) ಪರಿಸ್ಥಿತಿಗಳು ಸರಿಯಾಗಿಲ್ಲದಿದ್ದ ಪಕ್ಷದಲ್ಲಿ, ಎರಡನೆಯ ಅವಧಿಯ ಪರೀಕ್ಷೆಯೂ ಮೊದಲನೆಯ ಅವಧಿಯ ಪರೀಕ್ಷೆಯಂತೆಯೇ ಬಹು ಆಯ್ಕೆ ಪ್ರಶ್ನೆಗಳನ್ನು ಮಾತ್ರ ಒಳಗೊಂಡಿರುತ್ತದೆ ಮತ್ತು ಪರೀಕ್ಷೆಯ ಅವಧಿಯು 90 ನಿಮಿಷಗಳು.

ಎರಡನೆಯ ಅವಧಿಯ ಅಂಕಗಳೂ ಅಂತಿಮ ಫಲಿತಾಂಶಕ್ಕೆ ಪರಿಗಣಿಸಲ್ಪಡುತ್ತವೆ.

ಮುಂದಿನ ದಿನಗಳ ಅನಿಶ್ಚಿತತೆಯನ್ನು ಗಮನದಲ್ಲಿಟ್ಟುಕೊಂಡು, ಸಿಬಿಎಸ್‌ಇ ಯು ತನ್ನ ಸುತ್ತೋಲೆಯಲ್ಲಿ, 2021-2022 ಶೈಕ್ಷಣಿಕ ವರ್ಷದ ಮೌಲ್ಯಮಾಪನ ಮತ್ತು ಫಲಿತಾಂಶದ ಬಗ್ಗೆ ಹೀಗೆ ಹೇಳಿದೆ.

- **ಸನ್ನಿವೇಶ - 1:** ಪರಿಸ್ಥಿತಿ ಎಲ್ಲವೂ ಸರಿಯಾಗಿದ್ದು, ಮಕ್ಕಳು ಶಾಲೆಗೆ ಬಂದು ಪರೀಕ್ಷೆ ಬರೆಯುವಂತಿದ್ದರೆ, ಎರಡೂ ಅವಧಿಯ ಪರೀಕ್ಷೆಗಳೂ ನಡೆದು ಅಂಕಗಳನ್ನು ಸಮನಾಗಿ ಪರಿಗಣಿಸಲಾಗುತ್ತದೆ.
- **ಸನ್ನಿವೇಶ - 2:** ಮೊದಲನೆಯ ಅವಧಿಯ ಪರೀಕ್ಷೆಯ ಸಮಯದಲ್ಲಿ ಅನಿವಾರ್ಯವಾಗಿ (ಲಾಕ್‌ಡೌನ್) ಮಕ್ಕಳು ಶಾಲೆಗೆ ಬಂದು ಪರೀಕ್ಷೆ ಬರೆಯಲು ಸಾಧ್ಯವಾಗದಿದ್ದರೆ, ಅಂತಿಮ ಫಲಿತಾಂಶದಲ್ಲಿ ಮೊದಲನೆಯ ಅವಧಿಯ ಪರೀಕ್ಷೆಗಳ ಅಂಕಗಳಿಗೆ ಕಡಿಮೆ ಒತ್ತನ್ನು ಕೊಟ್ಟು ಎರಡನೆಯ ಅವಧಿಯ ಅಂಕಗಳಿಗೆ ಹೆಚ್ಚು ಒತ್ತನ್ನು ಕೊಡಲಾಗುವುದು.
- **ಸನ್ನಿವೇಶ - 3:** ಎರಡನೆಯ ಅವಧಿಯ ಪರೀಕ್ಷೆಯ ಸಮಯದಲ್ಲಿ ಅನಿವಾರ್ಯವಾಗಿ (ಲಾಕ್‌ಡೌನ್) ಮಕ್ಕಳು ಶಾಲೆಗೆ ಬಂದು ಪರೀಕ್ಷೆ ಬರೆಯಲು ಸಾಧ್ಯವಾಗದಿದ್ದರೆ, ಅಂತಿಮ ಫಲಿತಾಂಶದಲ್ಲಿ ಎರಡನೆಯ ಅವಧಿಯ ಪರೀಕ್ಷೆಗಳ ಅಂಕಗಳಿಗೆ ಕಡಿಮೆ ಒತ್ತನ್ನು ಕೊಟ್ಟು ಮೊದಲನೆಯ ಅವಧಿಯ ಅಂಕಗಳಿಗೆ ಹೆಚ್ಚು ಒತ್ತನ್ನು ಕೊಡಲಾಗುವುದು.
- **ಸನ್ನಿವೇಶ - 4:** ಮೊದಲು ಮತ್ತು ಎರಡನೆಯ ಅವಧಿಯ ಎರಡೂ ಪರೀಕ್ಷೆಗಳ ಸಮಯದಲ್ಲಿ ಅನಿವಾರ್ಯವಾಗಿ (ಲಾಕ್‌ಡೌನ್) ಮಕ್ಕಳು ಶಾಲೆಗೆ ಬಂದು ಪರೀಕ್ಷೆ ಬರೆಯಲು ಸಾಧ್ಯವಾಗದಿದ್ದರೆ, ಮೊದಲನೆಯ ಮತ್ತು ಎರಡನೆಯ ಅವಧಿಯ ಆಂತರಿಕ ಮೌಲ್ಯಮಾಪನದ ಅಂಕಗಳ ಆಧಾರದ ಮೇಲೆ ಫಲಿತಾಂಶವನ್ನು ಪ್ರಕಟಿಸಲಾಗುವುದು.

ಹೀಗೆ ಈ ಬಾರಿ ವಿದ್ಯಾರ್ಥಿಗಳು ಎಲ್ಲ ಪರೀಕ್ಷೆಗಳನ್ನೂ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

(ಮುಂದಿನ ಸಂಚಿಕೆಯಲ್ಲಿ: ಮೊದಲನೆಯ ಅವಧಿಯ ಪರೀಕ್ಷೆಯ ಬಹು ಆಯ್ಕೆ ಪ್ರಶ್ನೆಗಳನ್ನು ಉತ್ತರಿಸುವುದು ಹೇಗೆ?)

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್, ಬೆಂಗಳೂರು)

ವಿದ್ಯಾರ್ಥಿ ವೇತನ ಕೈಪಿಡಿ

ಎಸ್‌ಟಿಎಫ್‌ಸಿ ಇಂಡಿಯಾ ಮೆರಿಟೋರಿಯಸ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021

- **ವಿವರ:** ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪನಿ (ಎಸ್‌ಟಿಎಫ್‌ಸಿ) ಲಿಮಿಟೆಡ್ ಈ ವಿದ್ಯಾರ್ಥಿ ವೇತನವನ್ನು ವಾಣಿಜ್ಯ ಸಾರಿಗೆ ಚಾಲಕರ ಮಕ್ಕಳಿಗೆ ಆರ್ಥಿಕ ಸಹಾಯ ಮಾಡುವ ದೃಷ್ಟಿಯಿಂದ ಅರ್ಜಿಗಳನ್ನು ಆಹ್ವಾನಿಸಿದೆ.
- **ಅರ್ಹತೆ:** ಡಿಪ್ಲೊಮಾ/ ಐಟಿಐ/ ಪಾಲಿಟೆಕ್ನಿಕ್ ಕೋರ್ಸ್ ಅಥವಾ ಪದವಿ/ ಎಂಜಿನಿಯರಿಂಗ್ (3-4ನೇ ವರ್ಷ) ಓದುತ್ತಿರುವವರು ಅರ್ಜಿ ಸಲ್ಲಿಸಬಹುದಾಗಿದೆ. 10ನೇ ಮತ್ತು 12ನೇ ತರಗತಿಯಲ್ಲಿ ಶೇ 60ರಷ್ಟು ಅಂಕ ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 4 ಲಕ್ಷಕ್ಕಿಂತ ಕಡಿಮೆ ಇರಬೇಕು.
- **ಆರ್ಥಿಕ ಸಹಾಯ:** ಐಟಿಐ/ ಪಾಲಿಟೆಕ್ನಿಕ್/ ಡಿಪ್ಲೊಮಾ ಕೋರ್ಸ್‌ಗಳಿಗೆ ₹ 15 ಸಾವಿರ (ಒಂದು ವರ್ಷಕ್ಕೆ), ಪದವಿ/ ಎಂಜಿನಿಯರಿಂಗ್ ಓದಿಗೆ ವಾರ್ಷಿಕ ₹ 35 ಸಾವಿರ (ನಾಲ್ಕು ವರ್ಷದವರೆಗೆ)
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 15 ನವೆಂಬರ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅರ್ಜಿಗಳು ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/SIMD4

ಐಐಟಿ ರೂರ್ಕಿ ಕೆಮಿಸ್ಟ್ರಿ ಡಿಪಾರ್ಟ್‌ಮೆಂಟ್ ಪೋಸ್ಟ್ ಡಾಕ್ಟೊರಲ್ ಫೆಲೋಶಿಪ್ (ಪಿಡಿಎಫ್) 2021

- **ವಿವರ:** ಪಿಎಚ್‌ಡಿ ಪದವಿ ಮಾಡಿದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** ಇತ್ತೀಚೆಗೆ ಕೆಮಿಸ್ಟ್ರಿಯಲ್ಲಿ (ಕೆಮಿಕಲ್ ಬಯೋಲಜಿ/ ಬಯೋಟೆಕ್ನಾಲಜಿ/ ಬಯೋಕೆಮಿಸ್ಟ್ರಿ) ಪಿಎಚ್‌ಡಿ ಥೀಸಿಸ್ ಸಲ್ಲಿಸಿದವರು ಅರ್ಜಿಗಳನ್ನು ಸಲ್ಲಿಸಬಹುದು.
- **ಆರ್ಥಿಕ ಸಹಾಯ:** ಪ್ರತಿ ತಿಂಗಳು ₹ 60 ಸಾವಿರ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 6 ನವೆಂಬರ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅಥವಾ ಅಂಚೆ ಮೂಲಕ. ದಿ ಹೆಡ್, ಡಿಪಾರ್ಟ್‌ಮೆಂಟ್ ಆಫ್ ಕೆಮಿಸ್ಟ್ರಿ, ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ರೂರ್ಕಿ– 247667, ಉತ್ತರಾಖಂಡ.
- **ಹೆಚ್ಚಿನ ಮಾಹಿತಿಗೆ:** www.b4s.in/praja/RPF2

ಕೃಪೆ:buddy4study.com

ಪ್ಯಾರಾ ಮೆಡಿಕಲ್ ಕೋರ್ಸ್‌ನಲ್ಲಿ ಅವಕಾಶಗಳೇನು?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

1. ಸರ್, ನಾನು ದ್ವಿತೀಯ ಪಿಯುಸಿ (ವಿಜ್ಞಾನ) ಓದುತ್ತಿದ್ದೇನೆ. ಮುಂದೆ ಪ್ಯಾರಾ ಮೆಡಿಕಲ್ ಆಯ್ಕೆ ಮಾಡಿಕೊಂಡರೆ ಒಳ್ಳೆಯದೇ? ಮತ್ತು ಯಾವ ಕೋರ್ಸ್ ತೆಗೆದುಕೊಂಡರೆ ಒಳ್ಳೆಯ ವೇತನದ ಕೆಲಸ ಸಿಗಬಹುದು?

ಅಶ್ರಿತ್, ಶೃಂಗೇರಿ.

ಈಗ ಹೆಚ್ಚಿನ ಬೇಡಿಕೆಯಿರುವ ಮತ್ತು ಆರೋಗ್ಯ ಮತ್ತು ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಕೆಲವು ಪ್ಯಾರಾ ಮೆಡಿಕಲ್ ಪದವಿ ಕೋರ್ಸ್‌ಗಳೆಂದರೆ ಬಿಎಸ್‌ಸಿ ನರ್ಸಿಂಗ್, ಫಿಸಿಯೋತೆರಪಿ, ರೇಡಿಯಾಲಜಿ, ಇಮೇಜಿಂಗ್, ಕಾರ್ಡಿಯಾಕ್ ಕೇರ್, ಅನಸ್ತೇಶಿಯಾ, ಓ.ಟಿ., ಹಾಸ್ಪಿಟಲ್ ಮ್ಯಾನೇಜ್‌ಮೆಂಟ್, ಮೆಡಿಕಲ್ ಲ್ಯಾಬ್, ನ್ಯೂಕ್ಲಿಯರ್ ಮೆಡಿಸಿನ್ ಟೆಕ್ನಾಲಜಿ ಇತ್ಯಾದಿ. ಸಾಮಾನ್ಯವಾಗಿ, ಇವೆಲ್ಲವೂ 3-4 ವರ್ಷದ ಕೋರ್ಸ್‌ಗಳು ಮತ್ತು ಕೋರ್ಸ್ ಮುಗಿದ ನಂತರ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಮ್ಸ್, ಅಪಘಾತ ಚಿಕಿತ್ಸಾ ಕೇಂದ್ರಗಳು, ಪ್ರಯೋಗಾಲಯಗಳು, ತುರ್ತು ನಿಗಾ ಘಟಕಗಳು, ಮೆಡಿಕಲ್ ಕಾಲೇಜುಗಳಲ್ಲಿ ಉದ್ಯೋಗವನ್ನು ಅರಸಬಹುದು. ಹೆಚ್ಚಿನ ವಿವರಗಳಿಗಾಗಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಜಾಲತಾಣವನ್ನು ಪರಿಶೀಲಿಸಿ.

ನಿಮ್ಮ ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯ ಆಧಾರದ ಮೇಲೆ ವೃತ್ತಿಯ ಯೋಜನೆ ಮಾಡಿ ಅದಕ್ಕೆ ಅನುಗುಣವಾಗಿ ಕೋರ್ಸ್ ಆಯ್ಕೆ ಮಾಡಬೇಕು. ವೃತ್ತಿಯಲ್ಲಿ ನಿಮ್ಮ ಕಾರ್ಯಕ್ಷಮತೆ ನಿರೀಕ್ಷೆಗೆ ಅನುಗುಣವಾಗಿದ್ದರೆ ವೇತನ, ಇನ್ನಿತರ ಅನುಕೂಲಗಳು ಕಾಲಕ್ರಮೇಣ ಹೆಚ್ಚಾಗುತ್ತವೆ.

2. ನಾನು ಮೆಕ್ಯಾನಿಕಲ್ ಎಂಜಿನಿಯರಿಂಗ್ ಎಂ.ಟೆಕ್ 2021ರಲ್ಲಿ ಮುಗಿಸಿದ್ದೇನೆ. ಒಂದು ವರ್ಷ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿದ್ದೇನೆ. ಈಗ ಸರ್ಕಾರಿ ಕೆಲಸಕ್ಕೆ ಪ್ರಯತ್ನಿಸುವುದಾದರೆ ಯಾವ ಕ್ಷೇತ್ರದ ವೃತ್ತಿಗಳಿಗೆ ಹೋಗಬಹುದು?

ನಾಗರಾಜ್ ಎನ್, ಕೋಲಾರ.

ಏರೋಸ್ಪೇಸ್, ಏರೋನಾಟಿಕಲ್, ಆಟೋಮೊಬೈಲ್, ಮೈನಿಂಗ್, ಮ್ಯಾನುಫ್ಯಾಕ್ಚರಿಂಗ್, ಎಲೆಕ್ಟ್ರಿಕಲ್, ಡಿಫೆನ್ಸ್ ಇತ್ಯಾದಿ ಕ್ಷೇತ್ರಗಳಲ್ಲಿನ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ವೃತ್ತಿಯನ್ನು ಅರಸಬಹುದು.

3. ನಾನು ಬಿಕಾಂ ಮುಗಿಸಿದ್ದೇನೆ; ಆದರೆ, ಮುಂದೇನು ಮಾಡಬೇಕೆಂದು ತಿಳಿಯದೆ ಗೊಂದಲದಲ್ಲಿದ್ದೇನೆ. ಸರಿಯಾದ ಮಾರ್ಗದರ್ಶನ ನೀಡುವವರಿಲ್ಲ. ನಾವು ಮಧ್ಯಮ ವರ್ಗದ ಕುಟುಂಬದವರು. ಹಾಗಾಗಿ, ಖಾಸಗಿ ಕಾಲೇಜಿಗೆ ಸೇರಲು ಸಾಧ್ಯವಿಲ್ಲ; ಸರ್ಕಾರಿ ಕಾಲೇಜಿಗೇ ಸೇರಬೇಕು. ದಯವಿಟ್ಟು ನಿಮ್ಮ ಮಾರ್ಗದರ್ಶನ ನೀಡಿ.

ಪವಿತ್ರ, ಕೋಲಾರ.

ಕಾಮರ್ಸ್ ವಿಸ್ತಾರವಾದ ಕ್ಷೇತ್ರ. ಬಿಕಾಂ ನಂತರ ಮಾಡಬಹುದಾದ ಕೋರ್ಸ್‌ಗಳೆಂದರೆ ಎಂಕಾಂ, ಎಂಬಿಎ, ಎಂಸಿಎ, ಸಿಎ, ಐಸಿಡಬ್ಲ್ಯುಎ, ಎಸಿಎಸ್, ಐಎಎಸ್, ಕೆಎಎಸ್ ಇತ್ಯಾದಿ. ನಿಮ್ಮ ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯ ಆಧಾರದ ಮೇಲೆ ವೃತ್ತಿಯ ಯೋಜನೆ ಮಾಡಿ ಅದರಂತೆ ಕೋರ್ಸ್ ಆಯ್ಕೆ ಮಾಡಿ, ಸರ್ಕಾರಿ ಕಾಲೇಜುಗಳಲ್ಲಿ ನಿಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ. ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಆರ್ಥಿಕ ಸಮಸ್ಯೆಯಿರುವ ವಿದ್ಯಾರ್ಥಿಗಳಿಗಿರುವ ಅನೇಕ ಸ್ಕಾಲರ್‌ಶಿಪ್, ಉಚಿತ ಪುಸ್ತಕಗಳು, ವಿದ್ಯಾರ್ಥಿ ವೇತನಗಳ ಬಗ್ಗೆ ಮಾಹಿತಿಯನ್ನು ಕಲೆಹಾಕಿ ಆ ಅನುಕೂಲಗಳನ್ನು ಪಡೆದುಕೊಳ್ಳಿ. ಅಗತ್ಯವಿದ್ದರೆ, ವೃತ್ತಿ ಸಮಾಲೋಚಕರನ್ನು ಸಂಪರ್ಕಿಸಿ.

4. ನಾನು ಬಿಎ ಅಂತಿಮ ವರ್ಷದಲ್ಲಿ ಓದುತ್ತಿದ್ದೇನೆ. ನಾನು ಹೇಗೆ ಎಲೆಕ್ಟ್ರಿಕಲ್ ಲೈಸೆನ್ಸ್ ಪಡೆಯಬೇಕು?

ಪವನ್, ಊರು ತಿಳಿಸಿಲ್ಲ.

ಎಲೆಕ್ಟ್ರಿಲ್ ಲೈಸೆನ್ಸ್ ವಿವರಗಳಿಗಾಗಿ ಗಮನಿಸಿ: https://ksei.gov.in/pdf/faq/LECFAQ.pdf

5. ನಾನು ಅಮೆರಿಕದಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸ್ನಾತಕೋತ್ತರ ಕೋರ್ಸನ್ನು 2017ರಲ್ಲಿ ಮುಗಿಸಿದ್ದರೂ ನಿರುದ್ಯೋಗಿಯಾಗಿದ್ದು ಖಿನ್ನತೆಗೆ ಒಳಗಾಗಿದ್ದೆ. ಅಕ್ಟೋಬರ್ 2020ರಲ್ಲಿ ಭಾರತಕ್ಕೆ ವಾಪಸ್ ಬಂದೆ. ಇಲ್ಲಿನ ಕೆಲವು ಸಂದರ್ಶನಗಳಲ್ಲಿ ಸಫಲತೆ ಸಿಗಲಿಲ್ಲ. ಇದುವರೆಗೆ, ಇಲ್ಲೂ ಕೆಲಸ ಸಿಗದೆ ಏನು ಮಾಡಬೇಕೆಂದು ತಿಳಿಯುತ್ತಿಲ್ಲ. 4 ವರ್ಷದಿಂದ ಉದ್ಯೋಗವಿಲ್ಲದೆ ಶಿಕ್ಷಣದ ಸಾಲವನ್ನೂ ತೀರಿಸಲಾಗುತ್ತಿಲ್ಲ. ಈ ವಿಷಯದ ಸಲುವಾಗಿ ಎಲ್ಲರೂ ನಿರಾಶೆಗೊಂಡಿದ್ದು ನಾನು ಮುಂದೇನು ಮಾಡಬಹುದೆಂದು ತಿಳಿಸಿ.

ನಿಸರ್ಗ್, ಊರು ತಿಳಿಸಿಲ್ಲ.

ನಿರುದ್ಯೋಗ, ಸಾಲದ ಹೊರೆಯಿಂದ ಬಳಲುತ್ತಿರುವ ನಿಮ್ಮ ಸಮಸ್ಯೆ ಅರ್ಥವಾಗುತ್ತದೆ. ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಸಕಾರಾತ್ಮಕ ಮನೋಭಾವವೇ ಸಂಜೀವಿನಿಯಾಗಬಲ್ಲದು. ಉನ್ನತ ವ್ಯಾಸಂಗ ಮಾಡಿರುವ ನೀವು ಆಶಾವಾದಿಗಳಾಗಿ ಹೊಸ ದೃಷ್ಟಿಕೋನದಿಂದ ನಿಮಗಿರುವ ಸಾಧ್ಯತೆಗಳ ಬಗ್ಗೆ ಯೋಚಿಸಿ. ಉದಾಹರಣೆಗೆ, ಯುಪಿಎಸ್‌ಸಿ/ ಕೆಪಿಎಸ್‌ಸಿ ಪರೀಕ್ಷೆಗಳ ಮುಖಾಂತರ ಸರ್ಕಾರದ ಉನ್ನತ ಹುದ್ದೆಗಳಿಗೆ ಪ್ರಯತ್ನಿಸಬಹುದು ಅಥವಾ ವಿಸ್ತಾರವಾದ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸಂಬಂಧಿತ ಖಾಸಗಿ ಕ್ಷೇತ್ರದಲ್ಲಿರುವ ಅವಕಾಶಗಳತ್ತ ಗಮನವನ್ನು ಹರಿಸಬಹುದು. ಇದಲ್ಲದೆ, ಸ್ವಯಂ ಉದ್ಯೋಗವೂ ನಿಮಗಿರುವ ಅವಕಾಶವೆನ್ನುವುದನ್ನು ಮರೆಯದಿರಿ. ಹಾಗಾಗಿ, ಈ ಎಲ್ಲಾ ಅವಕಾಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸ್ಪಷ್ಟವಾದ ಗುರಿ, ಸಾಧಿಸುವ ಛಲ ಮತ್ತು ಗೆಲ್ಲುವ ಆತ್ಮವಿಶ್ವಾಸವಿದ್ದರೆ ಉಜ್ವಲ ಭವಿಷ್ಯ ನಿಮ್ಮದಾಗಬಲ್ಲದು. ಅಗತ್ಯವಿದ್ದರೆ, ವೃತ್ತಿ ಸಮಾಲೋಚಕರ ಮಾರ್ಗದರ್ಶನವನ್ನು ಪಡೆಯಿರಿ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

❦ ಸುಭಾಷಿತ ❦

ಮನುಷ್ಯ ಮಾನಸಿಕವಾಗಿ ದೃಢನಾಗಬೇಕು. ಆದರೆ ತನ್ನಲ್ಲಿನ ಕೋಮಲತೆಯನ್ನು ಎಂದಿಗೂ ಕಳೆದುಕೊಳ್ಳಬಾರದು.

–ಚೆಗೆವಾರ

ಬ್ರಾಹ್ಮಣೇತರ ಅರ್ಚಕರ ನೇಮಕ ಕರ್ನಾಟಕದಲ್ಲೂ ಜಾರಿಗೆ ಬರಲಿ

ತಮಿಳುನಾಡಿನಲ್ಲಿ ಸರ್ಕಾರದ ನಿರ್ವಹಣೆಯಲ್ಲಿರುವ ದೇವಸ್ಥಾನಗಳಲ್ಲಿ ಬ್ರಾಹ್ಮಣೇತರ ಅರ್ಚಕರನ್ನು ನೇಮಿಸಿರುವ ಡಿಎಂಕೆ ನೇತೃತ್ವದ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಸಾಮಾಜಿಕ ನ್ಯಾಯದ ಚಿಂತನೆಯನ್ನು ಕಾರ್ಯರೂಪಕ್ಕೆ ತರುವ ದಿಸೆಯಲ್ಲಿ ಪ್ರಮುಖ ಹೆಜ್ಜೆಯಾದ, ಪೂಜಾಸ್ಥಳಗಳಲ್ಲಿ ಬಹುತ್ವದ ಚೆಲುವನ್ನು ಸಾಕಾರಗೊಳಿಸುವ ಪ್ರಗತಿಪರ ಮಾದರಿಯನ್ನು ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳೂ ಅನುಸರಿಸಬೇಕಾಗಿದೆ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಇಪ್ಪತ್ತನಾಲ್ಕು ಬ್ರಾಹ್ಮಣೇತರರನ್ನು ಅರ್ಚಕರಾಗಿ ಹಾಗೂ ಒಬ್ಬ ಮಹಿಳೆಯನ್ನು 'ಓದುವರ್' (ಪವಿತ್ರ ಮಂತ್ರಗಳನ್ನು ಪಠಿಸುವವರು) ಸ್ಥಾನಕ್ಕೆ ನಿಯೋಜಿಸಿರುವ ನೇಮಕಾತಿ ಪತ್ರಗಳನ್ನು ಇತ್ತೀಚೆಗೆ ವಿತರಿಸಿದ್ದಾರೆ. ನಿಯೋಜಿತ ದೇಗುಲಗಳಲ್ಲಿ ಈಗಾಗಲೇ ಕಾರ್ಯಾರಂಭ ಮಾಡಿರುವ ಹೊಸ ಅರ್ಚಕರನ್ನು ಪರಿಶಿಷ್ಟ ಸಮುದಾಯ ಸೇರಿದಂತೆ ವಿವಿಧ ಹಿಂದುಳಿದ ವರ್ಗಗಳಿಂದ ಆಯ್ಕೆ ಮಾಡಲಾಗಿದೆ. ಪೂಜಾ ಕಾರ್ಯಗಳನ್ನು ನೆರವೇರಿಸುವುದಕ್ಕೆ ಅನರ್ಹರೆಂದು ಭಾವಿಸಲಾಗಿದ್ದ ವರ್ಗದ ಜನರನ್ನು ಅರ್ಚಕರನ್ನಾಗಿ ನೇಮಿಸುವ ಸರ್ಕಾರದ ಪ್ರಯತ್ನ ಸಾಂಪ್ರದಾಯಿಕ ಸಮಾಜದಲ್ಲಿ ಸಮಾನತೆಯ ಹೊಸನೀರಿನ ಹರಿವಿಗೆ ಅವಕಾಶ ಕಲ್ಪಿಸುತ್ತದೆ. ಬ್ರಾಹ್ಮಣೇತರರನ್ನು ದೇಗುಲಗಳಲ್ಲಿ ಅರ್ಚಕರನ್ನಾಗಿ ನೇಮಿಸುವ ಚಿಂತನೆ ಹೊಸತಲ್ಲವಾದರೂ, ಆ ಯೋಚನೆ ದೊಡ್ಡ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬಂದಿರುವುದು ಇದೇ ಮೊದಲು. ವಿವಿಧ ಸಮುದಾಯಗಳಿಗೆ ಸೇರಿದವರನ್ನು ಅರ್ಚಕ ಸ್ಥಾನಕ್ಕೆ ಸಜ್ಜುಗೊಳಿಸಲು ಅಗತ್ಯವಿರುವ ತರಬೇತಿಯನ್ನು ನೀಡಲು ಕರುಣಾನಿಧಿ ನೇತೃತ್ವದ ಸರ್ಕಾರ 2006ರಲ್ಲಿ ನಿರ್ಧರಿಸಿತ್ತು. ಆ ನಿರ್ಧಾರದ ಅನ್ವಯ 2007ರಿಂದಲೇ ಬ್ರಾಹ್ಮಣೇತರರಿಗೆ ಸರ್ಕಾರಿ ಸಂಸ್ಥೆಗಳಲ್ಲಿ ಅರ್ಚಕ ತರಬೇತಿ ನೀಡಲಾಗುತ್ತಿದೆ. ಆದರೆ, ಕಾನೂನು ತೊಡಕುಗಳಿಂದಾಗಿ ಇದುವರೆಗೆ ನೇಮಕಾತಿಗಳು ಸಾಧ್ಯವಾಗಿರಲಿಲ್ಲ. ಬ್ರಾಹ್ಮಣೇತರರನ್ನು ಅರ್ಚಕರನ್ನಾಗಿ ನೇಮಿಸುವ ನಿರ್ಧಾರವನ್ನು 2015ರಲ್ಲಿ ಸುಪ್ರೀಂ ಕೋರ್ಟ್ ಎತ್ತಿಹಿಡಿದ ನಂತರ, ಒಬ್ಬಿಬ್ಬರನ್ನು ಅರ್ಚಕರನ್ನಾಗಿ ನೇಮಿಸಲಾಗಿತ್ತಷ್ಟೇ. ಸಾಮಾಜಿಕ ನ್ಯಾಯದ ಆ ಸಾಂಕೇತಿಕ ಕ್ರಮವನ್ನು ಮೀರಿ ಬ್ರಾಹ್ಮಣೇತರ ಅರ್ಚಕರ ನೇಮಕವನ್ನು ದೊಡ್ಡ ಪ್ರಮಾಣದಲ್ಲಿ ನಡೆಸುವ ಮೂಲಕ, ಪ್ರಗತಿಪರ ಆಂದೋಲನವೊಂದಕ್ಕೆ ತಮಿಳುನಾಡು ಸರ್ಕಾರ ಚಾಲನೆ ನೀಡಿದೆ.

ಮುಜರಾಯಿ ಇಲಾಖೆಯ ದೇಗುಲಗಳ ಅರ್ಚಕ ಸ್ಥಾನಕ್ಕೆ ಎಲ್ಲ ವರ್ಗದವರಿಗೂ ಅವಕಾಶ ಕಲ್ಪಿಸುವ ಮೂಲಕ, 'ಬಹುತ್ವ ಭಾರತ'ದ ಚೆಲುವನ್ನು ಪೂಜಾಸ್ಥಳಗಳಲ್ಲಿ ಅನುಷ್ಠಾನಗೊಳಿಸುವ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸಬೇಕು

ಎಲ್ಲ ಸಮುದಾಯಗಳನ್ನು ಸಮಾನವಾಗಿ ಭಾವಿಸುವ ಹಾಗೂ ಎಲ್ಲರಿಗೂ ಸಮಾನ ಸಾಮಾಜಿಕ ಅವಕಾಶಗಳನ್ನು ಕಲ್ಪಿಸುವ ದಿಸೆಯಲ್ಲಿ ತಮಿಳುನಾಡು ಸರ್ಕಾರದ ನೇಮಕಗಳಿಗೆ ವಿಶೇಷ ಮಹತ್ವವಿದೆ. ಕಳೆದ ಶತಮಾನದಲ್ಲಿ ನಡೆದ ಸಾಮಾಜಿಕ ನ್ಯಾಯದ ಆಂದೋಲನವು ಎಲ್ಲ ವರ್ಗದವರಿಗೆ ಅರ್ಚಕ ಹುದ್ದೆಯ ಹಕ್ಕುಗಳನ್ನು ದೊರಕಿಸಿಕೊಡಲು ಒತ್ತಾಯಿಸಿತ್ತು. ಹಿಂದುಳಿದ ಸಮುದಾಯಗಳಿಗೆ ಹಾಗೂ ದಲಿತರಿಗೆ ದೇವರನ್ನು ಮುಖ್ಯವಾಹಿನಿಯೊಂದಿಗೆ ಬೆರೆತು ಪೂಜಿಸುವ ಅವಕಾಶವಿರಲಿ, ಕೆಲವು ದೇಗುಲಗಳಲ್ಲಿ ಪ್ರವೇಶವನ್ನೇ ನಿರ್ಬಂಧಿಸಲಾಗಿತ್ತು. ಜಾತಿ ಹಾಗೂ ಸಮುದಾಯಗಳ ಚೌಕಟ್ಟನ್ನು ಹೊರತುಪಡಿಸಿ ಸಮಾಜದ ಎಲ್ಲ ವರ್ಗದವರಿಗೂ ದೇವರನ್ನು ದೇಗುಲಗಳಲ್ಲಿ ಆರಾಧಿಸುವ ಹಾಗೂ ದೇವಸ್ಥಾನಗಳಲ್ಲಿ ಅರ್ಚಕ ಸ್ಥಾನವನ್ನು ನಿರ್ವಹಿಸುವ ಅವಕಾಶವನ್ನು ಕೊಡಬೇಕೆನ್ನುವ ಒತ್ತಾಯ ಪ್ರಗತಿಪರ ವರ್ಗಗಳಿಂದ ಕೇಳಿಬರುತ್ತಲೇ ಇದೆ. ಅರ್ಚಕ ಸ್ಥಾನವು ನಿರ್ದಿಷ್ಟ ಸಮುದಾಯಗಳಿಗೆ ಮಾತ್ರ ಮೀಸಲೆನ್ನುವುದಕ್ಕೆ ಯಾವ ಸಮರ್ಪಕ ಕಾರಣವೂ ಇಲ್ಲ. ಪೌರೋಹಿತ್ಯವನ್ನು ಯಾವುದೇ ಸಮುದಾಯಕ್ಕೆ ಸೀಮಿತಗೊಳಿಸುವುದು ತರವಲ್ಲ. ಪೌರೋಹಿತ್ಯ ನಿರ್ವಹಣೆಗೆ ಬೇಕಾದ ಆಸಕ್ತಿ ಮತ್ತು ಕೌಶಲವನ್ನು ಹೊಂದಿರುವ ಯಾರು ಬೇಕಾದರೂ ಅರ್ಚಕ ಹುದ್ದೆಯನ್ನು ನಿರ್ವಹಿಸುವ ಅವಕಾಶ ಪಡೆಯುವುದಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶ ಇರಬೇಕು.

ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ಪ್ರಯತ್ನಗಳಿಗೆ ಸಾಂಪ್ರದಾಯಿಕ ಸಮಾಜದಲ್ಲಿ ವಿರೋಧ ಎದುರಾಗಬಹುದು. ಕಾನೂನು ಹೋರಾಟ ನಡೆಸಬೇಕಾದ ಅನಿವಾರ್ಯವೂ ಎದುರಾಗಬಹುದು. ಇಂತಹ ಅಡೆತಡೆಗಳನ್ನು ತಮಿಳುನಾಡು ಸರ್ಕಾರ ಸಮರ್ಥವಾಗಿ ಎದುರಿಸಿದ್ದು, ಪೂರ್ವಗ್ರಹಪೀಡಿತ ಪ್ರತಿರೋಧಗಳಿಗೆ ಜಗ್ಗದೆ ತನ್ನ ನಿರ್ಧಾರಕ್ಕೆ ಬದ್ಧವಾಗಿ ಉಳಿದಿದೆ. ಸಮಾಜದ ಕೆಲವು ವರ್ಗಗಳು ಹೊಂದಿರುವ ಪೂರ್ವಗ್ರಹ ಹಾಗೂ ಪ್ರತಿರೋಧ ಕಾಲಕ್ರಮೇಣ ಕಡಿಮೆಯಾಗುತ್ತದೆ. ಪ್ರಗತಿಪರ ಯೋಜನೆಗಳು ಒಮ್ಮಿಂದೊಮ್ಮೆಗೇ ಸಮಾಜದ ಒಪ್ಪಿಗೆ ಪಡೆಯುತ್ತವೆಂದೂ ನಿರೀಕ್ಷಿಸಲಾಗದು. ಕೇರಳ ಸರ್ಕಾರವು 2017ರಲ್ಲಿ 36 ಬ್ರಾಹ್ಮಣೇತರರನ್ನು ದೇಗುಲಗಳಲ್ಲಿ ಅರ್ಚಕರನ್ನಾಗಿ ನೇಮಿಸಿತ್ತು. ನೆರೆಯ ರಾಜ್ಯಗಳ ಪ್ರಗತಿಪರ ನಡವಳಿಕೆಗಳು ಕರ್ನಾಟಕ ಸರ್ಕಾರಕ್ಕೆ ಪ್ರೇರಣೆಯಾಗಬೇಕು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ, ಮುಜರಾಯಿ ದೇವಸ್ಥಾನಗಳಲ್ಲಿ ಬ್ರಾಹ್ಮಣೇತರ ಅರ್ಚಕರನ್ನು ನೇಮಿಸುವುದಾಗಿ ಹೇಳಿದ್ದರು. ಚಿಂತನೆಯ ರೂಪದಲ್ಲಿ ಉಳಿದಿರುವ ಆ ಮಾತನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಇಚ್ಛಾಶಕ್ತಿ ಪ್ರದರ್ಶಿಸಬೇಕು. ಅರ್ಚಕ ವೃತ್ತಿಯನ್ನು ಬ್ರಾಹ್ಮಣರಿಗೆ ಮಾತ್ರ ಸೀಮಿತಗೊಳಿಸಿ ಕಾನೂನು ರೂಪಿಸಬೇಕೆಂದು ಉಡುಪಿ ಪೇಜಾವರ ಮಠದ ಸ್ವಾಮೀಜಿ ಸರ್ಕಾರವನ್ನು ಆಗ್ರಹಿಸಿರುವುದಾಗಿ ವರದಿಯಾಗಿದೆ. ಯಾವುದೇ ಒಂದು ವೃತ್ತಿಯನ್ನು ನಿರ್ದಿಷ್ಟ ಸಮುದಾಯಕ್ಕೆ ಮೀಸಲಿಡುವುದಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶವಿಲ್ಲ. ಜಾತಿ ಮನೋಭಾವವನ್ನು ಬಲಪಡಿಸುವ ಪ್ರಯತ್ನಗಳಿಂದ ಸರ್ಕಾರ ದೂರವಿರಬೇಕು. ಸಾಮಾಜಿಕ ನ್ಯಾಯ ಮತ್ತು ಸಮಾನತೆ ಸಾಧನೆಯ ನಿಟ್ಟಿನಲ್ಲಿ ಒದಗಿಬರುವ ಸಣ್ಣ ಅವಕಾಶವನ್ನೂ ಸರ್ಕಾರ ಬಿಟ್ಟುಕೊಡಬಾರದು. ರಾಜ್ಯದ ಕೆಲವು ದೇಗುಲಗಳಲ್ಲಿ ಬ್ರಾಹ್ಮಣೇತರರು ಈಗಾಗಲೇ ಅರ್ಚಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮುಜರಾಯಿ ಇಲಾಖೆಯ ದೇಗುಲಗಳ ಅರ್ಚಕ ಸ್ಥಾನಕ್ಕೆ ಎಲ್ಲ ವರ್ಗದವರಿಗೂ ಅವಕಾಶ ಕಲ್ಪಿಸುವ ಮೂಲಕ, 'ಬಹುತ್ವ ಭಾರತ'ದ ಚೆಲುವನ್ನು ಪೂಜಾಸ್ಥಳಗಳಲ್ಲಿ ಅನುಷ್ಠಾನಗೊಳಿಸುವ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸಬೇಕು. ಅರ್ಚಕ ವೃತ್ತಿಯಲ್ಲಿ ಆಸಕ್ತಿಯುಳ್ಳವರಿಗೆ ಸೂಕ್ತ ತರಬೇತಿ ನೀಡುವ ಹೊಣೆಗಾರಿಕೆಯೂ ಸರ್ಕಾರದ್ದೇ ಆಗಿದೆ.

ದಿನದ ಟ್ವೀಟ್

ಪ್ರತಿಜ್ಞೆ ಮಾಡೋಣ

ವಿಶ್ವ ಪೋಲಿಯೊ ದಿನಾಚರಣೆಯ ಶುಭಾಶಯ. 'ಪೋಲಿಯೊಮುಕ್ತ ಭಾರತ'ವನ್ನು ಸಾಧ್ಯವಾಗಿಸಿದ ಎಲ್ಲರಿಗೂ ಅಭಿನಂದನೆ. ಯಾವ ಬಗೆಯಲ್ಲಿ ನಾವು ಜಾಗೃತರಾಗಿ ಭಾರತದಿಂದ ಪೋಲಿಯೊವನ್ನು ನಿರ್ಮೂಲನೆ ಮಾಡಿದೆವೋ ಅದೇ ರೀತಿಯ ಜಾಗೃತಿಯನ್ನು ಭವಿಷ್ಯದಲ್ಲಿಯೂ ಕಾಯ್ದುಕೊಳ್ಳುತ್ತೇವೆ ಎಂದು ಪ್ರತಿಜ್ಞೆ ಮಾಡೋಣ.

ಪ್ರದೀಪ್ತ ರಾಜ್, ನಾಗರಿಕ

ಕಿಡಿನುಡಿ

ನಿರುದ್ಯೋಗ ನಿವಾರಣೆಗೊಂದು ಉಪಾಯವಿದೆ: ಪ್ರತಿದಿನ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗೋದನ್ನ ನೋಡ್ತಿದ್ದೀರಿ. ಹಾಗಾಗಿ, ಇವತ್ತು ಪೆಟ್ರೋಲ್ ಕೊಂಡು, ಸ್ವಲ್ಪ ದಿನಗಳ ನಂತರ ಮಾರಾಟ ಮಾಡಿದ್ರೆ ನಿಮಗೆ ಲಾಭವಾಗಬಹುದು. ಮುಂದೊಂದು ದಿನ ಪೆಟ್ರೋಲ್ ಬೆಲೆ 200 ರೂಪಾಯಿ ತಲುಪಿದ್ರೆ ನಿಮ್ಮ ಜೇಬಲ್ಲಿ ಎಷ್ಟು ಹಣ ಇರಬಹುದು ನೀವೇ ಊಹಿಸಿ.

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

25 ವರ್ಷಗಳ ಹಿಂದೆ

ಶುಕ್ರವಾರ, 25-10-1996

• **ಸಂತೆ ಹೊಂಡ ದುರಂತ: ಬಸ್ ಮೇಲೆತ್ತಲು ಫಲಿಸದ ಯತ್ನ**

ಚಿತ್ರದುರ್ಗ, ಅ. 24– ಇಪ್ಪತ್ನಾಲ್ಕು ಗಂಟೆಗಳ ಅವ್ಯಾಹತ ಪ್ರಯತ್ನದ ನಂತರವೂ, ಸಂತೆ ಹೊಂಡದಲ್ಲಿ 60ಕ್ಕೂ ಹೆಚ್ಚು ಜನರ ಸಮೇತ ಮುಳುಗಿರುವ ಬಸ್ಸನ್ನು ಮೇಲೆತ್ತಲು ಇನ್ನೂ ಸಾಧ್ಯವಾಗಿಲ್ಲ. ನೌಕಾಪಡೆಯ ತಂಡಕ್ಕಾಗಿ ಕಾಯಲಾಗುತ್ತಿದ್ದು, ದುರಂತದ ಸ್ಥಳದಲ್ಲಿ ದುಃಖತಪ್ತ ಕುಟುಂಬದವರ ಸಹಿತ ಸಾವಿರಾರು ಜನರು ಸೇರಿದ್ದಾರೆ.

ಬಸ್ಸನ್ನು ಮೇಲೆತ್ತಲು ನೆರೆದಿರುವ ಜನರಿಂದ ಅವ್ಯಾಹತ ಪ್ರಯತ್ನಗಳು ಸಾಗಿವೆ. ನೌಕಾಪಡೆಯ ತಂಡದ ಈಜುಗಾರರು (ಡೈವರ್ಸ್) ರಾತ್ರಿ ವೇಳೆಗೆ ಇಲ್ಲಿಗೆ ತಲುಪುವ ನಿರೀಕ್ಷೆ ಇದೆ.

50 ವರ್ಷಗಳ ಹಿಂದೆ

ಸೋಮವಾರ, 25-10-1971

• **ಹೊಸ ಶ್ರೀಮಂತ ರೈತರ ಮೇಲಿನ ತೆರಿಗೆ ಏರಿಕೆ ಆಲೋಚನೆ ನ್ಯಾಯಬದ್ಧ**

ನವದೆಹಲಿ, ಅ. 24– ಗ್ರಾಮಾಂತರದ ಹೊಸ ಶ್ರೀಮಂತ ರೈತರ ಮೇಲೆ ತೆರಿಗೆ ಹೆಚ್ಚಿಸುವುದಕ್ಕೆ ಸಕಾರಣಗಳಿವೆಯೆಂಬುದು ಯೋಜನಾ ಆಯೋಗದ ಅಭಿಪ್ರಾಯ.

'ವ್ಯವಸಾಯ ರಂಗದ ಮೇಲೆ ಇರುವ ನೇರ ತೆರಿಗೆ ಎಂದರೆ ಕಂದಾಯ. ಅದನ್ನು ಎಕರೆ ಭೂಮಿಗೆ ಏಕರೀತಿಯ ದರದಲ್ಲಿ ವಿಧಿಸಲಾಗುತ್ತಿದೆ. ಆದರೆ ಕಂದಾಯದ ದರಕ್ಕೂ ವರಮಾನ ಮತ್ತು ಬೆಲೆಗಳ ಬದಲಾವಣೆಗೂ ಯಾವ ಬಗೆಯ ಸಂಬಂಧವಿಲ್ಲದಂತಾಗಿದೆ' ಎಂದು ಆಯೋಗವು ಯೋಜನಾ ಸಚಿವ ಶಾಖೆಯ ಸಲಹಾ ಸಮಿತಿಯ ಸದಸ್ಯರಿಗೆ ಹಂಚಿರುವ ಟಿಪ್ಪಣಿಯೊಂದರಲ್ಲಿ ತಿಳಿಸಿದೆ.

'ಜಾಗತಿಕ ಯಶೋಗಾಥೆ'ಯ ನಿದರ್ಶನ ಎನಿಸಿಕೊಂಡಿದೆ ಒಡಿಶಾ ಸರ್ಕಾರದ ಕಾರ್ಯತಂತ್ರ

ವಿಪತ್ತು ನಿರ್ವಹಣೆ: ಅನುಕರಣೀಯ ಮಾದರಿ

ವಿಶ್ಲೇಷಣೆ

ಡಾ. ಎಚ್.ಆರ್. ಕೃಷ್ಣಮೂರ್ತಿ

ಕೇರಳದಲ್ಲಿ ಈಚೆಗೆ ಭಾರಿ ಪ್ರಮಾಣದ ಮಳೆ, ಪ್ರವಾಹ, ಭೂಕುಸಿತಗಳು ಸಂಭವಿಸುತ್ತಿದ್ದಾಗ ವಾಟ್ಸ್ಆ್ಯಪ್‌ನಲ್ಲಿ ಚಿತ್ರಸಹಿತವಾದ ಸಂದೇಶವೊಂದು ಹರಿದಾಡುತ್ತಿತ್ತು. ಕೇರಳದಲ್ಲಿನ ನೈಸರ್ಗಿಕ ವಿಪತ್ತುಗಳನ್ನು ನಿರ್ವಹಿಸಲು, ಅಧಿಕಾರಿ ಮತ್ತು ರಾಜಕಾರಣಿಗಳ ದೊಡ್ಡ ನಿಯೋಗವೊಂದು 2017ರಲ್ಲಿ ನೆದರ್‌ಲೆಂಡ್ಸ್‌ಗೆ ಹೊರಡುವ ಮುನ್ನ ವಿಮಾನ ನಿಲ್ದಾಣದಲ್ಲಿ ತೆಗೆದ ಚಿತ್ರದ ಕೆಳಗೆ 'ಕಳೆದ ನಾಲ್ಕು ವರ್ಷಗಳಲ್ಲಿ, ನೀವು ನೆದರ್‌ಲೆಂಡ್ಸ್‌ನಲ್ಲಿ ಕಲಿತ ವಿಷಯವನ್ನು ಎಲ್ಲಿ ಬಳಸಿದ್ದೀರಿ?' ಎಂಬ ಕುಟುಕು ಇತ್ತು!

ಸ್ಥಳೀಯ ಸಮಸ್ಯೆಗಳ ನಿರ್ವಹಣೆ ಮತ್ತು ಪರಿಹಾರಕ್ಕೆ ವಿದೇಶಗಳ ಅನುಭವ ಹಾಗೂ ಕೌಶಲಗಳ ಮೂಲಕ ಉತ್ತರವನ್ನು ಕಂಡುಕೊಳ್ಳುವ ನೆಪದಲ್ಲಿ ನಡೆಯುವ ಸರ್ಕಾರಿ ವೆಚ್ಚದ ಪ್ರವಾಸ ನಮಗೆ ಹೊಸದೇನಲ್ಲ. ಈ ಪರಿಸ್ಥಿತಿಗೆ ಒಂದು ಅಪವಾದವೆಂದರೆ ಒಡಿಶಾ ರಾಜ್ಯ. ಈ ರಾಜ್ಯದ 'ವಿಪತ್ತು ನಿರ್ವಹಣಾ ಸಿದ್ಧತೆ ಮತ್ತು ಕಾರ್ಯಾಚರಣೆ' ಇಡೀ ಜಗತ್ತಿನ ಗಮನ ಸೆಳೆದಿದೆ. ವಿಶ್ವಬ್ಯಾಂಕ್ ಈ ಮಾದರಿಯನ್ನು ಎಲ್ಲ ದೇಶಗಳಿಗೆ ಶಿಫಾರಸು ಮಾಡಿದೆ. ಒಡಿಶಾದ ಎರಡು ಹಳ್ಳಿಗಳಿಗೆ ಉತ್ಕೃಷ್ಟ ಮಟ್ಟದ 'ಸುನಾಮಿ ಸಿದ್ಧತೆ'ಗಾಗಿ ಯುನೆಸ್ಕೊ ಪ್ರಶಸ್ತಿ ನೀಡಿ ಗೌರವಿಸಿದೆ. 2013ರ ಫೈಲಾನ್ ಚಂಡಮಾರುತ ತಂದ ವಿಪತ್ತುಗಳನ್ನು ಒಡಿಶಾ ಸರ್ಕಾರ ನಿರ್ವಹಿಸಿದ ರೀತಿಯನ್ನು, 'ಜಾಗತಿಕ ಯಶೋಗಾಥೆ'ಯ ನಿದರ್ಶನವೆಂದು ವಿಶ್ವಸಂಸ್ಥೆ ಮೆಚ್ಚಿ, ಒಡಿಶಾ ಮಾದರಿಯನ್ನು ಜಾಗತಿಕವಾಗಿ ಅನುಕರಣಯೋಗ್ಯವೆಂದು ಸಾರಿದೆ.

ಒಡಿಶಾ, ಮತ್ತೆ ಮತ್ತೆ ಚಂಡಮಾರುತದಿಂದ ಅಪಾಯಕ್ಕೀಡಾಗುವ ರಾಜ್ಯ. 1891- 2021ರ ಅವಧಿಯ 130 ವರ್ಷಗಳಲ್ಲಿ 100 ಚಂಡಮಾರುತಗಳು ಒಡಿಶಾ ತೀರವನ್ನು ಅಪ್ಪಳಿಸಿ ಆಸ್ತಿ, ಪ್ರಾಣಹಾನಿಗಳಿಗೆ ಕಾರಣವಾಗಿವೆ. ಸರಾಸರಿ ಪ್ರತೀ ನಾಲ್ಕು ವರ್ಷಗಳಿಗೊಮ್ಮೆ ಬಂದಿರುವ ಮಹಾ ಚಂಡಮಾರುತ (ಸೂಪರ್ ಸೈಕ್ಲೋನ್) ಅಪಾರ ಪ್ರಮಾಣದ ನಾಶವುಂಟುಮಾಡಿದೆ. ಹಿಂದೂ ಮಹಾಸಾಗರದ ಉತ್ತರಭಾಗದಲ್ಲಿ, 20ನೆಯ ಶತಮಾನದ ಅತ್ಯಂತ ಭೀಕರ ಮಹಾಚಂಡಮಾರುತವೆಂದು ದಾಖಲಾಗಿರುವ 'ಬಿಒಬಿ-06' ಎಂಬ ಹೆಸರಿನ ಮಹಾಚಂಡಮಾರುತವು 1999ರ ಅಕ್ಟೋಬರ್ 29ರಂದು ಒಡಿಶಾ ಕರಾವಳಿಯನ್ನು ಅಪ್ಪಳಿಸಿದಾಗ ಸತ್ತವರ ಸಂಖ್ಯೆ ಸುಮಾರು 10,000. ಈ ಘಟನೆಯ ನಂತರ 2000ದ ಮಾರ್ಚ್‌ನಲ್ಲಿ ಒಡಿಶಾ ರಾಜ್ಯದ ಮುಖ್ಯಮಂತ್ರಿಯಾಗಿ ನವೀನ್ ಪಟ್ನಾಯಕ್ ಅಧಿಕಾರ ವಹಿಸಿಕೊಂಡರು. 'ಬಂಗಾಳ ಕೊಲ್ಲಿಯ ಕರಾವಳಿಯಲ್ಲಿರುವುದರಿಂದ ಚಂಡಮಾರುತಗಳಿಂದ ನಾವು ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ನಮಗಿರುವ ಏಕೈಕ ಮಾರ್ಗವೆಂದರೆ ಅವುಗಳನ್ನು ಎದುರಿಸಲು ಸದಾಕಾಲ ಸಿದ್ಧವಾಗಿರುವುದು' ಎಂಬ ಅವರ ಪ್ರಾಮಾಣಿಕ ಸಂದೇಶ, ಎರಡು ದಶಕಗಳಿಂದ ರಾಜ್ಯದ ಎಲ್ಲ ವಿಪತ್ತು ನಿರ್ವಹಣಾ ಯೋಜನೆಗಳಿಗೆ ಪ್ರೇರಕಶಕ್ತಿಯಾಗಿದೆ.

ಎಲ್ಲ ರೀತಿಯ ನೈಸರ್ಗಿಕ ಅವಘಡಗಳ ಪರಿಣಾಮಕ್ಕೆ ನೇರವಾಗಿ ಮೊದಲು ಈಡಾಗುವವರು ಸ್ಥಳೀಯ ಸಮುದಾಯದ ಜನ. ಈ ಸಮುದಾಯ ಸನ್ನದ್ಧವಾಗದ ಹೊರತು ರಕ್ಷಣಾ ಮತ್ತು ಪರಿಹಾರ ಕಾರ್ಯಗಳು ಯಶಸ್ವಿಯಾಗುವುದಿಲ್ಲ. ಒಡಿಶಾ ಸರ್ಕಾರದ ಎಲ್ಲ ವಿಪತ್ತು ನಿರ್ವಹಣಾ ಕಾರ್ಯತಂತ್ರಗಳ ಮೂಲ ಮಂತ್ರವೆಂದರೆ 'ವಿಕೇಂದ್ರೀಕರಣ, ಸ್ಥಳೀಯ ಸಮುದಾಯಗಳ ಭಾಗವಹಿಸುವಿಕೆ ಮತ್ತು ಅವರ ಸಾಮರ್ಥ್ಯ ವರ್ಧನೆ'.

ಒಡಿಶಾ ಮಾದರಿಯಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ. ಮೊದಲನೆಯದು, ಚಂಡಮಾರುತದ ಪರಿಣಾಮಗಳನ್ನು ಎದುರಿಸಲು ಬೇಕಾದ ಆಧಾರ ರಚನೆಗಳು, ಸೌಕರ್ಯಗಳು ಮುಂತಾದವುಗಳ ನಿರ್ಮಾಣ. ಎರಡನೆಯದು, ಸ್ಥಳೀಯ ಸಮುದಾಯಗಳ ಕೌಶಲ ಮತ್ತು ಸಾಮರ್ಥ್ಯವರ್ಧನೆ. ಕಳೆದ 20 ವರ್ಷಗಳ ಅವಧಿಯಲ್ಲಿ, ಒಡಿಶಾ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ನಿಗಾವಣೆಯಲ್ಲಿ ಈ ಎರಡೂ ಕೆಲಸಗಳು ವ್ಯವಸ್ಥಿತವಾಗಿ ನಡೆದುಬಂದಿವೆ.

ಒಡಿಶಾಗೆ ಸುಮಾರು 450 ಕಿ.ಮೀ.ಗಳ ಉದ್ದದ ಕರಾವಳಿಯಿದೆ. ಬಾಲೇಶ್ವರ್, ಭದ್ರಕ್, ಗಂಜಾಂ, ಜಗತ್‌ಸಿಂಗ್‌ಪುರ್, ಕೇಂದ್ರಪಾರ, ಖೋರ್ಧಾ ಮತ್ತು ಪುರಿ ಕರಾವಳಿಯ ಜಿಲ್ಲೆಗಳು. 1999ರಲ್ಲಿ ಚಂಡಮಾರುತದಿಂದ ರಕ್ಷಣೆ ಪಡೆಯಲು ಈ ಜಿಲ್ಲೆಗಳಲ್ಲಿ ಇದ್ದ 'ಚಂಡಮಾರುತ ಆಶ್ರಯ ತಾಣ'ಗಳ ಸಂಖ್ಯೆ 6. ಇಂದು ಸುಮಾರು 900 ವಿವಿಧೋದ್ದೇಶ ಚಂಡಮಾರುತ ಆಶ್ರಯ ತಾಣಗಳ ಜಾಲವಿದೆ. ಕಾಂಕ್ರೀಟ್‌ನಿಂದ ನಿರ್ಮಾಣಗೊಂಡಿರುವ ಪ್ರತೀ ಆಶ್ರಯ ತಾಣವೂ 1000 ಜನರಿಗೆ ಆಶ್ರಯವೊದಗಿಸುತ್ತದೆ. ಸಾಗರದಂಚಿನಿಂದ 1.5 ಕಿ.ಮೀ. ದೂರದಲ್ಲಿ, ಜನವಸತಿಯ ಮಧ್ಯದಲ್ಲೇ 122 ಜಾಗಗಳಲ್ಲಿ ಕಾವಲುಗೋಪುರಗಳನ್ನು ನಿರ್ಮಿಸಲಾಗಿದೆ. ಈ ಗೋಪುರಗಳಲ್ಲಿ ಅತ್ಯಂತ ವಿಶ್ವಾಸಾರ್ಹವಾದ ಕ್ಷಿಪ್ರಗತಿಯ ಮುನ್ಸೂಚನೆ ನೀಡಲು ಬೇಕಾದ ವ್ಯವಸ್ಥೆಗಳಿವೆ. ಸೈರನ್‌ಗಳ ಜೊತೆಗೆ ಸಾವಿರಾರು ಜನರಿಗೆ ಮೊಬೈಲ್ ಮೂಲಕ ಸಂದೇಶಗಳನ್ನು ಕಳುಹಿಸುವ ವ್ಯವಸ್ಥೆಯಿದೆ.

ಚಂಡಮಾರುತವನ್ನು ಎದುರಿಸಿ ಅದರ ಪರಿಣಾಮಗಳ ತೀಕ್ಷ್ಣತೆಯನ್ನು ತಗ್ಗಿಸುವ ಜವಾಬ್ದಾರಿಯನ್ನು, ತ್ವರಿತ ಕಾರ್ಯಾಚರಣೆಯ ಬಲದ (ಒಡಿಶಾ ಡಿಸಾಸ್ಟರ್ ರ‍್ಯಾಪಿಡ್ ಆ್ಯಕ್ಷನ್ ಫೋರ್ಸ್) ಘಟಕಗಳು ನಿರ್ವಹಿಸುತ್ತವೆ. ಇಂತಹ 22 ಘಟಕಗಳಿದ್ದು ಪ್ರತೀ ಘಟಕವೂ ರಕ್ಷಣೆ ಮತ್ತು ಪರಿಹಾರ ಕಾರ್ಯಗಳಿಗೆ ಬೇಕಾದ 64 ವಿವಿಧ ರೀತಿಯ ಯಂತ್ರೋಪಕರಣಗಳಿಂದ ಸಜ್ಜಿತವಾಗಿದೆ. ಈ ಘಟಕಗಳ ಜೊತೆಗೆ ಅಗ್ನಿಶಾಮಕ, ಸಾರ್ವಜನಿಕ ಕಾಮಗಾರಿ, ವಿದ್ಯುತ್ ಸರಬರಾಜು ಮುಂತಾದ ಇಲಾಖೆಗಳ ಸಿಬ್ಬಂದಿಯು ಹವಾಮಾನ ಇಲಾಖೆಯ ಮುನ್ಸೂಚನೆಯನ್ನು ಆಧರಿಸಿ, ಚಂಡಮಾರುತವು ಸಾಗರ ತೀರಕ್ಕೆ ಅಪ್ಪಳಿಸುವ ಮುಂಚೆಯೇ ಆಯಾ ಪ್ರದೇಶಗಳಲ್ಲಿ ಸಿದ್ಧವಾಗಿರುವುದು ಒಡಿಶಾ ವಿಪತ್ತು ನಿರ್ವಹಣಾ ಮಾದರಿಯ ವಿಶೇಷ.

ಚಂಡಮಾರುತವನ್ನು ಎದುರಿಸುವಲ್ಲಿ ಆಶ್ರಯ ತಾಣಗಳ ಪಾತ್ರ ಬಹುಮುಖ್ಯ. ಸಮುದಾಯದ ನಿಜವಾದ ಸಾಮರ್ಥ್ಯ ಗೋಚರಿಸುವುದು ಈ ಆಶ್ರಯ ಕೇಂದ್ರಗಳಲ್ಲಿ. ಪ್ರತೀ ಆಶ್ರಯ ತಾಣಕ್ಕೂ ಒಂದು ನಿರ್ವಹಣಾ ಸಮಿತಿ ಇದ್ದು, ಅದರಲ್ಲಿ ಸ್ಥಳೀಯ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಕ್ಷಣೆ, ಪರಿಹಾರ ಕಾರ್ಯ, ಪ್ರಥಮ ಚಿಕಿತ್ಸೆ, ಸಂಪರ್ಕ ಸಾಧನಗಳ ಬಳಕೆ, ಎಚ್ಚರಿಕೆಯ ಪ್ರಸಾರ, ಆಹಾರ, ಔಷಧ ಸಾಮಗ್ರಿಗಳ ಸಂಗ್ರಹ, ಸಮುದಾಯ ಪಾಕಶಾಲೆಯ ನಿರ್ವಹಣೆ ಮುಂತಾದ ವಿವಿಧ ಕೆಲಸಗಳಲ್ಲಿ ಸಮುದಾಯದ ಸದಸ್ಯರಿಗೆ ತರಬೇತಿ ನೀಡಲಾಗಿದೆ. ತ್ವರಿತ ಕಾರ್ಯಪಡೆ, ವಿಪತ್ತು ನಿರ್ವಹಣಾ ತಂಡಗಳು ಬರುವವರೆಗೂ ಎಲ್ಲ ತುರ್ತು ಪರಿಸ್ಥಿತಿಯನ್ನೂ ನಿಭಾಯಿಸುವ ನಿರ್ವಹಣಾ ಸಮಿತಿ ಅನಂತರ ಅವರ ಎಲ್ಲ ಕೆಲಸಗಳಿಗೆ ಸಹಾಯ ನೀಡುತ್ತದೆ. ಚಂಡಮಾರುತದ ಋತು ಮುಗಿದ ನಂತರ ಈ ಆಶ್ರಯ ತಾಣಗಳನ್ನು ಶಾಲೆಗಳೂ ಸೇರಿದಂತೆ ಸಮುದಾಯದ ತರಬೇತಿ ಹಾಗೂ ಇನ್ನಿತರ ಚಟುವಟಿಕೆಗಳಿಗೆ ಬಳಸಲಾಗುತ್ತದೆ.

ಕಳೆದ 21 ವರ್ಷಗಳ ಅವಧಿಯಲ್ಲಿ ನಡೆದಿರುವ ಈ ಕೆಲಸಗಳು ಉತ್ತಮ ಫಲಿತಾಂಶ ನೀಡಿವೆ. 'ಪ್ರತೀ ಪ್ರಾಣವೂ ಅಮೂಲ್ಯ. ಹೀಗಾಗಿ ಪ್ರಾಣಹಾನಿಯನ್ನೂ ಶೂನ್ಯಕ್ಕಿಳಿಸಬೇಕು' ಎಂಬ ಮುಖ್ಯಮಂತ್ರಿಯ ನಿರ್ದೇಶನಕ್ಕೆ ಅನುಸಾರವಾಗಿ ನಡೆದಿರುವ ಕೆಲಸಗಳಿಂದ ಪ್ರಾಣಹಾನಿ ಬಹಳ ಕಡಿಮೆಯಾಗಿದೆ. 1999ರ ಮಹಾಚಂಡಮಾರುತದಲ್ಲಿ ಸತ್ತವರ ಸಂಖ್ಯೆ 10,000. ಒಡಿಶಾದಲ್ಲಿ 2021ರ ಮೇ ತಿಂಗಳ ಯಾಸ್ ಚಂಡಮಾರುತದಲ್ಲಿ ಸತ್ತವರ ಸಂಖ್ಯೆ ಕೇವಲ ಮೂರು. ಈ ಚಂಡಮಾರುತದಿಂದ ಅಸ್ತವ್ಯಸ್ತವಾದ ಇಡೀ ಬಾಲಾಸೋರ್ ಜಿಲ್ಲೆಯ ವಿದ್ಯುತ್ ವ್ಯವಸ್ಥೆಯನ್ನು ಸರಿಪಡಿಸಲು ಹಿಡಿದ ಸಮಯ ಕೇವಲ ಎಂಟು ಗಂಟೆಗಳು. ಮೇ 23ರಂದು ಯಾಸ್ ಚಂಡಮಾರುತದ ನಿಖರ ಮುನ್ಸೂಚನೆ ದೊರೆತ ಎರಡೇ ದಿನಗಳಲ್ಲಿ ತಗ್ಗು ಪ್ರದೇಶಗಳಿಂದ 7.10 ಲಕ್ಷ ಜನರನ್ನು ಸ್ಥಳಾಂತರಿಸಲಾಯಿತು. ಪ್ರಸವದಿನ ಹತ್ತಿರವಿದ್ದ 2,500 ಗರ್ಭಿಣಿಯರನ್ನು ತ್ವರಿತಗತಿಯಲ್ಲಿ ಪತ್ತೆ ಮಾಡಿ ಸುರಕ್ಷಿತವಾದ ಆಸ್ಪತ್ರೆಗಳಿಗೆ ಸೇರಿಸಲಾಯಿತು. ಈ ಮುಂದಾಲೋಚನೆಯ ಕ್ರಮಕ್ಕೆ ಪ್ರಶಂಸೆಗಳ ಮಹಾಪೂರವೇ ಹರಿದುಬಂತು. 2020ರ ಆಗಸ್ಟ್‌ನಲ್ಲಿ, 12 ವಿವಿಧ ಅಂಶಗಳ ಆಧಾರದ ಮೇಲೆ ಸುನಾಮಿಯ ಸಿದ್ಧತೆಯನ್ನು ಪರಿಶೀಲಿಸಿದ ಯುನೆಸ್ಕೊ ಮತ್ತು ಇಂಟರ್ ಗವರ್ನಮೆಂಟಲ್ ಓಶನೋಗ್ರಫಿಕ್ ಕಮಿಷನ್ ತಂಡದ ಪರಿಣತರು, ಗಂಜಾಂ ಜಿಲ್ಲೆಯ ವೆಂಕಟ್ರೈಪುರ ಮತ್ತು ಜಗತ್‌ಸಿಂಗ್‌ಪುರಿ ಜಿಲ್ಲೆಯ ನೋಲಿಯಾಸಾಹಿ ಹಳ್ಳಿಗಳನ್ನು ಸುನಾಮಿ ಸಿದ್ಧ ಹಳ್ಳಿಗಳೆಂದು ಘೋಷಿಸಿ ಗೌರವಿಸಿದ್ದಾರೆ.

ಸರ್ಕಾರದ ವಿವಿಧ ಇಲಾಖೆಗಳ ನಡುವಿನ ಅಪರೂಪವಾದ ಸಹಕಾರ, ಸಂಯೋಜನೆಗಳು, ವಿಕೇಂದ್ರೀಕೃತ ಕಾರ್ಯಾಚರಣೆ, ಸ್ಥಳೀಯ ಸಮುದಾಯಗಳ ಸಕ್ರಿಯ ಸಹಭಾಗಿತ್ವ, ಒಡಿಶಾ ಮಾದರಿಯ ವಿಪತ್ತು ನಿರ್ವಹಣಾ ಸಿದ್ಧತೆಯನ್ನು ವಿಶಿಷ್ಟ, ಅನುಕರಣೀಯ ಮಾದರಿಯನ್ನಾಗಿ ಮಾಡಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಚುರುಮುರಿ

ಅಕ್ರಮವೇ ಸಕ್ರಮ

• ಸುಮಂಗಲಾ

ಬೆಕ್ಕಣ್ಣ ಬೆಳಗ್ಗೆ ಬೆಳಗ್ಗೆಯೇ ರಸಪ್ರಶ್ನೆಯ ಲಹರಿಯಲ್ಲಿತ್ತು. 'ಶಾಸಕರು, ಸಚಿವರು, ಸಂಸದರು ಇವ್ರೆಲ್ಲ ಯಾರು?'

'ಜನಪ್ರತಿನಿಧಿಗಳು' ನನ್ನ ಒಂದೇ ಪದದ ಉತ್ತರ.

'ಸರಿ, ಇವ್ರು ಎದಕ್ಕೆ ಜನಪ್ರತಿನಿಧಿ ಆಗ್ತಾರ' ಕೇಳಿದ ಬೆಕ್ಕಣ್ಣ ತಾನೇ ಉತ್ತರವನ್ನೂ ಕೊಟ್ಟುಕೊಂಡಿತು, 'ಸರ್ಕಾರ ಮಾಡಾಕೆ, ಸರ್ಕಾರ ನಡೆಸಾಕೆ ಹೌದಿಲ್ಲೋ' ಎಂದಿತು. ಕೋಲೆಬಸವನಂತೆ ತಲೆ ಅಲ್ಲಾಡಿಸಿದೆ.

'ಅಂದ್ರ ಈ ಜನಪ್ರತಿನಿಧಿಗಳೇ ಸರ್ಕಾರ ಹೌದಿಲ್ಲೋ' ಎಂದು ಮತ್ತೆ ಪಾಟಿಸವಾಲು ಮಾಡಿತು. ಪೆಕರಳಂತೆ ಅದಕ್ಕೂ ಹ್ಞೂಂಗುಟ್ಟಿದೆ.

ನಮ್ಮ ಶಾಸಕರಂದ್ರ ಅವರವರ ಕ್ಷೇತ್ರದಾಗ ಅವರೇ ಸರ್ಕಾರ ಇದ್ದಂಗೆ, ಅವರು ಸರ್ಕಾರದ ಜಮೀನು ಒಂದೀಟು ತಗಂಡು ಬಂಗಲೆ ಕಟ್ಟಿದರ ಏನು ತಪ್ಪಾತು... ಅದನ್ನೇನು ಅತಿಕ್ರಮಿಸ್ಯಾರ, ಗುಳುಂ ಮಾಡ್ಯಾರ ಅಂತೆಲ್ಲ ಹೇಳೂದು? ಅಂದ್ರ ಇದು ಸರ್ಕಾರನೇ ಸರ್ಕಾರಿ ಜಮೀನು ತಗಂಡಂಗೆ ಆತಿಲ್ಲೋ...' ಪಕ್ಕಾ ಕ್ರಿಮಿನಲ್ ಲಾಯರಿಕೆ ಧ್ವನಿಯಲ್ಲಿ ಬೆಕ್ಕಣ್ಣ ವಾದ ಮಂಡಿಸಿತು.

'ಭಪ್ಪರೆ ಮಗನೇ... ಅಂಥಾ ಶಾಸಕರೇನಾದ್ರ ಇದನ್ನ ಕೇಳಿದ್ರೆ, ನಿನ್ನೇ ತಮ್ಮ ಮಾಧ್ಯಮ ಪ್ರತಿನಿಧಿಯಾಗಿ ಇಟ್ಟುಕೋತಾರ' ಎಂದು ನಕ್ಕೆ.

'ಎಷ್ಟು ಸರ್ಕಾರಿ ಜಮೀನು ಐತೋ ಅದಿಷ್ಟನ್ನೂ ಈ ಸರ್ಕಾರಿ ಸೇವಾದಾಗೆ ಜೀಂವಾ ತೇಯೂ ಜನಪ್ರತಿನಿಧಿಗಳಿಗೆ ಅವರವರ ಸೀನಿಯಾರಿಟಿ ಮೇಲೆ ಹಂಚಿಬಿಡಬೇಕು' ಎಂದು ಇನ್ನೊಂದು ವಾದವನ್ನೂ ಮಂಡಿಸಿತು.

'ಎಷ್ಟು ಮಂದಿ ಜನಪ್ರತಿನಿಧಿಗಳಿಗೆ ಕೊಡಾಕೆ ಆಗತೈತಲೇ... ಮಾಜಿಗಳು, ಹಾಲಿಗಳು, ಭಾವಿಗಳು ಅಂತ್ಹೇಳಿ ಎಲ್ಲಾರಿಗೂ ಹಂಚಿಕೋತ ಹೋದ್ರೆ ಸರ್ಕಾರಿ ಅಲ್ಲ, ಖಾಸಗಿ ಜಮೀನು, ಅರಣ್ಯ ಜಮೀನೂ ಸಾಲಂಗಿಲ್ಲ. ಮಂಗ್ಯಾನಂಥವನೇ' ಎಂದು ಬೈದೆ.

'ಅವಾಗ ಅಮೆರಿಕಾದಾಗೋ, ಸೈಬೀರಿಯಾದಾಗೋ ಅಥವಾ ಚಂದ್ರಲೋಕದಾಗೋ ಇನ್ನೊಂದಿಷ್ಟು ಜಾಗಾನ ಸರ್ಕಾರನೇ ಖರೀದಿಸಿ ಹಂಚಿದ್ರಾತು. ಅಷ್ಟು ಕಷ್ಟಪಟ್ಟು ಜನಸೇವೆ ಮಾಡೂ ಜನಪ್ರತಿನಿಧಿಗಳಿಗೆ ವಿಶೇಷ 'ಅಕ್ರಮವೇ ಸಕ್ರಮ' ಯೋಜನೆ ಜಾರಿ ಮಾಡಬಕು' ಬೆಕ್ಕಣ್ಣನ ವಿತಂಡವಾದ ಎಗ್ಗಿಲ್ಲದೇ ಸಾಗಿತು!

ಸಂಗತ

ಮಿತವಾಗಿ ಬಡಿಸಿ, ಎಲ್ಲವನ್ನೂ ಭುಂಜಿಸಿ

ಪರರ ಹಸಿವಿನ ನೆನಪಿಲ್ಲದೆ, ಸಾಲು ಸಾಲು ಪಕ್ವಾನ್ನಗಳನ್ನು ಹಾಕಿಸಿಕೊಂಡು, ತಿನ್ನದೆ ಎಲೆಯಲ್ಲೇ ಬಿಡುವುದು ಎಷ್ಟು ಸರಿ?

• ಪ.ರಾಮಕೃಷ್ಣ ಶಾಸ್ತ್ರಿ

ಒಂದೆಡೆ ಭರ್ಜರಿ ಮದುವೆ ನಡೆದಿತ್ತು. ಭಾರಿ ಸಂಖ್ಯೆಯಲ್ಲಿ ಅತಿಥಿ ಅಭ್ಯಾಗತರ ಬರುವಿಕೆಯನ್ನು ನಿರೀಕ್ಷಿಸಿ ಊಟದ ಖಾದ್ಯಗಳನ್ನು ಹೆಚ್ಚಾಗಿಯೇ ತಯಾರಿಸಿದ್ದರು. ಆದರೆ ಅಪರಿಮಿತವಾಗಿ ಅನ್ನಾಹಾರ ಉಳಿದಿತ್ತು. ಯಾವುದಾದರೂ ಅನಾಥಾಶ್ರಮವನ್ನು ಹುಡುಕಿಕೊಂಡು ಹೋಗಿ ಅದನ್ನು ಕೊಟ್ಟು ಹಸಿದಿರುವವರ ಹೊಟ್ಟೆ ತಂಪು ಮಾಡಬಹುದಿತ್ತು. ಆದರೆ ಆಗಲೇ ಹಳಸಲು ಆರಂಭಿಸಿದ್ದ ಪಲಾವನ್ನು ತೆಗೆದುಕೊಂಡು ಹೋಗಿ ಕಲ್ಯಾಣಮಂಟಪದ ಹಿಂಭಾಗದಲ್ಲಿ ಸುರುವಿ ಗಾಡಿ ಕಟ್ಟಿದರು ಮದುವೆ ಮಾಡಿಸಿದವರು.

ಹೀಗೆ ಸುರಿದ ಪಲಾವನ್ನು ಯಾರದೋ ದನಗಳು ಬಂದು ಸಮೃದ್ಧವಾಗಿ ತಿಂದುಮುಗಿಸಿದವು. ಅಧಿಕವಾಗಿ ಡಾಲ್ಡಾ ಹಾಕಿ ತಯಾರಿಸಿದ್ದ ಪಲಾವ್ ಮಹಿಮೆಯಿಂದ ಅವುಗಳ ಹೊಟ್ಟೆ ನಗಾರಿಯಂತೆ ಉಬ್ಬರಿಸಿತು. ವೈದ್ಯರು ಎಷ್ಟೇ ಶ್ರಮಿಸಿದರೂ ಫಲ ಸಿಗಲಿಲ್ಲ. ಐದು ದನಗಳು ಸತ್ತುಹೋದವು. ಮೆಲುಕಿಗೆ ಸಿಗದ ಆಹಾರ ಸಹಜವಾಗಿ ಜಾನುವಾರುಗಳ ಸಾವಿಗೆ ಕಾರಣವಾಗುತ್ತದೆ, ಹಾಗೆಯೇ ಆಯಿತು.

ಸಮಾರಂಭಗಳು ಎನ್ನುವಾಗ ಹಲವಾರು ಬಗೆಯ ಭಕ್ಷ್ಯಗಳು ಇರುತ್ತವೆ. ಎಲ್ಲವನ್ನೂ ಹಾಕಿಸಿಕೊಳ್ಳುವವರು, ಇನ್ನು ತಿನ್ನಲು ಸಾಧ್ಯವೇ ಇಲ್ಲ ಎನಿಸಿದಾಗ ನಿಸ್ಸಂಕೋಚವಾಗಿ ಅಲ್ಲಿಯೇ ಬಿಟ್ಟು ಎದ್ದು ಹೋಗುತ್ತಾರೆ.

ಮನೆಯವರಿಗೆ ತುಂಬ ಜನ ಸಮಾರಂಭಕ್ಕೆ ಬರಬೇಕು, ಉಂಡು ಹರಸಿ ಹೋಗಬೇಕು ಎಂಬ ಆಶಯವಿರುತ್ತದೆ. ಆದರೆ ಅತಿಥಿಗಳು ಎಲ್ಲವನ್ನೂ ಬಡಿಸಿಕೊಳ್ಳಲಿ ಎಂಬುದು ಅಷ್ಟೊಂದು ಪಕ್ವಾನ್ನಗಳನ್ನು ತಯಾರಿಸಿರುವುದರ ಹಿಂದಿನ ಉದ್ದೇಶ ಅಲ್ಲ. ಸಿಹಿ ಇಷ್ಟವಾಗದಿದ್ದರೆ ಖಾರ, ಖಾರ ಹೆಚ್ಚು ಬೇಡವೆಂದವರಿಗೆ ಸಿಹಿ ಹೀಗೆ ವೈವಿಧ್ಯಮಯ ರುಚಿಗಳ ಪದಾರ್ಥಗಳನ್ನು ತಯಾರಿಸಿ, ಉಣ್ಣುವ ವ್ಯಕ್ತಿ ಯಾವುದು ಬೇಕೋ ಅದನ್ನು ಆರಿಸಿಕೊಳ್ಳಲಿ ಎಂಬ ಆಶಯ ಇರುತ್ತದೆ. ಎಲ್ಲವನ್ನೂ ಹಾಕಿಸಿಕೊಂಡು ಕಲಸಿ ಎಲೆಯಲ್ಲಿ ಪಿರಮಿಡ್ ಕಟ್ಟಿ ಎದ್ದುಹೋದರೆ ಅನ್ನದಾನ ಮಾಡಿದ ಪುಣ್ಯಾತ್ಮನ ಆಶಯಕ್ಕೆ ಭಂಗ ತಂದಂತಾಗದೇ?

ವರನಟ ಡಾ. ರಾಜಕುಮಾರ್ ಊಟ ಮಾಡುವ ವಿಧಾನವನ್ನು ತುಂಬ ಜನ ಬಣ್ಣಿಸಿದ್ದಾರೆ. ತಟ್ಟೆಯಲ್ಲಿ ಬೇಕಾದಷ್ಟನ್ನೇ ಬಡಿಸಿಕೊಂಡು, ಸ್ವಲ್ಪವೂ ಬಿಡದಂತೆ ಸ್ವಚ್ಛವಾಗಿ ಊಟ ಮಾಡಿ 'ಆಹಾ, ಎಂತಹ ರುಚಿಕರ ಭೋಜನ' ಎಂದು ಹೊಗಳಿ ಹೋಗುವ ಸ್ವಭಾವ ಅವರದಾಗಿತ್ತಂತೆ. ಅವರು ಯಾವ ಬಗೆಯ ಊಟವನ್ನೂ ಟೀಕಿಸಲಿಲ್ಲ, ನನಗೆ ರುಚಿಸುವುದಿಲ್ಲ ಎಂದು ಹೇಳಲಿಲ್ಲ.

ಸಮಾರಂಭದಲ್ಲಿ ಬಳಸುವ ಧಾನ್ಯಗಳು, ತರಕಾರಿ ಎಲ್ಲವೂ ನಾವು ಕಂಡರಿಯದ ಅನ್ನದಾತನೊಬ್ಬನ ಶ್ರಮದ ಉತ್ಪನ್ನವಾಗಿರುತ್ತವೆ. ಬಿತ್ತಿದ ಬೆಳೆಗೆ ಗೊಬ್ಬರ ಹಾಕಿ, ಕ್ರಿಮಿಕೀಟ, ಪಕ್ಷಿಗಳ ಬಾಧೆ ಬರದಂತೆ ಹಗಲಿ ರುಳೂ ಕಾದು ಫಸಲನ್ನು ಮಾರುಕಟ್ಟೆಗೆ ತರುವ ಶ್ರಮಜೀವಿಯ ಬೆವರಿನ ಹನಿ ಮುತ್ತಾಗಿ ಮಿನುಗಬೇಕಿ ದ್ದರೆ ಅವನ ಬೆಳೆ ಬೇರೆಯವರ ಹೊಟ್ಟೆ ತುಂಬಿಸಿ ತೃಪ್ತಿಯ ತೇಗು ಹೊರಗೆ ಬರಬೇಕು. ಆದರೆ ವ್ಯರ್ಥಗೊಳ್ಳುವ ಊಟದಿಂದ ಯಾರಿಗೂ ಯಾವುದೇ ಸಾರ್ಥಕ್ಯ ಭಾವ ಉದಿಸಲು ಸಾಧ್ಯವಿಲ್ಲ ತಾನೆ?

ಮೋಹನ ಕುಮಾರ್ ಎಂಬ ಕನ್ನಡಿಗ ಕರ್ನಾಟಕದಾದ್ಯಂತ ಶಾಲಾ ಕಾಲೇಜುಗಳ ವಸತಿನಿಲಯ, ಛತ್ರಗಳಿಗೆ ತಮ್ಮದೇ ಖರ್ಚಿನಲ್ಲಿ ಫಲಕಗಳನ್ನು ಬರೆಸಿ ಕೊಟ್ಟು ಬರುವ ಮಹತ್ವದ ಕೆಲಸ ಮಾಡಿದ್ದಾರೆ. 'ಎಷ್ಟು ಬೇಕೋ ಅಷ್ಟು ಮಾತ್ರ ಬಡಿಸಿಕೊಳ್ಳಿ. ಯಾವುದೇ ಪದಾರ್ಥವನ್ನೂ ಎಲೆಯಲ್ಲಿ ಬಿಟ್ಟು ಹೋಗಬೇಡಿ. ಇನ್ನೊಬ್ಬರ ಆಹಾರವನ್ನು ಕಸಿದುಕೊಳ್ಳುವ ಹಕ್ಕು ನಿಮಗೆ ಇಲ್ಲ. ನೀವು ಎಲೆಗೆ ಹಾಕಿಸಿಕೊಳ್ಳದೆ ಉಳಿಯುವ ಆಹಾರ ಹಸಿದ ಹೊಟ್ಟೆಗಳನ್ನು ತಂಪಾಗಿಡಲಿ...' ಹೀಗೆ ಹಲವಾರು ವಿಧದಿಂದ ಮನವಿ ಮಾಡಿಕೊಂಡ ವಾಕ್ಯಗಳು ಉಣ್ಣುವವರನ್ನು ಎಚ್ಚರಿಸುತ್ತವೆ.

ಒಂದು ಕಾಲದಲ್ಲಿ ನೌಕರಿ ಅರಸಿಕೊಂಡು ಮೋಹನ ಕುಮಾರ್ ಬೆಂಗಳೂರಿಗೆ ಬಂದಾಗ ಕೈಯಲ್ಲಿ ಕಾಸಿರಲಿಲ್ಲ. ಹಸಿವು ತಾಳಲಾಗದೆ ಒಂದು ಮದುವೆ ಛತ್ರಕ್ಕೆ ನುಗ್ಗಿದಾಗ ದ್ವಾರಪಾಲಕ ಹೊರಗೆ ತಳ್ಳಿದರಂತೆ. ನಿತ್ರಾಣವಾಗಿ ಹೊರಗಿನ ಗೋಡೆಗೆ ಆತು ಕುಳಿತುಕೊಂಡ ಅವರ ಮೈಮೇಲೆ ಹಿಂದಿನಿಂದ ಯಾರೋ ಊಟ ಮಾಡಿದ ಪತ್ರಾವಳಿಗಳ ರಾಶಿಯನ್ನೇ ಎಸೆದರಂತೆ. ಆಗ ಅವರಿಗನಿಸಿದ್ದು, ತಿಪ್ಪೆಗೆ ಎಸೆಯುವ ಆಹಾರವನ್ನು ಉಳಿಸಿ ಹಸಿದವನಿಗೆ ಕೊಡಬಹುದಿತ್ತು ಎಂಬ ಭಾವ. ಇದು ಅವರ ಬದುಕಿಡೀ ಪರರನ್ನು ಎಚ್ಚರಿಸುವ ಫಲಕಗಳನ್ನು ತಯಾರಿಸಿ ಹಂಚುವ ಕಾಯಕಕ್ಕೆ ಪ್ರೇರೇಪಿಸಿತು.

ಕೊರೊನಾ ಕಾಡಿದಾಗ ಕೆಲಸವಿಲ್ಲದೆ ಹೊತ್ತಿನ ತುತ್ತಿಗಾಗಿ ಪರದಾಡಿದ ಕುಟುಂಬಗಳ ಕಂಬನಿಯ ಕಥೆಯನ್ನು ನಾವು ಮರೆತಿಲ್ಲ. ಬರೇ ಬಿಸಿಲು, ಹಸಿರಿನ ಸುಳಿವಿಲ್ಲ. ಕೊಳಚೆ ನೀರಿಗೂ ತತ್ವಾರವಿರುವ ಸೊಮಾಲಿಯಾದಲ್ಲಿ ಜೇಡಿಮಣ್ಣನ್ನು ರೊಟ್ಟಿ ಮಾಡಿ ತಿಂದು ಉಸಿರು ಉಳಿಸಿಕೊಂಡವರ ಬದುಕಿಗೊಂದು ನೆಲೆ ಕಲ್ಪಿಸುವಲ್ಲಿ ವಿಶ್ವಸಂಸ್ಥೆಯೇ ಅಸಹಾಯವಾಗಿದೆ. ಹೀಗಿರುವಲ್ಲಿ ಪರರ ಹಸಿವಿನ ನೆನಪಿಲ್ಲದೆ, ಸಾಲು ಸಾಲು ಪಕ್ವಾನ್ನಗಳನ್ನು ಮಾಡಿಸಿ, ಬಂದವರಿಗೆ ಆಗ್ರಹದಿಂದ ಬಡಿಸಿ 'ಸಮಾರಂಭ ಭರ್ಜರಿಯಾಗಿತ್ತು' ಎಂಬ ಹೊಗಳಿಕೆಗೆ ಕಿವಿಯಾನಿಸುವವರು ಕೂಡ ಹಿತಮಿತವಾದ ಭಕ್ಷ್ಯಗಳನ್ನು ತಯಾರಿಸಲು ಮುಂದಾಗುವುದೂ ಮುಖ್ಯವಾಗುತ್ತದೆ.

ಹಾಗೆಯೇ ಬಂದವರು, ಅನ್ನಕ್ಕಾಗಿ ಪರಿತಪಿಸುವವರ ಹೊಟ್ಟೆ ಸೇರಬೇಕಾದ ಆಹಾರವನ್ನು ನಿರರ್ಥಕಗೊಳಿಸುವುದು ಅನ್ನ ನೀಡಿದ ಭೂಮಿಗೆ ಮಾಡುವ ಅಪಚಾರವೆಂದು ಭಾವಿಸಿ ಬೇಕಾದಷ್ಟನ್ನೇ ಬಡಿಸಿಕೊಳ್ಳಬೇಕಾಗಿದೆ.

ವಾಚಕರ ವಾಣಿ

ನುಡಿ ಭಯೋತ್ಪಾದನೆ: ಉಪೇಕ್ಷೆ ಸಲ್ಲದು

'ಹಿಂದೂಗಳ ಮೇಲೆ ನಡೆಯುವ ಹಲ್ಲೆಗೆ ಪ್ರತಿಕ್ರಿಯೆ ಕೊಡಲು ನಾವು ಕತ್ತಿ ಹಿಡಿದರೆ ನಿಮಗೆ ಶವ ಹೂಳಲೂ ಜಾಗ ಸಿಗದು' ಎಂದು ವಿಎಚ್‌ಪಿ ರಾಜ್ಯ ಮುಖಂಡರು ಆಘಾತಕಾರಿ ಎಚ್ಚರಿಕೆ ನೀಡಿದ್ದಾರೆ. ಇಂತಹ ಹೇಳಿಕೆಗಳು ಆತಂಕ ಮೂಡಿಸುತ್ತವೆ. ದೇಶದಲ್ಲಿ ಸಾಂವಿಧಾನಿಕವಾಗಿ ಸರ್ವರಿಗೂ ಜೀವಿಸುವ ಹಕ್ಕಿದೆ. ಕಾನೂನನ್ನು ಕೈಗೆತ್ತಿಕೊಳ್ಳುವುದಕ್ಕೆ, ಭಯಪಡಿಸುವುದಕ್ಕೆ ಅಥವಾ ಆತಂಕ ಮೂಡಿಸುವುದಕ್ಕೆ ಯಾರಿಗೂ ಅಧಿಕಾರ ಇಲ್ಲ. 'ಭಾರತವು ಸರ್ವ ಜನಾಂಗದ ಶಾಂತಿ'ಯ ತೋಟವಾಗಬೇಕೆಂಬುದು ನಮ್ಮ ಹಿರಿಯರ ಆಶಯವಾಗಿದೆ. ನಾವೆಲ್ಲರೂ ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆಗಳ ಮೇಲೆ ದೇಶ ಕಟ್ಟಬೇಕಾಗಿದೆ.

ನಿಮ್ಮ ಕತ್ತಿಯಿಂದಾಗಲೀ ಅವರ ಬಂದೂಕು, ಬಾಂಬುಗಳಿಂದಾಗಲೀ ಯಾವ ಸಾಧನೆಯನ್ನೂ ಮಾಡಲಾರಿರಿ. ಈಗಾಗಲೇ ಜಗತ್ತಿನಲ್ಲಿ ಇಂತಹ ಘೋರವಾದ ಹತ್ಯಾಕಾಂಡಗಳು, ಭಯೋತ್ಪಾದನೆ, ಜನಾಂಗೀಯ ಕಾರಣಕ್ಕಾಗಿ ಪ್ರಾಣ ಹನನಗಳು ನಡೆದುಹೋಗಿವೆ. ಭಯೋತ್ಪಾದನೆ ಅಂದರೆ ಕೇವಲ ಅಸ್ತ್ರ ಶಸ್ತ್ರಗಳು ಮಾತ್ರವಲ್ಲ ಈ ರೀತಿಯಾಗಿ ಉದ್ರೇಕಕಾರಿ ಹೇಳಿಕೆಗಳನ್ನು ನೀಡುವುದೂ ಆಗಿದೆ. ಕಿಡಿಯನ್ನು ಉಪೇಕ್ಷಿಸಿದರೆ ಮನೆಯನ್ನೇ ಸುಟ್ಟೀತು ಎಂಬ ಮಾತಿದೆ. ಅದರಂತೆ ಸಣ್ಣ ಪುಟ್ಟ ಮಾತುಗಳು ಬೆಳೆಯುತ್ತಿರುವ ಭಾರತವನ್ನು ಹಿಂದಕ್ಕೆ ಒಯ್ಯುತ್ತವೆ. ಸಾಮಾಜಿಕ ಮಾಧ್ಯಮಗಳಲ್ಲಿ ನಡೆಯುವ ನುಡಿ ಭಯೋತ್ಪಾದನೆ ಬೀದಿಗಳಲ್ಲೂ ಕೇಳಿಸುವಂತೆ ಆಗಬಾರದು. ನಮ್ಮ ಯುವಕರು ಸಂವಿಧಾನದ ಮೇಲೆ ನಂಬಿಕೆ ಇರಿಸಬೇಕು. ತಪ್ಪು ಮಾಡಿದವರು ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳಲಾಗದು. ಕಾನೂನನ್ನು ಕೈಗೆ ತೆಗೆದುಕೊಳ್ಳುವ ಕೆಲಸ ಮಾಡಬಾರದು. ಸರ್ವಧರ್ಮ ಸಮನ್ವಯ, ಸಹಕಾರ, ಸಂಯಮ, ಸಹಬಾಳ್ವೆ ಇಂದು ಮುಂದು ಎಂದೆಂದೂ ಅನಿವಾರ್ಯ.

ತಿರುಪತಿ ನಾಯಕ್, ಹೊಸನಗರ

ಗುಂಡಿ(ಗೆ)

ರಸ್ತೆಗಳ
ಗುಂಡಿಗಳನ್ನು
ಮುಚ್ಚಬೇಕೆಂದು
ಎಲ್ಲೆಡೆ ಆಗ್ರಹ.
ಸರಿ, ಆದರೆ ಮೊದಲು
ಮುಚ್ಚಬೇಕು,
ಗುಂಡಿಗೆ(ಹೃದಯ)ಗಳ
ಗುಂಡಿಗಳನ್ನು!
(ಇಲ್ಲವೋ ಇದ್ದದ್ದೆ 'ಗಂಡಾಗುಂಡಿ')

ಸಿ.ಪಿ.ಕೆ., ಮೈಸೂರು

ಸಾವಿಗೆ ಸಾವು ಸೇರಿಸುವುದು ಯಾವ ನ್ಯಾಯ?

ಬೆಳಗಾವಿ ಜಿಲ್ಲೆಯ ಗ್ರಾಮವೊಂದರಲ್ಲಿ ಮಾಜಿ ಸೈನಿಕರೊಬ್ಬರು ಪತ್ನಿ ಕೋವಿಡ್‌ನಿಂದ ಮೃತಪಟ್ಟ ದುಃಖವನ್ನು ತಾಳಲಾರದೆ ತಮ್ಮ ನಾಲ್ವರು ಮಕ್ಕಳಿಗೆ ವಿಷ ಉಣಿಸಿ, ತಾವೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ (ಪ್ರ.ವಾ., ಅ. 24). ಗಂಡ ಕೋವಿಡ್‌ನಿಂದ ಮೃತಪಟ್ಟದ್ದರಿಂದ ಮನನೊಂದ ಗೃಹಿಣಿಯೊಬ್ಬರು ತಮ್ಮ ಹದಿಹರೆಯದ ಮಗ ಮತ್ತು ಪುಟ್ಟ ಮಗಳೊಂದಿಗೆ ಸಾವಿಗೆ ಶರಣಾಗಿದ್ದುದು ಕೆಲ ದಿನಗಳ ಹಿಂದೆ ವರದಿಯಾಗಿತ್ತು.

ಬುದ್ಧನ ಕಾಲದಿಂದಲೂ ಮನುಷ್ಯ ಸಾವಿಲ್ಲದ ಮನೆಯ ಸಾಸಿವೆಗಾಗಿ ಹುಡುಕುತ್ತಲೇ ಇದ್ದಾನೆ. ಕೋವಿಡ್‌ನಿಂದ ಸಾವು, ನೋವಿನಿಂದ ನರಳುತ್ತಿರುವ ಸಾವಿರಾರು ಕುಟುಂಬಗಳನ್ನು ಕಾಣುತ್ತಿದ್ದೇವೆ. ವಾಸ್ತವ ಹೀಗಿರುವಾಗ, ಮನೆಯಲ್ಲಿ ಒಂದು ಸಾವು ಸಂಭವಿಸಿದರೆ, ಅದಕ್ಕೆ ಇನ್ನಷ್ಟು ಸಾವುಗಳನ್ನು ಸೇರಿಸುವುದರಲ್ಲಿ ಅರ್ಥವಿಲ್ಲ. ಮಕ್ಕಳ ಮೇಲೆ ತಮಗೆ ಸಂಪೂರ್ಣ ಹಕ್ಕಿದೆ, ಅವರನ್ನು ಏನು ಬೇಕಾದರೂ ಮಾಡಬಹುದು ಎಂದು ತಂದೆ-ತಾಯಿ ತಪ್ಪಾಗಿ ತಿಳಿದಿರುವುದೇ ಇಂಥ ದುರಂತಗಳಿಗೆ ಕಾರಣ. ಮಕ್ಕಳು ಸಮಾಜದ ಆಸ್ತಿ. ಅವರನ್ನು ಸತ್ಪ್ರಜೆಗಳನ್ನಾಗಿ ಬೆಳೆಸುವುದು ಹಾಗೂ ಅವರು ಸಮಾಜದಲ್ಲಿ ನೆಮ್ಮದಿಯಿಂದ ಬದುಕಲು ಬೇಕಾದ ಸೌಕರ್ಯಗಳನ್ನು ಒದಗಿಸುವುದು ತಂದೆ ತಾಯಿಯ ಆದ್ಯ ಕರ್ತವ್ಯ. ಅದನ್ನು ನಿರ್ವಹಿಸದೆ, ಯಾವುದೇ ಅಪರಾಧ ಮಾಡಿರದ ಆ ಕಂದಮ್ಮಗಳನ್ನು ಸಾಯಿಸುವುದು ಅಕ್ಷಮ್ಯ ಅಪರಾಧ, ಕ್ರೌರ್ಯದ ಪರಮಾವಧಿ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಎಚ್‌ಐವಿ: ಲೈಂಗಿಕ ಕಾರ್ಯಕರ್ತೆಯರ ಹೊಣೆ ಯಾರದು?

'ಎಚ್‌ಐವಿ ಸೋಂಕಿತ ಲೈಂಗಿಕ ಕಾರ್ಯಕರ್ತೆಯನ್ನು ಮುಕ್ತವಾಗಿರಲು ಬಿಟ್ಟರೆ ಸಮಾಜಕ್ಕೆ ಹೆಚ್ಚಿನ ಅಪಾಯ' ಎಂಬ ನೆಲೆಯಲ್ಲಿ, ಆಕೆಯನ್ನು ಬಂಧಿಸಿ, ಎರಡು ವರ್ಷಗಳ ಕಾಲ ಬಂಧನದಲ್ಲಿಡಲು ಮ್ಯಾಜಿಸ್ಟ್ರೇಟ್ ನ್ಯಾಯಾಲಯವೊಂದು ಆದೇಶ ನೀಡಿತ್ತು. ಮುಂಬೈನ ದಿಂಡೋಶಿ ಸೆಷನ್ಸ್ ನ್ಯಾಯಾಲಯ ಇತ್ತೀಚೆಗೆ ಈ ಆದೇಶವನ್ನು ಎತ್ತಿ ಹಿಡಿದಿದೆ.

ರಾಜ್ಯದಲ್ಲಿ ಎಚ್‌ಐವಿ ಸೋಂಕಿತರಾಗಿದ್ದೂ ವೇಶ್ಯಾವಾಟಿಕೆಯಲ್ಲಿ ನಿರಂತರವಾಗಿ ತೊಡಗಿರುವ 8000ದಷ್ಟು ಲೈಂಗಿಕ ಕಾರ್ಯಕರ್ತೆಯರು ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿಯಲ್ಲಿ ನೋಂದಾಯಿತರಾಗಿದ್ದಾರೆ ಎಂಬುದು ಈ ಹಿನ್ನೆಲೆಯಲ್ಲಿ ಅತ್ಯಂತ ಆತಂಕಕಾರಿಯಾದುದು. ಇವರಲ್ಲಿ 2,257 ಮಂದಿ ಮಾತ್ರ ಎಆರ್‌ಟಿ ಚಿಕಿತ್ಸೆ ಪಡೆಯುತ್ತಿದ್ದು, ಮಿಕ್ಕವರು ಚಿಕಿತ್ಸೆಯಿಂದ ಹೊರಗಿದ್ದಾರೆ! ಇವರ ಬದುಕಷ್ಟೇ ಅಲ್ಲ ತನ್ಮೂಲಕ ಸಮಾಜದ ಸ್ವಾಸ್ಥ್ಯವನ್ನೂ ಈಗಾಗಲೇ ಅಪಾಯಕ್ಕೆ ಒಡ್ಡಲಾಗಿದೆ.

'ಕರ್ನಾಟಕ ರಾಜ್ಯ ಲೈಂಗಿಕ ಕಾರ್ಯಕರ್ತೆಯರ ಸ್ಥಿತಿಗತಿ ಅಧ್ಯಯನ ವರದಿ- 2017'ರಲ್ಲಿ ಈ ಅಂಶ ದಾಖಲಾಗಿದೆ. ಏಡ್ಸ್ ನಿಯಂತ್ರಣ ಮಂಡಳಿಯಲ್ಲಿ ಕಾಂಡೋಂ ಹಂಚಿಕೆ ಜಾಲದಡಿ ನೋಂದಣಿಯಾಗಿರುವ ಲಕ್ಷದಷ್ಟು ಲೈಂಗಿಕ ಕಾರ್ಯಕರ್ತೆಯರಲ್ಲಿ ಎಚ್‌ಐವಿ ಸೋಂಕಿತರಲ್ಲದೆ ನೂರಾರು ಬಾಲಕಿಯರು, ಮೂರು ಸಾವಿರದಷ್ಟು ಅಂಗವಿಕಲರು, ಅಪಹರಣ, ಕಳ್ಳಸಾಗಣೆ, ಅತ್ಯಾಚಾರ, ಬಾಲ್ಯವಿವಾಹದಂತಹ ವಿಷಮ ಪರಿಸ್ಥಿತಿಗೆ ಸಿಕ್ಕಿ ಅನಿವಾರ್ಯವಾಗಿ ವೇಶ್ಯಾವಾಟಿಕೆಗೆ ನೂಕಲ್ಪಟ್ಟವರೂ ಇದ್ದಾರೆ. ಇಂತಹ ಹೆಚ್ಚಿನ ದಮನಿತರು, ಈ ವಿಷ ವರ್ತುಲದಿಂದ ಹೊರಬರಲು ಕಾತರದಿಂದ ಕಾಯುತ್ತಿದ್ದಾರೆ. ಇವರನ್ನು ಪ್ರಥಮ ಆದ್ಯತೆಯಾಗಿ ಪುನರ್ವಸತಿಗೊಳಿಸುವ ಮೂಲಕ ಅವರ ಆರೋಗ್ಯವನ್ನೂ ಸಮಾಜದ ಸ್ವಾಸ್ಥ್ಯವನ್ನೂ ಕಾಪಾಡಬೇಕೆಂದು ವರದಿಯು ಶಿಫಾರಸು ಮಾಡಿದೆ. ಆದರೆ ಸರ್ಕಾರ ವರದಿಯನ್ನು ನಿರ್ಲಕ್ಷಿಸಿ, ಮೂಲೆಗುಂಪಾಗಿಸಿದೆ. ಹೀಗಾಗಿ ಎಚ್‌ಐವಿ ಸೋಂಕಿತ ಲೈಂಗಿಕ ಕಾರ್ಯಕರ್ತೆಯರನ್ನು ಬಂಧಿಸುವುದಕ್ಕಿಂತ, ಅವರ ಮತ್ತು ಸಮಾಜದ ಆರೋಗ್ಯದ ಹಿತದೃಷ್ಟಿಯಿಂದ ಸರ್ಕಾರದ ನೇತೃತ್ವದಲ್ಲಿ ಮಂಡಳಿಯು ಜವಾಬ್ದಾರಿ ತೆಗೆದುಕೊಂಡು, ತಕ್ಷಣವೇ ಇವರೆಲ್ಲರ ಮನವೊಲಿಸಿ ವೇಶ್ಯಾವಾಟಿಕೆಯಿಂದ ಹೊರತಂದು ಸಶಕ್ತ ಪುನರ್ವಸತಿ ಕಲ್ಪಿಸುವುದು ಅತ್ಯಂತ ಮಾನವೀಯ ಪರಿಹಾರವಾಗುತ್ತದೆ. ಇಲ್ಲವಾದಲ್ಲಿ ಇವರನ್ನು ನೋಂದಾಯಿಸಿಕೊಂಡು ಕಾಂಡೋಂ ಹಂಚಿ, ವೇಶ್ಯಾವಾಟಿಕೆಗೆ ಪ್ರಚೋದಿಸುತ್ತಿರುವ ಮಂಡಳಿಯು ಈ ಅಪರಾಧದ ಹೊಣೆ ಹೊರಬೇಕಾಗುತ್ತದೆ.

ರೂಪ ಹಾಸನ, ಹಾಸನ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಾಮಾಜಿಕ ಜಾಲತಾಣ ಸಂಸ್ಥೆ ವಿರುದ್ಧ ಮಾಜಿ ಉದ್ಯೋಗಿಯಿಂದ ಆರೋಪಗಳ ಸುರಿಮಳೆ

‘ಫೇಸ್‌ಬುಕ್‌ಗೆ ಲಾಭವೇ ಮುಖ್ಯ’

ಫೇಸ್‌ಬುಕ್‌ನ ಮಾಜಿ ಉದ್ಯೋಗಿ ಫ್ರಾನ್ಸಿಸ್ ಹಾಗನ್ ಅವರು ಸಾಮಾಜಿಕ ಜಾಲತಾಣ ಸಂಸ್ಥೆಯ ವಿರುದ್ಧ ಗಂಭೀರವಾದ ಹಲವು ಆರೋಪಗಳನ್ನು ಮಾಡಿದ್ದಾರೆ. ‘ದ್ವೇಷ ಭಾಷಣ ಹರಡುವಿಕೆ ಮತ್ತು ಜನಾಂಗೀಯ ಹಿಂಸೆಗೆ ಕಾರಣವಾಗುವ ಕಂಟೆಂಟ್ ತಡೆಯುವುದಕ್ಕಿಂತ ಫೇಸ್‌ಬುಕ್‌ಗೆ ಲಾಭದಲ್ಲಿಯೇ ಹೆಚ್ಚು ಆಸಕ್ತಿ’ ಎಂದು ಅವರು ಹೇಳಿದ್ದಾರೆ. ವಿಷಲ್‌ಬ್ಲೋವರ್ಸ್ ಏಡ್ ಎನ್‌ಜಿಒ ಮೂಲಕ ಅವರು ಅಮೆರಿಕದ ಸೆಕ್ಯುರಿಟೀಸ್ ಎಂಡ್ ಎಕ್ಸ್‌ಚೇಂಜ್ ಕಮಿಷನ್‌ಗೆ (ಅಮೆರಿಕದ ಮಾರುಕಟ್ಟೆ ಮೇಲಿನ ನಿಗಾ ಸಂಸ್ಥೆ) ಎಂಟಕ್ಕೂ ಹೆಚ್ಚು ದೂರುಗಳನ್ನು ನೀಡಿದ್ದಾರೆ. ಸಿಬಿಎಸ್ ನ್ಯೂಸ್ ಸುದ್ದಿವಾಹಿನಿಯಲ್ಲಿ ಅವರು ಬಹಿರಂಗವಾಗಿಯೂ ಕಾಣಿಸಿಕೊಂಡಿದ್ದಾರೆ. ಜತೆಗೆ, ಅಮೆರಿಕದ ಕಾಂಗ್ರೆಸ್ ಮುಂದೆ ಹಾಜರಾಗಿಯೂ ಹೇಳಿಕೆ ಕೊಟ್ಟಿದ್ದಾರೆ

‘ಸಾರ್ವಜನಿಕ ಹಿತಾಸಕ್ತಿ ಮತ್ತು ಸ್ವಹಿತಾಸಕ್ತಿಗಳ ಮಧ್ಯೆ ಸ್ವಹಿತಾಸಕ್ತಿಯನ್ನೇ ಫೇಸ್‌ಬುಕ್ ಆಯ್ಕೆ ಮಾಡಿಕೊಳ್ಳುತ್ತದೆ. ಕಂಪನಿಯು ಹಣ ಮಾಡಲಷ್ಟೇ ಆದ್ಯತೆ ನೀಡುತ್ತದೆ’ ಎಂದು ಫೇಸ್‌ಬುಕ್‌ನ ಮಾಜಿ ಉದ್ಯೋಗಿ ಫ್ರಾನ್ಸಿನ್ ಹಾಗನ್ ಆರೋಪಿಸಿದ್ದಾರೆ. ಅವರ ಆರೋಪಗಳ ಕುರಿತು ಅಮೆರಿಕದ ಸೆನೆಟ್ ವಿಚಾರಣೆ ಸಹ ಆರಂಭಿಸಿದೆ. ವಿಚಾರಣೆಯ ಭಾಗವಾಗಿ ಹಾಗನ್ ಸಹ ಸೆನೆಟ್ ಮುಂದೆ ಹಾಜರಾಗಿ ಹೇಳಿಕೆ ನೀಡಿದ್ದಾರೆ.

ದ್ವೇಷ, ಸುಳ್ಳುಸುದ್ದಿಗೆ ನಿರ್ಲಕ್ಷ್ಯ: ‘ದ್ವೇಷ ಮತ್ತು ಹಿಂಸಾಚಾರವನ್ನು ಹರಡಲು ಮತ್ತು ಉದ್ದೀಪಿಸಲು ಫೇಸ್‌ಬುಕ್ ಬಳಕೆಯಾಗುತ್ತಿದೆ. ಈ ಬಗ್ಗೆ ಫೇಸ್‌ಬುಕ್‌ಗೆ ಅರಿವಿದ್ದೂ, ಅದನ್ನು ನಿರ್ಲಕ್ಷಿಸಿದೆ. ಸುಳ್ಳು ಸುದ್ದಿ ಹರಡುವ ಪೋಸ್ಟ್‌ಗಳ ವಿಚಾರದಲ್ಲೂ ಫೇಸ್‌ಬುಕ್ ಇದೇ ನೀತಿಯನ್ನು ಅನುಸರಿಸಿದೆ’ ಎಂದು ಹಾಗನ್ ಹೇಳಿದ್ದಾರೆ. ಈ ಸಂಬಂಧ ಫೇಸ್‌ಬುಕ್ ಉದ್ಯೋಗಿಗಳ ಮಧ್ಯೆ ನಡೆದಿರುವ ಇ-ಮೇಲ್ ವ್ಯವಹಾರ ಮತ್ತು ಪರಿಶೀಲನಾ ವರದಿಗಳ ಪ್ರತಿಗಳನ್ನು ಹಾಗನ್ ಮಾಧ್ಯಮಗಳಿಗೆ ನೀಡಿದ್ದಾರೆ.

ಅಮೆರಿಕದ ಅಧ್ಯಕ್ಷರ ಚುನಾವಣೆ ಸಂದರ್ಭದಲ್ಲಿ ಒಂದು ಪಕ್ಷ/ನಾಯಕನ ಪರವಾಗಿ ಫೇಸ್‌ಬುಕ್ ಅನ್ನು ಬಳಸಿಕೊಳ್ಳಲಾಗಿದೆ. ಚುನಾವಣೆಗೆ ಫೇಸ್‌ಬುಕ್ ದುರ್ಬಳಕೆಯಾಗದಂತೆ ಫೇಸ್‌ಬುಕ್, ಮಾರ್ಗಸೂಚಿಗಳನ್ನು ಸಿದ್ಧಪಡಿಸಿತ್ತು. ಈ ಮಾರ್ಗಸೂಚಿಗಳಲ್ಲಿ

ಹಲವು ನ್ಯೂನತೆಗಳಿದ್ದವು. ಆ ನ್ಯೂನತೆಗಳನ್ನು ಬಳಸಿಕೊಂಡು, ಚುನಾವಣೆಯ ಫಲಿತಾಂಶದ ವಿರುದ್ಧ ಫೇಸ್‌ಬುಕ್ ಮೂಲಕ ಜನಾಭಿಪ್ರಾಯವನ್ನು ರೂಪಿಸಲಾಗಿತ್ತು. ಇದು ಗೊತ್ತಿದ್ದರೂ, ಫೇಸ್‌ಬುಕ್ ಯಾವುದನ್ನೂ ತಡೆಯಲಿಲ್ಲ ಎಂದು ಹಾಗನ್ ಹೇಳಿದ್ದಾರೆ.

‘ಚುನಾವಣೆಯಲ್ಲಿ ತಾವು ಸೋಲುತ್ತೇವೆ ಎಂದು ಗೊತ್ತಾದ ತಕ್ಷಣ ಅಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ‘ಮತ ಎಣಿಕೆಯಲ್ಲಿ ಮೋಸ ನಡೆಯುತ್ತಿದೆ. ಇದನ್ನು ತಡೆಯಬೇಕು’ ಎಂದು ಕರೆ ನೀಡಿದರು. ಇದಕ್ಕಾಗಿ ‘ಸ್ಟಾಪ್ ದಿ ಸ್ಟೀಲ್’ ಎಂಬ ಹ್ಯಾಷ್‌ಟ್ಯಾಗ್‌ನಲ್ಲಿ ಪೋಸ್ಟ್ ಮಾಡಿದರು. ಈ ಹ್ಯಾಷ್‌ಟ್ಯಾಗ್ ಅಡಿ ಸಾವಿರಾರು ಮಂದಿ ಪೋಸ್ಟ್ ಮಾಡಲು ಆರಂಭಿಸಿದರು. ಈ ಪೋಸ್ಟ್‌ಗಳಲ್ಲಿ ಸುಳ್ಳು ಸುದ್ದಿ ಹರಡಲಾಗುತ್ತಿತ್ತು. ಈ ಬಗ್ಗೆ ಫೇಸ್‌ಬುಕ್ ಸುಳ್ಳುಸುದ್ದಿ ತಡೆ ಘಟಕವು, ಎಚ್ಚರಿಕೆ ನೀಡಿತು. ಆದರೆ ಈ ಪೋಸ್ಟ್‌ಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಆ ಮೂಲಕ ಹಿಂಸಾಚಾರ ನಡೆಯಲು ಫೇಸ್‌ಬುಕ್ ಸಹ ಕಾರಣವಾಯಿತು. ಈ ಮೂಲಕ ಪ್ರಜಾಪ್ರಭುತ್ವಕ್ಕೆ ಮಾರಕವಾಗುವಂತೆ ಫೇಸ್‌ಬುಕ್ ನಡೆದುಕೊಂಡಿತು’ ಎಂದು ಹಾಗನ್ ಹೇಳಿದ್ದಾರೆ. ಅವರು ಬಿಡುಗಡೆ ಮಾಡಿರುವ ಫೇಸ್‌ಬುಕ್‌ನ ಆಂತರಿಕ ಪರಿಶೀಲನಾ ವರದಿಗಳ ಪ್ರತಿಗಳಲ್ಲೂ ಈ ಮಾಹಿತಿ ಇದೆ. ಸೆನೆಟ್ ಎದುರು ನೀಡಿರುವ ಸಾಕ್ಷ್ಯ ಹೇಳಿಕೆಯಲ್ಲೂ ಅವರು ಈ ಮಾಹಿತಿ ನೀಡಿದ್ದಾರೆ.

‘ದ್ವೇಷ, ಹಿಂಸಾಚಾರವನ್ನು ಪ್ರಚೋದಿಸುವ ಪೋಸ್ಟ್‌ಗಳು ಮತ್ತು ಸುಳ್ಳು ಸುದ್ದಿಗಳು ಹೆಚ್ಚಿನ ಅವಧಿಯವರೆಗೆ ಚಾಲ್ತಿಯಲ್ಲಿ ಇರುತ್ತವೆ. ಅವು ಹೆಚ್ಚು ಚಾಲ್ತಿಯಲ್ಲಿ ಇರುವ ಕಾರಣ ಫೇಸ್‌ಬುಕ್‌ಗೆ ಜಾಹೀರಾತು ಮೂಲದ ಆದಾಯ ಹೆಚ್ಚಾಗುತ್ತದೆ. ಇದೇ ಕಾರಣದಿಂದ ದ್ವೇಷ, ಹಿಂಸಾಚಾರವನ್ನು ಪ್ರಚೋದಿಸುವ ಮತ್ತು ಸುಳ್ಳು ಸುದ್ದಿಗಳನ್ನು ಹರಡುವ ಪೋಸ್ಟ್‌ಗಳು ಮತ್ತು ಖಾತೆಗಳ ವಿರುದ್ಧ ಫೇಸ್‌ಬುಕ್ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ಆ ಮೂಲಕ ಫೇಸ್‌ಬುಕ್ ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಿದೆ’ ಎಂದು ಹಾಗನ್ ಆರೋಪಿಸಿದ್ದಾರೆ.

ದ್ವೇಷ ತಡೆ: ಭಾರತೀಯ ಭಾಷೆ ಬಲ್ಲವರಿಲ್ಲ

‘ಆರ್‌ಎಸ್‌ಎಸ್‌ಗೆ ಸಂಬಂಧಿಸಿದ ಬಳಕೆದಾರರು, ಗುಂಪುಗಳು ಮತ್ತು ಪುಟಗಳು ಜನರಲ್ಲಿ ಭೀತಿ ಹುಟ್ಟಿಸುತ್ತಿವೆ ಹಾಗೂ ಮುಸ್ಲಿಂ ವಿರೋಧಿ ಕಥನಗಳನ್ನು ಹರಡುತ್ತಿವೆ ಎಂಬುದರ ಅರಿವು ಇದ್ದರೂ ಅದರ ವಿರುದ್ಧ ಕ್ರಮ ಕೈಗೊಳ್ಳಲು ಅಥವಾ ಅಂತಹ ಕಂಟೆಂಟ್ ಅನ್ನು ತಡೆಯಲು ಫೇಸ್‌ಬುಕ್ ಯಾವ ಕ್ರಮವನ್ನೂ ಕೈಗೊಂಡಿಲ್ಲ’ ಎಂದು ಫ್ರಾನ್ಸಿಸ್ ಹಾಗನ್ ಅವರು ಅಮೆರಿಕದಲ್ಲಿ (ಸೆಕ್ಯುರಿಟೀಸ್ ಎಂಡ್ ಎಕ್ಸ್‌ಚೇಂಜ್ ಕಮಿಷನ್) ನೀಡಿದ ದೂರಿನಲ್ಲಿ ವಿವರಿಸಿದ್ದಾರೆ ಎಂದು ಮಾಧ್ಯಮದಲ್ಲಿ ವರದಿಯಾಗಿದೆ. ಹಿಂದಿ ಮತ್ತು ಬಂಗಾಳಿ ಭಾಷೆಯಲ್ಲಿನ ದ್ವೇಷದ ಕಂಟೆಂಟ್‌ಗಳನ್ನು ವರ್ಗೀಕರಿಸುವ ಸಾಮರ್ಥ್ಯದ ಕೊರತೆಯೂ ಇದಕ್ಕೆ ಒಂದು ಕಾರಣ ಎಂದು ಅವರು ಆರೋಪಿಸಿದ್ದಾರೆ.

ಫೇಸ್‌ಬುಕ್‌ಗೆ ಭಾಷೆಗಳ ವಿಷಯದಲ್ಲಿ ಇರುವ ಅಸಾಮರ್ಥ್ಯವು ಜಾಗತಿಕ ಮಟ್ಟದಲ್ಲಿ ತಪ್ಪು ಮಾಹಿತಿ ಹರಡುವಿಕೆ ಹಾಗೂ ಜನಾಂಗೀಯ ಹಿಂಸೆಗೆ ಕಾರಣವಾಗಿದೆ ಎಂಬುದು ಹಾಗನ್ ಅವರ ಆರೋಪಗಳಲ್ಲಿ ಮುಖ್ಯವಾದುದು.

ಫೇಸ್‌ಬುಕ್‌ನಲ್ಲಿ ಭಾರತೀಯ ಭಾಷೆಗಳನ್ನು ಬಲ್ಲ ಸಿಬ್ಬಂದಿಯ ಕೊರತೆ ತೀವ್ರವಾಗಿರುವುದರಿಂದ ದ್ವೇಷ ಭಾಷಣಗಳು ಯಾವುದೇ ಪರಿಶೀಲನೆ ಇಲ್ಲದೆಯೇ ಪ್ರಕಟವಾಗುತ್ತವೆ. ಒಬ್ಬರೇ ಬಳಕೆದಾರರು ಹಲವು ಖಾತೆಗಳನ್ನು ನಿರ್ವಹಿಸುವ ಮಾದರಿಯನ್ನು ಬಿಜೆಪಿ ಬಳಸುತ್ತಿದೆ. ಈ ಖಾತೆಗಳ ಮೂಲಕ ಪ್ರಚಾರ ನಡೆಸಲಾಗುತ್ತದೆ. ಇದು ನೆರೆಯ ಬಾಂಗ್ಲಾದೇಶದಲ್ಲಿಯೂ ಸಮಸ್ಯೆಗೆ ಕಾರಣವಾಗಿದೆ ಎಂದು ಎಂದು ಹಾಗನ್ ಆರೋಪಿಸಿದ್ದಾರೆ. ಈ ಯಾವುದೇ ಆರೋಪದ ಬಗ್ಗೆ ಆರ್‌ಎಸ್‌ಎಸ್ ಅಥವಾ ಬಿಜೆಪಿಯಿಂದ ಪ್ರತಿಕ್ರಿಯೆ ಬಂದಿಲ್ಲ.

ಅಡ್ವರ್ಸರಿಯಲ್ ಹಾರ್ಮ್‌ಫುಲ್ ನೆಟ್‌ವರ್ಕ್ಸ್– ಇಂಡಿಯಾ ಕೇಸ್ ಸ್ಟಡಿ (ಪ್ರತಿಕೂಲ ತೊಂದರೆದಾಯಕ ಜಾಲಗಳು– ಭಾರತದ ಪ್ರಕರಣ ಅಧ್ಯಯನ) ಎಂಬ ಫೇಸ್‌ಬುಕ್‌ನ ಸೋರಿಕೆಯಾದ ದಾಖಲೆಯನ್ನು ಎಸ್‌ಇಸಿಗೆ ಸಲ್ಲಿಸಿದ ದೂರಿನಲ್ಲಿ ಉಲ್ಲೇಖಿಸಲಾಗಿದೆ ಎಂದು ಸಿಬಿಎಸ್ ನ್ಯೂಸ್ ವೆಬ್‌ಸೈಟ್ ಹೇಳಿದೆ.

ಅತಿ ಹೆಚ್ಚು ಜನರು ನೋಡಿದ್ದಾರೆ ಎಂದು ಹೇಳಲಾಗುವ ಪೋಸ್ಟ್‌ಗಳು ನಕಲಿ ಎಂದು ಫೇಸ್‌ಬುಕ್‌ನ ಆಂತರಿಕ ಸಮೀಕ್ಷೆಯೊಂದನ್ನು ಉಲ್ಲೇಖಿಸಿ ಹಾಗನ್ ಹೇಳಿದ್ದಾರೆ. ಈ ಸಮೀಕ್ಷೆಯು ಯಾವಾಗ ನಡೆಸಿದ್ದು ಎಂಬ ವಿವರಗಳು ಇಲ್ಲ.

ನೀತಿಗೆ ಸಂಬಂಧಿಸಿದ ವಿಚಾರಗಳಲ್ಲಿ ಫೇಸ್‌ಬುಕ್‌ನ ಗರಿಷ್ಠ ಆದ್ಯತೆಯ ದೇಶಗಳಲ್ಲಿ ಭಾರತವೂ ಇದೆ ಎಂದು ಸಂಸ್ಥೆಯು ಹೇಳಿಕೊಳ್ಳುತ್ತಿದೆ. ಫೇಸ್‌ಬುಕ್‌ನ ಮೂಲಕ ತಪ್ಪು ಮಾಹಿತಿ, ಸುಳ್ಳು ಮಾಹಿತಿ ಮತ್ತು ದ್ವೇಷ ಹರಡುವ ಮಾಹಿತಿಯನ್ನು ಪತ್ತೆ ಮಾಡಿ ಅಳಿಸಿ ಹಾಕುವುದಕ್ಕಾಗಿ ದೊಡ್ಡ ಮೊತ್ತವನ್ನು ಸಂಸ್ಥೆಯು ವ್ಯಯ ಮಾಡುತ್ತಿದೆ. ಆದರೆ, ಈ ವಿಚಾರದಲ್ಲಿ ಭಾರತಕ್ಕೆ ಆದ್ಯತೆ ಇಲ್ಲ. ಇದಕ್ಕಾಗಿ ಇರಿಸಲಾದ ಮೊತ್ತದಲ್ಲಿ ಶೇ 83ರಷ್ಟನ್ನು ಅಮೆರಿಕಕ್ಕೆ ಮೀಸಲು ಇರಿಸಲಾಗಿದೆ ಎಂದು ಕಳೆದ ವರ್ಷ ಸೋರಿಕೆಯಾದ ಮಾಹಿತಿಯೊಂದು ಹೇಳಿತ್ತು.

‘ಆರೋಪವು ತರ್ಕಹೀನ’

ಫ್ರಾನ್ಸಿಸ್ ಹಾಗನ್ ಅವರು ಮಾಡಿರುವ ಆರೋಪಗಳನ್ನು ಫೇಸ್‌ಬುಕ್ ವಕ್ತಾರೆ ಲೀನಾ ಪೀಟ್ಸ್ ತಳ್ಳಿಹಾಕಿದ್ದಾರೆ. ತಪ್ಪು ಮಾಹಿತಿ ಮತ್ತು ಅಪಾಯಕಾರಿ ವಿಷಯ ಹರಡುವುದನ್ನು ತಡೆಯಲು ಸುಧಾರಣೆಗಳನ್ನು ಕಂಪನಿ ತಂದಿದೆ ಎಂದಿದ್ದಾರೆ.

‘ಪ್ರತಿದಿನ ಕೋಟ್ಯಂತರ ಜನರು ನಮ್ಮ ವೇದಿಕೆ ಮೂಲಕ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾರೆ. ಅವರು ಮುಕ್ತವಾಗಿ ಅನಿಸಿಕೆ ವ್ಯಕ್ತಪಡಿಸುವ ನಿಟ್ಟಿನಲ್ಲಿ ನಮ್ಮ ವೇದಿಕೆಯನ್ನು ಸುರಕ್ಷಿತವಾದ ಮತ್ತು ಧನಾತ್ಮಕ ವೇದಿಕೆಯನ್ನಾಗಿ ಇರಿಸಲು ನಮ್ಮ ಸಿಬ್ಬಂದಿ ತಂಡಗಳು ಶ್ರಮಿಸುತ್ತಿವೆ. ಹಾನಿಕಾರಕ ವಿಷಯ ಅಥವಾ ವಸ್ತುವನ್ನು ನಾವು ಬೆಂಬಲಿಸುತ್ತೇವೆ ಮತ್ತು ಅದರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂಬುದು ಸುಳ್ಳು’ ಎಂದಿದ್ದಾರೆ.

ನಮ್ಮ ಸಂಸ್ಥೆ ಕುರಿತು ತಪ್ಪು ಅಭಿಪ್ರಾಯ ಬರುವಂತೆ ಮಾಡಲು ಹಾಗನ್ ಹೀಗೆ ಹೇಳಿದ್ದಾರೆ. ನಮ್ಮ ಸಂಸ್ಥೆಯ ಉತ್ಪನ್ನವನ್ನು ಅಭಿವೃದ್ಧಿಪಡಿಸಲು ನಾವು ಯಾವುದೇ ರೀತಿಯ ಸಂಶೋಧನೆಗಳನ್ನು ಮಾಡುತ್ತಿಲ್ಲ ಎಂದು ಬಿಂಬಿಸಲಾಗಿದೆ ಎಂದಿದ್ದಾರೆ.

ಜುಕರ್‌ಬರ್ಗ್ ಪ್ರತಿಕ್ರಿಯೆ: ಫೇಸ್‌ಬುಕ್ ಸಂಸ್ಥಾಪಕ ಮಾರ್ಕ್ ಜುಕರ್‌ಬರ್ಗ್ ಕೂಡಾ ಈ ಆರೋಪಗಳಿಗೆ ಪ್ರತಿಕ್ರಿಯಿಸಿದ್ದಾರೆ. ನಮಗೆ ಜಾಹೀರಾತುಗಳಿಂದ ಆದಾಯ ಬರುತ್ತದೆ. ದ್ವೇಷಪೂರಿತ ಅಥವಾ ಹಾನಿಕಾರಕ ವಿಷಯದ ಜೊತೆ ನಮ್ಮ ಜಾಹೀರಾತನ್ನು ಹಾಕುವುದು ಬೇಡವೆಂದು ಜಾಹೀರಾತುದಾರರೇ ಹೇಳುತ್ತಾರೆ. ಹಾನಿಕಾರಕ ವಿಷಯಗಳಿಂದ ಲಾಭ ಮಾಡುತ್ತೇವೆ ಎಂಬುದು ತರ್ಕಹೀನ ಆರೋಪವಾಗಿದೆ ಎಂದಿದ್ದಾರೆ.

ಜುಕರ್‌ಬರ್ಗ್

ತಪ್ಪು ಮಾಹಿತಿ ವಿರುದ್ಧದ ದನಿ

ಫ್ರಾನ್ಸಿಸ್ ಹಾಗನ್, ಅಮೆರಿಕದ ಒಬ್ಬ ಡೇಟಾ ಎಂಜಿನಿಯರ್ ಹಾಗೂ ವಿಜ್ಞಾನಿ. ಫೇಸ್‌ಬುಕ್‌ನ ಮಾಜಿ ಉದ್ಯೋಗಿ. ಹಗರಣಗಳನ್ನು ಹೊರಗೆಳೆಯುವ ವಿಷಲ್ ಬ್ಲೋವರ್ ಕೂಡ ಹೌದು. ಫೇಸ್‌ಬುಕ್‌ನ 10 ಸಾವಿರಕ್ಕೂ ಹೆಚ್ಚು ಆಂತರಿಕ ಭದ್ರತೆಯ ದಾಖಲೆಗಳನ್ನು ಬಹಿರಂಗ ಮಾಡಿರುವ ಅವರು, ವಾಲ್‌ಸ್ಟ್ರೀಟ್ ಜರ್ನಲ್ ಪತ್ರಿಕೆಯೊಂದಿಗೆ ಹಂಚಿಕೊಂಡಿದ್ದಾರೆ. ಅದರ ಪರಿಣಾಮವಾಗಿ ಆ ಪತ್ರಿಕೆಯಲ್ಲಿ ಫೇಸ್‌ಬುಕ್ ವಿರುದ್ಧ ‘ಫೇಸ್‌ಬುಕ್ ಫೈಲ್ಸ್’ ಹೆಸರಿನಲ್ಲಿ ಸರಣಿ ವರದಿಗಳು ಪ್ರಕಟವಾದವು.

ಮೊದಲು ‘ವಿಷಲ್ ಬ್ಲೋವರ್’ ಹೆಸರಿನಲ್ಲಿ ಅನಾಮಧೇಯವಾಗಿದ್ದ ಹಾಗನ್, ಅಕ್ಟೋಬರ್ ಆರಂಭದಲ್ಲಿ ತಮ್ಮ ಗುರುತನ್ನು ಬಹಿರಂಗಪಡಿಸಿದ್ದರು.

37 ವರ್ಷದ ಹಾಗನ್, ಫೇಸ್‌ಬುಕ್‌ನಲ್ಲಿ ಎರಡು ವರ್ಷ ಪ್ರಾಡಕ್ಟ್ ಮ್ಯಾನೇಜರ್ ಆಗಿ ಕೆಲಸ ಮಾಡಿದ್ದರು. ಫೇಸ್‌ಬುಕ್ ವೇದಿಕೆಯ ಮೂಲಕ ತಪ್ಪು ಮಾಹಿತಿ ಹರಡುವುದನ್ನು ತಡೆಯುವುದು ಹಾಗೂ ಪ್ರಜಾಪ್ರಭುತ್ವ ವಿರೋಧಿ ಕೆಲಸಕ್ಕೆ ಈ ವೇದಿಕೆಯು ಬಳಕೆಯಾಗದಂತೆ ನೋಡಿಕೊಳ್ಳುವುದು ಅವರ ಕೆಲಸವಾಗಿತ್ತು.

ಹಾರ್ವರ್ಡ್ ವಿಶ್ವವಿದ್ಯಾಲಯದ ಪದವೀಧರೆಯಾಗಿರುವ ಹಾಗನ್‌ಗೆ, ಇದಕ್ಕೂ ಮುನ್ನ ಗೂಗಲ್, ಯೆಲ್ಪ್ ಸೇರಿದಂತೆ ಹಲವು ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಮಾಡಿದ ಅನುಭವವಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ತಪ್ಪು ಮಾಹಿತಿ ಹರಡುವುದರ ವಿರುದ್ಧ ದನಿ ಎತ್ತುವುದು ತಮಗೆ ಯಾವಾಗಲೂ ಆಸ್ಥೆಯ ವಿಷಯವಾಗಿತ್ತು ಎಂದು ಅವರು ವಾಲ್‌ಸ್ಟ್ರೀಟ್ ಜರ್ನಲ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ.

2018ರಲ್ಲಿ ಫೇಸ್‌ಬುಕ್ ಅವರನ್ನು ಸಂಪರ್ಕಿಸಿದಾಗ, ಅವರು ತಮ್ಮ ಇಷ್ಟದ ವಿಭಾಗ ಯಾವುದು ಎಂಬುದನ್ನು ಹೇಳಿದ್ದರು. 2019ರಲ್ಲಿ, ಕೆಲಸಕ್ಕೆ ಸೇರಿದಾಗ ಕಂಪನಿಯ ‘ನಾಗರಿಕ ಬದ್ಧತೆ’ಯ ತಂಡದಲ್ಲಿ ಕಾರ್ಯ ಆರಂಭಿಸಿದರು. ಅದು ಚುನಾವಣಾ ಹಸ್ತಕ್ಷೇಪವನ್ನು ನೋಡಿಕೊಳ್ಳುವ ವಿಭಾಗವಾಗಿತ್ತು. ಆದರೆ, 2020ರಲ್ಲಿ ನಡೆದ ಅಮೆರಿಕದ ಅಧ್ಯಕ್ಷರ ಚುನಾವಣೆ ಮುಗಿದ ಬಳಿಕ ಆ ವಿಭಾಗವು ವಿಸರ್ಜನೆಯಾಯಿತು. ಇದರಿಂದಾಗಿ, ಫೇಸ್‌ಬುಕ್ ಮೇಲೆ ತಮಗಿದ್ದ ವಿಶ್ವಾಸ ಕಡಿಮೆಯಾಯಿತು. ಅಲ್ಲದೇ ಕಂಪನಿಯು, ತಪ್ಪು ಮಾಹಿತಿ ಹರಡುವಿಕೆಯನ್ನು ತಡೆಯುವಲ್ಲಿ ಹೆಚ್ಚಿನ ಪ್ರಯತ್ನ ಮಾಡುತ್ತಿಲ್ಲ ಎಂದು ಸಿಬಿಎಸ್ ನ್ಯೂಸ್‌ನ ‘60 ಮಿನಿಟ್ಸ್’ ಕಾರ್ಯಕ್ರಮಕ್ಕೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಅಮೆರಿಕದ ಅಧ್ಯಕ್ಷರ ಚುನಾವಣೆಯ ಬಳಿಕ, ಫೇಸ್‌ಬುಕ್ ಸುರಕ್ಷತಾ ಕ್ರಮಗಳನ್ನು ತೆಗೆದುಹಾಕಿತ್ತು. ಹೀಗಾಗಿ ಜ.6ರಂದು ನಡೆದ ಗಲಭೆಗೆ ಫೇಸ್‌ಬುಕ್ ಅನ್ನು ಬಳಸಿಕೊಳ್ಳಲಾಗಿತ್ತು ಎಂಬುದು ಅವರ ಆರೋಪಗಳಲ್ಲೊಂದು.

ಸಾರ್ವಜನಿಕರು ಹಾಗೂ ಹೂಡಿಕೆದಾರರಿಂದ ಬಂದ ಪ್ರತಿಕ್ರಿಯೆಗಳನ್ನು ಫೇಸ್‌ಬುಕ್ ಬಹಿರಂಗಪಡಿಸುತ್ತಿಲ್ಲ ಎಂದೂ ಹೇಳಿದ್ದಾರೆ. ತಪ್ಪು ಮಾಹಿತಿ ಹರಡುವಿಕೆಯಿಂದ ಮುಖ್ಯವಾಗಿ ಹದಿಹರೆಯದ ಹೆಣ್ಣುಮಕ್ಕಳ ಮೇಲಾಗುತ್ತಿರುವ ಪರಿಣಾಮಗಳ ಬಗ್ಗೆ ಅರಿವಿದ್ದರೂ ಅದರ ನಿಯಂತ್ರಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ ಎಂಬುದು ಅವರ ದೂರು ಮತ್ತು ಆತಂಕ.



ಹಾಗನ್

ಪ್ರಿಯಾಂಕಾ ಅವರು ಉತ್ತರ ಪ್ರದೇಶದ ಬಾರಾಬಂಕಿಯಲ್ಲಿ ಹೊಲದಲ್ಲಿಯೇ ರೈತ ಮಹಿಳೆಯರ ಜತೆಗೆ ಸಂವಾದ ನಡೆಸಿದರು –ಪಿಟಿಐ ಚಿತ್ರ

ಕಾಂಗ್ರೆಸ್ ಭರವಸೆ ಪಕ್ಷಗಳಿಗೆ ಫಜೀತಿ

ಪ್ರಜಾವಾಣಿ ವಾರ್ತೆ

ಲಖನೌ: ಮುಂದಿನ ವರ್ಷಾರಂಭದಲ್ಲಿ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶದಲ್ಲಿ ಕೃಷಿ ಸಾಲ ಮನ್ನಾ, ವಿದ್ಯುತ್ ಶುಲ್ಕ ಕಡಿತ, ಸರ್ಕಾರಿ ಉದ್ಯೋಗ, ಕೋವಿಡ್ ಸಂಕಷ್ಟದ ಸಮಯದಲ್ಲಿ ಆರ್ಥಿಕ ಬಿಕ್ಕಟ್ಟು ಎದುರಿಸಿದವರಿಗೆ ಹಣಕಾಸು ಸಹಾಯದಂಥ ಭರವಸೆಗಳನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ನೀಡುತ್ತಿರುವುದು ಇತರ ಪಕ್ಷಗಳನ್ನು ಫಜೀತಿಗೆ ಕೆಡವಿದೆ. ಈಗ ಅವುಗಳಿಗೂ ತಮ್ಮ ಚುನಾವಣಾ ಕಾರ್ಯತಂತ್ರವನ್ನು ಮರುಪರಿಶೀಲಿಸುವ ಅನಿವಾರ್ಯ ಎದುರಾಗಿದೆ.

ಪ್ರಿಯಾಂಕಾ ಅವರ ಭರವಸೆಗಳನ್ನು ‘ಚುನಾವಣಾ ತಂತ್ರ’ ಎಂದು ಬಿಜೆಪಿ ಟೀಕಿಸಿದೆ. ಅದೇ ವೇಳೆಗೆ, ಪ್ರಿಯಾಂಕಾ ಅವರನ್ನು ಎದುರಿಸುವುದಕ್ಕಾಗಿ ರಾಜ್ಯ ಸರ್ಕಾರದ ಸಾಧನೆಗಳ ದಾಖಲೆಗಳನ್ನು ಒಳಗೊಂಡ ಕಡತ ಸಿದ್ಧಪಡಿಸುತ್ತಿದೆ.

ತಮ್ಮ ಸರ್ಕಾರದ ಈ ನಾಲ್ಕೂವರೆ ವರ್ಷಗಳ ಅವಧಿಯಲ್ಲಿ ಒದಗಿಸಿದ ಸರ್ಕಾರಿ ಉದ್ಯೋಗಗಳ ಸಂಖ್ಯೆ, ರೈತರು ಹಾಗೂ ಮಹಿಳೆಯರಿಗೆ ಅನುಕೂಲವಾಗುವ ದಿಸೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಸದ್ಯದಲ್ಲೇ ವಿವರ ಮಾಹಿತಿ ನೀಡುವುದಾಗಿ ಬಿಜೆಪಿಯ ಹಿರಿಯ ನಾಯಕರೊಬ್ಬರು ಭಾನುವಾರ ತಿಳಿಸಿದರು.

ಮುಂಬರುವ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಟಿಕೆಟ್ ಹಂಚಿಕೆಯಲ್ಲಿ ಬಿಜೆಪಿ ಕೂಡ ಮಹಿಳೆಯರಿಗೆ ಮೀಸಲಾತಿ ನಿಗದಿ ಮಾಡಲಿದೆಯೇ ಎಂಬ ಪ್ರಶ್ನೆಗೆ, ಬಿಜೆಪಿಯು ಯಾವಾಗಲೂ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಿದೆ ಎಂದಷ್ಟೇ ಹೇಳಿದರು.

ಕಾಂಗ್ರೆಸ್ ನೀಡಿರುವ ಭರವಸೆಗಳ ಬಗ್ಗೆ ಸಮಾಜವಾದಿ ಪಕ್ಷ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಆ ಪಕ್ಷ ಕೂಡ ರೈತರ ಸಾಲ ಮನ್ನಾ, ವಿದ್ಯುತ್ ಶುಲ್ಕ ಕಡಿತ ಹಾಗೂ ಕೋವಿಡ್ ಸಾಂಕ್ರಾಮಿಕ ಸಂದರ್ಭದಲ್ಲಿ ಆರ್ಥಿಕ ಬಿಕ್ಕಟ್ಟು ಎದುರಿಸಿದ ಕುಟುಂಬದವರಿಗೆ ಹಣಕಾಸು ನೆರವು ನೀಡುವುದಕ್ಕೆ ಸಂಬಂಧಿಸಿದ ವಿಷಯಗಳನ್ನು ತನ್ನ ಪ್ರಣಾಳಿಕೆಯಲ್ಲಿ ಸೇರಿಸಿಕೊಳ್ಳುವುದರ ಬಗ್ಗೆ ಚಿಂತನೆ ನಡೆಸಿದೆ.

ಇನ್ನಷ್ಟು ಭರವಸೆಗಳು

ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆ ಅಂತಿಮ ಹಂತದಲ್ಲಿದ್ದು, ಇನ್ನಷ್ಟು ಘೋಷಣೆ, ಭರವಸೆಗಳು ಸೇರ್ಪಡೆಯಾಗುವ ಸಾಧ್ಯತೆ ಇದೆ ಎಂದು ಉತ್ತರ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಅನಿಲ್ ಕುಮಾರ್ ಲಲ್ಲು ಹೇಳಿದ್ದಾರೆ. ‘ಅವು ಬರೀ ಭರವಸೆಗಳಲ್ಲ. ನಮ್ಮ ವಚನಗಳು. ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ, ಅವುಗಳನ್ನು ಈಡೇರಿಸಲು ನಾವು ಬದ್ಧವಾಗಿದ್ದೇವೆ’ ಎಂದು ಅವರು ತಿಳಿಸಿದರು.

ರೈತರ ಸಾಲ ಮನ್ನಾ, ರಾಜ್ಯದ 20 ಲಕ್ಷ ಜನರಿಗೆ ಸರ್ಕಾರಿ ಉದ್ಯೋಗ, ವಿದ್ಯುತ್ ಶುಲ್ಕದಲ್ಲಿ ಅರ್ಧದಷ್ಟು ಇಳಿಕೆ, ಭತ್ತ, ಗೋಧಿ ಹಾಗೂ ಕಬ್ಬು ಬೆಳೆಯ ಕನಿಷ್ಠ ಬೆಂಬಲ ಬೆಲೆಯಲ್ಲಿ ಶೇ 40ರಷ್ಟು ಹೆಚ್ಚಳ ಹಾಗೂ ಬರಲಿರುವ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮಹಿಳೆಯರಿಗೆ ಶೇ 40ರಷ್ಟು ಟಿಕೆಟ್ ಮೀಸಲಿಡುವುದಾಗಿ ಪ್ರಿಯಾಂಕಾ ಭರವಸೆ ನೀಡಿದ್ದಾರೆ. ಇದರೊಂದಿಗೆ 12ನೇ ತರಗತಿ ಉತ್ತೀರ್ಣರಾದ ಬಾಲಕಿಯರಿಗೆ ಸ್ಮಾರ್ಟ್‌ಫೋನ್ ಹಾಗೂ ಪದವೀಧರೆಯರಿಗೆ ಎಲೆಕ್ಟ್ರಿಕ್ ಸ್ಕೂಟರ್ ನೀಡುವುದಾಗಿಯೂ ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪ್ರವಾಹದಲ್ಲಿ ಗ್ಯಾಸ್ ಸಿಲಿಂಡರ್‌ಗಳು ಕೊಚ್ಚಿಕೊಂಡು ಹೋಗುತ್ತಿರುವ ಫೋಟೊ ಮತ್ತು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಕಳೆದ ವಾರದಿಂದ ಉತ್ತರಾಖಂಡದಲ್ಲಿ ಭಾರಿ ಮಳೆ ಸುರಿಯುತ್ತಿದೆ. ಮಳೆಯಿಂದ ಅಲ್ಲಿಯ ಕಾಶಿಪುರ ನಗರದ ಗ್ಯಾಸ್ ಸಿಲಿಂಡರ್ ಘಟಕ ಕೊಚ್ಚಿ ಹೋಗಿದೆ ಎಂದು ಸುದ್ದಿಯಾಗುತ್ತಿದೆ. ಹಲವಾರು ಯುಟ್ಯೂಬ್ ಚಾನಲ್‌ಗಳ ಕೂಡಾ ಅ.20ರಿಂದ ಈ ವಿಡಿಯೊವನ್ನು ಅಪ್‌ಲೋಡ್ ಮಾಡುತ್ತಿವೆ. ಉತ್ತರಾಖಂಡದ ದುರಂತ ಎಂಬಂತೆ ಈ ವಿಡಿಯೊವನ್ನು ಬಿಂಬಿಸುತ್ತಿವೆ.

ಈ ವಿಡಿಯೊ ಜೊತೆಗೆ ನೀಡಲಾಗುತ್ತಿರುವ ಮಾಹಿತಿ ಸುಳ್ಳು ಎಂದು ಲಾಜಿಕಲ್ ಇಂಡಿಯನ್ ವರದಿ ಮಾಡಿದೆ. ಇದು ಹಳೆಯ ವಿಡಿಯೊ. ಮಧ್ಯಪ್ರದೇಶದ ಗುನಾ ನಗರದಲ್ಲಿ 2021ರ ಆಗಸ್ಟ್‌ನಲ್ಲಿ ಈ ವಿಡಿಯೊ ಸೆರೆಹಿಡಿಯಲಾಗಿದೆ. ಮಧ್ಯಪ್ರದೇಶದ ಪ್ರವಾಹ ಕುರಿತು ವರದಿ ಮಾಡಿರುವ ಪತ್ರಿಕೆಗಳು ಈ ಫೋಟೊ ಮತ್ತು ವಿಡಿಯೊವನ್ನು ಪ್ರಕಟಿಸಿವೆ. ಗ್ಯಾಸ್ ಸಿಲಿಂಡರ್‌ಗಳು ಕೊಚ್ಚಿ ಹೋಗುತ್ತಿರುವುದನ್ನು ಜನರು ದಡಗಳ ಮೇಲೆ ನಿಂತು ಅಸಹಾಯಕರಾಗಿ ನೋಡುತ್ತಿದ್ದ ಕುರಿತೂ ಪತ್ರಿಕೆಗಳಲ್ಲಿ ವರದಿಯಾಗಿದೆ ಎಂದು ಲಾಜಿಕಲ್ ಇಂಡಿಯನ್ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಜಾಣತನದ ಬದುಕು

ಗುಹೆಯೆಡಕೆ, ಗುಹೆ ಬಲಕೆ, ನಡುವೆ ಮಲೆ;
ಕಣಿವೆಯಲಿ|
ವಿಹರಿಪೆಯ ಹುಲಿ ಬಾರದೆಂದು ನೀಂ ನಚ್ಚಿ ?||
ರಹಸಿಯದ ಭೂತ ಪಿಡಿಯದ ತೆರದಿ ಬದುಕ ನಿ -|
ರ್ವಹಿಸುವುದೆ ಜಾಣ್ಮೆಯಲ - ಮಂಕುತಿಮ್ಮ
||482||

ಪದ-ಅರ್ಥ: ಗುಹೆಯೆಡಕೆ = ಗುಹೆ + ಎಡಕೆ, ಮಲೆ = ಬೆಟ್ಟ, ನಚ್ಚಿ = ನಂಬಿ, ರಹಸಿಯದ = ರಹಸ್ಯದ, ತೆರದಿ = ರೀತಿ.

ವಾಚ್ಯಾರ್ಥ: ಎಡಕೆ, ಬಲಕೆ ಗುಹೆಗಳು, ನಡುವೆ ಬೆಟ್ಟದ ದಾರಿ. ಹುಲಿ ಬರುವುದಿಲ್ಲವೆಂದು ನಂಬಿ ನೀನು ಆ ಕಣಿವೆಯಲ್ಲಿ ವಿಹಾರ ಮಾಡುತ್ತೀಯಾ? ರಹಸ್ಯದ ಭೂತ ಹಿಡಿಯಲಾರದಂತೆ ಬದುಕನ್ನು ನಡೆಯಿಸುವುದೆ ಜಾಣತನ.

ವಿವರಣೆ: ನಾಲ್ಕೇ ನಾಲ್ಕು ಸಾಲುಗಳಲ್ಲಿ ಅತ್ಯಂತ ಆಳದ ಚಿಂತನೆಗಳನ್ನು ಕಟ್ಟಿಡುವುದು ಡಿವಿಜಿ ಅವರಿಗೆ ಮಾತ್ರ ಸಾಧ್ಯವಾದ ಅದ್ಭುತ ಶಕ್ತಿ. ತಮ್ಮ ಅಪಾರ ಓದು, ಜೀವನಾನುಭವ, ಶಾಸ್ತ್ರಾಧ್ಯಯನದಲ್ಲಿ ಕಂಡಿದ್ದ ಸತ್ಯಗಳನ್ನು ಬಿಗಿಯಾದ ಬಂಧದಲ್ಲಿ, ಚೌಪದಿಯಲ್ಲಿ ನಮಗೆ ನೀಡಿದ್ದೊಂದು ವಿಸ್ಮಯ. ಆ ಚೌಪದಿಗಳು ಸಮುದ್ರವಿದ್ದಂತೆ. ದೂರದಿಂದ ನೋಡಿದರೆ ತೆರೆಗಳು ಮಾತ್ರ ಕಂಡಾವು. ಆಳಕ್ಕಿಳಿದರೆ ಅನಘ್ರ್ಯ ವಸ್ತುಗಳು ದೊರೆಯುತ್ತವೆ. ನಮ್ಮ ತಿಳುವಳಿಕೆಯ ಮಿತಿಗಳಲ್ಲಿ ಅವುಗಳನ್ನು ಅರಿಯುವುದು ನಮಗೇ ಕ್ಷೇಮ. ಪ್ರಸ್ತುತ ಕಗ್ಗವೂ ಹಾಗೆ ಎರಡು ಸ್ತರಗಳಲ್ಲಿ ಕೆಲಸ ಮಾಡುತ್ತದೆ. ಮೇಲ್ನೋಟದ ಅರ್ಥ ಸುಲಭ. ಬೆಟ್ಟದ ಎರಡು ಬದಿಗೂ ಗುಹೆಗಳಿವೆ. ಅಲ್ಲಿ ಹುಲಿಗಳು ಇವೆಯೆಂಬ ಸುದ್ದಿ ಜನಜನಿತ. ಕಣಿವೆಯಲ್ಲಿ ನಡೆಯುವಾಗ ಹುಲಿ ಬರುವುದಿಲ್ಲವೆಂದು ನಂಬಿ ನಡೆಯುವುದು ಸಾಧ್ಯವೆ? ಅಂತೆಯೇ ಯಾವ ಗುಹೆಯಲ್ಲಿ ಹುಲಿ ಇದೆಯೋ ಎಂದು ಸಂಶಯದ ಭೂತವನ್ನು ಹೊತ್ತು ನಡೆಯದೆ ಇರುವುದೂ ಸಾಧ್ಯವಲ್ಲವೆ? ಇವೆರಡನ್ನೂ ಅತಿಯಾಗಿ ನಂಬದೆ ಬದುಕು ಸಾಗಿಸುವುದೇ ಜಾಣತನ.

ಗುಹೆ ಎಂದರೆ ಗುಹ್ಯವಾದದ್ದು, ರಹಸ್ಯವಾದದ್ದು, ಮನುಷ್ಯನೊಬ್ಬ ಕಣಿವೆಯಲ್ಲಿ ಸಾಗುತ್ತಿದ್ದಾನೆ. ಕಣಿವೆ ಒಂದು ಇಕ್ಕಟ್ಟಾದ ದಾರಿ. ವಿಸ್ತಾರವಾದ ಜಾಗೆಯಲ್ಲಿ ಮನಸ್ಸೂ ವಿಸ್ತಾರವಾಗುತ್ತದೆ. ಇಕ್ಕಟ್ಟಾದ ಸ್ಥಳದಲ್ಲಿ ಮನಸ್ಸು ಬಿಗಿಯಾಗಿರುತ್ತದೆ, ಸ್ಪಷ್ಟವಾಗಿ ಚಿಂತಿಸದಂತಾಗುತ್ತದೆ. ಎಡಬಲದಲ್ಲಿ ಗುಹೆಗಳಿದ್ದರೂ ಅಲ್ಲಿ ಹುಲಿಗಳಿಲ್ಲ ಮತ್ತು ಅವು ತನ್ನ ಮೇಲೆ ದಾಳಿ ಮಾಡುವುದಿಲ್ಲವೆಂಬ ಹುಂಬ ಧೈರ್ಯ ಅವನಿಗೆ. ಇದು ಅತಿಯಾದ ಆತ್ಮವಿಶ್ವಾಸ. ಆತ್ಮವಿಶ್ವಾಸ ತುಂಬ ಒಳ್ಳೆಯದು ಆದರೆ ಅತಿಯಾದ ಆತ್ಮವಿಶ್ವಾಸ ಕಣ್ಣುಗಳನ್ನು ಕಟ್ಟುತ್ತದೆ. ಅತಿಯಾದ ವಿಶ್ವಾಸದಿಂದ ಅನಾಹುತಗಳಾದುದನ್ನು, ವ್ಯಕ್ತಿತ್ವಗಳು ಕುಸಿದದ್ದನ್ನು ಕಂಡಿದ್ದೇವೆ. ಕಗ್ಗದ ಮೂರನೆಯ ಸಾಲು ‘ರಹಸ್ಯದ ಭೂತ’ದ ಬಗ್ಗೆ ಹೇಳುತ್ತದೆ. ಅದು ಹಿಡಿಯಬಾರದಂತೆ ಇರಬೇಕು ಎನ್ನುತ್ತದೆ. ಈ ಗುಹೆಯಲ್ಲಿ ಹುಲಿ ಇರಬಹುದು, ಆ ಗುಹೆಯಲ್ಲಿ ಚಿರತೆ ಇದ್ದೀತು ಎಂದು ಹೆದರಿಕೆಯಿಂದ, ಸಂಶಯದಿಂದ ಜೀವಿ ಒದ್ದಾಡುತ್ತಾನೆ. ಯಾವ ಕಾರ್ಯಕ್ಕೆ ಹಾಕದಂತೆ ಸಂಶಯ ಅವನ ಕೈ ಕಟ್ಟಿ ಕೂಡ್ರಿಸುತ್ತದೆ. ಅತಿಯಾದ ಆತ್ಮವಿಶ್ವಾಸ ಬದುಕನ್ನು ಕೆಡಿಸುವಂತೆ, ಸಂಶಯವೂ ಬದುಕನ್ನು ಹದಗೆಡಿಸುತ್ತದೆ. ಸರಿಯಾಗಿ ನೋಡಿದರೆ ನಮಗೆ ನಂಬಿಕೆ ಮತ್ತು ಸಂಶಯಗಳು ಎರಡೂ ಇರಬೇಕು. ಸಂಶಯವಿಲ್ಲದೆ ಪ್ರಶ್ನೆಗಳಿಲ್ಲ, ಪ್ರಶ್ನೆಗಳಿಲ್ಲದೆ ಅರಿವಿಲ್ಲ. ಹಾಗೆಯೇ ನಂಬಿಕೆಯಿಲ್ಲದ ಬದುಕು, ಬೇರಿಲ್ಲದ ಮರದಂತೆ. ಅದು ದಂಡೆಗೆ ಕಟ್ಟದಿರುವ ದೋಣಿಯಂತೆ ಎತ್ತೆತ್ತಲೋ ಹೋಗಿಬಿಡುತ್ತದೆ. ಕಗ್ಗ ಹೇಳುವಂತೆ ಎರಡೂ ಅತಿಯಾಗದಂತೆ, ಎರಡನ್ನೂ ಸಮತೋಲನದಲ್ಲಿ ನಡೆಸಿದರೆ, ಅದು ಜಾಣತನ. ❖

ದಿನ ಭವಿಷ್ಯ

ಸೋಮವಾರ ಅಕ್ಟೋಬರ್ 25, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಸ್ವಾತಿ ಪಂಚಮೀ ಗಂ. 54-30 (ರಾ. 4-06) ಸೋಮವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 47-44 (ರಾ. 1-23) ಪರಿಘ ನಾಮ ಯೋಗ ಗಂ. 42-1 ಕೌಲವ ಕರಣ ಗಂ. 21-55 ವಿಷ ಶೇಷ ಗಂ. 1-17 ಅಮೃತ ಗಂ. 23-19 ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-14 ಸೂರ್ಯಾಸ್ತ: 5-53 ಅದೃಷ್ಟ ಸಂಖ್ಯೆ 2 3

ಮೇಷ: ಬಂಧುಮಿತ್ರರ ಆಗಮನದಿಂದ ಮನಸ್ಸಿಗೆ ನೆಮ್ಮದಿ. ಯೋಗಾಭ್ಯಾಸದ ಮೊರೆ ಹೋಗಬೇಕಾದೀತು. ದೀನರಿಗೆ ಸಹಾಯ ನೀಡಿ. ಪಶು ಪಕ್ಷಿಗಳಿಗೆ ಆಹಾರ ನೀಡಿ.

ವೃಷಭ: ದೂರಪ್ರಯಾಣದ ಆಯಾಸದಿಂದಾಗಿ ಚೇತರಿಸಿಕೊಂಡ ಆರೋಗ್ಯದಲ್ಲಿ ಪ್ರಗತಿ. ವಿವಾಹಾಪೇಕ್ಷಿಗಳಿಗೆ ಕಂಕಣ ಭಾಗ್ಯ ಕೂಡಿಬರಲಿದೆ. ದೇವತಾ ದರ್ಶನದಿಂದ ನೆಮ್ಮದಿ. ಉದ್ಯೋಗದಲ್ಲಿ ಆಸಕ್ತಿ.

ಮಿಥುನ: ನೀವು ಮಾಡುವ ಯಾವುದೇ ಕಾರ್ಯದಲ್ಲೂ ಬದಲಾವಣೆಯಾದರೂ ಸಕಾರಾತ್ಮಕವಾಗಲಿದೆ. ಯಶಸ್ಸು ನಿಮ್ಮ ಪಾಲಿಗೆ ಬರಲಿದ್ದು ಸಂತೋಷ ತರಲಿದೆ. ವನಪಾಲಕರಿಗೆ ನೆಮ್ಮದಿ.

ಕರ್ಕಾಟಕ: ಕಠಿಣ ಪರಿಶ್ರಮದಿಂದಾಗಿ ಕಾರ್ಯದಲ್ಲಿ ಯಶಸ್ಸು. ಎದುರಾಳಿಗಳ ದಾಳಿಯಿಂದಾಗಿ ತತ್ತರಿಸುವ ಸಾಧ್ಯತೆ. ಚಿಂತೆಗೆ ಅವಕಾಶವಿಲ್ಲ. ತೈಲ ವ್ಯಾಪಾರದಲ್ಲಿ ಅಭಿವೃದ್ಧಿ.

ಸಿಂಹ: ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಕಂಡುಬಂದರೂ ದುಡುಕುತನದಿಂದ ನಷ್ಟವಾಗಬಹುದು. ಯಾವುದೇ ವಿಚಾರಕ್ಕೂ ಮತ್ತೊಮ್ಮೆ ಯೋಚಿಸಿ ನಿರ್ಧಾರ ಕೈಗೊಳ್ಳುವುದು ಉತ್ತಮ.

ಕನ್ಯಾ: ವೈದ್ಯವೃತ್ತಿಯವರಿಗೆ ಅಧಿಕ ಶ್ರಮವಾಗಿ ವಿಪರೀತ ಆಯಾಸ ಕಂಡುಬರುವುದು. ಸ್ತ್ರೀಯರಿಗೆ ಅನುಕೂಲ ಪರಿಸ್ಥಿತಿ ನಿರ್ಮಾಣವಾಗಲಿದೆ. ಮನೋ ವ್ಯಾಧಿಗಳು ದೂರವಾಗಲಿವೆ.

ತುಲಾ: ನಿಮ್ಮ ಮೇಲಿನ ಹೆಚ್ಚಿನ ಜವಾಬ್ದಾರಿ ನಿಭಾಯಿಸಿಕೊಳ್ಳುವಲ್ಲಿ ಯಶಸ್ಸನ್ನು ಕಾಣುವಿರಿ. ಆತ್ಮೀಯರಲ್ಲಿ ಸಂತೋಷ ಹಂಚಿಕೊಳ್ಳಲಿದ್ದೀರಿ. ವಿನ್ಯಾಸಕಾರರಿಗೆ ಉತ್ತಮ ಆರ್ಥಿಕ ಲಾಭ ತರಲಿದೆ.

ವೃಶ್ಚಿಕ: ಸಂತೋಷ ನೀಡುವ ವಿಚಾರದಲ್ಲಿ ಕುಟುಂಬದಿಂದ ಸಹಕಾರ. ಅನಿರೀಕ್ಷಿತ ಬೆಳವಣಿಗೆಯಿಂದ ಸಾಮಾಜಿಕ ಗೌರವ ಹೊಂದುವಿರಿ. ವಿರೋಧಿಗಳಿಂದಲೂ ಸೈ ಎನ್ನಿಸಿಕೊಳ್ಳುವ ಹಿತಕರ ವಾತಾವರಣ.

ಧನು: ಮನೆಯಲ್ಲಿ ದೇವತಾ ಯಾಗ ನಿರ್ಧಾರವಾಗಲಿದೆ. ಸತ್ಪುರುಷರ ದರ್ಶನ ಮಾಡಲಿದ್ದೀರಿ. ವ್ಯವಹಾರದಲ್ಲಿ ಉನ್ನತಿಯಾಗಿ ಮನ್ನಣೆ ಪಡೆಯುವಿರಿ. ದಾಂಪತ್ಯದಲ್ಲಿ ಸರಸ. ಚಿನ್ನಾಭರಣ ಖರೀದಿ ಸಾಧ್ಯತೆ.

ಮಕರ: ಒಳ್ಳೆಯ ಕೆಲಸದ ನಿರೀಕ್ಷೆಯಲ್ಲಿರುವಿರಿ. ಗ್ರಹ ಬಲಗಳು ನಿಮಗೆ ಕೂಡಿಬರಲಿವೆ. ಹಿರಿಯರಿಗೆ ತೀರ್ಥಕ್ಷೇತ್ರ ದರ್ಶನ ಭಾಗ್ಯ. ಮಕ್ಕಳು ಆಟೋಟಗಳಲ್ಲಿ ಭಾಗಿಯಾಗಿ ಯಶಸ್ಸು ಕಾಣಲಿದ್ದೀರಿ.

ಕುಂಭ: ಸರ್ಕಾರಿ ನೌಕರರಿಗೆ ಮೇಲಾಧಿಕಾರಿಗಳಿಂದ ಕಿರಿಕಿರಿ. ಅನಿರೀಕ್ಷಿತವಾದ ತಲೆನೋವಿನ ಸಂಗತಿ ಎದುರಾಗಲಿದೆ. ನಿಗದಿತ ಕಾರ್ಯಗಳಲ್ಲಿ ಯಶಸ್ಸು. ಧನಾಗಮನದ ಸಾಧ್ಯತೆ.

ಮೀನ: ವಿದೇಶಗಳಿಂದ ಬಂಧುಗಳ ಆಗಮನದ ಸಾಧ್ಯತೆ. ನಿಮ್ಮನ್ನು ಅತಿಯಾಗಿ ಪ್ರೀತಿಸುವವರಿಂದ ಸಾಂತ್ವನದ ಮಾತುಗಳನ್ನು ಕೇಳಲಿದ್ದೀರಿ. ಉದ್ಯೋಗ ರಂಗದಲ್ಲಿ ಚೇತರಿಕೆ.

ನಿಮ್ಮ ಜನ್ಮದಿನ 25-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ನಿಮ್ಮ ಜೀವನಕ್ಕೆ ಪೂರಕವಾದ ಬೆಳವಣಿಗೆ ದೊರೆಯಲಿದ್ದು, ಸರ್ಕಾರದ ಯೋಜನೆಗಳ ಫಲಾನುಭವಿಗಳಲ್ಲಿ ನೀವೂ ಒಬ್ಬರಾಗಲಿದ್ದೀರಿ. ಕ್ರೀಡಾಪಟುಗಳಿಗೆ ಸೆಣಸಾಟ. ವೃತ್ತಿಪರ ಜೀವನದಲ್ಲಿ ಅಭಿವೃದ್ಧಿ.

ಪದಬಂಧ 4758 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹರಿಗೆ ಕೋಣೆಯಿದು (5)
4.ಬಿಡಿಸಲು ಕಷ್ಟವಾಗಿರುವ ಪ್ರಶ್ನೆ (3)
5.ವರ ಮಾಡಿರುವ ಒತ್ತಾಯ (3)
6.ವನದಲ್ಲಿ ಕಾಣಿಸಿರುವ ಮುಖ (3)
7.ನೂಲು ತೆಗೆಯುವ ಸಾಧನ (3)
9.ತೊಡೆ ತಟ್ಟುತ್ತಾ ಹಾಕಿದ ಕಡಿವಾಣ (2)
10.ಪ್ರಹರಿಗೆ ವಿಷ್ಣು ಪ್ರತ್ಯಕ್ಷನಾಗಿರುವನಲ್ಲಾ? (2)
12.ಇದು ಶ್ರೇಷ್ಠವಾದುದು (3)
14.ಭಾವ ಬೀರಿರುವ ವರ್ಚಸ್ಸು! (3)
15.ಇದು ಕಷ್ಟವೇ ಅಲ್ಲ ಬಿಡಿ! (3)
16.ತಪರಾಕು ಆದ ಮೇಲೆಯೇ ಈ ಹೊಗಳಿಕೆ! (3)
17.ಈತ ಮಾತಿಗೆ ತಪ್ಪುವವನು (5)

ಮೇಲಿಂದ ಕೆಳಕ್ಕೆ

1.ಪ್ರವಾಸದ ಸಮಯದಲ್ಲಿ ಈ ಅಲಂಕಾರ! (4)
2.ಅರಿವಳಿಕೆ ಕೊಟ್ಟ ನಂತರ ಬಂದಿರುವ ಅರಿವು! (5)
3.ವನದಲ್ಲಿ ಮಾಡಿರುವ ಯಜ್ಞ (3)
4.ನಿರಂತರ ಎಂದು ಹೀಗೆನ್ನಿ (3)
8.ಕೆಲಸವನ್ನು ಮಾಡುವ ನಿಶ್ಚಿತ ಸ್ಥಳ (3)
9.ಬರವಿದ್ದಾಗ ನೋಡುತ್ತಿರುವ ಆಕಾಶ (3)
10.ಇದು ಕುದುರೆಯ ಮುಖ (5)
11.ದೃಢಕಾಯವನ್ನು ಈ ರೀತಿ ಹೇಳಿ (4)
13.ಕುಸುಮವು ಅಸ್ಪಷ್ಟವಾಗಿ ಕಾಣುತ್ತಿದೆಯಲ್ಲಾ! (3)
14. ಮೊದಲನೆ ಹಿಂದೂ ಸಂವತ್ಸರ (3)



4757ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸರಸ್ವತಿ 3.ಅಂತರ್ಯಾಮಿ 4.ಮಿಡಿತ 5.ವನಚರ 7.ರಜತ 9.ಕಾನನ 10.ಅಬಲೆ 11.ಸುಗಮ 13.ಮನೋಹರ 15.ಮಲರು 16.ಮಾದಕತೆ 17.ಕಡಿವಾಣ

ಮೇಲಿಂದ ಕೆಳಕ್ಕೆ: 1.ಸಚಿವ 2.ತಿಮಿರ 3.ಅಂತರ 6.ನಳನಳಿಸು 8.ತಲೆಬರಹ 12.ಮಮತೆ 13.ಮರುಕ 14.ರಮಣ

ಸುಡೊಕು 5144

7		5	9					
					2		9	
2		9	3	7		5		4
9		4						2
			4	6	9	1		
	3					9		6
4					8		7	
		1	7			2		3
8		2		5			1	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5143 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

14 ವರ್ಷಗಳ ನಂತರ ಬೆಲೆಯಲ್ಲಿ ಏರಿಕೆ

ವೆಚ್ಚ ಹೆಚ್ಚಳ: ಡಿ.1ರಿಂದ ಬೆಂಕಿಪೊಟ್ಟಣದ ಬೆಲೆ ₹ 2

ಚೆನ್ನೈ (ಪಿಟಿಐ): ಡಿಸೆಂಬರ್ 1ರಿಂದ ಅನ್ವಯ ಆಗುವಂತೆ ಬೆಂಕಿಪೊಟ್ಟಣದ ಬೆಲೆಯು ₹ 2ಗೆ ಹೆಚ್ಚಳವಾಗಲಿದೆ. ಈಗ ಒಂದು ಬೆಂಕಿಪೊಟ್ಟಣದ ಬೆಲೆಯು ₹ 1 ಇದೆ. ಬೆಂಕಿಕಡ್ಡಿ ಉತ್ಪಾದನೆಯ ವೆಚ್ಚ ಹೆಚ್ಚಾಗಿರುವ ಕಾರಣ, ಬೆಂಕಿಪೊಟ್ಟಣ ಉತ್ಪಾದನಾ ಕಂಪನಿಗಳು ಈ ಕ್ರಮಕ್ಕೆ ಮುಂದಾಗಿವೆ.

ಆದರೆ, ಬೆಲೆ ಹೆಚ್ಚಳದ ಜೊತೆಯಲ್ಲೇ ಗ್ರಾಹಕರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬೆಂಕಿಕಡ್ಡಿಗಳನ್ನು ನೀಡಲು ಕಂಪನಿಗಳು ತೀರ್ಮಾನ ಮಾಡಿವೆ. ₹ 1 ಬೆಲೆಯ ಬೆಂಕಿಪೊಟ್ಟಣದಲ್ಲಿ ಈಗ 36 ಬೆಂಕಿಕಡ್ಡಿಗಳು ಇರುತ್ತವೆ. ₹ 2ಕ್ಕೆ ಬೆಲೆ ಏರಿಕೆ ಆದ ನಂತರದಲ್ಲಿ, ಒಂದು ಪೊಟ್ಟಣದಲ್ಲಿ 50 ಬೆಂಕಿಕಡ್ಡಿಗಳು ಇರಲಿವೆ.

14 ವರ್ಷಗಳ ನಂತರದಲ್ಲಿ ಬೆಂಕಿಪೊಟ್ಟಣಗಳ ಬೆಲೆ ಹೆಚ್ಚಾಗಲಿದೆ ಎಂದು ರಾಷ್ಟ್ರೀಯ ಸಣ್ಣ ಬೆಂಕಿಪೊಟ್ಟಣ ತಯಾರಕರ ಸಂಘದ ಕಾರ್ಯದರ್ಶಿ ವಿ.ಎಸ್. ಸೇತುರತ್ನಂ ತಿಳಿಸಿದ್ದಾರೆ. ಬೆಂಕಿಕಡ್ಡಿ ಹಾಗೂ ಬೆಂಕಿಪೊಟ್ಟಣ ತಯಾರಿಕೆಯಲ್ಲಿ ಬಳಸುವ ಕೆಂಪು ರಂಜಕ, ಮೇಣ, ಪೊಟಾಸಿಯಂ ಕ್ಲೋರೇಟ್, ಕಡ್ಡಿ ಬೆಲೆಯು ಹೆಚ್ಚಳ ಆಗಿದೆ ಎಂದು ಅವರು ಹೇಳಿದ್ದಾರೆ.

'ತೈಲ ಬೆಲೆ ಹೆಚ್ಚಾಗಿರುವ ಕಾರಣ ಸರಕು ಸಾಗಣೆಗೆ ಮಾಡುವ ವೆಚ್ಚ ಜಾಸ್ತಿ ಆಗಿದೆ. ಬೆಲೆ ಹೆಚ್ಚಿಸುವ ತೀರ್ಮಾನಕ್ಕೆ ಇದೂ ಒಂದು ಕಾರಣ' ಎಂದು ಅವರು ತಿಳಿಸಿದ್ದಾರೆ. 2007ರಲ್ಲಿ ಬೆಂಕಿಪೊಟ್ಟಣದ ಬೆಲೆಯನ್ನು 50 ಪೈಸೆಯಿಂದ ₹ 1ಕ್ಕೆ ಹೆಚ್ಚಿಸಲಾಗಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಎಂಎಫ್: ಹೂಡಿಕೆ ಬಗ್ಗೆ 4 ವಿಚಾರಗಳು

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಬಡ್ಡಿ ಪ್ರಮಾಣ ಇಳಿದಿರುವ ಈ ಕಾಲದಲ್ಲಿ ಹಣದುಬ್ಬರ ಪ್ರಮಾಣವನ್ನು ಮೀರಿ ಲಾಭಾಂಶ ತಂದುಕೊಡಬಲ್ಲ ಸಾಮರ್ಥ್ಯವಿರುವ ಹೂಡಿಕೆಗಳಲ್ಲಿ ಮ್ಯೂಚುವಲ್ ಫಂಡ್ ಮತ್ತು ಷೇರುಮಾರುಕಟ್ಟೆ ಹೂಡಿಕೆಗಳಿಗೆ ಅಗ್ರ ಸ್ಥಾನ. ಅಧ್ಯಯನವಿಲ್ಲದೆ ಷೇರು ಮಾರುಕಟ್ಟೆಯಲ್ಲಿ ನೇರವಾಗಿ ಹೂಡಿಕೆ ಮಾಡಿದರೆ ಲಾಭಕ್ಕಿಂತ ನಷ್ಟದ ಸಾಧ್ಯತೆಯೇ ಹೆಚ್ಚು. ಈ ಕಾರಣಕ್ಕಾಗಿ ಹಲವು ಹೂಡಿಕೆದಾರರು ಮ್ಯೂಚುವಲ್ ಫಂಡ್‌ಗಳ ಮೊರೆ ಹೋಗುತ್ತಿದ್ದಾರೆ. ಮ್ಯೂಚುವಲ್ ಫಂಡ್‌ಗಳಲ್ಲಿ ಫಂಡ್ ಮ್ಯಾನೇಜರ್ ಹೂಡಿಕೆ ರಿಸ್ಕ್‌ಅನ್ನು ನಿರ್ವಹಿಸುವ ಕಾರಣ, ಉತ್ತಮ ಫಂಡ್ ಆಯ್ಕೆ ಮಾಡಿ ಅದರಲ್ಲಿ ನಿಯಮಿತವಾಗಿ ಹೂಡಿಕೆ ಮಾಡುತ್ತಾ ಸಾಗುವುದಷ್ಟೇ ಹೂಡಿಕೆದಾರನ ಜವಾಬ್ದಾರಿ. ಮ್ಯೂಚುವಲ್ ಫಂಡ್ ಹೂಡಿಕೆಗೆ ಸಂಬಂಧಿಸಿದ ನಾಲ್ಕು ಪ್ರಮುಖ ವಿಚಾರಗಳನ್ನು ತಿಳಿದುಕೊಳ್ಳೋಣ.

ಉಳಿತಾಯದ ಜತೆಗೆ, ಹೂಡಿಕೆಯೂ ಮುಖ್ಯ!: ಅಡುಗೆ ಕೋಣೆಯ ಸಕ್ಕರೆ ಡಬ್ಬಿಯಲ್ಲಿ, ದೇವರ ಮನೆಯ ಹುಂಡಿಯಲ್ಲಿ, ಮಕ್ಕಳ ಪಿಗ್ಗಿ ಬಾಕ್ಸ್‌ನಲ್ಲಿ ಹಣ ಕೂಡಿಡುವುದು ಬಹುತೇಕರಿಗೆ ರೂಢಿ. ಆದರೆ ವಾಸ್ತವದಲ್ಲಿ, ಹೀಗೆ ಡಬ್ಬದಲ್ಲಿ ನಗದು ಸಂಗ್ರಹಿಸುತ್ತಾ ಹೋದರೆ ಸಂಪತ್ತು ಬೆಳೆಯುವುದಿಲ್ಲ. ಉಳಿಸಿದ ಹಣವನ್ನು ಕ್ರಮಬದ್ಧವಾಗಿ ಹೂಡಿಕೆ ಮಾಡಿದಾಗ ಮಾತ್ರ ಅದು ದ್ವಿಗುಣವಾಗುತ್ತದೆ. ಹೂಡಿಕೆಗೆ ದೊಡ್ಡ ಮೊತ್ತದ ಹಣವೇ ಬೇಕು ಎಂದೇನೂ ಇಲ್ಲ.

ಡಬ್ಬದಲ್ಲಿ ಕೂಡಿಡುವ ಐನೂರು, ಸಾವಿರ ರೂಪಾಯಿಯನ್ನು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೂ ಸಾಕು, ನಿರ್ದಿಷ್ಟ ಸಮಯದ ಬಳಿಕ ದೊಡ್ಡ ಮೊತ್ತದ ಹಣವನ್ನು ನೀವು ಗಳಿಸಿಕೊಳ್ಳಬಹುದು. ಶ್ರೀಮಂತರು ಮಾತ್ರ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬಹುದು ಎಂಬ ತಪ್ಪು ಕಲ್ಪನೆ ಅನೇಕರಲ್ಲಿದೆ. ಆದರೆ ಶ್ರೀಸಾಮಾನ್ಯರಿಗೂ, ಸಿರಿವಂತರಿಗೂ ಅನುಕೂಲ ಮಾಡಿಕೊಡುವಂತಹ ಅನೇಕ ಮಾದರಿಯ ಮ್ಯೂಚುವಲ್ ಫಂಡ್‌ಗಳು ಇವೆ.

ಮ್ಯೂಚುವಲ್ ಫಂಡ್ ಹೂಡಿಕೆಯನ್ನು ಬೇಗ ಆರಂಭಿಸಿ ನಿಯಮಿತವಾಗಿ ಹೂಡಿಕೆ ಮಾಡುತ್ತಾ ಬಂದರೆ ದೀರ್ಘಾವಧಿಯಲ್ಲಿ ಉತ್ತಮ ಲಾಭ ಸಿಗುತ್ತದೆ. ಪ್ರತಿ ತಿಂಗಳು ಮ್ಯೂಚುವಲ್ ಫಂಡ್‌ಗಳಲ್ಲಿ ₹ 1,000 ಹೂಡಿಕೆ ಮಾಡಿ ಶೇ 12ರ ಬಡ್ಡಿ ದರದಂತೆ ಲಾಭಾಂಶ ಪಡೆದುಕೊಂಡರೂ 10 ವರ್ಷಗಳ ಬಳಿಕ ₹ 2.30 ಲಕ್ಷ ನಿಮ್ಮದಾಗುತ್ತದೆ.

ಮಾರುಕಟ್ಟೆ ಕುಸಿದಾಗ ಎಸ್‌ಐಪಿ ನಿಲ್ಲಿಸಬೇಕೇ?: ಮಾರುಕಟ್ಟೆ ಕುಸಿದಾಗ ಮ್ಯೂಚುವಲ್ ಫಂಡ್ 'ಎನ್‌ಎವಿ' (ನಿವ್ವಳ ಆಸ್ತಿ ಮೌಲ್ಯ) ತಗ್ಗುತ್ತದೆ. ಈ ಸ್ಥಿತಿಯಲ್ಲಿ ನೀವು ಎಸ್‌ಐಪಿ ಮೂಲಕ ಹೆಚ್ಚು ಮ್ಯೂಚುವಲ್ ಫಂಡ್ ಯುನಿಟ್‌ಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ನಿಮ್ಮ ಬಳಿ ಹೆಚ್ಚು ಯುನಿಟ್‌ಗಳಿದ್ದರೆ ಮಾರುಕಟ್ಟೆ ಪುಟಿದೆದ್ದಾಗ ನಿಮಗೆ ಹೆಚ್ಚು ಲಾಭಾಂಶ ಸಿಗುತ್ತದೆ. ಹಾಗಾಗಿ, ಮಾರುಕಟ್ಟೆ ಕುಸಿದ ಸಂದರ್ಭದಲ್ಲಿ ಸಾಧ್ಯವಾದರೆ ಇನ್ನಷ್ಟು ಹೂಡಿಕೆ ಮಾಡಲು ಪ್ರಯತ್ನಿಸಬೇಕೇ ಹೊರತು ಎಸ್‌ಐಪಿಗಳನ್ನು ಸ್ಥಗಿತಗೊಳಿಸಬಾರದು.

ಎಸ್‌ಐಪಿಯಲ್ಲಿ ಪ್ರತಿ ತಿಂಗಳು ತೊಡಗಿಸಿದ ಹಣ ಆಯಾಯ ತಿಂಗಳಲ್ಲಿ ಕಟ್ಟಿದ ತಾರೀಕಿಗೆ ಅನುಗುಣವಾಗಿ ವಾರ್ಷಿಕ ಸರಾಸರಿ ಲೆಕ್ಕಕ್ಕೆ ಒಳಪಡುವುದರಿಂದ ನಷ್ಟ ಸಂಭವಿಸುವ ಸಾಧ್ಯತೆ ಬಹಳ ಕಡಿಮೆ ಇರುತ್ತದೆ. ಎಸ್‌ಐಪಿ ನಿಲ್ಲಿಸಬಾರದು ಎನ್ನುವುದಕ್ಕೆ ಇದು ಕೂಡ ಒಂದು ಪ್ರಮುಖ ಕಾರಣ.

ಎಸ್‌ಐಪಿ ಹೂಡಿಕೆ ಅಥವಾ ಭಾರೀ ಮೊತ್ತದ ಹೂಡಿಕೆ?: ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಅಥವಾ ಒಂದೇ ಬಾರಿಗೆ ದೊಡ್ಡ ಮೊತ್ತದ ಹೂಡಿಕೆ ಪೈಕಿ ಯಾವುದು ಸೂಕ್ತ ಎನ್ನುವ ಪ್ರಶ್ನೆಗೆ ನಿರ್ದಿಷ್ಟ ಉತ್ತರ ನೀಡುವುದು ಸಾಧ್ಯವಿಲ್ಲ. ಮ್ಯೂಚುವಲ್ ಫಂಡ್‌ಗಳ ಬಗ್ಗೆ ನಿಮಗೆ ಎಷ್ಟು ಅರಿವಿದೆ ಎನ್ನುವುದರ ಜತೆಗೆ ಯಾವ ಫಂಡ್‌ಗಳಲ್ಲಿ, ಯಾವ ಉದ್ದೇಶಕ್ಕಾಗಿ ನೀವು ಹೂಡಿಕೆ ಮಾಡಲು ಬಯಸಿದ್ದೀರಿ ಎನ್ನುವುದನ್ನು ಆಧರಿಸಿ ಇದನ್ನು ತೀರ್ಮಾನಿಸಬೇಕಾಗುತ್ತದೆ. ನೀವು ಪ್ರತಿ ತಿಂಗಳ ವೇತನದಲ್ಲಿ ನಿರ್ದಿಷ್ಟ ಮೊತ್ತದ ಹಣವನ್ನು ಹೂಡಿಕೆ ಮಾಡುತ್ತಾ ದೊಡ್ಡ ಮೊತ್ತವನ್ನು ಪೇರಿಸಲು ಎಸ್‌ಐಪಿ ಸೂಕ್ತ. ಎಸ್‌ಐಪಿಯಿಂದ ಮಾರುಕಟ್ಟೆ ಏರಿಳಿತದ ಅನುಕೂಲ ನಿಮಗೆ ಸಿಗುತ್ತದೆ. ನಿಮ್ಮ ಬಳಿ ಬೋನಸ್, ಆಸ್ತಿ ಮಾರಾಟ ಅಥವಾ ನಿವೃತ್ತಿಯಿಂದ ಬಂದಿರುವ ಹೆಚ್ಚುವರಿ ಹಣ ಇದ್ದು, ಅದನ್ನು ಹೇಗೆ ಸದುಪಯೋಗ ಮಾಡಿಕೊಳ್ಳಬೇಕು ಎಂಬ ಪ್ರಶ್ನೆ ಇದ್ದಲ್ಲಿ, ಅದನ್ನು ಡೆಟ್ ಅಥವಾ ಲಿಕ್ವಿಡ್ ಫಂಡ್‌ಗಳಲ್ಲಿ ತೊಡಗಿಸಬಹುದು. ಆದರೆ, ನೀವು ಮ್ಯೂಚುವಲ್ ಫಂಡ್ ಜಗತ್ತಿಗೆ ಹೊಸಬರಾದರೆ ಎಸ್‌ಐಪಿ ಹೂಡಿಕೆ ಸೂಕ್ತ.

ಮಕ್ಕಳ ಹೆಸರಲ್ಲಿ ಮ್ಯೂಚುವಲ್ ಫಂಡ್ ಹೂಡಿಕೆ ಸಾಧ್ಯವೇ?: ಪೋಷಕರು, ಪಾಲಕರ ನೆರವಿನೊಂದಿಗೆ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಕೂಡ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬಹುದು. ಅವರ ಹೆಸರಿನಲ್ಲಿ ಆರಂಭಿಸುವ ವೈಯಕ್ತಿಕ ಮ್ಯೂಚುವಲ್ ಫಂಡ್ ಖಾತೆಗೆ ಪೋಷಕರು ಅಥವಾ ಪಾಲಕರು ಪ್ರತಿನಿಧಿಯಾಗಬೇಕಾಗುತ್ತದೆ. 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಮ್ಯೂಚುವಲ್ ಫಂಡ್‌ಗಳಲ್ಲಿ ಜಂಟಿ ಖಾತೆ ಹೊಂದಲು ಅವಕಾಶವಿಲ್ಲ. ಉದಾಹರಣೆಗೆ, ಮಕ್ಕಳ ಉನ್ನತ ಶಿಕ್ಷಣದ ಉದ್ದೇಶಕ್ಕಾಗಿ, ಮದುವೆ ಖರ್ಚಿಗಾಗಿ ಹೀಗೆ ಹಲವು ಕಾರಣಗಳಿಗೆ ನೀವು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬಹುದು.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಮಾರಾಟದ ಒತ್ತಡಕ್ಕೆ ಕುಸಿದ ಷೇರುಪೇಟೆ

ಅಕ್ಟೋಬರ್ 22ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಕುಸಿತ ಕಂಡಿವೆ. 60,821 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.79ರಷ್ಟು ಕುಸಿತ ಕಂಡಿದೆ. 18,114 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.21ರಷ್ಟು ತಗ್ಗಿದೆ. ಮಾರಾಟದ ಒತ್ತಡ, ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳ ಸಾಮಾನ್ಯ ಸಾಧನೆ ಸೇರಿದಂತೆ ಹಲವು ಅಂಶಗಳು ಷೇರುಪೇಟೆ ಕುಸಿತಕ್ಕೆ ಕಾರಣವಾಗಿವೆ.

ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 5ರಷ್ಟು ಕುಸಿದಿದೆ. ಮಿಡ್ ಕ್ಯಾಪ್ ಸೂಚ್ಯಂಕ ಶೇ 4ರಷ್ಟು ತಗ್ಗಿದೆ. ವಲಯವಾರು ಪ್ರಗತಿಯಲ್ಲಿ ನಿಫ್ಟಿ ಎಫ್‌ಎಂಸಿಜಿ ಮತ್ತು ಲೋಹ ವಲಯ ಕ್ರಮವಾಗಿ ಶೇ 6ರಷ್ಟು ಮತ್ತು ಶೇ 5.4ರಷ್ಟು ಇಳಿಕೆಯಾಗಿವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 4ರಷ್ಟು ಏರಿಕೆ ಕಂಡಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 7,353.04 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರೆ, ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 4,504.40 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರಿಕೆ–ಇಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕದಲ್ಲಿ ಅವೆನ್ಯೂ ಸೂಪರ್ ಮಾರ್ಕೆಟ್ಸ್, ಹ್ಯಾವೆಲ್ಸ್ ಇಂಡಿಯಾ, ಬರ್ಜರ್ ಪೇಂಟ್ಸ್ ಶೇ 10ರಷ್ಟು ಕುಸಿತ ಕಂಡಿವೆ. ಕೋಟಕ್ ಮಹೀಂದ್ರ, ಲಾರ್ಸನ್ ಅಂಡ್ ಟೂಬ್ರೊ ಇನ್ಫೋಟೆಕ್, ಅದಾನಿ ಟ್ರಾನ್ಸ್ಮಿಷನ್ ಮತ್ತು ಬ್ಯಾಂಕ್ ಆಫ್ ಬರೋಡ ಉತ್ತಮ ಗಳಿಕೆ ಕಂಡಿವೆ.

ಮುನ್ನೋಟ: ಜಾಗತಿಕವಾಗಿ ಹೆಚ್ಚಳವಾಗುತ್ತಿರುವ ಹಣದುಬ್ಬರವು ಹೂಡಿಕೆದಾರರನ್ನು ಚಿಂತೆಗೀಡುಮಾಡಿದೆ. ಆದರೂ ಷೇರು ಮಾರುಕಟ್ಟೆಯಲ್ಲಿ ಗೂಳಿ ಓಟ ಸದ್ಯಕ್ಕೆ ಮುಗಿದೇ ಹೋಯಿತು ಎನ್ನುವ ಸಂದರ್ಭ ಖಂಡಿತ ಇಲ್ಲ. ಮುಂಬರುವ ತ್ರೈಮಾಸಿಕ ಫಲಿತಾಂಶಗಳು, ಜಾಗತಿಕ ವಿದ್ಯಮಾನಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ. ಜೆ.ಕೆ. ಪೇಪರ್, ಹೋಮ್ ಫಸ್ಟ್ ಫೈನಾನ್ಸ್, ಎನ್‌ಟಿಪಿಸಿ, ಬಜಾಜ್ ಆಟೊ, ಎಸ್‌ಆರ್‌ಎಫ್, ಎಬಿಬಿ, ಅದಾನಿ ಪೋರ್ಟ್ಸ್, ಅಂಬುಜಾ ಸಿಮೆಂಟ್ಸ್, ಸಿಯೆಟ್, ಐಡಿಎಫ್‌ಸಿ ಫಸ್ಟ್ ಬ್ಯಾಂಕ್, ಕೆನರಾ ಬ್ಯಾಂಕ್, ಕೋಟಕ್ ಬ್ಯಾಂಕ್, ಮಾರುತಿ ಸುಜುಕಿ, ಎಕ್ಸಿಸ್ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ಈ ವಾರ ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ,ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ವಿಡಿಯೋಕಾನ್, TVS, TOYOTA, ಬ್ರಿಟಾನಿಯಾ MNCಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 7899778278, 9611715755

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

REQD MALE Assistants and Female Receptionist for Eye Hospital. sukruthi@gmail.com, 9916047774

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 7829215432, 9538804499

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ,ಐಟಿಐ,ಡಿಪ್ಲೊ ಮಾದವರು 16,600 - 62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ಯುವತಿಯರು ಬೇಕಾಗಿದ್ದಾರೆ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ Salary+OT 16,800-45000/-.9902839010, 9980295449

Part-Time Jobs

ಕಂಪನಿ ಹೆಸರು-ಪರ್ಪಲ್ ಸೊಲ್ಯೂಷನ್ಸ್ / ಬ್ಯಾಂಕಿಂಗ್ ವಿಳಾಸ ಪರಿಶೀಲನೆಗಾಗಿ ಅಗತ್ಯವಿರುವ ಕ್ಷೇತ್ರ, ಕಾರ್ಯನಿರ್ವಾಹಕ ಯಾವುದೇ ಅರ್ಹತೆ / ಸಂಪರ್ಕ- 9066142323

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-20,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

ಭವಿಷ್ಯ

Astrology

★||ಕೇರಳದ ಶ್ರೀಭಗವತಿಭದ್ರಕಾಳಿ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ,ಕಂಕಣಬಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣಸಮಸ್ಯೆಗಳಿಗೆ 11ಗಂಟೆಗಳಲ್ಲಿ ಪರಿಹಾರ. ಪಂಡಿತ್. ಜಯರಾಮ್‌ಭಟ್. 9900263706

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಫೋನಿನ ಮುಖಾಂತರ ಉಚಿತವಾಗಿ ಭವಿಷ್ಯ ತಿಳಿಸುತ್ತಾರೆ ಸ್ತ್ರೀ ಪುರುಷ ವಶೀಕರಣ, ಶತ್ರುನಾಶ, ಸಾಲ ಭಾದೆ, ವ್ಯವಹಾರ, ದಾಂಪತ್ಯ ಕೇವಲ 1ಗಂಟೆಯಲ್ಲಿ ಪರಿಹಾರ: 9901922598

ವಶೀಕರಣ ಸ್ಪೆಷಲಿಸ್ಟ್: ಸ್ತ್ರೀಪುರುಷ ವಶೀಕರಣ, ಲೈಂಗಿಕ ವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ. ಸ್ತ್ರೀಯರಿಗೆ ಉಚಿತ ಪರಿಹಾರ. 9448687421

ಪ್ರವಾಸ

Travel

20.12.2021 ರಿಂದ 14 ದಿನಗಳು ಪಂಚದ್ವಾರಕಾ, ಓಂಕಾರೇಶ್ವರ್, ಉಜ್ಜಯಿನಿ, ಸೋಮನಾಥ್, ಮಾತ್ರಗಯಾ, ಡಾಕೂರ್, ಅಹಮದಾಬಾದ್/ 19.01.2022 ರಿಂದ 14 ದಿನಗಳು ಕಾಶಿ.,ಗಯಾ, ಪ್ರಯಾಗ, ಅಯೋಧ್ಯ, ನೈಮೀಶಾರಣ್ಯ, ಗೋರಕ್‌ಪುರ್/ 2022ರ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ 15/20/25 ದಿನಗಳ ಗಂಗೋತ್ರಿ, ಯುಮುನೋತ್ರಿ, ಬದರಿನಾಥ್, ಕೇದಾರನಾಥ್, ಕಾಶಿ,ಗಯಾ ಪೂರಿಜಗನ್ನಾಥ್, ವೈಷ್ಣೋದೇವಿ ಯಾತ್ರೆಗಳಿಗೆ ಕೂಡಲೇ ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289, 9448119290, 9019301300

ದೀಪಾವಳಿ ಪ್ರಯುಕ್ತ ಗೋವಾ ಪ್ರವಾಸ 3ದಿನಗಳು 6-11-2021 ದೂದ್ ಸಾಗರ್, ಮಂಗೇಶಿ ಟೆಂಪಲ್, ಕಲ್ನಂಗಟ್ ಬಾಗ್ ಬೀಚ್ ಆಗೋಡ್ ಪೋರ್ಟ್, ಚರ್ಚ್ ಹಾಗೂ ಇತರೆ ಸ್ಥಳಗಳು ಸುವರ್ಣಯಾತ್ರಾ. 9019462508/ 9008381022

DH ಪ್ರಜಾವಾಣಿ Classifieds — EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸತತ ಐದನೇ ದಿನವೂ ಇಂಧನ ದರ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಭಾನುವಾರ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಲೀಟರಿಗೆ ತಲಾ 35 ಪೈಸೆಯಷ್ಟು ಹೆಚ್ಚಿಸಿವೆ. ಇದರಿಂದಾಗಿ ಸತತ ಐದನೇ ದಿನವೂ ದರ ಹೆಚ್ಚಳ ಆದಂತಾಗಿದೆ.

ಭಾನುವಾರದ ದರ ಏರಿಕೆಯಿಂದಾಗಿ ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹111.29 ಮತ್ತು ಡೀಸೆಲ್ ದರ ಲೀಟರಿಗೆ ₹ 102.17ಕ್ಕೆ ಏರಿಕೆ ಆಗಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ₹ 107.59 ಮತ್ತು ಡೀಸೆಲ್ ದರ ₹ 96.32ಕ್ಕೆ ತಲುಪಿದೆ. ಸ್ಥಳೀಯ ಮಾರಾಟ ತೆರಿಗೆಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಇಂಧನ ದರದಲ್ಲಿ ವ್ಯತ್ಯಾಸ ಆಗುತ್ತದೆ. ಡೀಸೆಲ್ ದರವು ಲೀಟರಿಗೆ ₹ 100ರ ಗಡಿ ದಾಟಿರುವ ರಾಜ್ಯಗಳ ಸಾಲಿಗೆ ಇದೀಗ ಪಶ್ಚಿಮ ಬಂಗಾಳವೂ ಸೇರಿಕೊಂಡಿದೆ.

ಸೆಕೆಂಡ್–ಹ್ಯಾಂಡ್ ವಾಹನ ಮಾರಾಟಕ್ಕೆ ಸಿಎಸ್‌ಸಿಯಿಂದ ನಿರಾಕ್ಷೇಪಣಾ ಪತ್ರ

ನವದೆಹಲಿ (ಪಿಟಿಐ): ಬಳಸಿದ ಕಾರುಗಳ ಮಾರಾಟಕ್ಕೆ ನಿರಾಕ್ಷೇಪಣಾ ಪತ್ರವನ್ನು (ಎನ್‌ಒಸಿ) ನೀಡಲು ತನಗೆ ಅಧಿಕಾರ ನೀಡಲಾಗಿದೆ ಎಂದು ಕೇಂದ್ರ ಸರ್ಕಾರಿ ಸ್ವಾಮ್ಯದ ಸಿಎಸ್‌ಸಿ ಇ-ಗವರ್ನೆನ್ಸ್ ಇಂಡಿಯಾ ಲಿಮಿಟೆಡ್ (ಸಿಎಸ್‌ಸಿ ಎಸ್‌ಪಿವಿ) ಭಾನುವಾರ ಹೇಳಿದೆ.

ಈ ಸೇವೆಯನ್ನು ದೇಶದಾದ್ಯಂತ ನೀಡಲು ಸಿಎಸ್‌ಸಿ, ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಜೊತೆ ಪಾಲುದಾರಿಕೆ ಮಾಡಿಕೊಂಡಿದೆ. ದೇಶದಲ್ಲಿನ ನಾಲ್ಕು ಲಕ್ಷ ಸಿಎಸ್‌ಸಿ ಫ್ರಾಂಚೈಸಿಗಳಲ್ಲಿ ಈ ಸೌಲಭ್ಯ ಸಿಗಲಿದೆ.

ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಅವರು ಈ ಸೇವೆಗೆ ಚಾಲನೆ ನೀಡಿದ್ದಾರೆ ಎಂದು ಸಿಎಸ್‌ಸಿ ತಿಳಿಸಿದೆ. 'ಹತ್ತಿರದ ಸಿಎಸ್‌ಸಿ ಕೇಂದ್ರದಿಂದ ನಿರಾಕ್ಷೇಪಣಾ ಪತ್ರ ಪಡೆಯಲು ಗ್ರಾಹಕರಿಗೆ ಸಾಧ್ಯವಾಗಲಿದೆ. ಸಿಸಿಟಿಎನ್‌ಎಸ್ (ಅಪರಾಧ ಮತ್ತು ಅಪರಾಧಿಯ ಜಾಡಿನ ಮೇಲೆ ಕಣ್ಣಿಡುವ ವ್ಯವಸ್ಥೆ) ಸೇವೆಗಳನ್ನು ಡಿಜಿಟಲ್ ಸೇವಾ ಪೋರ್ಟಲ್ ಜೊತೆ ಬೆಸೆಯುವಂತೆ ಎನ್‌ಸಿಆರ್‌ಬಿ ರಾಜ್ಯ ಸರ್ಕಾರಗಳಿಗೆ ಮನವಿ ಮಾಡಿದೆ. ಸಿಎಸ್‌ಸಿ ಕೇಂದ್ರಗಳು ಈ ಸೇವೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲಿವೆ' ಎಂದು ಪ್ರಕಟಣೆ ತಿಳಿಸಿದೆ.

ಸೆಕೆಂಡ್-ಹ್ಯಾಂಡ್ ಕಾರು ಖರೀದಿಸುವ ಗ್ರಾಹಕರು ಈ ನಿರಾಕ್ಷೇಪಣಾ ಪತ್ರವನ್ನು ಪಡೆದರೆ ಅವರಿಗೆ ತಾವು ಖರೀದಿಸಲು ಉದ್ದೇಶಿಸಿರುವ ವಾಹನದ ಕುರಿತು ವಿವರಗಳು ದೊರೆಯುತ್ತವೆ. ಆ ವಾಹನವು ಯಾವುದಾದರೂ ಕಾರಣಕ್ಕೆ ಪೊಲೀಸ್ ದಾಖಲೆಗಳಲ್ಲಿ ನಮೂದಾಗಿದೆಯೇ ಎಂಬುದು ಗೊತ್ತಾಗುತ್ತದೆ. ವಾಹನ ಮಾಲೀಕತ್ವ ವರ್ಗಾವಣೆ ಮುನ್ನ ನಿರಾಕ್ಷೇಪಣಾ ಪತ್ರ ಬರೆಯುವುದು ಕಡ್ಡಾಯ.

ಡಿಸೆಂಬರ್‌ಗೆ ಭಾರತ್ ಬಾಂಡ್ ಇಟಿಎಫ್ ಮೂರನೇ ಕಂತು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಭಾರತ್ ಬಾಂಡ್ ಇಟಿಎಫ್‌ನ ಮೂರನೇ ಕಂತನ್ನು ಡಿಸೆಂಬರ್ ವೇಳೆಗೆ ಬಿಡುಗಡೆ ಮಾಡಲಿದ್ದು, ₹ 10 ಸಾವಿರ ಕೋಟಿ ಸಂಗ್ರಹಿಸುವ ನಿರೀಕ್ಷೆ ಇಟ್ಟುಕೊಂಡಿದೆ ಎಂದು ಹಣಕಾಸು ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಇಲ್ಲಿ ಸಂಗ್ರಹ ಆಗುವ ಬಂಡವಾಳವನ್ನು ಕೇಂದ್ರೋದ್ಯಮಗಳ ಅಭಿವೃದ್ಧಿ ಯೋಜನೆಗಳಿಗೆ ಬಳಸುವ ಆಲೋಚನೆಯನ್ನು ಸರ್ಕಾರ ಹೊಂದಿದೆ ಎಂದೂ ಅವರು ಹೇಳಿದ್ದಾರೆ.

2020ರ ಜುಲೈನಲ್ಲಿ ಬಿಡುಗಡೆ ಮಾಡಿದ್ದ ಎರಡನೇ ಕಂತಿನಲ್ಲಿ ₹ 11 ಸಾವಿರ ಕೋಟಿ ಸಂಗ್ರಹ ಆಗಿತ್ತು. 2019ರ ಡಿಸೆಂಬರ್‌ನಲ್ಲಿ ಮೊದಲ ಕಂತಿನಲ್ಲಿ ₹ 12,400 ಕೋಟಿ ಬಂಡವಾಳ ಸಂಗ್ರಹ ಆಗಿತ್ತು.

ಗರಿಷ್ಠ ಪರೀಕ್ಷೆ ನಡೆಸಿದ ರಾಜ್ಯಗಳ ಸಾಲಿನಲ್ಲಿ ನಾಲ್ಕನೆ ಸ್ಥಾನ

5 ಕೋಟಿ ದಾಟಿದ ಕೋವಿಡ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಈವರೆಗೆ ನಡೆಸಲಾದ ಒಟ್ಟು ಕೋವಿಡ್ ಪರೀಕ್ಷೆಗಳ ಸಂಖ್ಯೆ 5 ಕೋಟಿಯ ಗಡಿ ದಾಟಿದೆ. ದೇಶದಲ್ಲಿ ಗರಿಷ್ಠ ಪರೀಕ್ಷೆಗಳನ್ನು ನಡೆಸಿದ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ.

ಕಳೆದ ವರ್ಷ 1.41 ಕೋಟಿ ಪರೀಕ್ಷೆಗಳನ್ನು ನಡೆಸಲಾಗಿತ್ತು. ಈ ವರ್ಷ 3.59 ಕೋಟಿ ಪರೀಕ್ಷೆಗಳನ್ನು ಈವರೆಗೆ ನಡೆಸಲಾಗಿದೆ. ಕೋವಿಡ್ ಪರೀಕ್ಷೆಯಲ್ಲಿ ಉತ್ತರ ಪ್ರದೇಶ (8.2 ಕೋಟಿ), ಮಹಾರಾಷ್ಟ್ರ (6.2 ಕೋಟಿ) ಹಾಗೂ ತಮಿಳುನಾಡು (5.01 ಕೋಟಿ) ಕ್ರಮವಾಗಿ ಮೊದಲ ಮೂರು ಸ್ಥಾನದಲ್ಲಿವೆ. ಐದು ಕೋಟಿ ಪರೀಕ್ಷೆಗಳನ್ನು ನಡೆಸಿದ ನಾಲ್ಕನೇ ರಾಜ್ಯ ಕರ್ನಾಟಕವಾಗಿದೆ.

ರಾಜ್ಯದಲ್ಲಿ ನಡೆಸಲಾದ ಒಟ್ಟು ಕೋವಿಡ್ ಪರೀಕ್ಷೆಗಳಲ್ಲಿ ಶೇ 70 ರಷ್ಟು ಪರೀಕ್ಷೆಗಳನ್ನು ಆರ್‌ಟಿ–ಪಿಸಿಆರ್ ವಿಧಾನದ ಮೂಲಕ ನಡೆಸಲಾಗಿದೆ. ಶೇ 30 ರಷ್ಟು ಪರೀಕ್ಷೆಗಳನ್ನು ರ್‍ಯಾಪಿಡ್ ಆ್ಯಂಟಿಜೆನ್ ವಿಧಾನದಲ್ಲಿ ಮಾಡಲಾಗಿದೆ.

ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಾಗ ದಿನವೊಂದಕ್ಕೆ ನಡೆಸುವ ಪರೀಕ್ಷೆಗಳ ಸಂಖ್ಯೆಯು 1.90 ಲಕ್ಷದವರೆಗೂ ಏರಿಕೆ ಕಂಡಿತ್ತು. ಜೂನ್ ಬಳಿಕ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡರೂ ಸಂಭಾವ್ಯ ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕಾ ಕ್ರಮವಾಗಿ ಪ್ರತಿನಿತ್ಯ ಸರಾಸರಿ 1.50 ಲಕ್ಷ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು.

ಆಗಸ್ಟ್ ತಿಂಗಳಲ್ಲಿ 48.45 ಲಕ್ಷ ಪರೀಕ್ಷೆಗಳನ್ನು ನಡೆಸಲಾಗಿತ್ತು. ಇವು ಒಂದು ತಿಂಗಳ ಅವಧಿಯಲ್ಲಿ ಈವರೆಗೆ ನಡೆಸಲಾದ ಗರಿಷ್ಠ ಪರೀಕ್ಷೆಗಳಾಗಿವೆ. ಈಗ ಕೋವಿಡ್ ನಿಯಂತ್ರಣಕ್ಕೆ ಬಂದಿರುವುದರಿಂದ ಸರಾಸರಿ 1.20 ಲಕ್ಷ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ಮಾದರಿ ಸಂಗ್ರಹ ಕೇಂದ್ರ: 'ಪ್ರಾಥಮಿಕ ಆರೋಗ್ಯ ಕೇಂದ್ರಗಳ ಹಂತದಲ್ಲೂ ಕೋವಿಡ್ ಪರೀಕ್ಷೆಗೆ ಗಂಟಲು ದ್ರವಗಳ ಸಂಗ್ರಹಕ್ಕೆ ವ್ಯವಸ್ಥೆ ಮಾಡಲಾಗಿದೆ. 654 ಖಾಸಗಿ ಸೇರಿದಂತೆ 3,626 ಮಾದರಿಗಳ ಸಂಗ್ರಹ ಕೇಂದ್ರಗಳು ರಾಜ್ಯದಲ್ಲಿವೆ. ರಾಜ್ಯದ ವಿವಿಧೆಡೆ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಸೋಂಕು ದೃಢ ಪ್ರಮಾಣಕ್ಕೆ ಅನುಗುಣವಾಗಿ ಪರೀಕ್ಷೆಗಳನ್ನು ನಡೆಸಲು ನಿರ್ಧರಿಸಲಾಗಿದೆ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

'ಕೋವಿಡ್ ಪರೀಕ್ಷೆಗೆ ಸಂಗ್ರಹಿಸಲಾದ ಮಾದರಿಗಳಲ್ಲಿ ಶೇ 70ರಷ್ಟು ಪರೀಕ್ಷೆಗಳನ್ನು ಸರ್ಕಾರಿ ಪ್ರಯೋಗಾಲಯಗಳಲ್ಲಿಯೇ ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಹೆಚ್ಚಿರುವ ಹಾಗೂ ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಕ್ಕೆ ಹೊಂದಿಕೊಂಡಿರುವ ರಾಜ್ಯದ ಜಿಲ್ಲೆಗಳಲ್ಲಿಯೂ ಹೆಚ್ಚಿನ ಪರೀಕ್ಷೆಗಳನ್ನು ನಡೆಸುವ ಮೂಲಕ ಕೋವಿಡ್ ನಿಯಂತ್ರಣಕ್ಕೆ ಕ್ರಮವಹಿಸಲಾಗಿದೆ' ಎಂದು ಇಲಾಖೆ ಪ್ರಕಟಣೆಯಲ್ಲಿ ವಿವರಿಸಿದೆ.

ಶೇ 20 ರಷ್ಟು ಪರೀಕ್ಷೆ ಮಕ್ಕಳಿಗೆ

ಸಂಭಾವ್ಯ ಕೋವಿಡ್ ಮೂರನೇ ಅಲೆಯಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುವ ಬಗ್ಗೆ ವೈದ್ಯಕೀಯ ತಜ್ಞರು ಕಳವಳ ವ್ಯಕ್ತಪಡಿಸಿದ್ದರು. ದಿನವೊಂದಕ್ಕೆ ನಡೆಸಲಾಗುವ ಒಟ್ಟು ಪರೀಕ್ಷೆಗಳಲ್ಲಿ ಶೇ 10 ರಷ್ಟು ಪರೀಕ್ಷೆಗಳನ್ನು 18 ವರ್ಷದೊಳಗಿನ ಮಕ್ಕಳಿಗೆ ನಡೆಸುವಂತೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರು ಶಿಫಾರಸು ಮಾಡಿದ್ದರು. ಹಾಗಾಗಿ, ಅ.31 ರಿಂದ ಸೆ.21ರವರೆಗೆ ನಡೆಸಲಾದ ಒಟ್ಟು ಕೋವಿಡ್ ಪರೀಕ್ಷೆಗಳಲ್ಲಿ ಶೇ 20.83 ರಷ್ಟು ಪರೀಕ್ಷೆಗಳನ್ನು 18 ವರ್ಷದೊಳಗಿನ ಮಕ್ಕಳಿಗೆ ಇಲಾಖೆ ನಡೆಸಿದೆ.

ರಾಜ್ಯದಲ್ಲಿನ ಪ್ರಯೋಗಾಲಯಗಳ ವಿವರ

ವಿಧಾನ	ಸರ್ಕಾರಿ	ಖಾಸಗಿ
ಆರ್‌ಟಿಪಿಸಿಆರ್	55	111
ಸಿಬಿ–ನ್ಯಾಟ್	08	28
ಟ್ರೂ–ನ್ಯಾಟ್	33	22

ಅಂಕಿ-ಅಂಶ

96 ರಾಜ್ಯದಲ್ಲಿರುವ ಸರ್ಕಾರಿ ಪ್ರಯೋಗಾಲಯಗಳು

161 ರಾಜ್ಯದಲ್ಲಿರುವ ಖಾಸಗಿ ಪ್ರಯೋಗಾಲಯಗಳು

ಹಣಕಾಸು ವಲಯ: ಎರಡು ಮಸೂದೆ ಮಂಡನೆ ಸಾಧ್ಯತೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಹಣಕಾಸು ವಲಯಕ್ಕೆ ಸಂಬಂಧಿಸಿದ ಎರಡು ಪ್ರಮುಖ ಮಸೂದೆಗಳನ್ನು ಚಳಿಗಾಲದ ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ. ಬಜೆಟ್‌ನಲ್ಲಿ ಘೋಷಿಸಿರುವಂತೆ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಖಾಸಗೀಕರಣಕ್ಕೆ ಅವಕಾಶ ಕಲ್ಪಿಸುವ ಮಸೂದೆ ಸಹ ಇದರಲ್ಲಿ ಸೇರಿದೆ.

ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ (ಪಿಎಫ್‌ಆರ್‌ಡಿಎ) ರಾಷ್ಟ್ರೀಯ ಪಿಂಚಣಿ ನಿಧಿಯನ್ನು (ಎನ್‌ಪಿಎಸ್) ಪ್ರತ್ಯೇಕಗೊಳಿಸುವ ಸಲುವಾಗಿ 2013ರ ಪಿಎಫ್‌ಆರ್‌ಡಿಎ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಯನ್ನು ಸಹ ಮಂಡಿಸುವ ಸಾಧ್ಯತೆ ಇದೆ.

ಕೇಂದ್ರ ಸರ್ಕಾರವು ಸಂಸತ್‌ನ ಚಳಿಗಾಲದ ಅಧಿಕವೇಶನದಲ್ಲಿ 1949ರ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಯನ್ನು ಮಂಡಿಸಲಿದೆ ಎಂದು ಮೂಲಗಳು ತಿಳಿಸಿವೆ. ಇದಲ್ಲದೆ, ಬ್ಯಾಂಕಿಂಗ್ ಕಂಪನಿಗಳ (ಸ್ವಾಧೀನ ಮತ್ತು ವರ್ಗಾವಣೆ) ಕಾಯ್ದೆ 1970 ಹಾಗೂ 1980ಕ್ಕೆ ತಿದ್ದುಪಡಿ ತರುವ ಅಗತ್ಯ ಇದೆ ಎಂದು ಮೂಲಗಳು ತಿಳಿಸಿವೆ. ಸರ್ಕಾರಿ ಸ್ವಾಮ್ಯದ ಎರಡು ಬ್ಯಾಂಕ್‌ಗಳು ಮತ್ತು ಒಂದು ವಿಮಾ ಕಂಪನಿಯನ್ನು ಖಾಸಗೀಕರಣಗೊಳಿಸುವುದಾಗಿ 2021–22ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಬ್ರಿಟನ್‌ಗೆ ಮರಳುವ ಪ್ರಯಾಣಿಕರಿಗೆ ಕಡಿಮೆ ವೆಚ್ಚದ ಪರೀಕ್ಷೆ

ಲಂಡನ್ (ಪಿಟಿಐ): ಲಸಿಕೆಯ ಪೂರ್ಣ ಪ್ರಮಾಣದ ಡೋಸ್‌ಗಳನ್ನು ಹಾಕಿಸಿಕೊಂಡಿರುವ ಪ್ರಯಾಣಿಕರು ಬ್ರಿಟನ್‌ಗೆ ಮರಳಿದಾಗ ಕೋವಿಡ್–19 ದೃಢೀಕರಣಕ್ಕೆ ಸಂಬಂಧಿಸಿದ 'ಪಿಸಿಆರ್' ಬದಲಾಗಿ ಕಡಿಮೆ ವೆಚ್ಚದ 'ಎಲ್‌ಎಫ್‌ಟಿ' ಪರೀಕ್ಷೆಗೆ ಒಳಗಾಗಬಹುದು.

ಈ ನಿಯಮ ಭಾನುವಾರದಿಂದ ಜಾರಿಗೆ ಬಂದಿದೆ. ಭಾರತ ಸೇರಿದಂತೆ 100 ದೇಶಗಳಲ್ಲಿ ಪೂರ್ಣಪ್ರಮಾಣದ ಲಸಿಕೆ ಹಾಕಿಸಿಕೊಂಡಿರುವ ಪ್ರಯಾಣಿಕರಿಗೆ ಇದರಿಂದ ಅನುಕೂಲವಾಗಲಿದೆ.

ಬ್ರಿಟನ್‌ಗೆ ಪ್ರಯಾಣಿಸುವುದರ ಮೇಲಿನ ನಿಷೇಧಕ್ಕೆ ಸಂಬಂಧಿಸಿದ 'ಕೆಂಪು ಪಟ್ಟಿ'ಯಲ್ಲಿ ಹೆಸರು ಇರದ ದೇಶಗಳಿಂದ ಬರುವ ಪ್ರಯಾಣಿಕರಿಗೆ ಇದು ಅನ್ವಯವಾಗುವುದು ಎಂದು ಸರ್ಕಾರ ತಿಳಿಸಿದೆ.

ಬ್ರಿಟನ್‌ಗೆ ಬಂದಿಳಿದ ಕೂಡಲೇ ಪ್ರಯಾಣಿಕರು ಈ ಪರೀಕ್ಷೆಗೆ ಒಳಗಾಬಹುದು.

ಕೋವಿಡ್: 17 ಜಿಲ್ಲೆಗಳಲ್ಲಿ 50 ರೊಳಗೆ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 17 ಜಿಲ್ಲೆಗಳಲ್ಲಿ 50ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸೋಂಕಿತರಿದ್ದಾರೆ.

ಕೋವಿಡ್ ಪೀಡಿತರಲ್ಲಿ 8,711 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಗದಗ ಜಿಲ್ಲೆಯು ಕೋವಿಡ್ ಮುಕ್ತವಾಗಿದೆ. ಬಾಗಲಕೋಟೆ ಸೇರಿದಂತೆ 6 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಹತ್ತರೊಳಗೆ ಇದೆ. ಬೆಂಗಳೂರಿನಲ್ಲಿ ಗರಿಷ್ಠ (6,496) ಸಕ್ರಿಯ ಪ್ರಕರಣಗಳಿವೆ.

ಒಂದು ದಿನದ ಅವಧಿಯಲ್ಲಿ 1.17 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 388 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 0.32 ರಷ್ಟು ವರದಿಯಾಗಿದೆ. 6 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ಯಾದಗಿರಿ ಹಾಗೂ ವಿಜಯಪುರದಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 194 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.85 ಲಕ್ಷ ದಾಟಿದೆ.

ಸೋಂಕಿತರಲ್ಲಿ 586 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.39 ಲಕ್ಷ ದಾಟಿದೆ.

5 ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರಿನಲ್ಲಿ ನಾಲ್ವರು ಹಾಗೂ ತುಮಕೂರಿನಲ್ಲಿ ಒಬ್ಬರು ಸಾವಿಗೀಡಾಗಿದ್ದಾರೆ.

ಪಂದ್ಯದಲ್ಲಿ ಗೆದ್ದ ಪಾಕಿಸ್ತಾನ ತಂಡದ ಮೊಹಮ್ಮದ್ ರಿಜ್ವಾನ್ ಅವರನ್ನು ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಅಭಿನಂದಿಸಿದರು

ಶಹೀನ್ ಶಾ ಅಫ್ರಿದಿ– ಎಎಫ್‌ಪಿ ಚಿತ್ರಗಳು

ವಿಶ್ವಕಪ್ ಇತಿಹಾಸದಲ್ಲಿ ಭಾರತದೆದುರು ಪಾಕ್ ತಂಡಕ್ಕೆ ಮೊದಲ ಜಯ: ಶಹೀನ್ ಅಮೋಘ ಬೌಲಿಂಗ್

ವಿರಾಟ್ ಬಳಗಕ್ಕೆ ಮುಖಭಂಗ

ದುಬೈ: ಇಡೀ ಇನಿಂಗ್ಸ್‌ನಲ್ಲಿ ಒಂದೇ ಒಂದು ವಿಕೆಟ್ ಕೂಡ ಗಳಿಸಲು ಸಾಧ್ಯವಾಗದ ಬೌಲಿಂಗ್ ಪಡೆಯ ವೈಫಲ್ಯದಿಂದಾಗಿ ಭಾರತ ಕ್ರಿಕೆಟ್ ತಂಡವು ವಿಶ್ವಕಪ್ ಇತಿಹಾಸದಲ್ಲಿಯೇ ಮೊದಲ ಬಾರಿ ತನ್ನ ಬದ್ಧಎದುರಾಳಿ ಪಾಕಿಸ್ತಾನದ ಎದುರು ಸೋತಿತು.

ಶಹೀನ್ ಶಾ ಅಫ್ರಿದಿ ಅಮೋಘ ಬೌಲಿಂಗ್ ಮುಂದೆ ಆರಂಭದಲ್ಲಿಯೇ ಪೆಟ್ಟು ತಿಂದ ಭಾರತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 157 ರನ್ ಗಳಿಸಿತು. ಆದರೆ ಈ ಮೊತ್ತವನ್ನು ರಕ್ಷಿಸಿಕೊಳ್ಳುವಲ್ಲಿ ಭಾರತ ತಂಡದ ಬೌಲರ್‌ಗಳು ಸಂಪೂರ್ಣವಾಗಿ ವಿಫಲರಾದರು. ಪಾಕ್ ಆರಂಭಿಕ ಜೋಡಿ ಬಾಬರ್ ಆಜಂ (ಔಟಾಗದೇ 68) ಮತ್ತು ಮೊಹಮ್ಮದ್ ರಿಜ್ವಾನ್ (ಔಟಾಗದೆ 79) ಅವರು 17.5 ಓವರ್‌ಗಳಲ್ಲಿ ತಮ್ಮ ತಂಡವನ್ನು ಗೆಲುವಿನ ದಡ ಸೇರಿಸಿದರು. ವಿರಾಟ್ ಬಳಗವು 10 ವಿಕೆಟ್‌ಗಳಿಂದ ಸೋತಿತು.

ಇದುವರೆಗೆ ವಿಶ್ವಕಪ್ (ಏಕದಿನ ಮತ್ತು ಟಿ20) ಟೂರ್ನಿಗಳಲ್ಲಿ ಭಾರತವು ಪಾಕಿಸ್ತಾನದ ಎದುರು ಸೋತಿರಲಿಲ್ಲ. ಆದರೆ ಈ ಬಾರಿ ಬಾಬರ್ ಆಜಂ ನಾಯಕತ್ವದ ಬಳಗವು ಹೊಸ ಇತಿಹಾಸ ರಚಿಸಿತು. ಅದಕ್ಕೆ ಮುನ್ನುಡಿ ಬರೆದವರು ಶಹೀನ್ ಅಫ್ರಿದಿ. ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಪಾಕಿಸ್ತಾನ ತಂಡಕ್ಕೆ ವೇಗಿ ಶಹೀನ್ ಉತ್ತಮ ಆರಂಭ ಒದಗಿಸಿಕೊಟ್ಟರು. ಇನಿಂಗ್ಸ್‌ನ ಮೊದಲ ಓವರ್‌ನಲ್ಲಿ ರೋಹಿತ್ ಶರ್ಮಾ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಮೂರನೇ ಓವರ್‌ನಲ್ಲಿ ಕೆ.ಎಲ್. ರಾಹುಲ್ (3 ರನ್) ವಿಕೆಟ್ ಕಿತ್ತರು. ಕ್ರೀಸ್‌ನಲ್ಲಿದ್ದ ವಿರಾಟ್ ಇಡೀ ಇನಿಂಗ್ಸ್ ಕಟ್ಟುವ ಹೊಣೆಯನ್ನು ತಮ್ಮ ಮೇಲೆಳೆದುಕೊಂಡರು. ಅವರ ತಾಳ್ಮೆ ಮತ್ತು ಕೌಶಲಯುತ ಅರ್ಧಶತಕದಿಂದಾಗಿ (57; 49ಎಸೆತ) ತಂಡವು ಗೌರವಯುತ ಮೊತ್ತ ಗಳಿಸಿತು. ಇದರಲ್ಲಿ ರಿಷಭ್ ಪಂತ್ (39ರನ್) ಗಮನಾರ್ಹ ಕಾಣಿಕೆ ನೀಡಿದ್ದರು. ಅವರು ವಿರಾಟ್ ಜೊತೆಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 52 ರನ್ ಸೇರಿಸಿದರು. ಆದರೆ, ಹಾರ್ದಿಕ್ ಪಾಂಡ್ಯ (11 ರನ್) ತಮ್ಮ ಲಯಕ್ಕೆ ಮರಳಲಿಲ್ಲ. ವಿರಾಟ್ ಮಾತ್ರ 19ನೇ ಓವರ್‌ನವರೆಗೂ ಹೋರಾಟ ಮಾಡಿದರು.

ಆದರೆ, ಬಾಬರ್ ಮತ್ತು ರಿಜ್ವಾನ್ ಜೊತೆಯಾಟವನ್ನು ಮುರಿಯಲು ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. ಅನುಭವಿ ಭುವನೇಶ್ವರ್ ಕುಮಾರ್, ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ ಮತ್ತು ಜಡೇಜ ಅವರ ಪ್ರಯತ್ನಗಳಿಗೆ ಫಲ ಸಿಗಲಿಲ್ಲ. 'ಮಿಸ್ಟ್ರಿ ಸ್ಪಿನ್ನರ್' ವರುಣ್ ಚಕ್ರವರ್ತಿಗೆ ನೀಡಿದ ಅವಕಾಶವೂ ತಂಡದ ಕೈಹಿಡಿಯಲಿಲ್ಲ. ಇತ್ತೀಚಿನ ಕೆಲವು ಸರಣಿಗಳು ಮತ್ತು ಐಪಿಎಲ್‌ನಲ್ಲಿ ಯಶಸ್ವಿಯಾಗಿದ್ದ ಶಾರ್ದೂಲ್ ಠಾಕೂರ್, ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಮತ್ತು ಅಭ್ಯಾಸ ಪಂದ್ಯದಲ್ಲಿ ಅಮೋಘ ಅರ್ಧಶತಕ ಬಾರಿಸಿದ್ದ ಇಶಾನ್ ಕಿಶನ್ ಅವರಿಗೆ ವಿಶ್ರಾಂತಿ ನೀಡಲಾಗಿತ್ತು.

'ಆರಂಭದಲ್ಲಿಯೇ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿದ್ದು ಹಿನ್ನಡೆಗೆ ಪ್ರಮುಖ ಕಾರಣ. ನಮ್ಮ ಯೋಜನೆಯನ್ನು ಜಾರಿಗೆ ತರುವಲ್ಲಿ ಸಫಲರಾಗಲಿಲ್ಲ. ಇವತ್ತಿನ ಪಂದ್ಯದಲ್ಲಿ ಅವರು (ಎದುರಾಳಿ ಆಟಗಾರರು) ನಮಗಿಂತಲೂ ಚೆನ್ನಾಗಿ ಆಡಿದರು. ನಮ್ಮ ಮೊತ್ತದಲ್ಲಿ 10-20 ರನ್‌ಗಳು ಕೊರತೆಯಾದವು. ಇದು ಟೂರ್ನಿಯ ಮೊದಲ ಪಂದ್ಯವಷ್ಟೇ. ಇನ್ನೂ ಬಹಳಷ್ಟು ಅವಕಾಶಗಳಿವೆ. ಚೆನ್ನಾಗಿ ಆಡುತ್ತೇವೆ' ಎಂದು ಪಂದ್ಯದ ನಂತರ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಹೇಳಿದರು.

ಬ್ಲ್ಯಾಕ್ ಲೈವ್ ಮ್ಯಾಟರ್ಸ್‌ಗೆ ಬೆಂಬಲ

ಭಾರತ ತಂಡದ ಆಟಗಾರರು ಪಂದ್ಯ ಅರಂಭಕ್ಕೂ ಮುನ್ನ ಬ್ಲ್ಯಾಕ್ ಲೈವ್ ಮ್ಯಾಟರ್ಸ್ ಆಂದೋಲನಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಆಟದ ಆರಂಭಕ್ಕೂ ಮುನ್ನ ತಮ್ಮ ಡಗ್‌ಔಟ್ ಬಳಿ ವಿರಾಟ್ ಕೊಹ್ಲಿ ಬಳಗವು ಮಂಡಿಯೂರುವ ಮೂಲಕ ಬೆಂಬಲ ವ್ಯಕ್ತಪಡಿಸಿದರು. ಪಾಕ್ ತಂಡದ ಆಟಗಾರರೂ ತಮ್ಮ ಮುಷ್ಟಿ ಬಿಗಿದು ಎದೆಯ ಮೇಲೆ ಇಟ್ಟುಕೊಂಡು ಬೆಂಬಲ ಸೂಚಿಸಿದರು.

ಕಪ್ಪುವರ್ಣೀಯರ ಮೇಲೆ ದೌರ್ಜನ್ಯವನ್ನು ಖಂಡಿಸಿ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಈ ಅಭಿಯಾನ ನಡೆಸಲಾಗುತ್ತಿದೆ.

ತಂದೆ–ತಾಯಿಯ ಆಶೀರ್ವಾದದಿಂದ ಇಂದು ಈ ಸಾಧನೆ ಸಾಧ್ಯವಾಗಿದೆ. ತಂಡದ ಜಯಕ್ಕಾಗಿ ಕಾಣಿಕೆ ನೀಡಿದ್ದು ಸಂತಸವಾಗಿದೆ. ಶಹೀನ್ ಶಾ ಅಫ್ರಿದಿ
ಪಾಕಿಸ್ತಾನ ತಂಡದ ಬೌಲರ್

ಸ್ಕೋರ್ ಕಾರ್ಡ್

ಭಾರತ 7ಕ್ಕೆ 151 (20 ಓವರ್)
ರಾಹುಲ್ ಬಿ ಅಫ್ರಿದಿ 3 (8 ಎ), ರೋಹಿತ್ ಎಲ್‌ಬಿಡಬ್ಲ್ಯು ಬಿ ಅಫ್ರಿದಿ 0 (1 ಎ), ವಿರಾಟ್ ಸಿ ರಿಜ್ವಾನ್ ಬಿ ಅಫ್ರಿದಿ 57 (49 ಎ, 4x5, 6x1), ಸೂರ್ಯಕುಮಾರ್ ಸಿ ರಿಜ್ವಾನ್ ಬಿ ಹಸನ್ 11 (8 ಎ, 4x1, 6x1), ರಿಷಭ್ ಸಿ ಮತ್ತು ಬಿ ಶಾದಬ್ 39 (30 ಎ, 4x2, 6x2), ಜಡೇಜ ಸಿ ನವಾಜ್ (ಬದಲಿ) ಬಿ ಹಸನ್ ಅಲಿ 13 (13 ಎ, 4x1), ಹಾರ್ದಿಕ್ ಸಿ ಬಾಬರ್ ಬಿ ಹ್ಯಾರಿಸ್ 11 (8 ಎ, 4x2), ಭುವನೇಶ್ವರ್ ಔಟಾಗದೆ 5 (4 ಎ), ಶಮಿ ಔಟಾಗದೆ 0 (0 ಎ)
ಇತರೆ (ಬೈ 6, ಲೆಗ್ ಬೈ 1, ನೋಬಾಲ್ 1, ವೈಡ್ 4) 12
ವಿಕೆಟ್ ಪತನ: 1-1 (ರೋಹಿತ್ ಶರ್ಮಾ, 0.4), 2-6 (ಕೆ.ಎಲ್.ರಾಹುಲ್, 2.1), 3-31 (ಸೂರ್ಯಕುಮಾರ್ ಯಾದವ್, 5.4), 4-84 (ರಿಷಭ್ ಪಂತ್, 12.2), 5-125 (ರವೀಂದ್ರ ಜಡೇಜ, 17.5), 6-133 (ವಿರಾಟ್ ಕೊಹ್ಲಿ, 18.4), 7-146 (ಹಾರ್ದಿಕ್ ಪಾಂಡ್ಯ, 19.3)
ಬೌಲಿಂಗ್: ಶಹೀನ್ ಶಾ ಅಫ್ರಿದಿ 4-0-31-3, ಇಮದ್ ವಾಸಿಂ 2-0-10-0, ಹಸನ್ ಅಲಿ 4-0-44-2, ಶಾದಬ್ ಖಾನ್ 4-0-22-1, ಮೊಹಮ್ಮದ್ ಹಫೀಜ್ 2-0-12-0, ಹ್ಯಾರಿಸ್ ರವೂಫ್ 4-0-25-1

ಪಾಕಿಸ್ತಾನ ವಿಕೆಟ್ ನಷ್ಟವಿಲ್ಲದೆ 152 (17.5 ಓವರ್))
ರಿಜ್ವಾನ್ ಔಟಾಗದೆ 79 (55 ಎ, 4x6, 6x3), ಬಾಬರ್ ಆಜಂ ಔಟಾಗದೆ 68 (52 ಎ, 4x6, 6x2)
ಇತರೆ (ಲೆಗ್ ಬೈ 1, ವೈಡ್ 4) 5
ಬೌಲಿಂಗ್: ಭುವನೇಶ್ವರ್ ಕುಮಾರ್ 3-0-25-0, ಮೊಹಮ್ಮದ್ ಶಮಿ 3.5-0-43-0, ಜಸ್‌ಪ್ರೀತ್ ಬೂಮ್ರಾ 3-0-22-0, ವರುಣ್ ಚಕ್ರವರ್ತಿ 4-0-33-0, ರವೀಂದ್ರ ಜಡೇಜ 4-0-28-0

ಫಲಿತಾಂಶ: ಪಾಕಿಸ್ತಾನಕ್ಕೆ 10 ವಿಕೆಟ್‌ಗಳ ಜಯ

'ನಾಕೌಟ್ ಹಂತದ ತನಕ ಬೌಲಿಂಗ್ ಮಾಡಲಾರೆ'

ಹಾರ್ದಿಕ್ ಪಾಂಡ್ಯ –ರಾಯಿಟರ್ಸ್

ದುಬೈ (ಪಿಟಿಐ): ಬೆನ್ನುನೋವಿನ ಸಮಸ್ಯೆ ಇಲ್ಲ. ಆದರೂ ವಿಶ್ವಕಪ್ ಟೂರ್ನಿಯ ನಾಕೌಟ್ ಹಂತದವರೆಗೂ ಬೌಲಿಂಗ್ ಮಾಡುವುದಿಲ್ಲ ಎಂದು ಭಾರತ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಹೇಳಿದರು.

ಪಾಕಿಸ್ತಾನ ಎದುರಿನ ಪಂದ್ಯಕ್ಕೂ ಮೊದಲು ಮಾತನಾಡಿದ ಅವರು ಸದ್ಯ ಫಿಟ್‌ನೆಸ್ ಸಮಸ್ಯೆ ಇಲ್ಲ. ಆದರೂ ಬೌಲಿಂಗ್ ಮಾಡದೇ ಇರಲು ನಿರ್ಧರಿಸಲಾಗಿದೆ. ತಂಡದ ಪ್ರಮುಖರು ಸೂಚಿಸಿದ ನಂತರ ಬೌಲಿಂಗ್ ಮಾಡುವೆ ಎಂದರು. ಬೆನ್ನುನೋವಿನಿಂದ ಬಳಲುತ್ತಿದ್ದ ಹಾರ್ದಿಕ್ ಈಚೆಗೆ ಮುಕ್ತಾಯಗೊಂಡ ಐಪಿಎಲ್ ಟೂರ್ನಿಯ ಎರಡನೇ ಹಂತದಲ್ಲಿ ಬೌಲಿಂಗ್ ಮಾಡಿರಲಿಲ್ಲ. ವಿಶ್ವಕಪ್ ಟೂರ್ನಿಗೆ ಅವರನ್ನು ಆಯ್ಕೆ ಮಾಡಿದ್ದು ಟೀಕೆಗೆ ಕಾರಣವಾಗಿತ್ತು. ಆದರೆ ಭಾರತದ ಮೊದಲ ಪಂದ್ಯದ ಮುನ್ನಾದಿನವಾದ ಶನಿವಾರ ಮಾತನಾಡಿದ ನಾಯಕ ವಿರಾಟ್ ಕೊಹ್ಲಿ ಅವರು ತಂಡದಲ್ಲಿ ಹಾರ್ದಿಕ್ ಅವರಿಗೆ ಪ್ರಮುಖ ಪಾತ್ರ ಇದೆ ಎಂದಿದ್ದರು.

ಪಾಕ್ ಎದುರಿನ ಪಂದ್ಯದ ಬಗ್ಗೆ ಮಾತನಾಡಿದ ಹಾರ್ದಿಕ್ 'ಈ ಸಂದರ್ಭವನ್ನು ಅತಿಯಾಗಿ ವಿಜೃಂಭಿಸಿ ಭಾವುಕನಾಗಲು ಬಯಸುವುದಿಲ್ಲ. ನನ್ನ ಕುಟುಂಬದವರು ಕೂಡ ಅದನ್ನೇ ನಿರ್ಧರಿಸಿದ್ದಾರೆ' ಎಂದರು.

ಪ್ರಕ್ಷುಬ್ಧ ಪರಿಸ್ಥಿಯಿಂದ ಎದ್ದು ಬಂದ ನಬಿ ಬಳಗಕ್ಕೆ ಸ್ಕಾಟ್ಲೆಂಡ್ ತಂಡದ ಸವಾಲು

ಅಫ್ಗಾನಿಸ್ತಾನಕ್ಕೆ ಶುಭಾರಂಭದ ನಿರೀಕ್ಷೆ

ಶಾರ್ಜಾ: ತಾಲಿಬಾನ್ ಆಡಳಿತದ ಹಿನ್ನೆಲೆಯಲ್ಲಿ ದೇಶದಲ್ಲಿ ಉಂಟಾಗಿರುವ ಪ್ರಕ್ಷುಬ್ಧ ಪರಿಸ್ಥಿತಿಯ ನಡುವಿನಿಂದ ಎದ್ದು ಬಂದಿರುವ ಅಫ್ಗಾನಿಸ್ತಾನ ತಂಡ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭದ ನಿರೀಕ್ಷೆಯಲ್ಲಿದೆ. ಸೋಮವಾರ ನಡೆಯಲಿರುವ ಎರಡನೇ ಗುಂಪಿನ ಪಂದ್ಯದಲ್ಲಿ ಮೊಹಮ್ಮದ್ ನಬಿ ಬಳಗ ಸ್ಕಾಟ್ಲೆಂಡ್ ವಿರುದ್ಧ ಸೆಣಸಲಿದೆ.

ಆಗಸ್ಟ್‌ನಲ್ಲಿ ದಿಢೀರ್ ಉಂಟಾದ ಬೆಳವಣಿಗೆಯಲ್ಲಿ ಅಫ್ಗಾನಿಸ್ತಾನದ ಆಡಳಿತವನ್ನು ತಾಲಿಬಾನ್ ವಹಿಸಿಕೊಂಡಿತ್ತು. ಇದರ ನಂತರ ತಂಡಕ್ಕೆ ಸಮರ್ಪಕವಾಗಿ ಅಭ್ಯಾಸ ಮಾಡಲು ಆಗಲಿಲ್ಲ. ವಿಶ್ವಕಪ್‌ಗೆ ಸಿದ್ಧತೆ ಆರಂಭವಾಗುತ್ತಿದ್ದಂತೆ ತಂಡದ ಒಳಗೆಯೂ ಗೊಂದಲ ಉಂಟಾಗಿತ್ತು. ತಂಡದ ಆಯ್ಕೆಯಲ್ಲಿ ಅನುಭವಿ ಸ್ಪಿನ್ನರ್ ರಶೀದ್ ಖಾನ್ ಅಸಮಾಧಾನಗೊಂಡಿದ್ದರು.

ಈ ಬೆಳವಣಿಗೆಗಳ ನಂತರವೂ ತಂಡದ ಸಾಮರ್ಥ್ಯ ಕುಗ್ಗಿಲ್ಲ ಎಂಬುದು ಅಭ್ಯಾಸ ಪಂದ್ಯಗಳಲ್ಲಿ ಸಾಬೀತಾಗಿತ್ತು. ಹಾಲಿ ಚಾಂಪಿಯನ್ ವೆಸ್ಟ್ ಇಂಡೀಸ್ ವಿರುದ್ಧ ತಂಡ ಭರ್ಜರಿ ಜಯ ಸಾಧಿಸಿತ್ತು. ಅದೇ ಲಯದಲ್ಲಿ ಆಡಲು ಈಗ ಸಜ್ಜಾಗಿದೆ.

ಹಜರತ್ ಉಲ್ಲಾ ಜಜಾಯ್, ಮೊಹಮ್ಮದ್ ಶೆಹಜಾದ್, ನಜೀಬುಲ್ಲಾ ಜದ್ರಾನ್ ಮತ್ತು ನಾಯಕ ಮೊಹಮ್ಮದ್ ನಬಿ ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದು ರಶೀದ್ ಖಾನ್, ಮುಜೀಬ್ ಜದ್ರಾನ್ ಅವರೊಂದಿಗೆ ನಬಿ ಅವರು ಕೂಡ ಬೌಲಿಂಗ್‌ನಲ್ಲಿ ಮಿಂಚಬಲ್ಲರು.

ಉಭಯ ತಂಡಗಳ ಬಲಾಬಲ

ತಂಡ	ಪಂದ್ಯ	ಜಯ	ಸೋಲು	ಟೈ	ಫಲಿತಾಂಶವಿಲ್ಲ
ಅಫ್ಗಾನಿಸ್ತಾನ	84	58	25	1	-
ಸ್ಕಾಟ್ಲೆಂಡ್	73	34	35	1	3

ತಂಡಗಳು
ಅಫ್ಗಾನಿಸ್ತಾನ: ರಶೀದ್ ಖಾನ್, ರಹಮಾನುಲ್ಲ ಗುರ್ಬಜ್, ರಹಮತ್ ಉಲ್ಲ ಜಜಾಯ್, ಉಸ್ಮಾನ್ ಘನಿ, ಅಸ್ಗರ್ ಅಫ್ಗಾನ್, ಮೊಹಮ್ಮದ್ ನಬಿ (ನಾಯಕ), ನಜೀಬುಲ್ಲ ಜದ್ರಾನ್, ಹಸ್ಮತ್ ಉಲ್ಲಾ ಶಾಹಿದಿ, ಮೊಹಮ್ಮದ್ ಶಹಜಾದ್, ಮುಜೀಬ್ ಉರ್ ಹರಮಾನ್, ಕರೀಂ ಜನ್ನತ್, ಗುಲ್ಬದಿನ್ ನಯೀಬ್, ನವೀನ್ ಉಲ್ ಹಕ್, ಹಮೀದ್ ಹಸನ್, ಫರೀದ್ ಅಹಮ್ಮದ್,
ಸ್ಕಾಟ್ಲೆಂಡ್: ಕೈಲ್ ಕೊಯೆಟ್ಜರ್ (ನಾಯಕ), ರಿಚಿ ಬೆರಿಂಗ್ಟನ್, ಡೈಲಾನ್ ಬಜ್, ಮ್ಯಾಥ್ಯೂ ಕ್ರಾಸ್, ಜೋಶ್ ಡೇವಿ, ಅಲಸ್ಡೇರ್ ಇವಾನ್ಸ್, ಕ್ರಿಸ್ ಗ್ರೀವ್ಸ್, ಮೈಕೆಲ್ ಲೀಸ್ಕ್, ಕಲಂ ಮೆಕ್‌ಲೀಡ್, ಜಾರ್ಜ್ ಮುನ್ಸಿ, ಸಫಿಯಾನ್ ಷರೀಫ್, ಹಂಝ ತಾಹಿರ್, ಕ್ರೇಗ್ ವಲೇಸ್, ಮಾರ್ಕ್ ವ್ಯಾಟ್, ಬ್ರಾಡ್ಲಿ ವ್ಹೀಲ್.
ಆರಂಭ: ಸಂಜೆ 7.30, **ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್

ಕೈಲ್ ಕೊಯೆಟ್ಜರ್

ಮುಖಾಮುಖಿ ಫಲಿತಾಂಶ
6 ಪಂದ್ಯಗಳು
6 ಅಫ್ಗಾನಿಸ್ತಾನ ಜಯ

ಸ್ಕಾಟ್ಲೆಂಡ್ ತಂಡ ಮೊದಲ ಸುತ್ತಿನ ಪಂದ್ಯಗಳಲ್ಲಿ ಅಮೋಘ ಸಾಧನೆ ಮಾಡಿ ಸೂಪರ್ 12ರಲ್ಲಿ ಸ್ಥಾನ ಗಳಿಸಿದೆ. ಬ್ರಾಡ್ಲಿ ವ್ಹೀಲ್, ಜೋಶ್ ಡೇವಿ, ಮಾರ್ಕ್ ವ್ಯಾಟ್ ಮುಂತಾದವರು ತಂಡಕ್ಕೆ ಬಲ ತುಂಬಿದ್ದಾರೆ.

ಮೊಹಮ್ಮದ್ ನಬಿ— ರಾಯಿಟರ್ಸ್ ಚಿತ್ರ

ಬಾಂಗ್ಲಾದೇಶದ ನಯೀಂ–ರಹೀಂ ಜೋಡಿಯ ಆಟ ವ್ಯರ್ಥ

ಶ್ರೀಲಂಕಾಕ್ಕೆ ಚರಿತ್ ತಂದ ಜಯ

ಶಾರ್ಜಾ (ಎಎಫ್‌ಪಿ): ಸವಾಲಿನ ಮೊತ್ತ ಬೆನ್ನತ್ತಿದ ಹಾದಿಯಲ್ಲಿ ಆರಂಭದಲ್ಲೇ ಆಘಾತ ಅನುಭವಿಸಿದರೂ ಶ್ರೀಲಂಕಾ ಪಟ್ಟು ಬಿಡಲಿಲ್ಲ. ಭಾನುವಾರ ನಡೆದ ಒಂದನೇ ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಐದು ವಿಕೆಟ್‌ಗಳಿಂದ ಮಣಿಸಿದ ತಂಡ ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಶಾರ್ಜಾ ಕ್ರಿಕೆಟ್ ಕ್ರೀಡಾಂಗಣದಲ್ಲಿ 172 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ತಂಡ ಇನ್ನೂ ಏಳು ಎಸೆತ ಉಳಿದಿರುವಾಗಲೇ ಐದು ವಿಕೆಟ್ ಕಳೆದುಕೊಂಡು ದಡ ಸೇರಿತು. ತಲಾ ಐದು ಸಿಕ್ಸರ್ ಮತ್ತು ಐದು ಬೌಂಡರಿಗಳೊಂದಿಗೆ 49 ಎಸೆತಗಳಲ್ಲಿ 80 ರನ್ ಗಳಿಸಿದ ಚರಿತ್ ಅಸಲಂಕ ಗೆಲುವಿನ ರೂವಾರಿ ಎನಿಸಿದರು.

ಎರಡು ರನ್‌ಗಳಿಗೆ ಮೊದಲ ವಿಕೆಟ್ ಕಳೆದುಕೊಂಡ ತಂಡಕ್ಕೆ ಪಥುಮ್ ನಿಸಾಂಕ ಮತ್ತು ಅಸಲಂಕ 69 ರನ್‌ಗಳ ಜೊತೆಯಾಟದ ಮೂಲಕ ಜೀವ ತುಂಬಿದರು. ಎಂಟು ರನ್‌ಗಳ ಅಂತರದಲ್ಲಿ ಮೂರು ವಿಕೆಟ್ ಕಳೆದುಕೊಂಡಾಗ ತಂಡ ಮತ್ತೆ ಆತಂಕಕ್ಕೆ ಒಳಗಾಯಿತು. ಆದರೆ ಅಸಲಂಕ ಮತ್ತು ಭಾನುಕ ರಾಜಪಕ್ಸ 86 ರನ್‌ಗಳ ಜೊತೆಯಾಟದ ಮೂಲಕ ಗೆಲುವಿನತ್ತ ಕೊಂಡೊಯ್ದರು.

ನಯೀಮ್, ರಹೀಂ ಅರ್ಧಶತಕ

ಟಾಸ್ ಗೆದ್ದ ಶ್ರೀಲಂಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪ್ರಾಥಮಿಕ ಗುಂಪು ಹಂತದ ಪಂದ್ಯಗಳಲ್ಲಿ ಅತ್ಯುತ್ತಮ ಸಾಮರ್ಥ್ಯ ತೋರಿದ್ದ ಸ್ಪಿನ್ನರ್ ಮಹೀಶ್ ತೀಕ್ಷಣ ಅವರಿಲ್ಲದೇ ತಂಡ ಕಣಕ್ಕೆ ಇಳಿದಿತ್ತು. ಬೆನ್ನುನೋವಿನಿಂದ ಬಳಲುತ್ತಿರುವ ಮಹೀಶ್ ಬದಲಿಗೆ ಎಡಗೈ ವೇಗಿ ಬಿನೂರ ಫರ್ನಾಂಡೊ ಅವರಿಗೆ ಅವಕಾಶ ನೀಡಲಾಗಿತ್ತು.

ಆರಂಭಿಕ ಬ್ಯಾಟರ್ ಮೊಹಮ್ಮದ್ ನಯೀಮ್ (62; 52 ಎಸೆತ, 6 ಬೌಂಡರಿ) ಮತ್ತು ಮಧ್ಯಮ ಕ್ರಮಾಂಕದ ಮುಷ್ಫಿಕುರ್ ರಹೀಂ (57; 37 ಎ, 5 ಬೌಂ, 2 ಸಿಕ್ಸರ್) ಅವರ ಅಮೋಘ ಅರ್ಧಶತಕಗಳ ಬಲದಿಂದ ತಂಡ ಸವಾಲಿನ ಮೊತ್ತ ಕಲೆ ಹಾಕಿತು.

ದಸುನ್ ಶನಕ ಬಗಳದ ದಾಳಿಯನ್ನು ಸಮರ್ಥವಾಗಿ ಎದುರಿಸಿದ ಮೊಹಮ್ಮದ್ ನಯೀಮ್ ಮತ್ತು ಲಿಟನ್ ದಾಸ್ 35 ಎಸೆತಗಳಲ್ಲಿ 40 ರನ್ ಕಲೆ ಹಾಕಿದರು. ಲಿಟನ್ ದಾಸ್ ಮತ್ತು ಶಕೀಬ್ ಅಲ್ ಹಸನ್ 16 ರನ್‌ಗಳ ಅಂತರದಲ್ಲಿ ವಿಕೆಟ್ ಕಳೆದುಕೊಂಡರು. ಈ ಸಂದರ್ಭದಲ್ಲಿ ಜೊತೆಗೂಡಿದ ನಯೀಮ್ ಮತ್ತು ರಹೀಂ ಎದುರಾಳಿ ಬೌಲರ್‌ಗಳನ್ನು ಕಂಗೆಡಿಸಿದರು.

ಮೂರನೇ ವಿಕೆಟ್‌ಗೆ ನಯೀಮ್–ರಹೀಂ ಜೋಡಿ 73 ರನ್ ಸೇರಿಸಿ ತಂಡದ ಇನಿಂಗ್ಸ್‌ಗೆ ಬಲ ತುಂಬಿದರು. ಬಾಂಗ್ಲಾದ ಬ್ಯಾಟಿಂಗ್‌ಗೆ ಕಡಿವಾಣ ಹಾಕಲು ಶ್ರೀಲಂಕಾ ಏಳು ಬೌಲರ್‌ಗಳ ಮೂಲಕ ದಾಳಿ ನಡೆಸಿತು. ಆದರೆ ಇದಕ್ಕೆ ಫಲ ಸಿಗಲಿಲ್ಲ. ಕೊನೆಯ ಓವರ್‌ಗಳಲ್ಲಿ ಅಫೀಫ್ ಹೊಸೇನ್ ಮತ್ತು ನಾಯಕ ಮೊಹಮ್ಮದುಲ್ಲ ಅವರೊಂದಿಗೆ ಸೇರಿ ಮುಷ್ಫಿಕುರ್ ರನ್ ಗತಿ ಏರಿಸಿದರು.

ಚರಿತ್ ಅಸಲಂಕ ಅವರ ಬ್ಯಾಟಿಂಗ್ ಶೈಲಿ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಬಾಂಗ್ಲಾದೇಶ 4ಕ್ಕೆ 171 (20 ಓವರ್)
ನಯೀಮ್ ಸಿ ಮತ್ತು ಬಿ ಫೆರ್ನಾಂಡೊ 62 (52 ಎ, 4x6), ಲಿಟನ್ ಸಿ ಶನಕ ಬಿ ಕುಮಾರ 16 (16 ಎ, 4x2), ಶಕೀಬ್ ಬಿ ಕರುಣರತ್ನೆ 10 (7 ಎ, 4x2), ಮುಷ್ಫಿಕುರ್ ಔಟಾಗದೆ 57 (37 ಎ, 4x5, 6x2), ಅಫೀಫ್ ರನೌಟ್ (ಕುಮಾರ) 7 (6 ಎ, 4x1), ಮಹಮ್ಮದುಲ್ಲ ಔಟಾಗದೆ 10 (5 ಎ, 4x2)
ಇತರೆ (ಬೈ 2, ಲೆಗ್ ಬೈ 3, ನೋಬಾಲ್ 3, ವೈಡ್ 1) 9
ವಿಕೆಟ್ ಪತನ: 1-40 (ಲಿಟನ್ ದಾಸ್, 5.5), 2-56 (ಶಕೀಬ್ ಅಲ್ ಹಸನ್, 7.4), 3-129 (ಮೊಹಮ್ಮದ್ ನಯೀಮ್, 16.1), 4-150 (ಅಫೀಫ್ ಹೊಸೇನ್, 18.3)
ಬೌಲಿಂಗ್: ಚಮಿಕ ಕರುಣರತ್ನೆ 3-0-12-1, ಬಿನುರ ಫರ್ನಾಂಡೊ 3-0-27-1, ದುಷ್ಮಂತ ಚಮೀರ 4-0-41-0, ಲಾಹಿರು ಕುಮಾರ 4-0-29-1, ಚರಿತ್ ಅಸಲಂಕ 1-0-14-0, ವಾನಿಂದು ಹಸರಂಗ 3-0-29-0, ದಾಸುನ್ ಶನಕ 2-0-14-0

ಶ್ರೀಲಂಕಾ 5ಕ್ಕೆ 172 (18.5 ಓವರ್)
ಕುಶಾಲ್ ಬಿ ನಾಸುಮ್ 1 (3 ಎ), ಪಥುಮ್ ಬಿ ಶಕೀಬ್ 24 (21 ಎ, 4x1, 6x1), ಚರಿತ್ ಔಟಾಗದೆ 80 (49 ಎ, 4x5, 6x5), ಆವಿಷ್ಕ ಬಿ ಶಕೀಬ್ 0 (3 ಎ), ವಾನಿಂದು ಸಿ ನಯೀಮ್ ಬಿ ಸೈಫುದ್ದೀನ್ 6 (5 ಎ, 4x1), ರಾಜಪಕ್ಸ ಬಿ ನಾಸುಮ್ 53 (31 ಎ, 4x3, 6x3), ಶನಕ ಔಟಾಗದೆ 1 (1 ಎ)
ಇತರೆ (ವೈಡ್ 7) 7
ವಿಕೆಟ್ ಪತನ: 1-2 (ಕುಶಾಲ್ ಪೆರೇರ, 0.4), 2-71 (ಪಥುಮ್ ನಿಸಾಂಕ, 8.1), 3-71 (ಆವಿಷ್ಕ ಫೆರ್ನಾಂಡೊ, 8.4), 4-79 (ವಾನಿಂದು ಹಸರಂಗ, 9.4), 5-165 (ಭಾನುಕ ರಾಜಪಕ್ಸ, 18.2))
ಬೌಲಿಂಗ್: ನಾಸುಮ್ ಅಹಮ್ಮದ್ 2.5-0-29-2, ಮೆಹದಿ ಹಸನ್ 4-0-30-0, ಮೊಹಮ್ಮದ್ ಸೈಫುದ್ದೀನ್ 3-0-38-1, ಶಕೀಬ್ ಅಲ್ ಹಸನ್ 3-0-17-2, ಮುಸ್ತಫಿಜುರ್ ರಹಮಾನ್ 3-0-22-0, ಮಹಮ್ಮದುಲ್ಲ 2-0-21-0, ಹಫೀಫ್ ಹೊಸೇನ್ 1-0-15-0

ಫಲಿತಾಂಶ: ಶ್ರೀಲಂಕಾಕ್ಕೆ 5 ವಿಕೆಟ್‌ಗಳ ಜಯ

ಮುತ್ತಣ್ಣ, ಪರೀಕ್ಷಾ ಶ್ರೇಷ್ಠ ಅಥ್ಲೀಟ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಸ್‌ಸಿಯ ಮುತ್ತಣ್ಣ ಕೆ.ವೈ ಮತ್ತು ಅಂಜು ಬಾಬಿ ಜಾರ್ಜ್ ಸಂಸ್ಥೆಯ ಪರೀಕ್ಷಾ ಅವರು ಭಾನುವಾರ ಮುಕ್ತಾಯಗೊಂಡ ಬೆಂಗಳೂರು ನಗರ ಜಿಲ್ಲಾ ಅಥ್ಲೆಟಿಕ್ಸ್ ಕೂಟದ 16 ವರ್ಷದೊಳಗಿನವರ ವಿಭಾಗದಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಶ್ರೇಷ್ಠ ಅಥ್ಲೀಟ್ಸ್ ಪ್ರಶಸ್ತಿ ಗಳಿಸಿದರು.

ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆಯ ಆಶ್ರಯದಲ್ಲಿ ನಡೆದ ಕೂಟದ 14 ವರ್ಷದೊಳಗಿನವರ ವಿಭಾಗದಲ್ಲಿ ಕ್ರಮವಾಗಿ ಬಿಎಸ್‌ಸಿಯ ಮೋನಿಷ್ ಚಂದ್ರಶೇಕರ್ ಮತ್ತು ಅದ್ವಿಕಾ ಎ-ಕಸ್ತೂರಿ ವೇಳಂಕರ್, 12 ವರ್ಷದೊಳಗಿನವರ ವಿಭಾಗದಲ್ಲಿ ಕ್ರಮವಾಗಿ ವಿ.ಎನ್.ಎಸ್‌ನ ಸಮನ್ಯು ಆರ್-ಆರ್‌ವೈಎಸ್‌ನ ಚೇತನ ಭಾಸ್ಕರ್ ಶ್ರೇಷ್ಠ ಅಥ್ಲೀಟ್ಸ್ ಎನಿಸಿಕೊಂಡರು.

ಎರಡನೇ ದಿನದ ಫಲಿತಾಂಶಗಳು: 16 ವರ್ಷದೊಳಗಿನವರ ವಿಭಾಗದ ಬಾಲಕರು: 80 ಮೀ ಹರ್ಡಲ್ಸ್: ಲಿನೆಲ್ ಜೋಶುವಾ (ಸೇಂಟ್ ಜೋಸೆಫ್ಸ್)-1. ಕಾಲ: 12.4ಸೆ, ನಮಿಶ್ ಆರ್.ಶೆಟ್ಟಿ (ಇಂಡಿಯನ್ ಅಥ್ಲೆಟಿಕ್ಸ್ ಅಕಾಡೆಮಿ)-2, ಸನತ್ ಪಾಟೀಲ್ (ವಿದ್ಯಾನಿಕೇತನ್)-3; ಜಾವೆಲಿನ್ ಥ್ರೋ: ವೈಭವ್ ರಾಜ್ (ಡಿವೈಇಎಸ್)-1. ದೂರ:28.62 ಮೀ, ಧನುಷ್ ಕೃಷ್ಣ (ಆರ್‌ಎನ್‌ಎಸ್‌ಐಎಸ್)-2, ತಮೋಜ್ಞ (ವಿಎನ್‌ಎಸ್)-3; 400 ಮೀ ಓಟ: ನೋಯಲ್ ಜೋಸೆಫ್ (ಬಿಎಸ್‌ಸಿ)-1. ಕಾಲ: 53.9 ಸೆ, ಮುತ್ತಣ್ಣ ಕೆ.ವೈ (ಬಿಎಸ್‌ಸಿ)-2, ಪ್ರತೀಕ್ (ಬಿಎಸ್‌ಸಿ)-3; ಲಾಂಗ್ ಜಂಪ್: ಚುಲೇಶ್ವರ್ ನಾಯಕ್ (ಲೆಮಿನಾಸ್ ಎಸ್‌ಸಿ)-1. ಅಂತರ: 5.84 ಮೀ, ಲಿನೆಲ್ ಜೋಶುವಾ (ಸೇಂಟ್ ಜೋಸೆಫ್ಸ್)-2, ಮೊಹಮ್ಮದ್ ಅಲಿ ಖಾಣ್ (ಎಲೈಟ್)-3.

ಬಾಲಕಿಯರ ವಿಭಾಗ: 80 ಮೀ ಹರ್ಡಲ್ಸ್: ಭುವನ (ಬಿಎಸ್‌ಸಿ)-1. ಕಾಲ: 14.8 ಸೆ, ದೀಕ್ಷಾ ಡಿ (ಬಿಎಸ್‌ಸಿ)-2, ಅನುಶ್ರೀ ರಾಜ್ (ಸ್ಪೀಡ್)-3; ಲಾಂಗ್ ಜಂಪ್: ಪರೀಕ್ಷಾ (ಅಂಜು ಬಾಬಿ)-1. ದೂರ: 5.54 ಮೀ, ಜನಿಸ್ ರೊಸಾರಿಯೊ (ಬಿಎಸ್‌ಸಿ)-2, ವನೇಸಾ ವಿವಿಯನ್ (ಬಿಎಸ್‌ಸಿ)-3; ಜಾವೆಲಿನ್ ಥ್ರೋ: ಗಾಯತ್ರಿ ನಾಯರ್ (ಬಿಎಸ್‌ಸಿ)-1. ಅಂತರ: 20.01 ಮೀ, ಸನ್ನಿಧಿ ರಾವ್ (ಆರ್‌ಎನ್‌ಎಸ್‌ಐಸ್)-2, ಪೂರ್ವಿ ಆಶ್ರಿತ್ (ಆರ್‌ಎನ್‌ಎಸ್‌ಐಎಸ್)-3; 400 ಮೀ ಓಟ: ಶ್ರೇಯಾ ಕೆ (ಅರ್ಜುನ್)-1. ಕಾಲ: 1.02.5 ನಿ, ಹಲೀಮಾ ಫಜಿಲತ್ (ಬಿಎಸ್‌ಸಿ)-2, ಶರಣ್ಯ ವಿ (ಬಿಎಸ್‌ಸಿ)-3. 14 ವರ್ಷದೊಳಗಿನ ಬಾಲಕರು: ಬಾಲ್ ಥ್ರೋ: ಅನ್ಮುಲ್ ಸಾಯ್ (ಬಿಎಸ್‌ಸಿ)-1. ದೂರ: 54.64ಮೀ, ಅರ್ಣವ್ ನಾಯಕ್ (ಡಿವೈಇಎಸ್)-2, ನೀರಜ್ ಎಸ್ (ಎಲೈಟ್), ಅಂಜನ್ ವೈ.ಡಿ (ಆರ್‌ಎನ್‌ಎಸ್)-3; ಲಾಂಗ್ ಜಂಪ್: ಅಬೂಬಕ್ಕರ್ (ಎಲ್‌ಎಂಎಸ್)-1. ಅಂತರ: 4.90 ಮೀ, ಆ್ಯರನ್ ಎಸ್ (ಎನ್‌ಸಿ)-2, ಜ್ಞಾನಾನಂದ ಡಿ (ಫ್ಯೂಜನ್)-3; 600 ಮೀ ಓಟ: ಮೋನಿಶ್ ಚಂದ್ರಶೇಖರ್ (ಬಿಎಸ್‌ಸಿಎ)-1. ಕಾಲ: 1.39.2ಸೆ, ಆರ್ಯ (ಬಿಎಸ್‌ಸಿ)-2, ಲಿಖಿತ ಗೌಡ (ಜೆಸು)-3; ಬಾಲಕಿಯರು: ಬಾಲ್ ಥ್ರೋ: ದೀಪಿಕಾ ಎಸ್.ಟಿ (ಆರ್‌ಎನ್‌ಎಸ್‌ಐಎಸ್)-1. ದೂರ: 34.37 ಮೀ, ವಿಕ್ಟೋರಿಯಾ (ಆರ್‌ಎಂವಿ)-2, ರಮ್ಯಾ ಕಣ್ಣನ್ (ಬಿಎಸ್‌ಸಿ)-3; ಲಾಂಗ್ ಜಂಪ್: ಅದ್ವಿಕಾ ಆದಿತ್ಯ (ಬಿಎಸ್‌ಸಿ)-1. ಅಂತರ: 4.79 ಮೀ, ಕಸ್ತೂರಿ ವೇಳಂಕರ್ (ಬಿಎಸ್‌ಸಿ)-2, ಅಯನಾ ವಿನೋದ್ (ಅಂಜು ಬಾಬಿ)-3; 12 ವರ್ಷದೊಳಗಿನ ಬಾಲಕರು: 300 ಮೀ ಓಟ: ತೊಷಣ್ ನಾಯಕ್ (ಶ್ರೀರಾಂ ಗ್ಲೋಬಲ್ ಸ್ಕೂಲ್)-1. ಕಾಲ: 48.7ಸೆ, ಸುಧಾಂಶು ರಾವ್ (ಆರ್‌ಎನ್‌ಎಸ್‌ಐಎಸ್)-2, ಚಿರಾಗ್ ಗೌಡ (ಅಡ್ವೆಂಚರ್)-3; ಲಾಂಗ್ ಜಂಪ್: ಸಂಜಯ್ (ಸ್ವರಾಜ್)-1. ದೂರ: 3.89 ಮೀ, ಸಮನ್ಯು ಆರ್.ಡಿ (ವಿಎನ್‌ಎಸ್)-2, ಸಿದ್ಧಾರ್ಥ್ ನಾಯರ್ (ಬಿಎಸ್‌ಸಿ)-3; ಬಾಲಕಿಯರು: ಲಾಂಗ್‌ಜಂಪ್: ಅಭೀಪ್ಸಾ ಎಂ (ಬಿಎಸ್‌ಸಿ)-1. ದೂರ: 3.52 ಮೀ, ಪೂರ್ವಿ ಉಮೇಶ್ (ಸ್ಪೀಡ್)-2, ಅದಿತಾ ಅಶ್ವಿನ್ (ಫ್ಯೂಜನ್)-3; 300 ಮೀ ಓಟ: ಚೇತನ ಭಾಸ್ಕರ್ (ಆರ್‌ವೈಎಸ್)-1. ಕಾಲ: 47.6 ಸೆ, ಚೈತನ್ಯಾ ಮಂಜುನಾಥ್ (ಬಿಎಸ್‌ಸಿ)-2, ಅನೂಕ್ಷಾ ಪ್ರೇಮ್ ಕುಮಾರ್ (ವಿದ್ಯಾಶಿಪ್)-3.

ಮುತ್ತಣ್ಣ –ಪ್ರಜಾವಾಣಿ ಚಿತ್ರ

ಮ್ಯಾರಥಾನ್: ಗಿಡಿ ವಿಶ್ವದಾಖಲೆ

ಮ್ಯಾಡ್ರಿಡ್ (ಎಎಫ್‌ಪಿ): ಮೊದಲ ಬಾರಿ ಹಾಫ್ ಮ್ಯಾರಥಾನ್‌ನಲ್ಲಿ ಪಾಲ್ಗೊಂಡ ಇಥಿಯೋಪಿಯಾದ ಲೆಟೆಸೆನ್‌ಬೆಟ್ ಗಿಡಿ ಮಹಿಳಾ ವಿಭಾಗದ ವಿಶ್ವದಾಖಲೆ ಮುರಿದು ಚಾಂಪಿಯನ್ ಆದರು.

ಭಾನುವಾರ ಶುಭ್ರ ಬೆಳಕಿನಲ್ಲಿ ನಡೆದ ವೆಲೆನ್ಸಿಯಾ ಚಾಂಪಿಯನ್‌ಷಿಪ್‌ನಲ್ಲಿ ಒಂದು ತಾಸು ಎರಡು ನಿಮಿಷ 52 ಸೆಕೆಂಡುಗಳಲ್ಲಿ 23 ವರ್ಷದ ಗಿಡಿ ಗುರಿ ಮುಟ್ಟಿದರು. ಈ ಮೂಲಕ ಒಂದು ನಿಮಿಷದ ಅಂತರದಲ್ಲಿ ಹಿಂದಿನ ದಾಖಲೆಯನ್ನು ಮುರಿದರು.

ಕೆನ್ಯಾದ ರೂಥ್ ಚೆಪನ್‌ಗೆಟಿಚ್ ಈ ವರ್ಷದ ಏಪ್ರಿಲ್‌ನಲ್ಲಿ ದಾಖಲೆ ಬರೆದಿದ್ದರು. 5000 ಮೀಟರ್ಸ್ ಮತ್ತು 10,000 ಮೀಟರ್ಸ್ ಓಟದಲ್ಲೂ ಅವರು ವಿಶ್ವ ದಾಖಲೆ ಬರೆದಿದ್ದಾರೆ. 2020ರಲ್ಲಿ ವೆಲೆನ್ಸಿಯಾದಲ್ಲೇ ಅವರು 5000 ಮೀಟರ್ಸ್ ದಾಖಲೆ ಮಾಡಿದ್ದರು.

ಲೆಟೆಸೆನ್‌ಬೆಟ್ ಗಿಡಿ

ಮೊದಲ 10 ಕಿಲೋಮೀಟರ್ಸ್ ದೂರವನ್ನು 29 ನಿಮಿಷ 45 ಸೆಕೆಂಡುಗಳಲ್ಲಿ ಕ್ರಮಿಸಿದ ಅವರು ನಂತರ ಇನ್ನಷ್ಟು ವೇಗ ಪಡೆದುಕೊಂಡು ಗುರಿಯತ್ತ ಮುನ್ನುಗ್ಗಿದರು.

ರೇಸಿಂಗ್: ಮಿಂಚಿದ ವಿಷ್ಣು

ಕೊಯಮತ್ತೂರು: ಅನುಭವಿ ಚಾಲಕ ಚೆನ್ನೈನ ವಿಷ್ಣು ಪ್ರಸಾದ್ ಅವರು ಜೆಕೆ ಟೈರ್ ಫಾರ್ಮುಲಾ 4 ರಾಷ್ಟ್ರೀಯ ರೇಸಿಂಗ್ ಚಾಂಪಿಯನ್‌ಷಿಪ್ ಎಜಿಬಿ ರೇಸ್‌ನ ಎರಡು ವಿಭಾಗಗಳಲ್ಲಿ 'ಪೋಡಿಯಂ' ಫಿನಿಶ್ ಮಾಡಿದರು.

ಭಾನುವಾರ ಬೆಳಿಗ್ಗೆ ರೇಸ್‌ನಲ್ಲಿ ಅಗ್ರಸ್ಥಾನ (22 ನಿ.45.828 ಸೆ) ಗಳಿಸಿದ್ದ ಅವರು ಬಳಿಕದ ರೇಸ್‌ನಲ್ಲಿ ರನ್ನರ್‌ಅಪ್ ಆದರು. ಮೂರನೇ ರೇಸ್‌ನಲ್ಲಿ ಬೆಂಗಳೂರಿನ ಸೋಹಿಲ್ ಶಾ(19:01.088) ಅಗ್ರಸ್ಥಾನ ಗಳಿಸಿ ಪ್ರಶಸ್ತಿ ಗೆದ್ದರು.

ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಇಂದಿನಿಂದ: ಉತ್ತಮ ಸಾಮರ್ಥ್ಯದ ನಿರೀಕ್ಷೆಯಲ್ಲಿ ಭಾರತ

ಶಿವ ಥಾಪಾ, ಸಂಜೀತ್ ಮೇಲೆ ಕಣ್ಣು

ಬೆಲ್‌ಗ್ರೇಡ್ (ಪಿಟಿಐ): ಬಹುತೇಕ ಹೊಸಬರನ್ನೇ ಒಳಗೊಂಡಿರುವ ಭಾರತ ಬಾಕ್ಸಿಂಗ್ ತಂಡವು ಉತ್ತಮ ಸಾಮರ್ಥ್ಯದ ನಿರೀಕ್ಷೆಯೊಂದಿಗೆ ಎಐಬಿಎ ವಿಶ್ವ ಚಾಂಪಿಯನ್‌ಷಿಪ್ ಕಣಕ್ಕಿಳಿಯಲು ಸಜ್ಜಾಗಿದೆ. ಸೋಮವಾರ ಇಲ್ಲಿ ಆರಂಭವಾಗುವ ಚಾಂಪಿಯನ್‌ಷಿಪ್‌ನಲ್ಲಿ ಹಿಂದಿನ ಸಾಧನೆ ಮೀರುವ ಛಲದಲ್ಲಿದೆ.

2019ರ ಆವೃತ್ತಿಯಲ್ಲಿ ದೇಶಕ್ಕೆ ಮೊದಲ ಬಾರಿ ಬೆಳ್ಳಿ ಪದಕವನ್ನು ಗೆದ್ದುಕೊಟ್ಟಿದ್ದ ವಿಶ್ವದ ಅಗ್ರಕ್ರಮಾಂಕದ ಬಾಕ್ಸರ್ ಅಮಿತ್ ಪಂಗಲ್ ಮತ್ತು ಅದೇ ವರ್ಷ ಕಂಚು ವಿಜೇತ ಮನೀಷ್ ಕೌಶಿಕ್ ಅವರು ಈ ಬಾರಿಯ ಕೂಟಕ್ಕೆ ಲಭ್ಯರಿಲ್ಲ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸಾಧಾರಣ ಸಾಮರ್ಥ್ಯ ತೋರಿದ್ದ ಇವರಿಬ್ಬರು ವಿರಾಮ ಬಯಸಿದ್ದು, ಕಣಕ್ಕಿಳಿಯುತ್ತಿಲ್ಲ.

ಏಷ್ಯನ್ ಪದಕ ವಿಜೇತ ದೀಪಕ್ ಕುಮಾರ್ (51 ಕೆಜಿ ವಿಭಾಗ), ಶಿವ ಥಾಪಾ (63.5 ಕೆಜಿ) ಮತ್ತು ಸಂಜೀತ್ (92 ಕೆಜಿ) ತಂಡದಲ್ಲಿರುವ ಅನುಭವಿಗಳಾಗಿದ್ದು ಇವರ ಮೇಲೆ ನಿರೀಕ್ಷೆಯ ಭಾರವಿದೆ. ಇದೇ 20ರಂದು ತಂಡವು ಸರ್ಬಿಯಾದ ರಾಜಧಾನಿಗೆ ಬಂದಿಳಿದಿದೆ.

ಸಂಜೀತ್ ಅವರು ಹಾಲಿ ಏಷ್ಯನ್ ಚಾಂಪಿಯನ್ ಆಗಿದ್ದರೆ, ದೀಪಕ್ ಈ ಹಿಂದೆ ಬೆಳ್ಳಿಪದಕ ಗೆದ್ದುಕೊಂಡಿದ್ದರು. ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಶಿವ ಥಾಪಾ ದಾಖಲೆಯ ಐದು ಬಾರಿ 'ಪೋಡಿಯಂ ಫಿನಿಶ್' ಮಾಡಿದ್ದಾರೆ. ಇವರೆಲ್ಲರ ಪೈಕಿ ಶಿವ ಅವರಿಗೆ ಮಾತ್ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿದ ಅನುಭವವಿದೆ. 2015ರ ಆವೃತ್ತಿಯಲ್ಲಿ ಅವರಿಗೆ ಬೆಳ್ಳಿ ಪದಕ ಒಲಿದಿತ್ತು.

ತಂಡದಲ್ಲಿರುವ ಇನ್ನುಳಿದ 10 ಮಂದಿ ನೂತನ ರಾಷ್ಟ್ರೀಯ ಚಾಂಪಿಯನ್‌ಗಳು. ಇವರೊಂದಿಗೆ ತಂಡದ ಹೈಫರ್ಪಾರ್ಮೆನ್ಸ್ ನಿರ್ದೇಶಕ ಸ್ಯಾಂಟಿಯಾಗೊ ನೀವಾ, ಮುಖ್ಯ ಕೋಚ್ ನರೇಂದ್ರ ರಾಣಾ ಮತ್ತು ಸಹಾಯಕ ಕೋಚ್‌ಗಳಲ್ಲಿ ಒಬ್ಬರಾದ, ಕಾಮನ್‌ವೆಲ್ತ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಎಲ್. ದೇವೇಂದ್ರೊ ಸಿಂಗ್ ಇದ್ದಾರೆ.

ವಿಶ್ವ ಕೂಟಕ್ಕೆ ಸಜ್ಜುಗೊಳ್ಳಲು ಬಾಕ್ಸರ್‌ಗಳಿಗೆ ಸಿಕ್ಕ ಸಮಯ ತುಂಬಾ ಕಡಿಮೆ. ರಾಷ್ಟ್ರೀಯ ಚಾಂಪಿಯನ್‌ಷಿಪ್ ಬಳಿಕ ಅವರು ಕೇವಲ 10 ದಿನಗಳ ಕಾಲ ಅಭ್ಯಾಸ ನಡೆಸಿದ್ದಾರೆ.

105 ರಾಷ್ಟ್ರಗಳ 600ಕ್ಕೂ ಹೆಚ್ಚು ಬಾಕ್ಸರ್‌ಗಳು ಚಾಂಪಿಯನ್‌ಷಿಪ್‌ನಲ್ಲಿ ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ. ವಿಶ್ವ-ಚಾಂಪಿಯನ್‌ಗಳಾದ ಆ್ಯಂಡಿ ಕ್ರೂಜ್ ಗೋಮೆಜ್, ರೇನಿಯಲ್ ಇಗ್ಲೇಸಿಯಸ್, ಅರ್ಲೆನ್ ಲೋಪೆಜ್, ಜೂಲಿಯೊ ಲಾ ಕ್ರೂಜ್ ಮತ್ತು ಲಜಾರೊ ಅಲ್ವಾರೆಜ್ ಪ್ರಮುಖ ಆಕರ್ಷಣೆಯಾಗಿದ್ದಾರೆ. ಇವರೆಲ್ಲರೂ ಕ್ಯೂಬಾವನ್ನು ಪ್ರತಿನಿಧಿಸಲಿದ್ದಾರೆ.



ಶಿವ ಥಾಪಾ

ಸಂಜೀತ್ (ಎಡ)– ಪಿಟಿಐ ಚಿತ್ರ

ಬಹುಮಾನ ಮೊತ್ತ

ಚಿನ್ನ ವಿಜೇತ	₹ 75 ಲಕ್ಷ
ಬೆಳ್ಳಿ ವಿಜೇತ	₹ 37.50 ಲಕ್ಷ
ಕಂಚು ವಿಜೇತ	ಇಬ್ಬರಿಗೆ ತಲಾ ₹ 18.75 ಲಕ್ಷ

ಭಾರತ ಬಾಕ್ಸಿಂಗ್ ತಂಡ

ಗೋವಿಂದ್ ಸಾಹ್ನಿ (48 ಕೆಜಿ ವಿಭಾಗ), ದೀಪಕ್‌ಕುಮಾರ್ (51 ಕೆಜಿ), ಆಕಾಶ್ (54 ಕೆಜಿ), ರೋಹಿತ್ ಮೋರ್ (57 ಕೆಜಿ), ವೀರೇಂದ್ರ ಸಿಂಗ್ (60 ಕೆಜಿ), ಶಿವ ಥಾಪಾ (63.5 ಕೆಜಿ), ಆಕಾಶ್ (67 ಕೆಜಿ), ನಿಶಾಂತ್ ದೇವ್ (71 ಕೆಜಿ), ಸುಮಿತ್ (75 ಕೆಜಿ), ಸಚಿನ್ ಕುಮಾರ್ (80 ಕೆಜಿ), ಲಕ್ಷ್ಯ (86 ಕೆಜಿ), ಸಂಜೀತ್ (92 ಕೆಜಿ) ಮತ್ತು ನರೇಂದ್ರ ಸಿಂಗ್ (+92 ಕೆಜಿ)

ಅನುಪಮಾ, ಪ್ರಿಯಾಂಶುಗೆ ಪ್ರಶಸ್ತಿ

ಇನ್ಫೊಸಿಸ್ ಫೌಂಡೇಷನ್ ಬ್ಯಾಡ್ಮಿಂಟನ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಪಮಾ ಉಪಾಧ್ಯಾಯ ಹಾಗೂ ಪ್ರಿಯಾಂಶು ರಾಜಾವತ್ ಅವರು ಭಾನುವಾರ ಮುಕ್ತಾಯವಾದ ಇನ್ಫೊಸಿಸ್ ಫೌಂಡೇಷನ್ ಇಂಡಿಯಾ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳಾ ಹಾಗೂ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಇಲ್ಲಿ ನಡೆದ ಮಹಿಳೆಯರ ಸಿಂಗಲ್ಸ್ ಫೈನಲ್ ಹಣಾಹಣಿಯಲ್ಲಿ ಅನುಪಮಾ 21–19, 21–19ರಿಂದ ಉನ್ನತಿ ಹೂಡಾ ಎದುರು ಜಯ ಗಳಿಸಿದರು. 44 ನಿಮಿಷಗಳಲ್ಲಿ ಈ ಪಂದ್ಯ ಮುಗಿಯಿತು.

ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಸುತ್ತಿನ ಸೆಣಸಾಟದಲ್ಲಿ ಪ್ರಿಯಾಂಶು 12-21, 21-10, 21-8ರಿಂದ ರಘು ಮರಿಸ್ವಾಮಿ ಎದುರು ಗೆದ್ದು ಬೀಗಿದರು. 45 ನಿಮಿಷಗಳ ಈ ಜಿದ್ದಾಜಿದ್ದಿನ ಪಂದ್ಯದಲ್ಲಿ ಮೊದಲ ಗೇಮ್ ಸೋತ ಪ್ರಿಯಾಂಶು ಬಳಿಕ ಪುಟಿದೆದ್ದರು. ಸತತ ಎರಡನೇ ಗೇಮ್‌ಗಳನ್ನು ತಮ್ಮದಾಗಿಸಿಕೊಂಡು ಟ್ರೋಫಿಗೆ ಮುತ್ತಿಕ್ಕಿದರು.

ಪುರುಷರ ಡಬಲ್ಸ್ ವಿಭಾಗದಲ್ಲಿ ಕೃಷ್ಣಪ್ರಸಾದ್ ಗರಗ್ ಹಾಗೂ ವಿಷ್ಣುವರ್ಧನ್ ಗೌಡ್ ಪ್ರಾಂಜಲ್ ಜೋಡಿಯು 24-22, 13-21, 22-20ರಿಂದ ಅರುಣ್ ಜಾರ್ಜ್–ಸನ್ಯಾಮ್ ಶುಕ್ಲಾ ಎದುರು ಜಯಿಸಿ ಪ್ರಶಸ್ತಿ ಗೆದ್ದಿತು. ಮಹಿಳೆಯರ ಡಬಲ್ಸ್ ವಿಭಾಗದ ಪ್ರಶಸ್ತಿಯು ತ್ರೀಶಾ ಜೋಲಿ ಹಾಗೂ ಗಾಯತ್ರಿ ಗೋಪಿಚಂದ್ ಅವರಿಗೆ ಒಲಿಯಿತು.

ಫೈನಲ್ ಪಂದ್ಯದಲ್ಲಿ ಇವರಿಬ್ಬರು 23-21, 21-14ರಿಂದ ತನಿಶಾ ಕ್ರಾಸ್ಟೊ ಮತ್ತು ಋತುಪರ್ಣಾ ಪಂಡಾ ಎದುರು ಜಯ ಸಾಧಿಸಿದರು.

ಇಶಾನ್ ಭಟ್ನಾಗರ್ ಹಾಗೂ ತನಿಶಾ ಕ್ರಾಸ್ಟೊ ಅವರು ಮಿಶ್ರ ಡಬಲ್ಸ್ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಪ್ರಶಸ್ತಿ ಸುತ್ತಿನ ಸೆಣಸಾಟದಲ್ಲಿ ಈ ಜೋಡಿಯು 21-16, 21-19ರಿಂದ ಸಾಯಿ ಪ್ರತೀಕ್ ಹಾಗೂ ಗಾಯತ್ರಿ ಗೋಪಿಚಂದ್ ಎದುರು ಗೆಲುವು ಸಾಧಿಸಿದರು.

ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದವರು. (ಎಡದಿಂದ) ತ್ರೀಶಾ ಜೋಲಿ, ಗಾಯತ್ರಿ ಗೋಪಿಚಂದ್, ಪ್ರಿಯಾಂಶು ರಾಜಾವತ್, ಇಶಾನ್ ಭಟ್ನಾಗರ್, ತನಿಶಾ ಕ್ರಾಸ್ಟೊ, ಕೃಷ್ಣಪ್ರಸಾದ್ ಗರಗ್, ವಿಷ್ಣುವರ್ಧನ್ ಗೌಡ್ ಮತ್ತು ಅನುಪಮಾ ಉಪಾಧ್ಯಾಯ

ಹೈದರಾಬಾದ್ ರೇಸ್

ಜೂಲಿಯೆಟ್ ಗೆಲ್ಲುವ ನಿರೀಕ್ಷೆ

ಗೋಲ್ಕಂಡ್ ಸೆಂಟ್ ಲೆಗೆರ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜೂಲಿಯೆಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬ್ಯೂಟಿ ಫ್ಲೇಮ್ 3, ಜಾಯ್ ಓ ಜಾಯ್ 5, ಅಶ್ವ ಪುಶ್ಕಿನ್ 10
2ನೇ ರೇಸ್: ಏಬಲ್ ಲವ್ 3, ಸ್ಟಾರ್ ಬೇಬ್ 6, ಸಿಟಿ ಆಫ್ ಬ್ಲೆಸ್ಸಿಂಗ್ 4
3ನೇ ರೇಸ್: ಥ್ಯಾಂಕ್ಸ್ 1, ಟೋಟಲ್ ಡಾರ್ಕ್ 8, ಹಾಟ್ ಸೀಟ್ 6
4ನೇ ರೇಸ್: ವಿನ್ ವಿಶನ್ 2, ಬೆಡಾಜಲ್ಡ್ 5, ಸೆಫಲೋನಿಯಾ 10
5ನೇ ರೇಸ್: ಮಿರಾನ 2, ಗುಡ್ ಕನೆಕ್ಷನ್ 4, ಲಾಗೋಸ್ 1
6ನೇ ರೇಸ್: ಜೂಲಿಯೆಟ್ 3, ಪಾಯಿಂಟ್ ಟು ಪ್ರೂವ್ 1, ಬಿಸಾಟೆ 2
7ನೇ ರೇಸ್: ಟರ್ನಿಂಗ್ ವ್ಹೀಲ್ 3, ರಿನೆ 1, ವಿನ್ನಿಂಗ್ ಪ್ಲೇಯರ್ 4.

ಉತ್ತಮ ಬೆಟ್: ಗುಡ್ ಕನೆಕ್ಷನ್

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,7	4,5,6,7	3,4,5	5,6,7

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಮಹಿಳೆಯರ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್

ಕ್ವಾರ್ಟರ್‌ಫೈನಲ್‌ಗೆ ಪೂಜಾ

ಹಿಸ್ಸಾರ್ (ಪಿಟಿಐ): ಹರಿಯಾಣದ ಪೂಜಾ ರಾಣಿ ಅವರು ಮಹಿಳೆಯರ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ 81 ಕೆಜಿ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಹಾಲಿ ಏಷ್ಯನ್ ಚಾಂಪಿಯನ್ ಪೂಜಾ ಅವರು ಭಾನುವಾರ ನಡೆದ ಬೌಟ್‌ನಲ್ಲಿ ಕೇರಳದ ಪಾರ್ವತಿ ಪಿ ಅವರನ್ನು ಮಣಿಸಿದರು.

ಸೇಂಟ್ ಜೋಸೆಫ್ಸ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಆರಂಭದಿಂದಲೇ ರಾಣಿ ಆಧಿಪತ್ಯ ಸ್ಥಾಪಿಸಿದರು. ಸ್ಪರ್ಧೆ ಮುಂದೆ ಸಾಗಿದಂತೆ ಪೂಜಾ ಅವರ ಪ್ರಬಲ ಪಂಚ್‌ಗಳು ಪಾರ್ವತಿ ಅವರನ್ನು ಕಂಗೆಡಿಸಿದವು. ಹೀಗಾಗಿ ಮೊದಲ ಸುತ್ತಿನ ಅಂತ್ಯಕ್ಕೇ ಬೌಟ್ ಕೊನೆಗೊಳಿಸಲು ರೆಫರಿಗಳು ನಿರ್ಧರಿಸಿದರು.

ಯೂತ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೊದಲಿಗರಾಗಿದ್ದ ಹರಿಯಾಣದ ನೀತು ಮತ್ತು ಅಸ್ಸಾಂನ ಅಂಕುಶಿತಾ ಬೋರೊ ಅವರು ಗೆಲುವಿನ ಓಟ ಮುಂದುವರಿಸಿದರು. ನೀತು 48 ಕೆಜಿ ವಿಭಾಗದಲ್ಲಿ ಮತ್ತು ಅಂಕುಶಿತಾ 66 ಕೆಜಿ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಪಶ್ಚಿಮ ಬಂಗಾಳದ ಪೂರಬಿ ಕರ್ಮಾಕರ್ ಅವರನ್ನು ನೀತು 5–0ಯಿಂದ ಮಣಿಸಿದರು. ಪಂಜಾಬ್‌ನ ಅಮನ್‌ದೀಪ್ ಕೌರ್ ವಿರುದ್ಧ ಅಂಕುಶಿತಾ ಪ್ರಬಲ ಆಕ್ರಮಣದ ಮೂಲಕ ಮಣಿಸಿದರು.

48 ಕೆಜಿ ವಿಭಾಗದಲ್ಲಿ ರೈಲ್ವೆ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್‌ನ ಮಂಜು ರಾಣಿ ಉತ್ತರಾಖಂಡದ ಶೋಭಾ ಕಹಲಿ ಅವರನ್ನು 5–0ಯಿಂದ ಸೋಲಿಸಿ ಎಂಟರ ಘಟ್ಟ ಪ್ರವೇಶಿಸಿದರು. ಮಂಜು ರಾಣಿ 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗಳಿಸಿದ್ದರು. ತಮಿಳುನಾಡಿದ ಕಲೈವಾಣಿ ಗುಜರಾತ್‌ನ ಶೀತಲ್ ದಾತಾನಿಯ ವಿರುದ್ಧ ಗೆದ್ದರು.

66 ಕೆಜಿ ವಿಭಾಗದಲ್ಲಿ ಪೊಲೀಸ್ ಇಲಾಖೆಯ ಲಾಲ್‌ಬೂಟಾಸಾಹಿ 5–0ಯಿಂದ ಹರಿಯಾಣದ ಜ್ಯೋತಿ ರಾಣಿ ಅವರನ್ನು ಮಣಿಸಿದರು. 63 ಕೆಜಿ ವಿಭಾಗದಲ್ಲಿ ಹರಿಯಾಣದ ಪರ್ವೀನ್ ಪೊಲೀಸ್ ಇಲಾಖೆಯ ಚೋಬಾ ದೇವಿ ಹೇಮಮ್ ಅವರನ್ನು 4–1ರಲ್ಲಿ ಸೋಲಿಸಿದರು. ಮಧ್ಯಪ್ರದೇಶದ ಮಂಜು ಬಂಬೋರಿಯ ಮಿಜೋರಾಂನ ಅಭಿಸಕ್ ವನ್‌ಲಾಲ್‌ಮಾವಿ ವಿರುದ್ಧ ಗೆದ್ದರು.

ಇಂದಿನಿಂದ 14 ವರ್ಷದೊಳಗಿನವರ ಟೆನಿಸ್ ಟೂರ್ನಿ

ಬೆಂಗಳೂರು: ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ಟಿಎಸ್7 14 ವರ್ಷದೊಳಗಿನವರ ಟೆನಿಸ್ ಟೂರ್ನಿಯು ಸೋಮವಾರದಿಂದ ಇಲ್ಲಿ ನಡೆಯಲಿದೆ.

ಮೂರು ಅರ್ಹತಾ ಸುತ್ತುಗಳ ಮೂಲಕ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ತಲಾ ಎಂಟು ಮಂದಿ ಮುಖ್ಯ ಸುತ್ತಿಗೆ ಅರ್ಹತೆ ಗಳಿಸಿದ್ದಾರೆ.

ಮುಖ್ಯ ಸುತ್ತಿನಲ್ಲಿ ಆಡುವವರು: ಬಾಲಕರು: ಕೌಶಿಕ್ ರಾಜೇಶ್, ಆಹಿಲ್ ಆಯಾಜ್, ದಕ್ಷಿಶ್ ಬಸವರಾಜು, ಇಶಾನ್ ಬಗಾದಿ, ಸೂರ್ಯಕುಮಾರ್, ಯಶ್ ಪಂಚಾಕ್ಷರಿ, ಅರ್ಜುನ್ ಸೂರಿ, ಅನುರಾಗ್ ಕಳ್ಳಂಬೆಳ್ಳ.

ಬಾಲಕಿಯರು: ಅಗಮ್ಯ ಚಂದ್ರ, ದಿಶಾ ಕುಮಾರ್, ರಿತಿಶಾ ಚೌಧರಿ, ಅದಿತಿ ಖಾನಾಪುರಿ, ಅನ್ವೇಷಾ ಧರ್, ನಯನಾ ಪಾರ್ಥಸಾರಥಿ, ಸಾನ್ವಿ ಪ್ರಕಾಶ್, ರಿಯಾ ಪುದಿಯೊಕ್ಕಡ.

ಎಟಿಪಿ ಫೈನಲ್ಸ್ ಟೆನಿಸ್: ಆ್ಯಂಡ್ರೆ ರುಬ್ಲೆವ್‌ಗೆ ಅರ್ಹತೆ

ಮಾಸ್ಕೊ (ರಾಯಿಟರ್ಸ್): ರಷ್ಯಾದ ಆ್ಯಂಡ್ರೆ ರುಬ್ಲೆವ್ ಅವರು ವರ್ಷಾಂತ್ಯದ ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಗೆ ಅರ್ಹತೆ ಗಳಿಸಿದ್ದಾರೆ. ಮುಂದಿನ ತಿಂಗಳು ಟುರಿನ್‌ನಲ್ಲಿ ನಡೆಯುವ ಟೂರ್ನಿಗೆ ಸಿಂಗಲ್ಸ್ ವಿಭಾಗದಲ್ಲಿ ಪ್ರವೇಶ ಪಡೆದ ಐದನೇ ಆಟಗಾರ ಆಗಿದ್ದಾರೆ ಅವರು.

ಎಟಿಪಿ ಫೈನಲ್ಸ್ ಟೂರ್ನಿಯಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರ ಎಂಟು ಸ್ಥಾನಗಳಲ್ಲಿರುವ ಆಟಗಾರರು ಕಣಕ್ಕಿಳಿಯುವರು. ಸರ್ಬಿಯಾದ ನೊವಾಕ್ ಜೊಕೊವಿಚ್, ರಷ್ಯಾದ ಡೇನಿಯಲ್ ಮೆಡ್ವೆಡೆವ್, ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಾಸ್ ಹಾಗೂ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಈಗಾಗಲೇ ಅರ್ಹತೆ ಗಿಟ್ಟಿಸಿದವರು.

ಎಟಿಪಿ ಫೈನಲ್ಸ್ ಟೂರ್ನಿಯು ನವೆಂಬರ್ 14ರಿಂದ 21ರವರೆಗೆ ನಡೆಯಲಿದೆ.

ಆ್ಯಂಡ್ರೆ ರುಬ್ಲೆವ್– ಎಎಫ್‌ಪಿ ಚಿತ್ರ

₹ 76 000^ ರಿಂದ ಪ್ರಾರಂಭ

TVS Jupiter 125 ಅಧಿಕಕ್ಕಿಂತಲೂ ಅಧಿಕ

5 YEAR WARRANTY* Download TVS Service App

ರೈಡಿಂಗ್ ಮಾಡುವಾಗ ಯಾವಾಗಲೂ ಹೆಲ್ಮೆಟ್ ಧರಿಸಿ. tvsjupiter | www.tvsmotor.com/tvs-jupiter-125/disc | Call: 1800 315 7777

^ Ex-showroom price. * 5-yr. warranty without any additional charges.

FOR ALL INSTITUTIONAL/BULK REQUIREMENTS PLEASE MAIL corporate.customersupport@tvsmotor.com ಅಧಿಕೃತ ಮುಖ್ಯ ವಿತರಕರು: ಬೆಂಗಳೂರು: ಜಯನಗರ: ಭಾರತ್ ಟಿವಿಎಸ್ ದೂ: 8971572817, ರಾಜಾಜಿನಗರ: ಬ್ರಿಡ್ಜ್‌ಸ್ಟೋನ್ ಟಿವಿಎಸ್ ದೂ: 8971624526, ಮಹಾಲಕ್ಷ್ಮಿ ಲೇಔಟ್: ಗ್ಲೋಬಲ್ ಟಿವಿಎಸ್ ದೂ: 7619265566, ದೊಮ್ಮಲೂರು: ಪಿ.ಆರ್.ಎನ್ ಟಿವಿಎಸ್ ದೂ: 6366936909, ಹಲಸೂರು: ಪಿ.ಆರ್.ಎನ್ ಟಿವಿಎಸ್ ದೂ: 6366936931, ಚಾಮರಾಜಪೇಟೆ: ಪಿ.ಆರ್.ಎನ್ ಟಿವಿಎಸ್ ದೂ: 6366936922, ಕೋರಮಂಗಲ: ಎನ್.ಆರ್.ಜಿ.ಸಿ ಟಿವಿಎಸ್ ದೂ: 9900860960, ಹೆಬ್ಬಗೋಡಿ: ಬೆಂಗಳೂರು ಟಿವಿಎಸ್ ದೂ: 8151095959/ 080-41141555, ಹರಲೂರು: ಬೆಂಗಳೂರು ಟಿವಿಎಸ್ ದೂ: 8494959555/ 8970859555, ಕನಕಪುರ ರಸ್ತೆ: ಧನ್‌ಚರಣ್ ಟಿವಿಎಸ್ ದೂ: 9916183232, ಜಾಲಹಳ್ಳಿ ಕ್ರಾಸ್: ಪ್ರಕೃತಿ ಟಿವಿಎಸ್ ದೂ: 917814508304, ಗಂಗಾನಗರ: ಪ್ರಕೃತಿ ಟಿವಿಎಸ್ ದೂ: 7814508304, ಭದ್ರಪ್ಪ ಲೇಔಟ್: ಪ್ರಕೃತಿ ಟಿವಿಎಸ್ ದೂ: 7814508304, ಕಲ್ಯಾಣ ನಗರ: ಪಿ.ಆರ್.ಎನ್ ಟಿವಿಎಸ್ ದೂ: 6366936908, ಬೊಮ್ಮನಹಳ್ಳಿ: ಅರುಣಗಿರಿ ಟಿವಿಎಸ್ ದೂ: 8971593945, ಹೆಚ್.ಎಸ್.ಆರ್ ಲೇಔಟ್: ಕುಬೇರ ಟಿವಿಎಸ್ ದೂ: 8971601956, ಬೆಳ್ಳಂದೂರು: ಇಂಡಿಯನ್ ಟಿವಿಎಸ್ ದೂ: 9900500123, ಬನ್ನೇರುಘಟ್ಟ ರೋಡ್: ನಿಯೋ ಟಿವಿಎಸ್ ದೂ: 8971628452, ಮಾರತಹಳ್ಳಿ: ತ್ರಿಜಲ್ ಟಿವಿಎಸ್ ದೂ: 8971599450, ವೈಟ್‌ಫೀಲ್ಡ್: ತ್ರಿಜಲ್ ಟಿವಿಎಸ್ ದೂ: 8971598119, ಯಲಹಂಕ: ಹೇಮಂತ್ ಟಿವಿಎಸ್ ದೂ: 9740180379, ವಿದ್ಯಾರಣ್ಯಪುರ: ಹೇಮಂತ್ ಟಿವಿಎಸ್ ದೂ: 9740180379, ದೊಡ್ಡಬಳ್ಳಾಪುರ: ಹೇಮಂತ್ ಟಿವಿಎಸ್ ದೂ: 9740180379, ರಾಜರಾಜೇಶ್ವರಿ ನಗರ: ಸೋಲಾರ್ ಟಿವಿಎಸ್ ದೂ: 9066032272, ಕೆಂಗೇರಿ: ಸೋಲಾರ್ ಟಿವಿಎಸ್ ದೂ: 9066032272, ಕೃಷ್ಣರಾಜಪುರ: ಸೂರ್ಯಪ್ರತಾಪ್ ಟಿವಿಎಸ್ ದೂ: 9870327108, ಫಣಸಂದ್ರ: ಸೂರ್ಯಪ್ರತಾಪ್ ಟಿವಿಎಸ್ ದೂ: 9986716999/9449847671, ಟ್ಯಾನ್ ಫ್ಯಾಕ್ಟರಿ: ಡಿಂಪಲ್ ಟಿವಿಎಸ್ ದೂ: 8147117435 / 36, ಅತ್ತಿಬೆಲೆ: ಬಾಲಕೃಷ್ಣ ಟಿವಿಎಸ್ ದೂ: 8971703849, ಜಿಗಣಿ: ಶ್ರೀ ಬಾಲಾಜಿ ಟಿವಿಎಸ್ ದೂ: 9845762549, ಹೊಸಕೋಟೆ: ನಿತಿನ್ ಟಿವಿಎಸ್ ದೂ: 7811021081, ನೆಲಮಂಗಲ: ನವಯುಗ್ ಟಿವಿಎಸ್ ದೂ: 8971630975, ಕನಕಪುರ: ಅಂಜನಾದ್ರಿ ಟಿವಿಎಸ್ ದೂ: 9066064491, ರಾಮನಗರ: ಸಮರ್ಥ ಟಿವಿಎಸ್ ದೂ: 9066064383, ಕೋಲಾರ: ಸರವಣ ಟಿವಿಎಸ್ ದೂ: 8971676986, ಕೆ.ಜಿ.ಎಫ್: ಸರವಣ ಟಿವಿಎಸ್ ದೂ: 9066064490, ಚಿಂತಾಮಣಿ: ಬಾಲಾಜಿ ಟಿವಿಎಸ್ ದೂ: 9066064551, ಚಿಕ್ಕಬಳ್ಳಾಪುರ: ಮಾರುತಿ ಟಿವಿಎಸ್ ದೂ: 9870327133, ತುಮಕೂರು: ಶ್ರೀ ಬಾಲಾಜಿ ಟಿವಿಎಸ್ ದೂ: 8971657342, ತುಮಕೂರು: ಶ್ರೀಗಿರಿ ಟಿವಿಎಸ್ ದೂ: 8971657691, ತಿಪಟೂರು: ನಿಕಿತ ಟಿವಿಎಸ್ ದೂ: 8971675903, ಹಾಸನ: ಶ್ರೀ ಕೃಷ್ಣ ಟಿವಿಎಸ್ 7814925655, (ಬ್ರಾಂಚ್) ಜಯನಗರ: ಶ್ರೀ ಕೃಷ್ಣ ಟಿವಿಎಸ್, ದೂ: 7829928314, ಅಧಿಕೃತ ವಿತರಕರು: ಬೆಂಗಳೂರು: ಮಾಗಡಿ ಮೈನ್ ರೋಡ್: ಸೋಲಾರ್ ಟಿವಿಎಸ್ ದೂ: 080-23400193, ವಿಜಯನಗರ: ಸೋಲಾರ್ ಟಿವಿಎಸ್ ದೂ: 7829066661, ಮತ್ತಿಕೆರೆ: ಫಾಸ್ಟ್‌ಟ್ರಾಕ್ ಟಿವಿಎಸ್ ದೂ: 9986837771, ಬಸವೇಶ್ವರನಗರ: ಸ್ಪೀಡ್ ಟಿವಿಎಸ್ ದೂ: 080-41287182, ಮಲ್ಲೇಶ್ವರ: ಕುಬೇರ ಟಿವಿಎಸ್, ದೂ: 7624988146, ಹನುಮಂತ ನಗರ: ಸ್ಕಂದ ಟಿವಿಎಸ್ ದೂ: 9008533899, ಜೆಪಿ ನಗರ 6ನೇ ಸ್ಟೇಜ್: ಶ್ರೀಸುಕ್ರಾ ಟಿವಿಎಸ್ ದೂ: 9886966609, ಜೆಪಿ ನಗರ 7ನೇ ಸ್ಟೇಜ್: ಪ್ರೀತಂ ಟಿವಿಎಸ್ ದೂ: 9141400341, ಮರಿಯಪ್ಪನ ಪಾಳ್ಯ: ವಿವಿಕೆ ಟಿವಿಎಸ್ ದೂ: 080 – 23241116, ಶಿವಾಜಿನಗರ: ಅಂಜಿಕಾ ಟಿವಿಎಸ್ ದೂ: 9980510555, ಮಡಿವಾಳ: ಇಂಡಿಯನ್ ಟಿವಿಎಸ್ ದೂ: 9916870260, ವಿಜ್ಞಾನನಗರ: ಸೆಂಚ್ಯುರಿ ಟಿವಿಎಸ್ ದೂ: 9886823174, ಹೆಣ್ಣೂರು: ನಕ್ಷತ್ರ ಟಿವಿಎಸ್ ದೂ: 9738101956, ತಾವರೆಕೆರೆ: ಕಿರಣ್ ಟಿವಿಎಸ್ ದೂ: 080 28434049, ಸುಂಕದಕಟ್ಟೆ: ನಮನ ಟಿವಿಎಸ್ ದೂ: 9900307123, ಬ್ಯಾಡರಹಳ್ಳಿ: ಸ್ವಸ್ತಿಕ್ ಟಿವಿಎಸ್ ದೂ: 9141151132, ಎಲೆಕ್ಟ್ರಾನಿಕ್ ಸಿಟಿ: ಶ್ರೀ ಟಿವಿಎಸ್ 9845260065, ಬೇಗೂರು ರೋಡ್: ದೇವಾ ಟಿವಿಎಸ್ 9538313497, ಗೊಟ್ಟಿಗೆರೆ: ಎಸ್.ಬಿ. ಟಿವಿಎಸ್ ದೂ: 9845762549, ವರ್ತೂರು: ಹೃತಿಕ್ ಟಿವಿಎಸ್ ದೂ: 9886100299, ಬಿ.ಹೆಚ್.ಇ.ಎಲ್ ಮೈಸೂರು ರೋಡ್: ಅಜಯ್ ಟಿವಿಎಸ್ ದೂ: 9972412655 / 080-26741145, ಬಿಡದಿ: ಅಜಯ್ ಟಿವಿಎಸ್ ದೂ: 9591467002, ಹಾರೋಹಳ್ಳಿ: ಎಸ್.ಎ. ಟಿವಿಎಸ್ ದೂ: 9845002176, ಚಂದಾಪುರ: ಮುರಳಿ ಟಿವಿಎಸ್ ದೂ: 9448081601, ಆನೇಕಲ್: ಶ್ರೀ ವೆಂಕಟೇಶ್ವರ ಟಿವಿಎಸ್ ದೂ: 7411626961, ಚನ್ನಪಟ್ಟಣ: ಕೆಎಂ ಟಿವಿಎಸ್ ದೂ: 9845188443, ದಾಬಸ್ ಪೇಟ್: ನವಯುಗ ಟಿವಿಎಸ್ ದೂ: 080 27734188, ಕಗ್ಗಲಿಪುರ: ಸಾತ್ವಿಕ್ ಟಿವಿಎಸ್ ದೂ: 9845041803, ದೇವನಹಳ್ಳಿ: ಸುಪ್ರೀತ್ ಟಿವಿಎಸ್ ದೂ: 9845832523, ವಿಜಪುರ: ಶ್ರೀ ದುರ್ಗಾ ಟಿವಿಎಸ್ 8892762610, ಬಾಗಲೂರು: ಮಾದವ ಟಿವಿಎಸ್ ದೂ: 9620000329, ಮಾಗಡಿ: ಶ್ರೀ ನರಸಿಂಹ ಟಿವಿಎಸ್ ದೂ: 9742248691, ಚನ್ನಪಟ್ಟಣ: ಕೆ.ಎಂ ಟಿವಿಎಸ್ ದೂ: 9845188443, ಬಾಗೇಪಲ್ಲಿ: ಶ್ರೀ ಸಾಯಿ ಟಿವಿಎಸ್ ದೂ: 9945513446, ಶಿಡ್ಲಘಟ್ಟ: ಶ್ರೀ ರಾಯಲ್ ಟಿವಿಎಸ್ ದೂ: 9845088868, ಗುಡಿಬಂಡೆ: ಮಂಜು ಟಿವಿಎಸ್ ದೂ: 9379268678, ಗೌರಿಬಿದನೂರು: ಸಾಯಿ ಟಿವಿಎಸ್ ದೂ: 9448310962, ಮಾಲೂರು: ಸರವಣ ಟಿವಿಎಸ್ 9449715731, ಶ್ರೀನಿವಾಸಪುರ: ವಿಘ್ನೇಶ್ ಟಿವಿಎಸ್ ದೂ: 9972885552, ಮುಳಬಾಗಿಲು: ಗರುಡ ಮೋಟಾರ್ಸ್ ದೂ: 7899982232, ತುರುವೇಕೆರೆ: ಗದ್ದೆ ಕೆಂಪಮ್ಮ ಟಿವಿಎಸ್ ದೂ: 9986155108, ಗುಬ್ಬಿ: ಮನು ಟಿವಿಎಸ್ ದೂ: 9886989839, ಮಧುಗಿರಿ: ಶ್ರೀ ಸ್ಕಂದ ಟಿವಿಎಸ್ ದೂ: 9242455433, ಪಾವಗಡ: ಶ್ರೀ ನಿವಾಸ ಟಿವಿಎಸ್ ದೂ: 9448038368, ಕುಣಿಗಲ್: ಶ್ರೀ ಮಾರುತಿ ಟಿವಿಎಸ್ ದೂ: 9945938606, ನಿಟ್ಟೂರು: ಎಸ್.ಎಸ್. ಟಿವಿಎಸ್ ದೂ: 9164479810, ಹೊನ್ನುಡುಕ್ಕೆ: ಶ್ರೀ ಎಸ್.ಎಲ್.ವಿ. ಟಿವಿಎಸ್ 9845802853, ಚಿಕ್ಕನಾಯಕನಹಳ್ಳಿ: ವಿಜಯಶ್ರೀ ಟಿವಿಎಸ್ ದೂ: 9742429149, ಸಿರಾ: ಸಪ್ತಗಿರಿ ಟಿವಿಎಸ್ ದೂ: 9844354422, ಹುಳಿಯಾರು: ವಿಜಯಶ್ರೀ ಟಿವಿಎಸ್ ದೂ: 9742429149, ಅರಕಲಗೂಡು: ವೈ.ಜಿ. ಟಿವಿಎಸ್ 9448413894, ಬೇಲೂರು: ಶ್ರೀ ಕೃಷ್ಣ ಟಿವಿಎಸ್ 9448330165, ಹೊಳೆನರಸೀಪುರ: ಸಾಗರ ಟಿವಿಎಸ್ 9448721807, ಚನ್ನರಾಯಪಟ್ಟಣ: ಮಹಾಲಕ್ಷ್ಮಿ ಟಿವಿಎಸ್ 9994572271, ಸಕ್ಲೇಶ್ ಪುರ: ಸೋನಾ ಬೈಕ್ ಟಿವಿಎಸ್ 9739046149, ಹಳೇಬೀಡು: ರವಿ ಟಿವಿಎಸ್ 8747939399.

dentsuindia/pjv blr/04/21